## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 379/2023**

**ಸಿ.ಡಬ್ಲ್ಯೂಃ10 , ಪಿ.ಡಬ್ಲ್ಯೂಃ 02**

| | | |
|---|---|---|
| ಸಾಕ್ಷಿದಾರರ ಹೆಸರು | : | ಲೊಕಪ್ಪ ಕತ್ತಿ |
| ತಂದೆಯ ಹೆಸರು | : | ಸಿದ್ದಪ್ಪ ಕತ್ತಿ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ, ಮೂರ್ಡೇಶ್ವರ ಪೊಲೀಸ್ ಠಾಣೆ |
| ವಾಸ್ತವ್ಯ | : | ಪೊಲೀಸ್ ವಸತಿ ಗೃಹ, ಮೂರ್ಡೇಶ್ವರ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 28/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಕಳೆದ ಒಂದು ವರ್ಷದಿಂದ ಮೂರ್ಡೇಶ್ವರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ. 2017 ರಿಂದ 2023 ರ ವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.17.02.2023 ರಂದು ಭಟ್ಕಳ ಶಹರ ಪೊಲೀಸ್ ಠಾಣೆಯ ಗುನ್ನಾ ನಂಬರ್ 132/2022 ನಾನು ಮತ್ತು ಚಾಸಾ 9, ಚಾಸಾ 11 ರವರ ಜೊತೆಯಲ್ಲಿ ಆರೋಪಿ ಪತ್ತೆ ಕಾರ್ಯದಲ್ಲಿದ್ದಾಗ ಚಾಸಾ 9 ರವರಿಗೆ ಆರೋಪಿತನ ಕುರಿತು ಬಾತ್ಮಿ ಬಂದಂತೆ ಆರೋಪಿತನಾದ ಮಂಜು ತಂದೆ ನಂದಿ ಕೊರಾರು ಇತನು ತನ್ನ ಮನೆಯ ಹತ್ತಿರ ಇದ್ದಾಗ ಅವನಿಗೆ ನಾವು ಮೂರು ಜನರು ಸೇರಿ ಹಿಡಿದುಕೊಂಡು ತನಿಖಾಧಿಕಾರಿಯಾದ ಚಾಸಾ 12 ರವರ ಬಳಿಗೆ ಹಾಜರುಪಡಿಸಿರುತ್ತೇವೆ. ಸದರಿ ಆರೋಪಿಯನ್ನು ದ್ವಿಚಕ್ರವಾಹನದ ಕಳ್ಳತದ ಪ್ರಕರಣದಲ್ಲಿ ತನಿಖಾಧಿಕಾರಿಯವರ ಜೊತೆಗೂಡಿ ಆರೋಪಿತನನ್ನು ಹಿಡಿಯಲು ಸಹಾಯ ಮಾಡಿದ್ದು ಇರುತ್ತದೆ. ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜೆ.ಎನ್ ವಕೀಲರಿಂದ,**

3. ಗುನ್ನಾ ನಂಬರ್ 132/2022 ರಲ್ಲಿ ಪಿರ್ಯಾದಿಯನ್ನು ನೀಡುವ ಕಾಲಕ್ಕೆ ಆರೋಪಿಯ ಹೆಸರನ್ನು ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ಹೇಳಿಕೆಯನ್ನು

ನೀಡಿದ್ದೇನೆ. ದಾಳಿಗೆ ಹೋಗುವ ಕಾಲಕ್ಕೆ ನನಗೆ ಆರೋಪಿಯ ಹೆಸರು ಗೊತ್ತಿತ್ತು. ದಾಳಿಗೆ ನಾನು ಚಾಸಾ 9 ಮತ್ತು ಚಾಸಾ 11 ರವರ ಜೊತೆ ಹೋಗಿದ್ದೇನೆ. ಆರೋಪಿಯನ್ನು ಮನೆಯ ಆವರಣದಲ್ಲಿ ಬಂದಿಸಿದ್ದೇವೆ. ದಾಳಿಯ ಕಾಲಕ್ಕೆ ಅಕ್ಕ-ಪಕ್ಕದ ಜನರು ಯಾರು ಇರಲಿಲ್ಲ. ದಾಳಿಯ ಕಾಲಕ್ಕೆ ಘಟನಾ ಸ್ಥಳದಲ್ಲಿ ವಾಹನಗಳು ಇದ್ದವು. ಎಷ್ಟು ವಾಹನಗಳು ಇದ್ದವು ನೆನಪಿಲ್ಲ. ಆರೋಪಿಯು ಹೇಳಿಕೆ ನೀಡುವ ಕಾಲಕ್ಕೆ ನಾನು ಇರಲಿಲ್ಲ. ಮೇಲಾಧಿಕಾರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿಗೆ ಹೋಗಿದ್ದು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 3/2022**

**ಸಿ.ಡಬ್ಲ್ಯೂಃ 06, ಪಿ.ಡಬ್ಲ್ಯೂಃ 06**

ಸಾಕ್ಷಿದಾರರ ಹೆಸರು : ಗಂಗೇ
ಗಂಡನ ಹೆಸರು : ಸುನೀಲ್ ನಾಯ್ಕ
ವಯಸ್ಸು : 29 ವರ್ಷ
ಉದ್ಯೋಗ : ಪೊಲೀಸ್ ಪೇದೆ, ಭಟ್ಕಳ ಶಹರ ಪೊಲೀಸ್ ಠಾಣೆ
ವಾಸ್ತವ್ಯ : ಹೆಬಳೆ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.01.11.2021 ರಿಂದ ಇಲ್ಲಿಯವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 30.11.2021 ರಂದು ಬೆಳಿಗ್ಗೆ 9.45 ಗಂಟೆಗೆ ನಮ್ಮ ಬಿಟ್ ಬಾತ್ಮಿದಾರರು ದೂರವಾಣಿ ಕರೆ ಮಾಡಿ ನಮ್ಮ ಬಿಟ್ ವ್ಯಾಪ್ತಿಯ ಭಟ್ಕಳ ಶಹರ ಬಂದರ್ ರೋಡ್ ಮೈಸೂರು ಕಫೆ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಅಬ್ದುಲ್ ರಜಾಕ್ ಶೇಖ ತಂದೆ ಸುಲೈಮಾನ್ ಸಾಯೇಬ್ ಮತ್ತು ನಾರಾಯಣ ಲಚ್ಚಮಯ್ಯ ನಾಯ್ಕ ಇವರಿಬ್ಬರು ಸೇರಿ ಸಾರ್ವಜನಿಕರನ್ನು ಸೇರಿಸಿ ಒಸಿ ಮಟ್ಕಾ ಆಡಿಸುತ್ತಿರುವ ಬಗ್ಗೆ ಮಾಹಿತಿ ನೀಡಿದಂತೆ ನಾನು, ಚಾಸಾ 1 ರವರವರಿಗೆ ಮಾಹಿತಿಯನ್ನು ತಿಳಿಸಿದ್ದು ಅವರು ಮಾನ್ಯ ಪಿ.ಐ ಮತ್ತು ಎ.ಎಸ್.ಪಿ ಭಟ್ಕಳ ರವರಿಗೆ ವಿಷಯವನ್ನು ತಿಳಿಸಿ ಅವರ ಮಾರ್ಗದರ್ಶನದಂತೆ ದಾಳಿ ನಡೆಸಿ ವಶಕ್ಕೆ ಪಡೆದು ಠಾಣಾ ಗುನ್ನಾ ನಂಬ್ರ 155/2021 ಕಲಂ 78(3) ಕೆಪಿ. ಆಕ್ಟ್ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇವೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜಿ. ವಕೀಲರಿಂದ,**

3. ದೂರುದಾರರು ನಮ್ಮ ಮೇಲಾಧಿಕಾರಿಯಾಗಿದ್ದಾರೆ. ಘಟನಾ ಸ್ಥಳವು ಒಂದು ಸಾರ್ವಜನಿಕ ಸ್ಥಳ. ಘಟನಾ ಸ್ಥಳದ ಉತ್ತರ ದಿಕ್ಕಿನಲ್ಲಿ ಬ್ಯಾಂಕುಗಳು ಇವೆ. ದಕ್ಷಿಣ ದಿಕ್ಕಿಗೆ ಸಿದಾರ್ಥ ಕಾಲೇಜು ಇದೆ. ಪೂರ್ವ ಪಶ್ಚಿಮಕ್ಕೆ ಹಲವಾರು ಅಂಗಡಿಗಳು ಇವೆ. ಘಟನಾ ಸ್ಥಳದ ಹತ್ತಿರ ಆಟೋ ಸ್ಟಾಂಡ್ ಇದೆ.

ಘಟನಾ ಸ್ಥಳವು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಇದೆ. ದಾಳಿಗೆ ಹೋದ ಬಗ್ಗೆ ರಿಜಿಸ್ಟರ್ ನಲ್ಲಿ ನಮೂದು ಇದೆ. ಸದರಿ ರಿಜಿಸ್ಟರ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದನ್ನು ನಾನು ನೋಡಿಲ್ಲ. ಅಂತಹ ಯಾವುದೇ ದಾಳಿಗೆ ಹೋಗದೇ ಇದ್ದ ಕಾರಣ ಅಂತಂಹ ದಾಖಲೆಯನ್ನು ನೋಡಿಲ್ಲ ಅಂದರೆ ಸರಿಯಲ್ಲ. ಘಟನಾ ಸ್ಥಳದ ಹತ್ತಿರ ಇರುವ ಬ್ಯಾಂಕಿನ ಹೊರಗೆ ಸಿಸಿ ಕ್ಯಾಮರಾ ಅಳವಡಿಸಿರುವ ಬಗ್ಗೆ ನಾನು ನೋಡಿಲ್ಲ. ಮೇಲಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳು ಎಲ್ಲಾ ಸ್ಥಳಗಳಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 818/2024**

**ಸಿ.ಡಬ್ಲ್ಯೂಃ 04, ಪಿ.ಡಬ್ಲ್ಯೂಃ 04**

ಸಾಕ್ಷಿದಾರರ ಹೆಸರು : ವಸಂತ
ತಂದೆಯ ಹೆಸರು : ಮಾದೇವ ಗೊಂಡ
ವಯಸ್ಸು : 33 ವರ್ಷ
ಉದ್ಯೋಗ : ವೈಯರಿಂಗ್ ಕೆಲಸ
ವಾಸ್ತವ್ಯ : ವೆಂಕ್ಟಾಪುರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇರುವುದಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಫೋಟೋಗಳಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ಗುರುತಿಸಿಕೊಂಡಿದ್ದು ಅವುಗಳನ್ನು ಕ್ರಮವಾಗಿ ನಿಪಿ.6 ಮತ್ತು ನಿಪಿ.7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

2. ದಿ.17.09.2023 ರಂದು ಚಾಸಾ 22 ರವರು ನನ್ನನ್ನು ಮತ್ತು ಚಾಸಾ 5 ರವರನ್ನು ಪೊಲೀಸ್ ಠಾಣೆಗೆ ಪಂಚನಾಮೆಯ ಕುರಿತು ಕರೆದಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ 2 ನೇ ಆರೋಪಿಯು ಬಿಳಿಯ ಹಾಳೆಯ ಮೇಲೆ ಕೋರಿಕೆಯ ಸಹಿ ಇರುವ ಹಾಳೆಯನ್ನು ನಮ್ಮ ಸಮಕ್ಷಮದಲ್ಲಿ ಹಾಜರುಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹಾಜರಿದ್ದು, ಪಂಚನಾಮೆಯನ್ನು ನಡೆಸಿಕೊಡಲು ಕೇಳಿಕೊಂಡಂತೆ ನನ್ನ ಮನಪೂರ್ವಕ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒಟ್ಟು 12 ಬಿಳಿ ಹಾಳೆಗಳ ಮೇಲೆ ಸಹಿಯನ್ನು ಪಡೆದು ಚಾಸಾ 22 ರವರು 6 ಬಿಳಿ ಹಾಳೆಗಳಿಗೆ ಕೆಂಪು ಶಾಯಿಯಲ್ಲಿ ಗುರುತು ಮಾಡಿ ಆಂಗ್ಲ ಭಾಷಯಲ್ಲಿ R 1 ರಿಂದ R 6 ಎಂದು

ಗುರುತು ಮಾಡಿ, ಅವುಗಳನ್ನು ಕವರ್ ನಲ್ಲಿ ಹಾಕಿ ಕೈಬರಹ ತಜ್ಞರ ಪರೀಕ್ಷೆಗೆ ಕಳುಹಿಸಿಕೊಡುವ ಸಲುವಾಗಿ ಪ್ಯಾಕ್ ಮಾಡಿ ಅದಕ್ಕೆ ಸಬ್ ಇನ್ಸೆಕ್ಟರ್ ಭಟ್ಕಳ ಟೌನ್ ಎಂದು ಅರಗಿನಿಂದ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಳಿದ ಇನ್ನು 6 ಬಿಳಿ ಹಾಳೆಗಳಿಗೆ ಕಂಪು ಶಾಯಿಯಲ್ಲಿ ಇಂಗ್ಲಿಷ್ ನಲ್ಲಿ R 7 ರಿಂದ R 12 ಎಂದು ಗುರುತು ಮಾಡಿ ಕೈಬರಹ ತಜ್ಞರ ಪರೀಕ್ಷೆಗೆ ಕಳುಹಿಸಿಕೊಡಲು ಕವರ್ ನಲ್ಲಿ ಹಾಕಿ ಸಬ್ ಇನ್ಸೆಕ್ಟರ್ ಭಟ್ಕಳ ಟೌನ್ ಎಂದು ಅರಗಿನ ಸೀಲ್ ಮಾಡಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 6.15 ರಿಂದ 7.15 ರ ಸಮಯದಲ್ಲಿ ಪೊಲೀಸ್ ಠಾಣೆಯ ಪಿ.ಎಸ್.ಐ ರವರ ಕೊಠಡಿಯಲ್ಲಿ ಮಾಡಿ ಮುಗಿಸಲಾಯಿತು ಎಂದರೆ ಸರಿಯಲ್ಲ. ಈ ಪ್ರಕರಣದ ಪಂಚನಾಮೆಯಲ್ಲಿ ವಿಷಯಗಳ ಬಗ್ಗೆ ವಿಸ್ತಾರವಾಗಿ ನಿಮಗೆ ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 562/2023**

**ಸಿ.ಡಬ್ಲ್ಯೂಃ 03, ಪಿ.ಡಬ್ಲ್ಯೂಃ 03**

ಸಾಕ್ಷಿದಾರರ ಹೆಸರು : ಮೊಹಮ್ಮದ್ ಮಕ್ಬೂಲ
ತಂದೆಯ ಹೆಸರು : ಅಬ್ದುಲ್ ರೆಹಮಾನ್
ವಯಸ್ಸು : 21 ವರ್ಷ
ಉದ್ಯೋಗ : ಕೂಲಿ
ವಾಸ್ತವ್ಯ : ಚೌಥನಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಪೊಲೀಸರು ಸಂಶದ್ದೀನ್ ಸರ್ಕಲ್ ಹತ್ತಿರ ನನ್ನನ್ನು ಮತ್ತು ಚಾಸಾ 2 ರವರನ್ನು ಪಂಚನಾಮೆ ಮಾಡಲು ಕರೆದಿರುತ್ತಾರೆ. ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಪಂಚನಾಮೆ ಮಾಡಲಾಯಿತು. ಸದರಿ ಪಂಚನಾಮೆಗೆ ನನ್ನ ಸಹಿ ಮಾಡಿರುತ್ತೇನೆ. ಸದರಿ ಸ್ಥಳವನ್ನು ತೋರಿಸಿದವ ಹೆಸರು ನೆನಪಿರುವುದಿಲ್ಲ. ನಂತರ ಅಲ್ಲಿಂದ ಹುರುಳಿಸಾಲಿಗೆ ಹೋಗಿ ಅಲ್ಲು ಫೋಟೋವನ್ನು ತೆಗೆದು, ಆ ನಂತರ ಠಾಣೆಗೆ ಬಂದು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ.2 ಮತ್ತು 3 ರನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.2(ಸಿ) ಮತ್ತು ನಿಪಿ.3(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳನ್ನು ಕ್ರಮವಾಗಿ ನಿಪಿ.4 ಮತ್ತು 5 ಎಂದು ಈಗಾಲೇ ಗುರುತಿಸಲಾಗಿದ್ದು , ಸಾಕ್ಷಿಯು ಸದರಿ ಫೋಟೋಗಳಲ್ಲಿ ತಾನು ಇರುವುದನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ.ಎಫ್.ಜಿ. ವಕೀಲರಿಂದ,**

2. ಎರಡು ಪಂಚನಾಮೆಗೆ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಎರಡು ಪಂಚನಾಮೆಯನ್ನು ಯಾರ ಮಾಹಿತಿಯ ಮೇರೆಗೆ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಹಿ ಕೇಳಿದ ಕಾರಣ ನಾನು ಸಹಿಯನ್ನು ಮಾಡಿರುತ್ತೇನೆ. ಪೊಲೀಸರು ಸುಳ್ಳಾಗಿ ಸೃಷ್ಟಿಸಿದ ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 562/2023**

**ಸಿ.ಡಬ್ಲ್ಯೂಃ 02, ಪಿ.ಡಬ್ಲ್ಯೂಃ 02**

ಸಾಕ್ಷಿದಾರರ ಹೆಸರು : ಮೊಹಮ್ಮದ್ ರಫೀಕ್
ತಂದೆಯ ಹೆಸರು : ಅಬ್ದುಲ್ ಅಹ್ಮದ್
ವಯಸ್ಸು : 35 ವರ್ಷ
ಉದ್ಯೋಗ : ಕೂಲಿ
ವಾಸ್ತವ್ಯ : ಕೀರ್ತಿನಗರ, ಚೌಥನಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.11.12.2022 ರಂದು ಸಂಶುದ್ದೀನ್ ಸರ್ಕಲ್ ಬಂದರ್ ರಸ್ತೆಯ ಹತ್ತಿರ ಚಾಸಾ 10 ರವರು ನನಗೆ ಮತ್ತು ಚಾಸಾ 3 ನೇಯವರಿಗೆ ಪಂಚನಾಮೆಗೆ ಬರಲು ಹೇಳಿದ್ದರು. ಚಾಸಾ 1 ರವರಿಗೆ ಜೀವ ಬೆದರಿಕೆ ಹಾಕಿರುವ ಕುರಿತು ನಡೆಸಿದ ಪಂಚನಾಮೆಗೆ ನಾನು ಹಾಜರಿದ್ದೇನು. ಪಂಚನಾಮೆಯ ಸಮ ಯದಲ್ಲಿ ಚಾಸಾ 1 ರವರು ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆಯವರೆಗೆ ಸ್ಥಳದಲ್ಲಿ ನಡೆಸಲಾಯಿತು. ಅದೇ ದಿನ ಚಾಸಾ 1 ರವರು ಮನೆ ಹುರುಳಿಸಾಲ್ ಹತ್ತಿರ ನಾನು ಮತ್ತು ಚಾಸಾ 3 ನೇಯವರು ಚಾಸಾ 10 ರವರು ಹೇಳಿಕೆಯ ಮೇರೆಗೆ ಚಾಸಾ 1 ರವರಿಗೆ ಜೀವ ಬೆದರಿಕೆ ಹಾಕಿದ ಕುರಿತು ನಡೆಸಿದ ಪಂಚನಾಮೆಗೆ ಹಾಜರಿದ್ದೇವು. ಸದರಿ ಪಂಚನಾಮೆಯನ್ನು 4 ರಿಂದ 5 ಗಂಟೆ ಸಮಯದಲ್ಲಿ ನಡೆಸಲಾಯಿತು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಎರಡು ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೋ ನಿಪಿ.4 ಮತ್ತು 5 ರಲ್ಲಿ ಸಾಕ್ಷಿ ತಾನು ಇರುವುದಾಗಿ ಗುರುತಿಸಿರುತ್ತಾರೆ. ನಿಪಿ.2 ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ.3 ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ.ಎಫ್.ಜಿ. ವಕೀಲರಿಂದ,**

2. ಯಾರು ಯಾರಿಗೆ ಜೀವದ ಬೆದರಿಕೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಬರೆಯಲು ಪೋಲಿಸರು ಮಾಹಿತಿ ನೀಡಿದ್ದರು. ಪೊಲೀಸರ ಕೋರಿಕೆಯ ಮೇರೆಗೆ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಎರಡು ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಚಸಾ 1 ರವರು ನನಗೆ 3 ವರ್ಷದಿಂದ ಪರಿಚಯ. ಚಾಸಾ 1 ರವರು ನನಗೆ ಪರಿಚಯ ಇದ್ದ ಕಾರಣ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪಂಚನಾಮೆಯನ್ನು ತಯಾರಿಸಿಲ್ಲ ಹಾಗೂ ನಾನು ಪೊಲೀಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 12/2022**

**ಸಿ.ಡಬ್ಲ್ಯೂಃ 11, ಪಿ.ಡಬ್ಲ್ಯೂಃ 11**

ಸಾಕ್ಷಿದಾರರ ಹೆಸರು : ಸುಮಾ ಬಿ .

ತಂದೆಯ ಹೆಸರು : ಜಿ ಕೆ ಭಾಸ್ಕರ

ವಯಸ್ಸು : 30 ವರ್ಷ

ಉದ್ಯೋಗ : ಪೊಲೀಸ್ ಉಪ ನಿರೀಕ್ಷಕರು, ಉಡುಪಿ

ವಾಸ್ತವ್ಯ : ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 22.02.2022 ರಿಂದ 2023 ರ ಜನೇವರಿ ತಿಂಗಳವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.23.06.2021 ರಂದು ಠಾಣಾ ಪ್ರಭಾರದಲ್ಲಿ ಇದ್ದಾಗ ಸಮಯ ನ 10.00 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು , ದೂರಿನೊಂದಿಗೆ ಪಂಚನಾಮೆ ಮತ್ತು 70 ಕೆಜಿ ಮಾಂತ , ಕೆಎ.47.ಎ.0329 ಆಟೋ ರೀಕ್ಷಾ ಗಳನ್ನು ಹಾಜರುಪಡಿಸಿದ್ದು ಹಾಗೂ ಆರೋಪಿಯನ್ನು ಹಾಜರುಪಡಿದ್ದು , ನೀಡಿದ ಲಿಖಿತ ದೂರನ್ನು ಪರಿಶೀಲಿಸಿ ಠಾಣಾ ಆಕ್ರ ನಂಬರ್ 75/2021 ರಲ್ಲಿ ಪ್ರಕರಣವನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆವು ಹಾಗೂ 70 ಕೆಜಿ ಮಾಂಸ ಮತ್ತು ಆಟೋ ರೀಕ್ಷಾ ನಂಬರ್ ರನ್ನು ಠಾಣಾ ಪಿ.ಎಫ್.40/2021 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆವು. ಅದೇ ದಿನ ಮಾನ್ಯ ಉಪವಿಭಾಗಿಯ ದಂಢಾದಿಕಾರಿಗೆ ವಶಪಡಿಸಿಕೊಂಡ ಮಾಂಸವನ್ನು ವಿಲೇವಾರಿ ಮಾಡಲು ಆದೇಶವಾಗುವ ಕುರಿತು ಕೋರಿಕೆಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ವೈಧ್ಯಾಧಿಕಾರಿಗೆ , ಭಟ್ಕಳದ ಪಶು ಆಸ್ಪತ್ರೆ ಗೆ ಜಾನುವಾರದ ಮಾಂಸವನ್ನು ಪರಿಕ್ಷೆಮಾಡಿ ಪ್ರಮಾಣ ಪತ್ರ ನೀಡುವಂತೆ ಕೋರಿಕೊಂಡೆವು. ಅದೇ ದಿನ ಚಾಸಾ 1 ರವರು ತೋರಿಸಿಕೊಟ್ಟಂತೆ ಚಾಸಾ 2 ಮತ್ತು 3 ಸಮಕ್ಷಮ ಘಟನಾ ಸ್ಥಳದ ಮಹಜರನ್ನು ಮಾಡಿರುತ್ತೇನೆ. ಅದೇ ದಿನ ಪಶು ವೈಧ್ಯಾಧಿಕಾರಿಗಳು ಪರೀಕ್ಷೆ ಮಾಡಿ ಎಫ್.ಎಸ್.ಎಲ್‌ಗೆ ಕಳುಹಿಸಲು ಸ್ಯಾಂಪಲ್ ನ್ನು ನೀಡಿದ್ದನು ಪಡೆದುಕೊಂಡೆವು. ಅದೇ ದಿನ ಆರೋಪಿಗೆ 41 ನೋಟಿಸನ್ನು ನೀಡಿರುತ್ತೇನೆ.

3. ದಿ.24.06.2021 ರಂದು ಚಾಸಾ 4 , 5 , 6 , 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿ. 29.06.2021 ರಂದು ಎಸಿ ಕೊಟ್ ರವರು ನೀಡಿದ ಆದೇಶ ಪ್ರತಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ. 02.07.2021 ರಂದು ಪಶು ವೈಧ್ಯಾಧಿಕಾರಿಯವರು ನೀಡಿದ ಜಾನುವಾರದ ಮಾದರಿ ಮಾಂಸವನ್ನು ಚಾಸಾ 9 ರವರಿಗೆ ಪರೀಕ್ಷೆ ಸಲುವಾಗಿ ಸಿಪಿಸಿ 577 ಮುಖೇನ ಎಫ್.ಎಸ್.ಎಲ್ ಮಂಗಳೂರಿಗೆ ಕಳುಹಿಸಿಕೊಟ್ಟೆನು. ದಿ. 06.07.2021 ರಂದು ಚಾಸಾ 8 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿ. 01.12.2021 ರಂದು ಎಫ್.ಎಸ್.ಎಲ್ ನಿಂದ ಬಂದ ಮಾಂಸದ ಸ್ಯಾಂಪಲ್ ನ್ನು ಎಸಿ ಕೊರ್ಟ್ರವರಿಗೆ ತಿಳಿಸಿದ್ದು ಹಾಗೂ ಪುರಸಭೆ ಅವರಿಗೆ ರಿಕ್ವೆಷ್ಟ್ ನೀಡಿ ಆ ಮಾಂಸವನ್ನು ಪುರಸಭೆಗೆ ಹಸ್ತಾಂತರಿಸಿರುತ್ತೇನೆ. ದಿ. 02.12.2021 ರಂದು ಚಾಸಾ 9 ರವರು ನೀಡಿದ ಪ್ರಮಾಣ ಪತ್ರವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.13.12.2021 ರಂದು ಚಾಸಾ 10 ರವರು ನೀಡಿದ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ. 18.12.2021 ರಂದು ಅಂತಿಮವಾಗಿ ಆರೋಪಿಯ ವಿರುದ್ಧ ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.1 ದೂರನ್ನು ನೋಡಿ ಗುರುತಿಸಿದ್ದು ಅದರಲ್ಲಿ ರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ನಿಪಿ.2 ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿ ರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೊಟೋ, ನಿಪಿ.3 ರಲ್ಲಿ ಸಾಕ್ಷಿ ತಾನು ಇರುವುದನ್ನು ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ.4 ರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ.7 ನ್ನು ಸಾಕ್ಷಿಯು ನೋಡಿ ಗುರುತಿಸರುತ್ತಾರೆ. ನಿಪಿ.8 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಲ್ಲಿರುವ ಸಹಿಯನ್ನು ನಿಪಿ.8(ಡಿ) ಎಂದು ಗುರುತಿಸಲಾಯಿತು. ಎ.ಸಿ.ಕೊರ್ಟ್ ರವರಿಗೆ ಜಪ್ತುಪಡಿಸಿಕೊಂಡ ಮಾಂಸವನ್ನು ವಿಲೇವಾರಿ ಮಾಡಲು ನೀಡದ ಕೋರಿಕೆ ಪತ್ರವನ್ನು ನಿಪಿ.10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಮುಖ್ಯಾಧಿಕಾರಿ ಪುರಸಭೆಯವರಿಗೆ ಜಪ್ತುಪಡಿಸಿಕೊಂಡ ಮಾಂಸವನ್ನು ವಿಲೇವಾರಿ ಮಾಡಲು ನೀಡದ ಕೋರಿಕೆ ಪತ್ರವನ್ನು ನಿಪಿ.11 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ದಿ.01.12.2021 ರಂದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಾಂಸದ ಸ್ಯಾಂಪಲ್ ನ್ನು ವಿಲೇವಾರಿ ಮಾಡಲು ಅನುಮತಿಯನ್ನು ನೀಡುವ ಕುರಿತು ವಿಭಾಗಿಯ ದಂಡಾಧಿಕಾರಿಗೆ ಮಾಡಿದ ಮನವಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.12 ಎಂದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಿಲೇವಾರಿ ಮಾಡಿದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.13 ಮತ್ತು ನಿಪಿ.14 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್.ಆರ್.ಎಲ್. ವಕೀಲರಿಂದ,**

4. ಚಾಸಾ 1 ರವರು ನಮ್ಮ ಅಧೀನಾಧಿಕಾರಿಗಳು. ಘಟನೆಯ ದಿನ ನಾನು ಕರ್ತವ್ಯದಲ್ಲಿ ಹಾಜರಿದ್ದೆ ಎಂದು ನಮ್ಮ ಡೈರಿಯಲ್ಲಿ ನಮೂದಿರುತ್ತೆದೆ. ಚಾಸಾ 4 ರಿಂದ 8 ರವರು ನಮ್ಮ ಠಾಣೆಯ ಸಿಬ್ಬಂದಿಗಳಾಗಿರುತ್ತಾರೆ. 11 ರಿಂದ 12 ಗಂಟೆಯವರೆಗೆ ಮಹಜರನ್ನು ಮಾಡಿರುತ್ತೇನೆ. ಸಾರ್ವಜನಿಕ ಸ್ಥಳದಲ್ಲಿ ದೂರದಲ್ಲಿ ಅಂಗಡಿಗಳು ಇವೆ. ಸದರಿ ಘಟನೆಯಂದು ಸಾರ್ವಜನಿಕರನ್ನು ವಿಚಾರಿಸಿದ್ದೇವೆ. ಪ್ಲಾಸ್ಟಿಕ್ ಕವರ್ ನಲ್ಲಿ ಮಾಂಸ ಇತ್ತು. ಯಾವ ಮಾಂಸ ಇದೆ ಎಂದು ಎಫ್.ಎಸ್.ಎಲ್ ನಿಂದ ವರದಿಯನ್ನು ಪಡೆದಿದ್ದೇವೆ. ಪಿರ್ಯಾದಿಯಲ್ಲಿಯೇ ದನದ ಮಾಂಸ ಎಂದು ನಮೂದಿಸಲಾಗಿತ್ತು. ಮಾಂಸ ಎಲ್ಲಿಂದ ತಂದಿದ್ದಾರೆ ಎಂದು ವಿಚಾರಸಿದ್ದೆವೆ. ದನದ ತಲೆ , ಕಲುಗಳನ್ನು ಏನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿದಾರರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಸ್ಥಳದ ಚೆಕ್ ಬಂದಿಯನ್ನು ಪಂಚನಾಮೆಯಲ್ಲಿ ನಮೂದು ಮಾಡಿರುತ್ತೇನೆ. ಇಬ್ಬರೂ ಪಂಚರು ಗುಳ್ಮಿಯವರಾಗಿದ್ದಾರೆ. ಗುಳ್ಮಿಯು ಘಟನಾ ಸ್ಥಳದಿಂದ ಅಂದಾಜು 6 ಕಿ.ಮಿ. ದೂರದಲ್ಲಿ ಇದೆ. ಪಂಚ ಸಾಕ್ಷಿದಾರರನ್ನು ಹೊರತು ಪಡಿಸಿ, ಉಳಿದ ಎಲ್ಲಾ ಸಾಕ್ಷಿದಾರರು ನಮ್ಮ ಸಿಬ್ಬಂದಿಗಳು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಹೆಸರು ಮತ್ತು ವಿಳಾಸ ನನಗೆ ಗೊತ್ತಿದೆ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 774/2024**

**ಸಿ.ಡಬ್ಲ್ಯೂಃ 07, ಪಿ.ಡಬ್ಲ್ಯೂಃ 07**

| | | |
|---|---|---|
| ಸಾಕ್ಷಿದಾರರ ಹೆಸರು | : | ಫಯಾಜ್ ಅಹ್ಮದ್ |
| ತಂದೆಯ ಹೆಸರು | : | ಬೊಟ್ಲರ್ ಅಹ್ಮದ್ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಮೀನುಗಾರಿಕೆ |
| ವಾಸ್ತವ್ಯ | : | ತೆಂಗಿನಗುಂಡಿ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಅಕ್ಟೋಬರ್ 2023 ರಂದು ನಾನು ಬೊಟಿನಲ್ಲಿರುವಾಗ ಚಾಸಾ 1 ರವರು ನನಗೆ ದೂರವಾಣಿ ಕರೆ ಮಾಡಿ ಚಾಸಾ 6 ನನ್ನ ಅಮ್ಮನವರಿಗೆ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಾನು ತದನಂತರ ಲೈಫ್ ಕೇರ್ ಆಸ್ಪತ್ರೆಗೆ ಬಂದಿರುತ್ತೇನೆ. ಎಡಕಾಲು ಮತ್ತು ಎಡಕೈಗೆ ಸದರಿ ಅಪಘಾತದಿಂದ ನನ್ನ ಅಮ್ಮ ಚಾಸಾ 6 ರವರಿಗೆ ಪೆಟ್ಟಾಗಿತ್ತು. ನನಗೆ ಡಿಕ್ಕಿ ಪಡಿಸಿದ ಬೈಕ್ ಸಂಖ್ಯೆ ಗೊತ್ತಿರುವುದಿಲ್ಲ. ಸದರಿ ಅಪಘಾತ ಪಡಿಸಿದ ಬೈಕಿನಲ್ಲಿ ಒಂದು ಗಂಡಸು ಮತ್ತು ಹೆಂಗಸು ಪ್ರಯಾಣ ಮಾಡುತ್ತಿದ್ದರು. ಈ ಬಗ್ಗೆ ನನ್ನ ತಮ್ಮನಾದ ಚಾಸಾ 1 ರವರು ಈ ಕುರಿತು ಠಾಣೆಗೆ ದೂರನ್ನು ನೀಡಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ. ಹೆಚ್. ಎನ್ ವಕೀಲರಿಂದ,**

2. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಮತ್ತು ಅಪಘಾತಪಡಿಸಿದ ವಾಹದ ಸಂಖ್ಯೆ ಗೊತ್ತಿಲ್ಲ ಮತ್ತು ಬೈಕ್ ಸವಾರನ ಹೆಸರು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಮತ್ತು ಯಾರ ತಪ್ಪಿನಿಂದ ಸದರಿ ಅಪಘಾತ ಆಗಿದೆ ಎಂದು ಹೇಳಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 774/2024**

**ಸಿ.ಡಬ್ಲ್ಯೂಃ 06, ಪಿ.ಡಬ್ಲ್ಯೂಃ 06**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಬಿ.ಬಿ.ಮರಿಯಾಂಬಿ |
| ಗಂಡನ ಹೆಸರು | : | ಬೊಟ್ಲರ್ ಅಹ್ಮದ್ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ಮನೆ ವಾರ್ತೆ |
| ವಾಸ್ತವ್ಯ | : | ಜಾಮೀಯಾಬಾದ್ , ಹೆಬಳೆ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಸುಮಾರು ಒಂದೂವರೆ ವರ್ಷದ ಹಿಂದೆ ಸಮಯ ಸುಮಾರು 2.30 ಗೆ ನಾನು ವೈಭವ ಹೋಟೆಲ್ ಹತ್ತಿರ ಔಷದಿ ತೆಗೆದುಕೊಂಡು ಹೋಗಲು ನನ್ನ ಮಗನ ಜೊತೆ ಬಂದಿದ್ದೇನು. ಔಷದಿಯನ್ನು ಪಡೆದುಕೊಂಡು ನಾನು ನಡೆದು ಕೊಂಡು ರಸ್ತೆಯ ಅಂಚಿನಲ್ಲಿ ಹೋಗುತ್ತಿರುವಾಗ ಹಿಂದುಗಡೆ ಬದಿಯಿಂದ ಮೋಟಾರು ಸೈಕಲು ಸವಾರನು ಬಂದು ನನಗೆ ಡಿಕ್ಕಿ ಹೊಡೆದಿರುತ್ತಾನೆ. ನಾನು ನೆಲಕ್ಕೆ ಬಿದ್ದಿರುತ್ತೇನೆ ನಂತರ ನನಗೆ ಪ್ರಜ್ಞೆ ತಪ್ಪಿತು. ತದನಂತರ ನನಗೆ ಲೈಫ್ ಕೇರ್ ಆಸ್ಪತ್ರೆಗೆ ದಾಖಲು ಮಾಡಿ , ನಾನು ಉಪಚಾರ ಪಡೆದುಕೊಂಡಿರುತ್ತೇನೆ. ಆರೋಪಿ ಬೈಕ್ ಸವಾರನ ತಪ್ಪಿನಿಂದ ಈ ಅಪಘಾತವು ಆಗಿರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ. ಹೆಚ್. ಎನ್ ವಕೀಲರಿಂದ,**

2. ಅಪಘಾತದ ದಿನದಂದು ನಾನು ನನ್ನ ಮೊದಲನೆ ಮಗನ ಜೊತೆ ಹೋಗುತ್ತಿದ್ದೇನು. ನಾನು ರಸ್ತೆಯನ್ನು ದಾಟುತ್ತಿರುವಾಗ ಅಪಘಾತವಾಗಿರುತ್ತದೆ. ರಸ್ತೆಯನ್ನು ದಾಟುವಾಗ ಬೈಕು ಬರುವುದನ್ನು ನಾನು ನೋಡಿದ್ದೇನೆ. ಬೈಕ್ ಸವಾರನ ಹೆಸರು ಗೊತ್ತಿಲ್ಲ ಹಾಗೂ ಬೈಕಿನ ನಂಬರ್ ಗೊತ್ತಿಲ್ಲ. ನನ್ನ ತಪ್ಪಿಂದ ಸದರಿ ಅಪಘಾತವು ಆಗಿದೆ ಎಂದರೆ ಸರಿಯಲ್ಲ. ನನ್ನ ಮಗ ರಸ್ತೆ ದಾಟುವ ಕಾಲಕ್ಕೆ ರಸ್ತೆ ದಾಟಿ ಮುಂದಕ್ಕೆ ಹೋಗಿರುತ್ತಾನೆ. ಪೊಲೀಸರು ನನ್ನಿಂದ ಯಾವುದೇ ಕೇಳಿಕೆಯನ್ನು ಪಡೆದಿಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು :

ತಂದೆಯ ಹೆಸರು :

ವಯಸ್ಸು : ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್. ಇ. ಹೆಚ್. ವಕೀಲರಿಂದ,**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1420/2023**

**ಸಿ.ಡಬ್ಲ್ಯೂಃ 02, ಪಿ.ಡಬ್ಲ್ಯೂಃ 02**

| | | |
|---|---|---|
| ಸಾಕ್ಷಿದಾರರ ಹೆಸರು | : | ಸೂರಜ್ |
| ತಂದೆಯ ಹೆಸರು | : | ಶೇಷಗಿರಿ ಶಿರಾಲಿಕರ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಜಾಲಿ ಪಂಚಾಯತ್ , |
| ವಾಸ್ತವ್ಯ | : | ಕಡವಿನಕಟ್ಟೆ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 25/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.21.07.2022 ರಂದು ನನ್ನನ್ನು ಮತ್ತು ಚಾಸಾ 3 ರವರನ್ನು ಹರ್ಷವರ್ಧನ್ ರವರ ಮರಣ ಪ್ರಮಾಣ ಪತ್ರದ ಕುರಿತು ನನ್ನನ್ನು ಭಟ್ಕಳದ ಶಹರ ಪೊಲೀಸ್ ಠಾಣೆಗೆ ಕರೆದಿರುತ್ತಾರೆ. ಆವಕ ರೆಜಿಸ್ಟರ್, ಆರೋಪಿಗೆ ಸಂಬಂಧಿಸಿದ ಮರಣ ಪ್ರಮಾಣ ಪತ್ರ, ಜನನ–ಮರಣ ನೊಂದಣಿ ರೆಜಿಸ್ಟಾರ್ ಪುಸ್ತಕ, ಅವುಗಳನ್ನು ಪೊಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ಪಂಚನಾಮೆಯನ್ನು ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯವರೆಗೆ ಮಾಡಿರುತ್ತಾರೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾಕಾಶ ಕೋರಿದ್ದು , ನೀಡಿಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 610/2023**

**ಸಿ.ಡಬ್ಲ್ಯೂ: 07 , ಪಿ.ಡಬ್ಲ್ಯೂ: 06**

| | | |
|---|---|---|
| ಸಾಕ್ಷಿದಾರರ ಹೆಸರು | : | ಗಣೇಶ |
| ತಂದೆಯ ಹೆಸರು | : | ಬಾಲಚಂದ್ರ ನಾಯ್ಕ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಮುನ್ಸಿಪಾಲ್ಟಿಯಲ್ಲಿ ವಾಟರ್ ಸಪ್ಲಾಯರ್ |
| ವಾಸ್ತವ್ಯ | : | ಮಂಕಿ, ಹೊನ್ನಾವರ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 25/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.28.12.2021 ರಂದು ಭಟ್ಕಳ ಶಹರ ಪೊಲೀಸ್ ಠಾಣೆಗೆ ಹೋಗಿ ಪೆನ್ ಡ್ರೈವ್ ನ್ನು ಕೊಟ್ಟಿರುತ್ತೇನೆ. ಆ ಕಾಲಕ್ಕೆ ಪಂಚನಾಮೆಯನ್ನು ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ನಿಪಿ.6 ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ. ಆರ್. ಎಸ್ ವಕೀಲರಿಂದ,**

2. ಸದರಿ ಘಟನೆಯ ಕಾಲಕ್ಕೆ ನಾನು ಮುನ್ಸಿಪಾಲ್ಟಿಯಲ್ಲಿ ವಾಟರ್ ಸಪ್ಲಾಯರ್ ಆಗಿ ಕೆಲಸ ಮಾಡುತ್ತಿದ್ದೆ. ಮುನ್ಸಿಪಾಲ್ಟಿಯಲ್ಲಿ ನಾನು 14 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಕಛೇರಿಯ ಮೇಲಾಧಿಕಾರಿಗೆ ನಾನು ಮಾಹಿತಿ ತಿಳಿಸಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನೊಂದಿಗೆ ಪೊಲೀಸ್ ಠಾಣೆಗೆ ಮುಖ್ಯಾಧಿಕಾರಿ ಬಂದಿದ್ದರು. ನಮ್ಮ ಮುಖ್ಯಾಧಿಕಾರಿಯೇ ಪಂಚನಾಮೆಗೆ ಹೋಗಲು ಹೇಳಿದ್ದರು. ನಮ್ಮ ಮುಖ್ಯಾಧಿಕಾರಿಗೆ ಮಂಕಿ ಪಟ್ಟಣ ಪಂಚಾಯತಿ ಹಾಗೂ ಜಾಲಿ ಪಟ್ಟಣ ಪಂಚಾಯತಿಯ ಚಾರ್ಜ್ ಇತ್ತು . ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತುಮಾಡಿಲ್ಲ. ಚಾಸಾ 1 ರವರು ನಮ್ಮ ಮೇಲಾಧಿಕಾರಿಯಾಗಿದ್ದಾರೆ. ಚಾಸಾ1 ರವರ ಆದೇಶದಂತೆ ನಾನು ಎಲ್ಲಾ ವಿಚಾರವನ್ನು ಹೇಳಬೇಕಾಗುತ್ತದೆ. ಚಾಸಾ 1 ರವರ ಹೇಳಿಕೆಯ ಮೇರೆಗೆ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪಂಚನಾಮೆಗೆ ಚಾಸಾ 6 ರವರು ಸಹಿ ಮಾಡಿದ್ದಾರೆ. ಪಿರ್ಯಾದಿದಾರರು ನಮ್ಮ

ಮೇಲಾಧಿಕಾರಿ ಆಗಿದ್ದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯ ಸಿಬ್ಬಂದಿಗಳು ಪೆನ್ ಡ್ರೈವಿನಲ್ಲಿ ಮಾತನಾಡಿರುವ ಆಡಿಯೋವನ್ನು ಹಾಕಿದ್ದರು. ಪಂಚನಾಮೆಯ ಕಾಲಕ್ಕೆ ನನಗೆ ಪೆನ್ ಡ್ರೈವಿನಲ್ಲಿರುವ ಆಡಿಯೋವನ್ನು ಕೇಳಿಸಿಲ್ಲ. ಆ ಕಾರಣಕ್ಕೆ ಪೆನ್ ಡ್ರೈವಿನಲ್ಲಿ ಏನು ಇದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಹೇಳಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ಯಾವುದೇ ಪಂಚನಾಮೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 18/2025**

**ಸಿ.ಡಬ್ಲ್ಯೂಃ 01, ಪಿ.ಡಬ್ಲ್ಯೂಃ 01**

ಸಾಕ್ಷಿದಾರರ ಹೆಸರು : ಮಂಜಪ್ಪ ಎನ್

ತಂದೆಯ ಹೆಸರು : ನಂಜುಂಡಪ್ಪ

ವಯಸ್ಸು : 44 ವರ್ಷ

ಉದ್ಯೋಗ : ಮುಖ್ಯಾಧಿಕಾರಿಗಳು , ಜಾಲಿ ಪಟ್ಟಣ ಪಂಚಾಯತ್ , ಭಟ್ಕಳ

ವಾಸ್ತವ್ಯ : ರಂಗಿನಕಟ್ಟೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 25/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿ.21.03.2023 ರಿಂದ ಇಲ್ಲಿಯವರೆಗೆ ಜಾಲಿ ಪಟ್ಟಣ ಪಂಚಾಯತ್ ನಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 14.01.2024 ನಾನು ಭಟ್ಕಳದಲ್ಲಿ ಇಲ್ಲದೇ ಇದ್ದಾಗ ಚಾಸಾ 4 ರವರು ದೂರವಾಣಿ ಕರೆ ಮಾಡಿ ದೇವಿನಗರದ ಹತ್ತಿರ ಬೋರ್ಡ್ ಇದೆ ಅದರ ಹತ್ತಿರ ಯಾರೋ ಕಂಬ್ಬ ನೆಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ರಾತ್ರಿ 9.00 ಗಂಟೆಗೆ ಭಟ್ಕಳಕ್ಕೆ ಬಂದಾಗ ಪೊಲೀಸರು ಕಂಬವನ್ನು ಕಿಳಿಸಲು ದೂರನ್ನು ನೀಡಲು ತಿಳಿಸಿದ್ದರು. ನಂತರ ನಾನು ದೂರನ್ನು ನೀಡಿರುತ್ತೇನೆ. ಆ ನಂತರ ದಿ.15.01.2024 ರಂದು ಬೆಳಗಿನ ಜಾವ 4.00 ಗಂಟೆಗೆ ಪೊಲೀಸರ ಸಮಕ್ಷಮ ಕಂಬವನ್ನು ತೆಗೆದಿರುತ್ತೇವೆ. ಆ ಸಮಯದಲ್ಲಿ ನನಗೆ ಕಂಬವನ್ನು ನಟಿದ್ದು ಯಾರು ಎಂದು ತಿಳಿದಿರಲಿಲ್ಲ. ನಂತರ ಅದೇ ದಿನ ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗಿನ ಜಾವ 4 ಗಂಟೆಯಿಂದ 4.30 ತನಕೆ ಜರುಗಿಸಿದರು. ಆ ಸಮಯದಲ್ಲಿ ನಾನು, ಚಾಸಾ 2 ಮತ್ತು ಚಾಸಾ 3 ರವರು ಸಹ ಇದ್ದರು. ನಂತರ ಕಂಬವನ್ನು ತೆರವುಗೋಳಿಸಿ ಅದನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋದರು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 3 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.4 ರಿಂದ ನಿಪಿ.6 ಎಂದು ಗುರುತಿಸಲಾಯಿತು. ಸದರಿ ಕೃತ್ಯವನ್ನು ಯಾರು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಈ ಪ್ರಕರಣದ ಕಬ್ಬಿಣ ರಾಡ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಆರೋಪಿಗಳ ಪರ ವಕೀಲರು ಪಾಟಿ ಸವಾಲು ಮಾಡಲು ಸಮಾಯವಕಾಶ ಕೋರಿದ್ದರಿಂದ, ನೀಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 4/2024**

**ಸಿ.ಡಬ್ಲ್ಯೂಃ 11, ಪಿ.ಡಬ್ಲ್ಯೂಃ 09**

ಸಾಕ್ಷಿದಾರರ ಹೆಸರು : ಡಾ.ಸುರಕ್ಷಿತ ಶೆಟ್ಟಿ
ತಂದೆಯ ಹೆಸರು : ಅಶೋಕ್ ಕುಮಾರ್
ವಯಸ್ಸು : 40 ವರ್ಷ
ಉದ್ಯೋಗ : ವೈಧ್ಯಾಧಿಕಾರಿ , ತಾಲೂಕು ಸರಕಾರಿ ಆಸ್ಪತ್ರೆ , ಭಟ್ಕಳ
ವಾಸ್ತವ್ಯ : ಬೈಪಾಸ್ ರಸ್ತೆಯ ಬಳಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 25/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

2019 ಆಗಸ್ಟ್ ಯಿಂದ ಇಲ್ಲಿಯವರೆಗೆ ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ವೈಧ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಅಪಘಾತದಲ್ಲಿ ಮೃತಪಟ್ಟ ಮಹಿಳೆ ರೀಟಾ ಎನ್ನುವವರ ಮರಣೋತ್ತರ ಪರೀಕ್ಷೆಗೊಸ್ಕರ ಭಟ್ಕಳದ ಶಹರ ಪೊಲೀಸ್ ಠಾಣೆಯಿಂದ ಒಂದು ರಿಕ್ವಿಶಿಶನ್ ಬಂದಿರುತ್ತದೆ.ದಿ.17.10.2023 ರಂದು ಮಧ್ಯಾಹ್ನ 1.30 ಯಿಂದ 3.00 ಗಂಟೆಯವರೆಗೆ ಮರಣೋತ್ತರ ಪರೀಕ್ಷೆ ನಡೆದಿರುತ್ತದೆ. ಅದರಲ್ಲಿ ಮೃತ ದೇಹದ ಎರಡು ಕೈ ಉದಿಕೊಂಡಿದ್ದು ರಕ್ತ ಹೆಪ್ಪುಗಟ್ಟಿರುತ್ತದೆ, ಬಲ ಕಿವಿ ಮತ್ತು ಮುಗಿನಲ್ಲಿ ರಕ್ತ ಸೊರುತ್ತಿರುತ್ತದೆ, ಎರಡಕಾಲಿನ ಮೇಲೆ ಸಣ್ಣ ತರುಚಿದ ಗಾಯ 1X3 cm ನಷ್ಟು, ಬಲ ಕಣ್ಣಿನ ಬಳಿ ರಕ್ತ ಹೆಪ್ಪುಗಟ್ಟಿರುತ್ತದೆ. ತಲೆಯ ಬಲ ಭಾಗದಲ್ಲಿ 3X1 cm ನಷ್ಟು ಗಾಯದ ಗುರುತು ಇರುತ್ತದೆ. ಎಡ ಹಾಗೂ ಬಲದ humorous bone fracture ಆಗಿರುತ್ತದೆ. ಎಡಕೈಯ ಎರಡನೇ ಬೆರಳು ಕೂಡ ಮುರಿದಿರುತ್ತದೆ. ತಲೆಯಲ್ಲಿ ರಕ್ತ ಹೆಪ್ಪುಗಟ್ಟಿರುತ್ತದೆ. ತಲೆಯ temporal bone ಕೂಡ ಮುರಿದಿರುತ್ತದೆ. ಇವೆಲ್ಲಾ ತಾಣಗಳಿಂದ ರಕ್ತ ಸೊರುವಿಕೆ ಮತ್ತು ತಲೆಗೆ ಪೆಟ್ಟಾಗಿರುವುದರಿಂದ ಮರಣ ಆಗಿರುತ್ತದೆ ಎಂಬ ಬಗ್ಗೆ ನನ್ನ ವರದಿಯನ್ನು ನೀಡಿರುತ್ತೇನೆ. ಮಣ್ಣೋತ್ತರ ಪರೀಕ್ಷೆಯ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.11 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2024**

**ಸಿ.ಡಬ್ಲ್ಯೂಃ 08, ಪಿ.ಡಬ್ಲ್ಯೂಃ 06**

ಸಾಕ್ಷಿದಾರರ ಹೆಸರು : ಮಹಾಂತೇಶ್

ತಂದೆಯ ಹೆಸರು : ಶಿವಯ್ಯ ಹಿರೆಮಠ

ವಯಸ್ಸು : 33 ವರ್ಷ

ಉದ್ಯೋಗ : ಪೊಲೀಸ್ ಪೇದೆ , ಭಟ್ಕಳ ಶಹರ ಪೊಲೀಸ್ ಠಾಣೆ

ವಾಸ್ತವ್ಯ : ಪೊಲೀಸ್ ವಸತಿ ಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.06.2020 ರಿಂದ ಇವತ್ತಿನವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 16.12.2023 ರಂದು ನಾನು, ಚಾಸಾ 1, 6 ಮತ್ತು 7 ರವರು ಗಸ್ತು ಕರ್ತವ್ಯದಲ್ಲಿರುವಾಗ ಚಾಸಾ 1 ರವರಿಗೆ ಆಜಾದನಗರ 1 ನೇ ಕ್ರಾಸ್‌ನಲ್ಲಿರುವ ಒಂದು ಮನೆಯಲ್ಲಿ ಅಕ್ರಮವಾಗಿ ದನವನ್ನು ಕಟ್ಟಿದ್ದಾರೆ ಎಂಬ ಮಾಹಿತಿಯ ಮೇರೆಗೆ ನಾವೆಲ್ಲರೂ ಎರಡು ಪಂಚರನ್ನು ಕರಡೆದುಕೊಂಡು ಅಲ್ಲಿಗೆ ಹೋಗುತ್ತೇವೆ. ಸದರಿ ಮನೆಯನ್ನು ಪರಿಶೀಲಿಸಿದಾಗ ಮೂರು ಆಕಳು ಮತ್ತು ಒಂದು ಹೊರಿಯನ್ನು ಕಟ್ಟಿ ಹಾಕಲಾಗಿತ್ತು. ಆಗ ಚಾಸಾ 1 ರವರು ನನಗೆ ಛಾಯ ಚಿತ್ರವನ್ನು ತೆಗೆಯಲು ಹೇಳಿದರು. ಆಗ ಸಮಯ ಬೆಳಿಗ್ಗೆ 11.00 ಗಂಟೆಯಾಗಿತ್ತು. ಸದರಿ ಜಾನುವಾರಗಳನ್ನು ಹಗ್ಗದಿಂದ ಕಟ್ಟಿ ಹಾಕಲಾಗಿತ್ತು. ಅದರ ಮೌಲ್ಯ ನನಗೆ ಗೊತ್ತಿರುವುದಿಲ್ಲ. ಛಾಯಾ ಚಿತ್ರಗಳನ್ನು ತೆಗೆದು ಪ್ರಿಂಟ್ ಹಾಕಿಸಿ ಚಾಸಾ 11 ರವರಿಗೆ ಕೊಟ್ಟು , ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು 65 ಬಿ ಪ್ರಮಾಣ ಪತ್ರದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ. ಆರ್ . ಎಸ್. ವಕೀಲರಿಂದ,**

3. ಸದರಿ ಪ್ರಕರಣದ ಮಾಹಿತಿ ಬಂದಾಗ ನಾನು ಹಳೆಯ ಬಸ್ ಸ್ಟಾಂಡ್ ಹತ್ತಿರ ಕರ್ತವ್ಯದಲ್ಲಿ ಇದ್ದೆ. ಹಳೆಯ ಬಸ್ ಸ್ಟಾಂಡ್ ದಿಂದ ಘಟನಾ ಸ್ಥಳವು ಮೂರು ಕಿಲೋಮೀಟರ್ ದೂರದಲ್ಲಿ ಇದೆ. ಹಳೆಯ ಬಸ್ ಸ್ಟಾಂಡ್ ದಿಂದ ಘಟನಾ ಸ್ಥಳವು 5–10 ಕಿಲೋಮೀಟರ್ ದೂರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪಂಚರನ್ನು ಚಾಸಾ 1 ರವರು ಕರೆಯಿಸಿದ್ದರು. ಪಂಚರನ್ನು ಜಾಲಿ ಕ್ರಾಸ್ ನಿಂದ ಕರೆದುಕೊಂಡು ಬಂದಿದ್ದರು. ಪಂಚರು ಜಾಲಿ ಕ್ರಾಸ್ ನಲ್ಲಿ ಏನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪಂಚರಿಗೆ ನೋಟಿಸನ್ನು ನೀಡಿ ಕರೆದುಕೊಂಡು ಬಂದಿರುತ್ತೇವೆ. ಜಾಲಿ ಕ್ರಾಸ್ ನಿಂದ ಘಟನಾ ಸ್ಥಳವು ಒಂದೂವರೆ ಕಿಲೋಮೀಟರ್ ದೂರದಲ್ಲಿ ಇದೆ. ಘಟನಾ ಸ್ಥಳದ ಅಕ್ಕ–ಪಕ್ಕದಲ್ಲಿ ಮನೆಗಳು ಇದೆ. ಘಟನಾ ಸ್ಥಳದ ಅಕ್ಕ–ಪಕ್ಕದ ಜನರನುನ ಸಾಕ್ಷಿ ಅಥವಾ ಪಂಚಸಾಕ್ಷಿಗಳನ್ನಾಗಿ ಕರೆಸಿಲ್ಲ. ಗುನ್ನಾ ಸ್ಥಳದಲ್ಲಿ ಕಂಪೌಂಡ್ ಹಾಗೂ ಗೇಟ್ ಇದೆ. ಗೇಟಿನ ಮೇಲೆ ಯಾವುದೇ ಹೆಸರಿನ ಬೋರ್ಡ್ ಇರಲಿಲ್ಲ. ಘಟನಾ ಸ್ಥಳದಲ್ಲಿರುವ ಮನೆಯು ಯಾರಿಗೆ ಸೇರಿದ್ದು ಎಂದು ಪರಿಶೀಲನೆ ಮಾಡಿದ್ದೇವೆ. ಮನೆಯ ಮೇಲೆ ಹೆಸರನ್ನು ಹಾಕಲಾಗಿತ್ತು ಆದರೆ ಏನು ಎಂದು ನನಗೆ ನೆನಪಿಲ್ಲ. ಮನೆಯ ಮುಂದೆ ಮತ್ತು ಹಿಂದೆ ಸ್ವಲ್ಪ ಜಾಗ ಖಾಲಿ ಜಾಗ ಆಗಿತ್ತು. ದಾಳಿಯ ಕಾಲಕ್ಕೆ ನಾನು ಹಾಜರಿದ್ದೆ. ಜಾನುವಾರಗಳ ವಯಸ್ಸು ಹಾಗೂ ಬಣ್ಣ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಒಂದು ಶೆಡ್ ಇತ್ತು. ನಾಲ್ಕು ಬಳ್ಳಿಗಳಿಂದ ಜಾನುವಾರಗಳನ್ನು ಕಟ್ಟಿ ಹಾಕಲಾಗಿತ್ತು. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲು ಸಿಗುತ್ತದೆ ಎಂದರೆ ಸರಿ. ಫೊಟೋ ತೆಗೆಯಲು ನಮ್ಮ ಇಲಾಖೆಯಲ್ಲಿ ತರಬೇತಿಯನ್ನು ನೀಡಿದ್ದಾರೆ. ಘಟನಾ ಸ್ಥಳದಲ್ಲಿ ಚಾಸಾ 1 , ನಾನು , ಚಾಸಾ 6 , ಮತ್ತೊಬ್ಬ ಹಾಗೂ ಚಾಸಾ 9 ರವರು ಹಾಜರಿದ್ದರು. ಫೋಟೋದಲ್ಲಿ ಕೇವಲ ಒಬ್ಬರೇ ಪೊಲೀಸರು ಕಾಣುತ್ತಿದ್ದಾರೆ. ಫೋಟೋದಲ್ಲಿ ಪ್ರಿಂಟರ್ ಕಾಣುತ್ತಿಲ್ಲ. ಸ್ಥಳದಲ್ಲಿ ಪ್ರಿಂಟ್ ತೆಗೆಯುವಾಗ ಯಾವುದೇ ಸಲಕರಣೆಗಳು ನಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾವು ಪಂಚನಾಮೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಾನು ಸಹಿಯನ್ನು ಮಾಡಿಲ್ಲ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿ ಆಗಿದ್ದಾರೆ. ಪ್ರತ್ಯೇಕ್ಷ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ಅಂಕೆ–ಸಂಖ್ಯೆಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಾನು ಯಾವುದೇ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸರ್ಟಿಫಿಕೆಟ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಜಾನುವಾರಗಳನ್ನು ವಶಕ್ಕೆ ಪಡೆದಿಲ್ಲ ಆದರಿಂದ ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1436/2024**

**ಸಿ.ಡಬ್ಲ್ಯೂಃ 06, ಪಿ.ಡಬ್ಲ್ಯೂಃ 06**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಚೀನ್ |
| ತಂದೆಯ ಹೆಸರು | : | ದಿನೇಶ್ ಹೆಗಡೆ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಬಸ್ ಸಂಸ್ಥೆಯಲ್ಲಿ |
| ವಾಸ್ತವ್ಯ | : | ಅಮಾಸೆ ಬೈಲು, ರಟ್ಟಾಡಿ, ಕುಂದಾಪುರ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಕೆಎ.20.ಎಎ.1303 ದುರ್ಗಾಂಬ ಬಸ್ಸಿನ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮುಕ್ತ್ಯಾರ್ ನಾಮೆಯನ್ನು ಪಡೆದಿರುತ್ತೇನೆ. ಆದ್ದರಿಂದ ಸದರಿ ಗಾಡಿಯನ್ನು ಬಿಡುಗಡಗೊಳಿಸಿಕೊಂಡೆ. ಸದರಿ ಬಸ್ ಅಪಘಾತದ ಸಮಯದಲ್ಲಿ ಚಾಲಕ ಶಿವಕುಮಾರ್ ಎನ್ನುವವರು ಚಾಲನೆ ಮಾಡುತಿದ್ದರು. ಸಾಕ್ಷಿಯು 133 ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.7 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಸದರಿ ನೋಟಿಸಿಗೆ ನೀಡಿದ ಉತ್ತರವನ್ನು ನಿಪಿ.8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಬಾಂಡ್ ಅನ್ನು ಗುರುತಿಸಿದ್ದು ಅದನ್ನು ನಿಪಿ.9 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ.ಆರ್.ಎಸ್ ವಕೀಲರಿಂದ,**

2. ನಾನು 7 ವರ್ಷಗಳಿಂದ ದುರ್ಗಾಂಬ ಟ್ರಾವಲ್ಸ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ನಮಂ ಕಛೇರಿಯಲ್ಲಿ ನಮ್ಮ ಎಲ್ಲಾ ವಾಹನಗಳಿಗೆ ಸಂಬಂಧಿಸಿದಂತೆ ಜಿ.ಪಿ.ಎ ನೀಡಿಲ್ಲ . ಸದರಿ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾದ ವಾಹನಕ್ಕೆ ಸಂಬಂಧಿಸಿದಂತೆ ನನಗೆ ಜಿ.ಪಿ.ಎ ನೀಡಿದ್ದಾರೆ. ನನಗೆ ಯಾವುದೇ ಜಿ.ಪಿ.ಎ ನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ನೋಟಿಸಿಗೆ ಉತ್ತರವನ್ನು ನೀಡಿಲ್ಲ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 850/2024**

**ಸಿ.ಡಬ್ಲ್ಯೂಃ 06 , ಪಿ.ಡಬ್ಲ್ಯೂಃ 08**

ಸಾಕ್ಷಿದಾರರ ಹೆಸರು : ನವೀನ್

ತಂದೆಯ ಹೆಸರು : ಕೃಷ್ಣ ನಾಯ್ಕ

ವಯಸ್ಸು : 30 ವರ್ಷ

ಉದ್ಯೋಗ : ಆಟೋ ಚಾಲಕ

ವಾಸ್ತವ್ಯ : ಹುರುಳಿಸಾಲ್ ,ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ನ್ಯಾಯಾಲಯದಿಂದ ಸಮನ್ಸ್ ಬಂದಿದ್ದರಿಂದ ನಾನು ಬಂದಿರುತ್ತೇನೆ. ಆರೋಪಿಯ ಪರಿಚಯ ಕೂಡ ಇರುವುದಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 18.01.2024 ರಂದು ಬೆಳಿಗ್ಗೆ 10.45 ಗಂಟೆಯ ಸುಮಾರಿಗೆ ಪೊಲೀಸರು ಮತ್ತು ಆಹಾರ ನಿರೀಕ್ಷಕರು ಭಟ್ಕಳ ಆದ ಚಾಸಾ 1 ರವರು ಆರೋಪಿತನ ಆಟೋ ರೀಕ್ಷಾ ನಂಬರ್ ಕೆಎ. 47.4290 ನೇದನ್ನು ಪರಿಶೀಲಿಸುತ್ತಿರುವ ಸಮಯದಲ್ಲಿ ನಾನು ಹನುಮಾನ್ ನಗರ ಕಡೆಯಿಂದ ನನ್ನ ಬಾಬ್ತು ಆಟೋವನ್ನು ಪೊಲೀಸರು ನಿಲ್ಲಿಸಲು ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿಯ ಆಟೋ ರೀಕ್ಷಾದಲ್ಲಿ ಪಡಿತರ ಅಕ್ಕಿ 12 ಚೀಲಗಳು ಸುಮಾರು 160 ಕೆಜಿಯಷ್ಟು ಇದ್ದವು ಎಂದರೆ ಸರಿಯಲ್ಲ. ಸದರಿ ಅಕ್ಕಿಯ ಮೌಲ್ಯ ರೂ.12,240/- ಆಗಿದ್ದು ಪೊಲೀಸರು ಅನಧೀಕೃತವಾದ ಪಡಿತರ ಅಕ್ಕಿ ಮತ್ತು ರೀಕ್ಷಾವನ್ನು ನನ್ನ ಸುಮ್ಮುಖದಲ್ಲಿ ಪಂಚನಾಮೆಯಂತೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರು ಕೂಡ ಆರೋಪಿಗೆ ಸಾಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 85/2023**

**ಸಿ.ಡಬ್ಲ್ಯೂಃ 01, ಪಿ.ಡಬ್ಲ್ಯೂಃ 01**

ಸಾಕ್ಷಿದಾರರ ಹೆಸರು : ಸತೀಶ

ತಂದೆಯ ಹೆಸರು : ಲಚ್ಚಯ್ಯಾ ಮೊಗೇರ

ವಯಸ್ಸು : 51 ವರ್ಷ

ಉದ್ಯೋಗ : ಮೀನುಗಾರಿಕೆ

ವಾಸ್ತವ್ಯ : ಮಠದ ಹಿತ್ಲು, ಮುರ್ಡೇಶ್ವರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ. 23.06.2024 ರಂದು ಅಳ್ವೆಕೋಡಿಯಿಂದ ಭಟ್ಕಳಕ್ಕೆ ಬರುತ್ತಿರುವಾಗ ಜಾಲಿ ಕ್ರಾಸ್ ಹತ್ತಿರ ನಾನು ಮತ್ತು ಚಾಸಾ 4 ದ್ವಿಚಕ್ರ ವಾಹನದಲ್ಲಿ ಕೆಎ.47.ಇ.6237 ರಲ್ಲಿ ಬರುತ್ತಿರುವಾಗ ಸಮಯ 3.00 ಗಂಟೆ ಸುಮಾರಿಗೆ ಮಾರುತಿ ಸೆಲೆರೀಯೋ ಕಾರಾಗಿದ್ದು ಅದರ ಸಂಖ್ಯೆ ಎಮ್.ಹೆಚ್.04.ಕೆಡಿ.1915 ಅದರಲ್ಲಿ ಆರೋಪಿತರಿದ್ದರು. ಅವರು ನನ್ನ ದ್ವಿಚಕ್ರ ವಾಹನವನ್ನು ಅಡ್ಡ ಹಾಕಿ ನನಗೆ ರಾಡಿನಿಂದ ಹೊಡೆದರು. ಚಾಸಾ 4 ರವರಿಗೆ ಬಲಗೈ fracture ಆಗಿತ್ತು ಮತ್ತು ಕಾಲಿಗೆ ಪೆಟ್ಟಾಗಿತ್ತು. ನನಗೆ ಎಡಗೈಗೆ, ಬಲಗೈ ಮೊಣಕೈಗೆ ಮತ್ತು ತಲೆಗೆ ಪೆಟ್ಟಾಗಿತ್ತು. ನಂತರ ನಾವು ಭಟ್ಕಳದ ಸರಕಾರಿ ಆಸ್ಪತ್ರೆಗೆ ಹೋದಾಗ , ಅಲ್ಲಿ ಚಾಸಾ 4 ರವರಿಗೆ ಅತಿ ಹೆಚ್ಚು ಚಿಕಿತ್ಸೆಗಾಗಿ ಕುಂದಾಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿದ್ದೇನು. ತದನಂತರಲ್ಲಿ ನನ್ನನ್ನು ಕೂಡ ಕುಂದಾಪುರ ನ್ಯೂ ಮೇಡಿಕಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ನಾನು ಅವರ ಮೇಲೆ ಕೇಸನ್ನು ಮಾಡಿದ್ದೆನು. ಮೂರು ದಿನದ ನಂತರ ಪೊಲೀಸರು ಮಹಜರಿಗೆ ನನ್ನನ್ನು ಕರೆದಿದ್ದರು. ಮಹಜರನ್ನು ಸಂಜೆ ಸುಮಾರು 4 ರಿಂದ 5.00 ಗಂಟೆಯವರೆಗೆ ಮಾಡಲಾಗಿತ್ತು. ರಾಡ್ , ಕಲ್ಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು , ಕಬ್ಬಿಣದ ರಾಡ್ ನ್ನು ಮು.ಮಾ.1 ಎಂದು , ಕಲ್ಲು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ನನ್ನ ಮೇಲೆ ದಾಳಿ ಮಾಡಿದವರನ್ನು ನೋಡಿದರೆ ಗುರುತಿಸಬಲ್ಲೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ.ಹೆಚ್.ಎನ್ ವಕೀಲರಿಂದ,</u>**

2. ಸದರಿ ಗಲಾಟೆಯು 10-15 ನಿಮಿಷಗಳ ಕಾಲ ಆಗಿರುತ್ತದೆ. ಗಲಾಟೆಯಲ್ಲಿ ಕೂಗಾಟ ಆಗಿಲ್ಲ. ಆರೋಪಿತರು ಘಟನಾ ಸ್ಥಳಕ್ಕೆ ಬಂದು ನನ್ನನ್ನು ದೂಡಿ ಹಾಕಿ ಹೊಡೆದರು. ಘಟನಾ ಸ್ಥಳದಲ್ಲಿ ಸಾಕಷ್ಟು ಜನರು ಓಡಾಡುತ್ತಾರೆ. ಸದರಿ ಘಟನೆಯನ್ನು ಸಾಕಷ್ಟು ಜನರು ನೋಡಿರುತ್ತಾರೆ. ಬೇರೆ ಜನರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಘಟನಾ ಸ್ಥಳದ ಆಚೆಇಚೆ ಮನೆಗಳು ಇವೆ. ನನಗೆ ಘಟನೆಯಲ್ಲಿ ಕೈಗೆ , ತಲೆಗೆ , ಬೆನ್ನು ಹಾಗೂ ಕಾಲಿಗೆ ರಕ್ತದ ಗಾಯ ಆಗಿರುತ್ತದೆ. ನನ್ನ ಬಟ್ಟೆಯೆಲ್ಲ ರಕ್ತ ಆಗಿತ್ತು. ಘಟನೆಯಾದ ದಿನವೇ ಪೊಲೀಸರು ಘಟನಾ ಸ್ಥಳದಲ್ಲಿ ಮಧ್ಯಾಹ್ನ 3.00 ಗಂಟೆಗೆ ಜಪ್ತು ಮಾಡುವ ಕಾಲಕ್ಕೆ ನಾನು ಇದ್ದೇನು. ಸದರಿ ಘಟನೆಯು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಆಗಿದೆ. ನನ್ನ ರಕ್ತ ತಾಗಿದ ಬಟ್ಟೆಯನ್ನು ಪೊಲೀಸರು ನೋಡಿದ್ದಾರೆ. ದೂರನ್ನು ನಾನು ಸ್ವಲ್ಪ ನನ್ನ ಕೈಯಿಂದ ಬರೆದೆನು ನಂತರ ಪೊಲೀಸರು ನನ್ನನ್ನು ಕೇಳಿ ದೂರನ್ನು ಬರೆದಿರುತ್ತಾರೆ. ಪೊಲೀಸರು ಕೈಯಿಂದ ದೂರನ್ನು ಬರೆದಿದ್ದಾರೆ. ಕೈಯಿಂದ ಬರೆದ ದೂರನ್ನು ನನಗೆ ಇವತ್ತು ತೋರಿಸಿರುವುದಿಲ್ಲ. ಪಂಚನಾಮೆಗೆ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆರೋಪಿಯು ನನ್ನ ವಿರುದ್ಧ ದೂರನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆ. ನನ್ನ ರಕ್ತ ತಾಗಿದ ಬಟ್ಟೆಯನ್ನು ಪೊಲೀಸರು ತೆಗೆದುಕೊಂಡಿದ್ದರು. ಪಂಚನಾಮೆಯ ಕಾಲಕ್ಕೆ ಫೋಟೋವನ್ನು ತೆಗೆದಿಲ್ಲ. ನಾನು ಹೇಳುವಂತಹ ಘಟನೆಯು ನಡೆದಿದ್ದೆ ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ , ಮುದ್ದೆ ಮಾಲುಗಳಿಗೂ ಮತ್ತು ಆರೋಪಿಗಳಿಗೂ ಯೂವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ಬರೆದಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಾನೇ 1 ನೇ ಆರೋಪಿಯು ಬರುವಾಗ ಅಡ್ಡ ಹಾಕಿ ಆತನ ಮೇಲೆ ಹಲ್ಲೆ ಮಾಡಲು ಪ್ರಯತ್ನ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನನ್ನ ಹಾಗೂ ಚಾಸಾ 4 ರವರ ಮೇಲೆ ಸಿಸಿ 86/2024 ಪ್ರಕರಣವು ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಿಂದ ಬಚಾವಾಗಲು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.ನನಗೆ ಸದರಿ ಪ್ರಕರಣದಲ್ಲಿ ಯಾವುದೇ ಗಾಯ ಆಗಿದ್ದು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1242/2024**

**ಸಿ.ಡಬ್ಲ್ಯೂಃ 04, ಪಿ.ಡಬ್ಲ್ಯೂಃ 04**

ಸಾಕ್ಷಿದಾರರ ಹೆಸರು : ಮಹಾಂತೇಶ್
ತಂದೆಯ ಹೆಸರು : ಶಿವಯ್ಯ ಹಿರೆಮಠ
ವಯಸ್ಸು : 33 ವರ್ಷ
ಉದ್ಯೋಗ : ಪೊಲೀಸ್ ಪೇದೆ , ಭಟ್ಕಳ ಶಹರ ಪೊಲೀಸ್ ಠಾಣೆ
ವಾಸ್ತವ್ಯ : ಪೊಲೀಸ್ ವಸತಿ ಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.06.2020 ರಿಂದ ಇವತ್ತಿನವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 26.04.2024 ರಂದು ಚಾಸಾ 1 ರವರು ನನ್ನ ಹತ್ತಿರ ದೇವಿನಗರ ಜಾಲಿ ಹತ್ತಿರ ಅಬಕಾರಿ ದಾಳಿಯ ಕುರಿತು ಒಂದು ಮಾಹಿತಿ ಇದೆ ಎಂದು ತಿಳಿಸಿರುತ್ತಾರೆ. ನಾನು , ಚಾಸಾ 5, 6 , 7 ರವರು ಸದರಿ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿ ನಾವು ದೂರದಲ್ಲಿ ನಿಂತು ವಾಚ್ ಮಾಡಿದಾಗ , ಅಲ್ಲಿ ಅನುಮಾನ ಬಂದ ವ್ಯಕ್ತಿಯ ಬಳಿ ಹೋದಾಗ ಎಲ್ಲರೂ ಸುತ್ತುವರಿದು ದಾಳಿ ಮಾಡಿರುತ್ತೇವೆ. ಆಗ ಸಮಯ ಸಂಜೆ 6.45 ಆಗಿತ್ತು. ಆ ಮೇಲೆ ದಾಳಿ ನಡೆಸಿ ಆರೋಪಿಯನ್ನು ಹಿಡಿದಾಗ ಅವನ ಕೈ ಚೀಲದಲ್ಲಿ ಹೈವರ್ಡ್ಸ ಚಿಯರ್ಸ್ ವಿಸ್ಕಿಯ 10 ಪ್ಯಾಕೆಟ್ ಇತ್ತು. ಚಾಸಾ 1 ರವರು ಈ ಕುರಿತು ಆರೋಪಿಯನ್ನು ವಿಚಾರಿಸಿದಾಗ ತನ್ನ ಬಳಿ ಇದನ್ನು ಮಾರಾಟ ಮಾಡಲು ಯಾವುದೇ ಪಾಸ್ ಪರ್ಮಿಟ್ ಇರುವುದಿಲ್ಲ ಎನ್ನುತ್ತಾರೆ ಮತ್ತು ಸದರಿಯವರ ಬಳಿ ಸಾರಾಯಿ ಬಗ್ಗೆ ಕೇಳಿದಾಗ ಆತನು ರೋಡ್ ಪಕ್ಕದಲ್ಲಿರುವ ಗೂಡಾಂಗಡಿಯಲ್ಲಿ ಇಟ್ಟು ಮಾರಾಟ ಮಾಡಲು ಎಂದು ನುಡಿದಿರುತ್ತಾನೆ. ಸದರಿ ಸಾರಾಯಿ ಪ್ಯಾಕಟ್ ನ್ನು ಪಂಚರ ಸಮಕ್ಷಮ ಬಳಿ ಬಟ್ಟೆಯನ್ನು ಸುತ್ತಿ ಪ್ಯಾಕ್ ಮಾಡಲಾಯಿತು. ಆರೋಪಿಯು ನ್ಯಾಯಾಲದ ಮುಂದೆ ಹಾಜರಿದ್ದ ಚೀಲವನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ವಿ.ಎಫ್.ಜಿ. ವಕೀಲರಿಂದ,</u>**

3. ಅಕ್ಕ ಪಕ್ಕದ ಜನರು ದಾಳಿಯನ್ನು ನೋಡಿದ್ದಾರೆ. ದಾಳಿಯ ಕಾಲಕ್ಕೆ ಫೋಟೋವನ್ನು ತೆಗೆದಿದ್ದಾರೆ. ಫೊಟೋವನ್ನು ಯಾರು ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಟೈಪ್ ಮಾಡಲಾಗಿತ್ತು. ಪಂಚನಾಮೆಯನ್ನು ಘಟನಾ ಸ್ಥಳದ ರಸ್ತೆಯ ಪಕ್ಕದಲ್ಲಿ ಕುಳಿತುಕೊಂಡು ಗಣಕಯಂತ್ರ ಮಾಡಲಾಗಿತ್ತು. ಪ್ರಿಂಟ್ ನ್ನು ಘಟನಾ ಸ್ಥಳದಲ್ಲೆ ಕೊಡಲಾಯಿತು. ಪ್ರಿಂಟ್ ಗೆ connection ನ್ನು ಜೀಪಿನಿಂದ ಕೊಡಲಾಯಿತು. ಪ್ರಿಂಟರ್ ಯಾವುದು ಇತ್ತು ನನಗೆ ಗೊತ್ತಿಲ್ಲ. ಪಂಚನಾಮೆ ಬರೆಯಲು ಚಾಸಾ 1 ರವರು ಮಾಹಿತಿ ನೀಡಿದ್ದರು. ಚಾಸಾ1 ರವರು ನಮ್ಮ ಮೇಲಾಧಿಕಾರಿಯಾಗಿದ್ದಾರೆ ಮತ್ತು ಪಿರ್ಯಾದಿದಾರರಾಗಿದ್ದಾರೆ.ನಾವುಯಾವುದೇ ದಾಳಿ ಮಾಡಿಲ್ಲ ಹಾಗೂ ಯಾವುದೇ ಸಾರಾಯಿಯನ್ನು ಜಪ್ತುಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಅಂಕ್ಕೆ ಸಂಖ್ಯೆಗಾಗಿ ಸುಳ್ಳು ದೂರನ್ನು ಸೃಷ್ಠಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 158/2017**

**ಸಿ.ಡಬ್ಲ್ಯೂಃ 04, ಪಿ.ಡಬ್ಲ್ಯೂಃ 04**

ಸಾಕ್ಷಿದಾರರ ಹೆಸರು : ಖಾಸೀಂ ಹಸನ್ ಸಾಬ್

ತಂದೆಯ ಹೆಸರು : ಹಸನ್ ಸಾಬ್

ವಯಸ್ಸು : 52 ವರ್ಷ

ಉದ್ಯೋಗ : ಮೀನು ವ್ಯಾಪಾರ

ವಾಸ್ತವ್ಯ : ಟೊಂಕ , ಹೊನ್ನಾವರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಈ ಪ್ರಕರಣದಲ್ಲಿ ಕಳ್ಳತನವಾದ ಬಂಗಾರದ ಕುರಿತು ನನ್ನನ್ನು ಮತ್ತು ಎರಡು ಜನ ಆರೋಪಿಗಳನ್ನು ಪೊಲೀಸರು ಕಾಸರಗೋಡು ಕೇರಳಕ್ಕೆ ಕರೆದುಕೊಂಡು ಹೋಗಿದ್ದರು. ಎರಡು ಜನ ಆರೋಪಿಗಳು ತೋರಿಸಿದ ಬಂಗಾರದ ಅಂಗಡಿಗೆ ನಮ್ಮನ್ನು ಪೊಲೀಸರು ಕರೆದುಕೊಂಡು ಹೋಗಿದ್ದರು. ಸದರಿ ಅಂಗಡಿಯವರು ಕೆಲವೊಂದು ಬಂಗಾರವನ್ನು ನೀಡಿ, ಇನ್ನು ಕೆಲವು ಬಂಗಾರವನ್ನು ಕರಗಿಸಿರುತ್ತೇವೆ ಎಂದು ಹೇಳಿದ್ದರು. ಅಂಗಡಿಯಲ್ಲಿ ಪಂಚನಾಮೆಯನ್ನು 7.00 ಗಂಟೆಯಿಂದ 9.00 ಗಂಟೆಯವರೆಗೆ ಜರುಗಿಸಲಾಯಿತು. ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿದ್ದರು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

2. ದಿ.06.10.2016 ರಂದು ಚಾಸಾ 19 ರವರ ಜೊತೆಗೂಡಿ ನಾನು ಮತ್ತು ಚಾಸಾ 5 ರವರು ಕೇರಳ ಕಾಸರ್ಗೋಡಿಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಸದರಿ ಬಂಗಾರದ ಅಂಗಡಿಯ ಹೆಸರು ನವರತ್ನ ಜ್ಯೂವೆಲ್ಲರಿ ಎಂಬುದಾಗಿತ್ತು ಎಂದರೆ ಸರಿಯಲ್ಲ. ಈ ರೀತಿ ಆರೋಪಿತರು 3 ಗ್ರಾಂ ತೂಕದ 25 ಬಂಗಾರದ ನಾಣ್ಯಗಳು ಅದರ ಮೌಲ್ಯ ರೂ.2,80,000/- ಆಗಿದ್ದು ನಿಮ್ಮ ಸಮಕ್ಷಮ ಪೊಲೀಸರು ಅದನ್ನು ಜಪ್ತುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಕರಗಿಸಿದ ಬಂಗಾರ ರೂ.6,30,000/- ಮೌಲ್ಯದ 225 ಗ್ರಾಂ ನ

ಬಂಗಾರದ ತುಂಡನ್ನು ಕೂಡ ನಿಮ್ಮ ಸಮಕ್ಷಮ ಜಪ್ತುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬಂಗಾರವನ್ನು ಅಂಗಡಿಯ ಮಾಲೀಕನಾದ ಚಾಸಾ 9 ರವರು ಪೊಲೀಸರಿಗೆ ನನ್ನ ಸಮಕ್ಷಮ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಿಮ್ಮ ಸಮಕ್ಷಮ ಪೊಲೀಸರು 25 ಬಂಗಾರದ ನಾಣ್ಯಗಳನ್ನು ಮತ್ತು 1 ಬಂಗಾರದ ತುಂಡನ್ನು ಒಟ್ಟು 325 ಗ್ರಾಂ ಬಂಗಾರವನ್ನು ಆರೋಪಿತರು ಮಾರಾಟ ಮಾಡಿದ ಅಂಗಡಿಯವರ ಕಡೆಯಿಂದ ನಿಮ್ಮ ಸಮ್ಮುಖದಲ್ಲಿ ಜಪ್ತುಪಡಿಸಿಕೊಂಡರು ಕೂಡ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.7 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ.ಹೆಚ್.ಎನ್. ವಕೀಲರಿಂದ,**

3.ಇಂತಹ ಪ್ರಕರಣಗಳಿಗೆ ಪೊಲೀಸರು ನನ್ನನ್ನು ಆಗಾಗ ಕರೆಯುತ್ತಿದ್ದರು. ನನ್ನನ್ನು ಪೊಲೀಸರು ಕೇರಳಕ್ಕೆ ಕರೆದುಕೊಂಡು ಹೋಗಿದ್ದು ಇಲ್ಲ ಎಂದರೆ ಸರಿಯಲ್ಲ. ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪೊಲೀಸರು ಸುಳ್ಳಾಗಿ ಬರೆದುಕೊಟ್ಟ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2149/2022**

**ಸಿ.ಡಬ್ಲ್ಯೂ: 03, ಪಿ.ಡಬ್ಲ್ಯೂ: 03**

ಸಾಕ್ಷಿದಾರರ ಹೆಸರು : ಇರ್ಷಾದ್
ತಂದೆಯ ಹೆಸರು : ಮುಕ್ತ್ಯಾರ್ ಅಹಮ್ಮದ್
ವಯಸ್ಸು : 28 ವರ್ಷ
ಉದ್ಯೋಗ : ಚಾಲಕ
ವಾಸ್ತವ್ಯ : ಗಣೇಶ ನಗರ , ಪುರವರ್ಗ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿನಾಂಕ ನೆನಪಿರುವುದಿಲ್ಲ. ಒಂದುವರೆಯಿಂದ ಎರಡು ವರ್ಷದ ಹಿಂದೆ ಪೊಲೀಸರು ನನ್ನನ್ನು ಕರೆದಿದ್ದರು. ಪೊಲೀಸರು ಠಾಣೆಗೆ ಬಂದು ಪಂಚನಾಮೆಗೆ ಸಹಿ ಮಾಡಿ ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ. ಯಾವ ವಿಷಯದ ಕುರಿತು ಎಂದು ನನಗೆ ಮಾಹಿತಿ ಇರುವುದಿಲ್ಲ. ನಿಪಿ.2 ಫೋಟೋದಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 16.03.2022 ರಂದು ಚಾಸಾ 8 ರವರು ನನ್ನನ್ನು ಮತ್ತು ಚಾಸಾ 2 ರವರನ್ನು ಭಟ್ಕಳ ಶಹರದ ಹಳೆಯ ಬಸ್ ನಿಲ್ದಾಣದ ಹತ್ತಿರ ಕರೆಯಿಸಿಕೊಂಡು ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಗೆ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಶಾಂತಿಕದಡುವ ಕಾರ್ಯದಲ್ಲಿ ಸದರಿ ಜಾಗದಲ್ಲಿ ನಿರತರಾಗಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಸ್ಥಳದಲ್ಲಿ ಬರೆದು ಮುಗಿಸಲಾಯಿತು ಎಂದರೆ ಸರಿಯಲ್ಲ. ಈ ಪ್ರಕರಣದ ಪಂಚನಾಮೆಯನ್ನು ನಿಮ್ಮ ಮತ್ತು ಚಾಸಾ 3 ರವರ ಸಮಕ್ಷಮ ಸ್ಥಳದಲ್ಲೆ ಜರುಗಿಸಿ ನೀವು ಸ್ಥಳದಲ್ಲಿ ಸಹಿ ಮಾಡಿರುತ್ತಿರ ಎಂದರೆ ಸರಿಯಲ್ಲ. ಘಟನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು.

.**ಪಾಟೀ ಸವಾಲು : ಆರೋಪಿ ಪರ ಎ.ಆರ್.ಎಸ್. ವಕೀಲರಿಂದ**

ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ.,ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2149/2022**

**ಸಿ.ಡಬ್ಲ್ಯೂಃ 02, ಪಿ.ಡಬ್ಲ್ಯೂಃ 02**

| | | |
|---|---|---|
| ಸಾಕ್ಷಿದಾರರ ಹೆಸರು | : | ಮೊಹಮ್ಮದ್ ರಫೀಕ್ |
| ತಂದೆಯ ಹೆಸರು | : | ಅಬ್ದುಲ್ ಹಮೀದ್ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಚೌಥನಿ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿನಾಂಕ ನೆನಪಿರುವುದಿಲ್ಲ. ಒಂದುವರೆಯಿಂದ ಎರಡು ವರ್ಷದ ಹಿಂದೆ ಪೊಲೀಸರು ನನ್ನನ್ನು ಕರೆದಿದ್ದರು. ಪೊಲೀಸರು ಠಾಣೆಗೆ ಬಂದು ಪಂಚನಾಮೆಗೆ ಸಹಿ ಮಾಡಿ ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ. ಯಾವ ವಿಷಯದ ಕುರಿತು ಎಂದು ನನಗೆ ಮಾಹಿತಿ ಇರುವುದಿಲ್ಲ. ನಿಪಿ.2 ಫೋಟೋದಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 16.03.2022 ರಂದು ಚಾಸಾ 8 ರವರು ನನ್ನನ್ನು ಮತ್ತು ಚಾಸಾ 3 ರವರನ್ನು ಭಟ್ಕಳ ಶಹರದ ಹಳೆಯ ಬಸ್ ನಿಲ್ದಾಣದ ಹತ್ತಿರ ಕರೆಯಿಸಿಕೊಂಡು ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಗೆ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಶಾಂತಿಕದಡುವ ಕಾರ್ಯದಲ್ಲಿ ಸದರಿ ಜಾಗದಲ್ಲಿ ನಿರತರಾಗಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಸ್ಥಳದಲ್ಲಿ ಬರೆದು ಮುಗಿಸಲಾಯಿತು ಎಂದರೆ ಸರಿಯಲ್ಲ. ಈ ಪ್ರಕರಣದ ಪಂಚನಾಮೆಯನ್ನು ನಿಮ್ಮ ಮತ್ತು ಚಾಸಾ 3 ರವರ ಸಮಕ್ಷಮ ಸ್ಥಳದಲ್ಲೆ ಜರುಗಿಸಿ ನೀವು

ಸ್ಥಳದಲ್ಲಿ ಸಹಿ ಮಾಡಿರುತ್ತಿರ ಎಂದರೆ ಸರಿಯಲ್ಲ. ಘಟನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

.**ಪಾಟೀ ಸವಾಲು : ಆರೋಪಿ ಪರ ಎ.ಆರ್.ಎಸ್. ವಕೀಲರಿಂದ**

ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ.,ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 781/2023**

**ಸಾಕ್ಷಿಃ ಸಿಡಬ್ಲ್ಯೂಃ 3 , ಪಿ.ಡಬ್ಲ್ಯೂಃ 3**

ಸಾಕ್ಷಿದಾರನ/ಳ ಹೆಸರು : ಪ್ರದೀಪ

ತಂದೆಯ/ಗಂಡನ ಹೆಸರು : ಮಾರುತಿ ಮೇತ್ರಿ

ವಯಸ್ಸು : 34 ವರ್ಷ

ಉದ್ಯೋಗ : ಪೇದೆ ,ಅಬಕಾರಿ ಕಚೇರಿ

ವಾಸ್ತವ್ಯ : ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 22/03/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 29.04.2021 ರಿಂದ ಇಲ್ಲಿಯವರೆಗೆ ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ನಾನು

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**

**(ಇಂದು ತಾಃ 22/03/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್.ಬಿ.ಬಿ. ವಕೀಲರಿಂದ,</u>**

ಸದರಿ ಪ್ರಕರಣದಲ್ಲಿ ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾಗಿದ್ದಾರೆ. ಸದರಿ ಪ್ರಕರಣದಲ್ಲಿ ದಾಳಿ ಮಾಡುಲ ಪೂರ್ವದಲ್ಲಿ ಯಾವುದೇ ಎಫ್.ಐ.ಆರ್ ದಾಖಲಾಗಿಲ್ಲ. ಸದರಿ ಪ್ರಕರಣದಲ್ಲಿ ಚಾಸಾ 2 ಮತ್ತು 3 ರವರನ್ನು ಚಾಸಾ 1 ರವರು ಕರೆದಿದ್ದರು. ಚಾಸಾ 2 , 3 ಮತ್ತು 9 ರವರನ್ನು ಹೊರತು ಪಡಿಸಿ ಉಳಿದ ಎಲ್ಲಾ ಸಾಕ್ಷಿದಾರರು ನಮ್ಮ ಸಿಬ್ಬಂದಿಯವರು . ಸದರಿ ಘಟನೆಯು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಇದೆ ಮತ್ತು ಸಾಲಾಗಿ ಅಂಗಡಿಗಳು ಮತ್ತು ವಾಸ್ತವ್ಯದ ಮನೆಗಳು ಇವೆ. ಘಟನೆಯ ಸ್ಥಳದ ಪೂರ್ವದಲ್ಲಿ ಪುಷ್ಪಾಂಜಲಿ ಕ್ರಾಸ್ ಇದೆ. ಚಾಸಾ 2 ಮತ್ತು 3 ರವರನ್ನು ಠಾಣೆಯಲ್ಲಿಯಿ ಬರಲಿಕ್ಕೆ ಹೇಳಿದ್ದೇವು. ಒಬ್ಬರು ಪಂಚರು ಮುತ್ತಳಿಯವರು ಇನ್ನೊಬ್ಬರು ಸರ್ಪನಕಟ್ಟೆಯವರಾಗಿದ್ದಾರೆ.ಸರ್ಪನಟ್ಟೆ ಘಟನಾ ಸ್ಥಳದಿಂದ 5 ಕಿ.ಮಿ. ದೂರ ಇದೆ , ಮುತ್ತಳಿ ಘಟನಾ ಸ್ಥಳದಿಂದ 3 ಕಿ.ಮಿ. ದೂರ ಇದೆ. ದಾಳಿ ಯಲ್ಲಿ ನಾನು ಚಾಸಾ 1 ರವರ ಜೊತೆ ಇದ್ದೆನು. ಸದರಿ ಘಟನೆಯು ಹೊಟೇಲಿನ ಒಳಗೆ ಆಗಿದೆ. ದಾಳಿಯ ಕಾಲಕ್ಕೆ ಗಿರಾಕಿಗಳು ಇದ್ದರು. ಗಿರಾಕಿಗಳನ್ನು ವಿಚಾರಣೆ ಮಾಡಿಲ್ಲ. ಘಟನಾ ಸ್ಥಳದಲ್ಲಿ ಸಾರಾಯಿ ಪ್ಯಾಕೆಟ್ ಗಳು , ಗ್ಲಾಸ್ , ಬಾಟಲಿ , ಮುಚ್ಚಳಿ ಇತ್ಯಾದಿ ಏನು ಸಿಕ್ಕಿಲ್ಲ. ಹಾಗೂ ಆರೋಪಿಯಿಂದ ಮಾರಾಟ ಮಾಡಿದ ಬಗ್ಗೆ ಯಾವುದೇ ಹಣವನ್ನು ಜಪ್ತುಮಾಡಿಲ್ಲ. ಮಧ್ಯಾಹ್ನ ಸಮಯ ಆದ ಕಾರಣ ಎಲ್ಲಾ ಅಂಗಡಿಗಳು ತೆರೆದಿದ್ದವು. ನನ್ನ ಸಮಕ್ಷಮದಲ್ಲಿ ಪಂಚನಾಮೆ ಬರೆದಿದ್ದಾರೆ. ಪಂಚನಾಮೆಯಲ್ಲಿ ಜಪ್ತುಪಡಿಸಿರುವ ಮುದ್ದೆ ಮಾಲಿನ ನಂಬರ್ ಗಳು ಬರೆದಿದ್ದಾರೆ. ಮುದ್ದೆ ಮಾಲಿನ ಬ್ಯಾಚ್ ನಂಬರ್ ಅನ್ನು ಹೇಳಲಿಕೆ ಆಗುವುದಿಲ್ಲ. ಪಂಚನಾಮೆಯಲ್ಲಿ ಸಾರಾಯಿ ಪ್ಯಾಕೆಟ್ ನ ಬ್ಯಾಚ್ ಅಥವಾ ಸಿರಿಯಲ್ ನಂಬರ್ ಅನ್ನು ಬರೆದಿಲ್ಲ. ಸಾರಾಯಿ ಪ್ಯಾಕೆಟ್

ಗಳನ್ನು ಯಾವ ಅಂಗಡಿಯಿಂದ ತರಲಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಪಂಚನಾಮೆಯನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾರಾಯಿ ಪ್ಯಾಕೆಟ್ ಗಳನ್ನು ಪ್ರತ್ಯೇಕವಾಗಿ ತೆಗೆದು ಪಂಚನಾಮೆಯನ್ನು ಮಾಡಿಲ್ಲ. ಚೀಲದಲ್ಲಿ ಯಾವೆಲ್ಲ ವಸ್ತುಗಳು ಇದೆ ಎಂದು ಛಾಯಾ ಚಿತ್ರದಲ್ಲಿ ಕಂಡುಬರುವುದಿಲ್ಲ. ಫೋಟೋದಲ್ಲಿ ಕಾಣುತ್ತಿರುವ ಚೀಲವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಚೀಲದ ಬಣ್ಣ ನೀಲಿ ಆಗಿದೆ. ದಾಳಿಯಲ್ಲಿ ನೋಡಿರುವ ವಸ್ತುಗಳು ಈ ದಿನ ನ್ಯಾಯಾಲಯದಲ್ಲಿ ನನಗೆ ತೋರಿಸಿಲ್ಲ. ಒಟ್ಟು ಆರು ಜನರು ದಾಳಿಗೆ ಹೋಗಿದ್ದೇವು. ಫೋಟೋದಲ್ಲಿ ಪಂಚನಾಮೆಗೆ ಬರೆಯಲು ಬೇಕಾದ ಹಾಳೆ , ಪೆನ್ನು ಇತ್ಯಾದಿಗಳು ಕಂಡುಬಂದಿರುವುದಿಲ್ಲ. ನಾನು ಚಾಸಾ 1 ರವರೊಂದಿಗೆ ಯಾವುದೇ ದಾಳಿಗೆ ಹೋಗಿದಿಲ್ಲ ಎಂದರೆ ಸರಿಯಲ್ಲ. ಅಂಕೆಸಂಖ್ಯೆಗಾಗಿ ನಮ್ಮ ಮೇಲಾಧಿಕಾರಿಗಳು ದಾಖಲಿಸಿರುವ ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು : ಪ್ರಭಾಕರ
ತಂದೆಯ ಹೆಸರು : ರಾಮಚಂದ್ರ ನಾಯ್ಕ
ವಯಸ್ಸು : 40 ವರ್ಷ
ಉದ್ಯೋಗ : ರೈಲ್ವೆ ಸಹಾಯಕನಾಗಿ ಕೆಲಸ
ವಾಸ್ತವ್ಯ : ಚಿತ್ರಾಪುರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ /03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತರು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿಲ್ಲ . ಆರೋಪಿತರು ಹಾಗೂ ನನ್ನ ಮಧ್ಯೆ ರಾಜಿಯಗಿದ್ದು ಸದರಿ ಪ್ರಕರಣವನ್ನು ಮುಂದುವರೆಸಲು ನನಗೆ ಇಚ್ಛೆ ಇಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನಗೆ ಪಂಚನಾಮೆಗೆ ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ–2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

ನನಗೆ ಯಾರೂ ಹಲ್ಲೆ ಮಾಡಿರುವುದಿಲ್ಲ. ನನಗೆ ಯಾರೂ ಬೆದರಿಕೆ ಹಾಕಿರುವುದಿಲ್ಲ. ನನ್ನನ್ನು ಯಾರೂ ಅಡ್ಡಗಟ್ಟಿರುವುದಿಲ್ಲ. ನಾನು ಯಾವುದೇ ದೂರು ದಾಖಲಿಸಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ.

ನಮ್ಮ ಮತ್ತು ಆರೋಪಿಯ ಮಧ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಛೆ ಇಲ್ಲ. ಆರೋಪಿಯು ನನಗೆ ವರದಕ್ಷಿಣೆ ಕಿರುಕುಳ ನೀಡಿಲ್ಲ, ಹೊಡೆಬಡೆ ಮಾಡಿಲ್ಲ, ಜೀವದ ಬೆದರಿಕೆ ಹಾಕಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 08.04.2017 ರಂದು ಮಧ್ಯಾಹ್ನ 2.30 ರಿಂದ 3.30 ಗಂಟೆಯೊಳಗೆ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ರೂ. 18 ಲಕ್ಷವನ್ನು ಆರೋಪಿಯಿಂದ ನನ್ನ ಸಮಕ್ಷಮ ಜಪ್ತು ಮಾಡಿದ್ದಾರೆ ಎಂದರೆ ಸರಿಯಲ್ಲ. ರೂ. 1000.00 ದ 1300 ನೋಟುಗಳು ಮತ್ತು ರೂ. 500.00 ರ 1000 ನೋಟುಗಳನ್ನು ಜಪ್ತು ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರ ಜೊತೆ ಒಂದು ಬ್ಯಾಗು ಮತ್ತು ರೈಲ್ವೆ ಟೀಕೆಟನ್ನು ಜಪ್ತು ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಸಮಯದಲ್ಲಿ ಚಾಸಾ –2 ರವರು ನನ್ನ ಜೊತೆ ಇದ್ದರು. ನಾನು ಸ್ಥಳದಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ.,ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 709/2021**

**ಸಿ.ಡಬ್ಲ್ಯೂಃ 09, ಪಿ.ಡಬ್ಲ್ಯೂಃ 08**

ಸಾಕ್ಷಿದಾರರ ಹೆಸರು : ಅತುಲ್ ಸುರೇಶ್

ತಂದೆಯ ಹೆಸರು : ತಿಮ್ಮಪ್ಪ ಶಿರಾಲಿ

ವಯಸ್ಸು : 43 ವರ್ಷ

ಉದ್ಯೋಗ : ಗೃಹ ರಕ್ಷಕ

ವಾಸ್ತವ್ಯ : ಚಿತ್ರಾಪುರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಕಳೆದ 18 ವರ್ಷದಿಂದ ಇಲ್ಲಿಯ ತನಕ ಗೃಹ ರಕ್ಷಕನಾಗಿ ಭಟ್ಕಳದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿ. 12.07.2021 ರಂದು ನಾನು ಭಟ್ಕಳದಲ್ಲಿ ಕರ್ತವ್ಯ ಮಾಡುತ್ತಿದ್ದಾಗ ಬೆಳಿಗ್ಗೆ 6.00 ಗಂಟೆಗೆ ಪೊಲೀಸರ ನಿಯೋಜಿಸಿದ ದಾಳಿಯಲ್ಲಿ ನಾನು ಭಾಗಿಯಾಗಿದ್ದು ಸಮಯದಲ್ಲಿ ಆರೋಪಿತರು ಅಕ್ರಮವಾಗಿ ಎರಡು ಕೋಣಗಳನ್ನು ಹಿಂಸಾತ್ಮಕವಾಗಿ ಹಗ್ಗದಿಂದ ಕಟ್ಟಿ ಟಾಟಾ ವಾಹನದ ಸಂಖ್ಯೆ ಕೆಎ.23.ಎ.7388 ರಲ್ಲಿ ಸಾಗಾಟ ಮಾಡುತ್ತಿದ್ದರು. ದಾಳಿಯ ಕಾಲಕ್ಕೆ ನನ್ನ ಜೊತೆ ಚಾಸಾ 1, 5, 7, 8, 10, ರವರು ಇದ್ದರು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸಬಲ್ಲೆ . ಸಾಕ್ಷಿಯು ಮು.ಮಾ.1 ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜೆ.ಎನ್ ವಕೀಲರಿಂದ,**

3. ನಾನು 18 ವರ್ಷಗಳಿಂದ ಹೋಮ್ ಗಾರ್ಡ್ ನಲ್ಲಿ ಕಾರ್ಯಾ ನಿರ್ವಹಿಸುತ್ತಿದ್ದೇನೆ. ನಾನು ಚಾಸಾ 5 ರವರ ಜೊತೆ ಇದ್ದೆ. ನಾನು ಬೆಳಿಗ್ಗೆ 6.00 ಗಂಟೆಗೆ ಗಸ್ತು ಕರ್ತವ್ಯಕ್ಕೆ ಬಂದಿದ್ದೇನು. ಆ ಸಮಯದಲ್ಲಿ ಚಾಸಾ 5 , 6, 7 , 10 ರವರು ಘಟನಾ ಸ್ಥಳಕ್ಕೆ ಬಂದಿದ್ದರು. ಚಾಸಾ 1 ರವರು ಜೀಪಿನಲ್ಲಿ ಬಂದಿದ್ದರು , ನಾನು ಬೈಕಿನಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದೇನೆ. ಸದರಿ ಘಟನೆಯು ಬೆಳಿಗ್ಗೆ 6.00 ಗಂಟೆಗೆ ಆಗಿದೆ. ನಾನು ಬೆಳಿಗ್ಗೆ 5.00 ಗಂಟೆಗೆ ಘಟನಾ ಸ್ಥಳಕ್ಕೆ ಬಂದಿದ್ದೇವೆ. ದಾಳಿಯನ್ನು ಘಟನಾ ಸ್ಥಳದಲ್ಲಿರುವ ಅಕ್ಕ-ಪಕ್ಕದ ಜನರು ನೋಡಿದ್ದಾರೆ ಹಾಗೂ ಚಾಸಾ 1 ರವರಿಗೆ ಬಂದು ವಿಚಾರಿಸಿದ್ದಾರೆ. ಘಟನಾ ಸ್ಥಳದಲ್ಲಿ ಫೋಟೋ ತೆಗೆದ ಬಗ್ಗೆ ನಾನು ನೋಡಿಲ್ಲ. ಘಟನಾ ಸ್ಥಳದಲ್ಲಿಯೇ ಪಂಚನಾಮೆಯನ್ನು ಮಾಡಿದ್ದಾರೆ. ಪಂಚರು ಯಾರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಜಾನುವಾರಗಳನ್ನು ಅದೇ ವಾಹನದಲ್ಲಿ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ವಾಹನವನ್ನು 2 ನೇ ಆರೋಪಿಯು ಚಲಾಯಿಸಿದರು. ಠಾಣೆಯಲ್ಲಿ

ಛಾಯಾ ಚಿತ್ರಗಳನ್ನು ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ಠಾಣೆಯಲ್ಲಿ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಜಾನುವಾರಗಳನ್ನು ಏನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಎರಡು ಜಾನುವಾರಗಳು ಇದ್ದವು. ಒಂದೇ ಹಗ್ಗದಲ್ಲಿ ಎರಡು ಜಾನುವಾರಗಳನ್ನು ಕಟ್ಟಿದ್ದರು. ಎರಡು ಮಾರಿನ ಒಂದು ಹಗ್ಗ ಇತ್ತು.ನನ್ನ ಸಮಕ್ಷಮ ಜಾನುವಾರಗಳ ಹಗ್ಗವನ್ನು ಬಿಡಿಸಿಲ್ಲ. ನಾನು ದಾಳಿಗೆ ಹೋಗಿದ್ದೆ ಇಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ಹೆದರಿಕೆಯಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಜಾನುವಾರಗಳನ್ನು ವಶಕ್ಕೆ ಪಡೆದಿದ್ದು ಇಲ್ಲ ಎಂದರೆ ಸರಿಯಲ್ಲ. ಜಾನುವಾರಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 709/2021**

**ಸಿ.ಡಬ್ಲ್ಯೂಃ 07, ಪಿ.ಡಬ್ಲ್ಯೂಃ 07**

ಸಾಕ್ಷಿದಾರರ ಹೆಸರು : ಜಗದೀಶ
ತಂದೆಯ ಹೆಸರು : ಈಶ್ವರ ನಾಯ್ಕ
ವಯಸ್ಸು : 31 ವರ್ಷ
ಉದ್ಯೋಗ : ಪೊಲೀಸ್ ಪೇದೆ, ಭಟ್ಕಳ ನಗರ ಪೊಲೀಸ ಠಾಣೆ
ವಾಸ್ತವ್ಯ : ಪೊಲೀಸ್ ವಸತಿ ಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಕಳೆದ ನಾಲ್ಕು ವರ್ಷದಿಂದ ಇಲ್ಲಿಯ ತನಕ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿ. 12.07.2021 ರಂದು ಬೆಳಿಗ್ಗೆ 6.00 ಗಂಟೆಯ ಸುಮಾರಿಗೆ ಭಟ್ಕಳದ ಹಳೆಯ ಬಸ್ ಸ್ಟ್ಯಾಂಡ್ ಬಳಿ ವಿಶೇಷ ಕರ್ತವ್ಯದಲ್ಲಿದ್ದಾ ಚಾಸಾ 1 ರವರು ದೂರವಾಣಿ ಕರೆ ಮಾಡಿ ದನ ಸಾಗಾಟದ ಬಗ್ಗೆ ಮಾಹಿತಿ ಇದೆ ಬಂದರ್ ರೋಡ್ 1 ನೇ ಕ್ರಾಸ್ ಬಳಿ ಬರುವಂತೆ ತಿಳಿಸಿದ್ದರು. ಆ ಸಮಯದಲ್ಲಿ ಚಾಸಾ 4 , 5 , 8, 9 , ಹೋಮ್ ಗಾರ್ಡ್ ಮಂಜು ಮೊಗೇರ ಮತ್ತು ನಾನು ಎಲ್ಲರೂ ಸೇರಿ ಬಂದರು ರಸ್ತೆಯ 1 ನೇ ಕ್ರಾಸ್ ಗೆ ಹೋಗುತ್ತಿದ್ದೇವು. ಸುಮಾರು 6.15 ರ ಸಮಯಕ್ಕೆ ಒಂದು ಬೊಲೇರೋ ಡೆಕೊ ವಾಹದ ಸಂಖ್ಯೆ ಕೆಎ.23.ಎ.7388 ಈ ಗಾಡಿಯನ್ನು ಅಡ್ಡ ಹಾಕಲಾಗಿ ಎಲ್ಲರೂ ಸುತ್ತುವರಿದೇವು ಆಗ ಗಾಡಿ ಚಾಲಕ ಹಾಗೂ ಇನ್ನೊಬ್ಬ ವ್ಯಕ್ತಿಯ ತಪ್ಪಿಸಿಕೊಳ್ಳಲು ಹೋದಾಗ , ಗಾಡಿ ಚಾಲಕನನ್ನು ಚಾಸಾ 1, 5, 6 ಮತ್ತು 7 ರವರು ಅವನನ್ನು ಹಿಡಿದುಕೊಂಡರು. ಗಾಡಿಯಲ್ಲಿ ಇದ್ದ ಇನ್ನೊಬ್ಬ ವ್ಯಕ್ತಿಯನ್ನು ನಾನು , ಮತ್ತು ಚಾಸಾ 8 ರಿಂದ 10 ರವರು ಹಿಡಿದುಕೊಂಡೆವು. ನಂತರ ಚಾಸಾ 1 ರವರು ಸದರಿ ವ್ಯಕ್ತಿಗಳ ಹೆಸರುಗಳನ್ನು ಕೇಳಿದಾಗ ಅದರಲ್ಲಿ ಚಾಲಕನು ತನ್ನ ಹೆಸರು ಹುಸೈನ್ ದಸ್ತಗಿರಿ ಎಂದು ಇನ್ನೊಬ್ಬ ವ್ಯಕ್ತಿಯು ತನ್ನ ಹೆಸರು ಸೈಯದ್ ಅದ್ನಾನ್ ಎಂದು ಹೇಳಿರುತ್ತಾರೆ. ಗಾಡಿ ಚೆಕ್ ಮಾಡಿದಾಗ ಎರಡು ಕೋಣಗಳನ್ನು ಹಗ್ಗದಿಂದ ಹಿಂಸಾತ್ಮಕ ರೀತಿಯಾಗಿ ಕಟ್ಟಿ ಹಾಕಲಾಗಿತ್ತು. ಸದರಿ ಕೋಣಗಳ ಮೌಲ್ಯ ಸುಮಾರು ರೂ. 40,000/- ಹಾಗೂ ವಾಹದ ಮೌಲ್ಯ ಸುಮಾರು ರೂ.1 ಲಕ್ಷ ಆಗಿರುತ್ತದೆ. ಸದರಿ ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ಕೋಣಗಳನ್ನು ವದೆ ಮಾಡಲು ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿರುತ್ತಾರೆ. ನಂತರ ನಾವು ಕೋಣಗಳನ್ನು ಹಾಗು ವಾಹನಗಳನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಇಬ್ಬರು ಪಂಚರ ಸಮಕ್ಷಮ ಅವುಗಳ ಪಂಚನಾಮೆಯನ್ನು ಮಾಡಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ವಾಹನಗಳು ಹಾಗು ಮುದ್ದೆ

ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ನೋಡಿ ಗುರುತಿಸುತ್ತಾರೆ. ದಾಳಿಗೆ ಅಧಿಕಾರಿಗಳಿಗೆ ಸಹಾಯ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜೆ.ಎನ್ ವಕೀಲರಿಂದ,**

3. ಈ ಪ್ರಕರಣದ ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾಗಿದ್ದಾರೆ. ಘಟನೆಯ ದಿನ ನಾನು ಮೇಲಾಧಿಕಾರಿಗೆ ಬೆಳಿಗ್ಗೆ 6.15 ಕ್ಕೆ ಭೇಟಿಯಾಗಿರುತ್ತೇನೆ. ದಾಳಿಗೆ ಹೋಗುವ ಕಾಲಕ್ಕೆ ಚಾಸಾ 4, 5, 6, 7, 8 ಹಾಗೂ 9 ರವರು ಬಂದಿದ್ದರು. ನಾವು ಘಟನೆ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ದಾಳಿಯನ್ನು ಮಾಡಿರಲಿಲ್ಲ. ಚಾಸಾ 1 ರವರು ನಮ್ಮನ್ನು ಕರೆಯುವಾಗ ನಾವು , ಚಾಸಾ 4 ರಿಂದ 6 ಹಾಗೂ 8 ರಿಂದ 10 ಮತ್ತು ನಾನು ಹಳೆ ಬಸ್ ಸ್ಟ್ಯಾಂಡ್ ಹತ್ತಿರ ಕರ್ತವ್ಯದಲ್ಲಿ ಇದ್ದೆವು. ದಾಳಿಯನ್ನು ಸಾರ್ವಜನಿಕ ಸ್ಥಳದಲ್ಲಿ ಮಾಡಿದ್ದೇವು. ಘಟನಾ ಸ್ಥಳದ ಅಕ್ಕ-ಪಕ್ಕದಲ್ಲಿ ಲಾಡ್ಜ್, ಮನೆಗಳು , ಹೊಟೇಲ್ ಗಳು ಇದ್ದವು. ದಾಳಿಯ ಕಾಲಕ್ಕೆ ಯಾರೆಲ್ಲಾ ನೋಡಿದ್ದರೂ ಎಂದು ನಾನು ಗಮನಿಸಿಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಮಾಡಿದ್ದೇವೆ. ದಾಳಿಯ ಕಾಲಕ್ಕೆ ದಾಳಿಯ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿಲ್ಲ. ಪಂಚರನ್ನು ಯಾರು ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ದಾಳಿಯ ಕಾಲಕ್ಕೆ ಛಾಯಾ ಚಿತ್ರಗಳನ್ನು ತೆಗೆದ ಬಗ್ಗೆ ನನಗೆ ನೆನಪಿಲ್ಲ. ಠಾಣೆಯಲ್ಲಿ ಛಾಯ ಚಿತ್ರಗಳನ್ನು ತೆಗೆದ ಬಗ್ಗೆ ನನಗೆ ನೆನಪಿಲ್ಲ. ಪಂಚನಾಮೆಯ ಕಾಲಕ್ಕೆ ಛಾಯ ಚಿತ್ರಗಳನ್ನು ತೆಗೆದ ಬಗ್ಗೆ ನನಗೆ ನೆನಪಿಲ್ಲ. ಪಂಚನಾಮೆಯನ್ನು ಯಾವ ದಿನಾಂಕಕ್ಕೆ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಜಾನುವಾರಗಳು ಇದ್ದ ವಾಹನದಲ್ಲಿಯೇ ಜಾನುವಾರಗಳನ್ನು ಠಾಣೆಗೆ ಸಾಗಾಟ ಮಾಡಿದ್ದೇವು. ಸದರಿ ವಾಹನವನ್ನು ಆರೋಪಿಯೇ ಚಲಾಯಿಸಿದ್ದಾರೆ. ಠಾಣೆಗೆ ಹೋದ ನಂತರ ಜಾನುವಾರಗಳನ್ನು ಎಲ್ಲಿ ಇಡಲಾಯಿತು ಎಂದು ನನಗೆ ನೆನಪಿಲ್ಲ. ಘಟನೆಯ ದಿನ ವಾಹನದಲ್ಲಿ ಜಾನುವಾರಗಳು ಯಾವ ರೀತಿ ಇದೆ ಎಂದು ನನಗೆ ನೆನಪಿಲ್ಲ. ಜಾನುವಾರಗಳನ್ನು ಎರಡು ಹಗ್ಗದಲ್ಲಿ ಕಟ್ಟಿದ್ದರು. ನಾನು ಕರ್ತವ್ಯದಲ್ಲಿರುವ ಕಾಲಕ್ಕೆ ಜಾನುವಾರಗಳ ಕಾಲಿಗೆ ಕಟ್ಟಿರುವ ಹಗ್ಗಗಳನ್ನು ಬಿಚ್ಚಿರಲಿಲ್ಲ. ಘಟನೆಯ ದಿನ ನಾನು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ಪ್ರಮಾಣ ಪತ್ರವನ್ನು ತನಿಖಾಧಿಕಾರಿಗೆ ನೀಡಿಲ್ಲ. ನಾವು ದಾಳಿಯನ್ನು ಮಾಡಿದ್ದು ಇಲ್ಲ ಮತ್ತು ಸಹಕರಿಸಿದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ಜಪ್ತುಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಹಾರಿಕೆ ಉತ್ತರವನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಯು ನೀಡಿರುವ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1851/2022**

**ಸಾಕ್ಷಿಃ ಸಿಡಬ್ಲ್ಯೂಃ12, ಪಿ.ಡಬ್ಲ್ಯೂಃ 09**

ಸಾಕ್ಷಿದಾರನ ಹೆಸರು : ಹೆಚ್ ಬಿ ಕುಡಗುಂಟಿ

ತಂದೆಯ ಹೆಸರು : ಬಸಪ್ಪ ಕುಡಗುಂಟಿ

ವಯಸ್ಸು : 57 ವರ್ಷ

ಉದ್ಯೋಗ : ಪಿಎಸ್ಐ , ಮುಂಡಗೋಡ ಪೋಲಿಸ ಠಾಣೆ

ವಾಸ್ತವ್ಯ : ಬೃಂದಾವನ ಲೇ ಔಟ್ , ಮುಂಡಗೋಡ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22 /03 /2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ**.)

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 08.09.2019 ರಿಂದ ದಿನಾಂಕಃ 31.01.2023 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿ.11.07.2021 ರಂದು ಮಧ್ಯಾಹ್ನ 1.30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ತಮ್ಮ ಗಣೀಕೃತ ದೂರನ್ನು ಸ್ವಿಕರೀಸಿಕೊಂಡು ಠಾಣಾ ಗುನ್ನಾ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ನನ್ನ ಸಿಬ್ಬಂದಿಯವರೊಂದಿಗೆ ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಶವಗಾರದಲ್ಲಿದ್ದ ಮೃತನನ್ನು ಇಬ್ಬರು ಪಂಚರರ ಚಾಸಾ 2 ಮತ್ತು 3 ರ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿಸಿರುತ್ತೇವೆ ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದೇವೆ. ಚಾಸಾ 9 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿದಾರರಿಗೆ ಸಿ.ಆರ್.ಪಿ.ಸಿ 160 ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ಸಿ.ಆರ್.ಪಿ.ಸಿ 174 ರ ಪ್ರಕಾರ ನೋಟಿಸಿಗೆ ಹಾಜರಾಗಿರುತ್ತಾರೆ. ಚಾಸಾ 4 ಮತ್ತು 5 ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ 13 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ.1 ದೂರನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ವಿಸಿ ಮುಖಾಂತರ ನೋಡಿ ಗುರುತಿಸಿದ್ದು ಅದನ್ನು ನಿಪಿ.11 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಿಸಿ ಮುಖಾಂತರ ನಿಪಿ.8 ನ್ನು ನೋಡಿ ಗುರುತಿಸಿದ್ದು ಅದರಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ವಿಸಿ

ಮುಖಾಂತರ ಶವ ತನಿಖಾವರದಿ ಕಾಲಕ್ಕೆ ತೆಗೆದ ಛಾಯ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.12 ಮತ್ತು 13 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜೆ.ಎನ್ ವಕೀಲರಿಂದ,</u>**

3. ನಾನು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪಘಾತ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಅಫಘಾತವು ರಾಷ್ಟ್ರೀಯ ಹೆದ್ದಾರಿಯ ಮಧ್ಯ ಭಾಗದಲ್ಲಿ ಸಂಭವಿಸಿದೆ. ಅಪಘಾತ ಸ್ಥಳದ ಸುತ್ತಮುತ್ತಲು ಅಂಗಡಿಯ ಮುಗ್ಗಟುಗಳು ಹಾಗು ಜನ ಸಂದಣಿ ಇರುವ ಜಾಗ ಎಂದರೆ ಸರಿ. ಅಪಘಾತದ ರಸ್ತೆಗೆ ಹೊಂದಿಕೊಂಡು ಮೇಡಿಕಲ್ ಶಾಪ್ , ಮೊಬೈಲ್ ಅಂಗಡಿ , ಗೂಡಾಂಗಡಿ ಇವೆ. ಸದರಿ ಅಪಘಾತವು ಬೈಕ್ ಸವಾರಿನ ಅಜಾಕರೂಕತೆಯಿಂದ ಸಂಭವಿಸಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1851/2022**

**ಸಿ.ಡಬ್ಲ್ಯೂಃ 11, ಪಿ.ಡಬ್ಲ್ಯೂಃ 08**

ಸಾಕ್ಷಿದಾರರ ಹೆಸರು : ಲಕ್ಷ್ಮೀನಾರಾಯಣ ನಾಯ್ಕ

ತಂದೆಯ ಹೆಸರು : ಪುರಶಯ್ಯ ನಾಯ್ಕ

ವಯಸ್ಸು : 57 ವರ್ಷ

ಉದ್ಯೋಗ : ಪ್ರಾದೇಶಿಕ ಸಾರಿಗೆ ಅಧಿಕಾರಿ , ಉಡುಪಿ

ವಾಸ್ತವ್ಯ : ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕ 24.06.2010 ರಿಂದ 18.03.2024 ರ ವರೆಗೆ ಹೊನ್ನಾವರದ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಹಿರಿಯ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 12.07.2021 ರಂದು ಭಟ್ಕಳ ಟೌನ್ ಪೊಲೀಸರ ಮನವಿ ಮೇರೆಗೆ ಆ ದಿನ ಸಾಯಂಕಾಲ 4.30 ರ ವೇಳೆಯಲ್ಲಿ ಭಟ್ಕಳ ಶಹರ ಪೊಲೀಸ್ ಠಾಣೆಗೆ ಹೋಗಿ ಗುನ್ನಾ ನಂಬರ್ 84/2021 ಕ್ಕೆ ಸಂಬಂಧಪಟ್ಟಂತೆ ಎರಡು ಅಪಘಾತಕ್ಕೆ ಇಡಾದ ವಾಹನಗಳನ್ನು ಪರೀಶಿಲಿಸಿದ್ದೇನೆ. ಅದರ ನೋಂದಣಿ ಸಂಖ್ಯೆ ಡಿ.ಎಲ್.01 ಜಿಸಿ 6513 ಮತ್ತು ಮೋಟಾರು ಸೈಕಲ್ ನಂಬರ್ ಕೆಎ.47.ಕ್ಯೂ.9783 ಇರುತ್ತದೇ. ಸದರಿ ವಾಹನಕ್ಕೆ ಉಂಟಾದ ಜಕಂ ಅನ್ನು ನನ್ನ ವಿವರಣೆಯಲ್ಲಿ ನಾನು ವಿವರಿಸಿದ್ದೇನೆ. ವಾಹನದ ಸಂಖ್ಯೆ ಡಿ.ಎಲ್.01 ಜಿಸಿ 6513 ನಾನು ರಸ್ತೆಯ ಮೇಲೆ ಚಲಾಯಿಸಿ ನೋಡಾಗಿ ಅದರ ಬ್ರೇಕ್ ಸಿಸ್ಟಮ್ ಸುಸ್ತಿಯಲ್ಲಿದ್ದವು ಮತ್ತು ವಾಹನದ ಸಂಖ್ಯೆ ಕೆಎ.47.ಕ್ಯೂ.9783 ನ್ನು ನಾನು ನಿಂತ ಸ್ಥಿತಿಯಲ್ಲೇ ಪರಿಶೀಲಿಸಿದ್ದೇನೆ. ಅದರ ಬ್ರೆಕ್ ಸಿಸ್ಟಮ್ ಸುಸ್ತಿಯಲ್ಲಿ ಇತ್ತು. ನನ್ನ ಅಭಿಪ್ರಾಯದಲ್ಲಿ ಅಪಘಾತವು ಮೇಲ್ಕಂಡ ವಾಹನಗಳಲ್ಲಿ ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಎಮ್.ವಿ. ರಿಪೊರ್ಟ್‌ನ್ನು ಸಾಕ್ಷ ನೋಡಿ ಗುರುತಿಸಿದ್ದು ಅದನ್ನು ನಿಪಿ.10 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜೆ.ಎನ್. ವಕೀಲರಿಂದ,**

3. ಮೋಟಾರು ಸೈಕಲಿನ ಹಿಂಬದಿಯ ಬಾಡಿ ಜಕಂ ಗೊಂಡಿತ್ತು. ನಾನು ಪರಿಶೀಲನೆ ಮಾಡುವ ಸಮಯದಲ್ಲಿ ಛಾಯ ಚಿತ್ರಗಳನ್ನು ತೆಗೆದಿಲ್ಲ. ಮೋಟಾರು ಸೈಕಲಿನ ಎಲ್ಲಾ ಬಾಡಿಯು ಜಕಂ

ಗೊಂಡಿದೆ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

ಸಿಸಿ ನಂಬರಃ 1851/2022

ಸಿ.ಡಬ್ಲ್ಯೂಃ 08, ಪಿ.ಡಬ್ಲ್ಯೂಃ 07

ಸಾಕ್ಷಿದಾರರ ಹೆಸರು : ವಿನಾಯಕ
ತಂದೆಯ ಹೆಸರು : ಸದಾನಂದ ಪಾಟೀಲ್
ವಯಸ್ಸು : 51 ವರ್ಷ
ಉದ್ಯೋಗ : ಪೊಲೀಸ್ ಮುಖ್ಯ ಪೇದೆ, ಭಟ್ಕಳ ಗ್ರಾಮೀಣ ಪೊಲೀಸ ಠಾಣೆ
ವಾಸ್ತವ್ಯ : ಪೊಲೀಸ್ ವಸತಿ ಗೃಹ, ಭಟ್ಕಳ

ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22/03/2025

ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಜೂನ್ 2014 ರಿಂದ ಆಗಸ್ಟ್ 2021 ರವರೆಗೆ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 11.07.2021 ರಂದು ಚಾಸಾ 12 ರವರು ಸಿ.ಆರ್ ನಂಬ್ರ 84/2021 ರಲ್ಲಿ ಈ ಪ್ರಕರಣದಲ್ಲಿ ಮೃತ ಪಟ್ಟಿದ ಅಬ್ದುಲ್ ಖಾದಿರ್ ರವರ ಶವ ತನಿಖೆಯನ್ನು ನಾನು ಮತ್ತು ಚಾಸಾ 9 ರವರನ್ನು ಜೋತೆ ಕರೆದುಕೊಂಡು ಭಟ್ಕಳದ ಸರಕಾರಿ ಆಸ್ಪತ್ರೆಯ ಶವಗಾರಕ್ಕೆ ಹೋಗಿ ಅವರ ಶವತನಿಖೆಯನ್ನು ಮಾಡಿದ್ದೇವು. ಆ ಸಮಯದಲ್ಲಿ ನಾನು ನನ್ನ ಮೊಬೈಲ್ ಮೂಲಕ ಛಾಯಾ ಚಿತ್ರವನ್ನು ತೆಗೆದು ಪ್ರಿಂಟ್ ಮಾಡಿ ನನ್ನ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ.

3. ದಿ.12.07.2021 ರಂದು ಸದರಿ ಕೇಸಿನ ತನಿಖಾಧಿಕಾರಿಯಾದ ಚಾಸಾ 13 ರವರು ನನಗೆ ಈ ಕೇಸಿನ ಅಪಘಾತ ಸ್ಥಳದ ಪಂಚನಾಮೆಗೆ ಕರೆದುಕೊಂಡು ಹೋಗಿದ್ದು ಆ ಸ್ಥಳದಲ್ಲಿ ಈ ಕೇಸಿನ ಪಿರ್ಯಾದಿ ತೋರಿಸಿದ ಅಪಘಾತ ಸ್ಥಳವನ್ನು ಇಬ್ಬರ ಪಂಚರ ಸಮಕ್ಷಮ ತಯಾರಿಸಿಕೊಂಡಿದ್ದು , ಈ ವೇಳೆಗ ನನಗೆ ಬರವಣಿಗೆ ಮಾಡಲು ಚಾಸಾ 13 ರವರು ಹೇಳಿರುತ್ತಾರೆ , ಅದರಂತೆ ನಾನು ಪಂಚನಾಮೆಯನ್ನು ಬರವಣಿಗೆ ಮಾಡಿ , ನನ್ನ ಸಹಿ ಮಾಡಿ ಚಾಸಾ 13 ರವರಿಗೆ ನೀಡಿರುತ್ತೇನೆ. ಹಾಗೆ ಸದರಿ ಸಮಯದಲ್ಲಿ ಚಾಸಾ 13 ರವರು ಛಾಯಾ ಚಿತ್ರವನ್ನು ತೆಗೆಯಲು ಸಹ ಹೇಳಿದ್ದರು. ಅದರಂತೆ ನಾನು ನನ್ನ ಮೊಬೈಲ್ ಮೂಲಕ ಟೈಮರ್ ಇಟ್ಟು ಛಾಯ ಚಿತ್ರವನ್ನು ತೆಗೆದಿರುತ್ತೇನೆ. ತದನಂತರ ಇದೇ ಕೇಸಿಗೇ ಸಂಬಂಧಿಸಿದ ವಾಹನಗಳನ್ನು ಪರಿಶೀಲನೆ ಮಾಡಲು ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಎದುರಿನಲ್ಲಿ ನಿಲ್ಲಿಸಿದ ವಾಹನವನ್ನು ಈ ಕೇಸಿನ ಪಿರ್ಯಾದಿ ತೋರಿಸಿದ್ದು , ಅದನ್ನು ತನಿಖಾಧಿಕಾರಿಯವರು ಇಬ್ಬರ ಪಂಚರ ಸಮಕ್ಷಮ ತಯಾರಿಸಿಕೊಂಡು ಆ ವೇಳೆಗೆ ನನಗೆ ಪಂಚನಾಮೆಯನ್ನು ಬರವಣಿಗೆ ಮಾಡಲು ಹೇಳಿದಂತೆ ನಾನು ಪಂಚನಾಮೆಯನ್ನು ಬರವಣಿಗೆ ಮಾಡಿರುತ್ತೇನೆ. ಬರವಣಿಗೆ ಮಾಡಿರುವ ಬಗ್ಗೆ ನನ್ನ ಸಹಿ ಮಾಡಿರುತ್ತೇನೆ. ಆ ವೇಳಗೆ ನನಗೆ ಚಾಸಾ 13

ರವರು ಛಾಯ ಚಿತ್ರವನ್ನು ತೆಗೆಯಲು ಹೇಳಿದಂತೆ ನನ್ನ ಮೊಬೈಲ್ ಮೂಲಕ ಟೈಮರ್ ಇಟ್ಟು ಛಾಯಾ ಚಿತ್ರಗಳನ್ನು ತೆಗೆದಿರುತ್ತೇನೆ. ಈ ಛಾಯಾ ಚಿತ್ರಗಳನ್ನು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ನಂತರ ಅದರ ಸಿಡಿಯನ್ನು ಸಹ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ.

4. ಸಾಕ್ಷಿ ನಿಪಿ.2 ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ.5 ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.6 ಮತ್ತು ನಿಪಿ.7 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ವಾಹನದ ಪಂಚನಾಮೆಯಲ್ಲಿ ತೆಗೆದ ಛಾಯಾ ಚಿತ್ರಗಳನ್ನು ನಾನೇ ತೆಗೆದಿರುವುದಾಗಿ ನುಡಿದಿರುತ್ತಾರೆ. ಸಾಕ್ಷಿಯು ಕಲಂ 65 ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್. ಜೆ.ಎನ್ ವಕೀಲರಿಂದ,</u>**

5. ಅಪಘಾತದ ಸ್ಥಳವು ರಾಷ್ಟ್ರೀಯ ಹೆದ್ದಾರಿ ಆಗಿದೆ. ರಾಷ್ಟ್ರೀಯ ಹೆದ್ದಾರಿ ದಕ್ಷಿಣ ಉತ್ತರ ಆಗಿದೆ. ಅಪಘಾತದ ಸ್ಥಳವು ಜಂಕ್ಷನ ಸ್ಥಳವಾಗಿದೆ. ಅಪಘಾತದ ಸ್ಥಳದಲ್ಲಿ ತಾಲೂಕು ಪಂಚಾಯತಿ ಕಛೇರಿ ಇದೆ. ಅಪಘಾತದ ರಸ್ತೆಗೆ ಹೊಂದಿಕೊಂಡು ಹಣ್ಣಿನ ಮಾರಾಟದ ಅಂಗಡಿಗಳು ಇವೆ ಎಂದರೆ ಸರಿಯಲ್ಲ. ಅಪಘಾತ ಸ್ಥಳ ಇರುವ ಪೂರ್ವ ಕ್ಕೆ ಮೇಡಿಕಲ್ ಸ್ಟೋರ್ ಇಲ್ಲ. ಅಪಘಾತದ ಸ್ಥಳವು ರಾಷ್ಟ್ರೀಯ ಹೆದ್ದಾರಿಯ ಮಧ್ಯ ಭಾಗದಲ್ಲಿ ಇದೆ. ಅಪಘಾತವು ರಾಷ್ಟ್ರೀಯ ಹೆದ್ದಾರಿಯ ಬಿಳಿ ಪಟ್ಟಿಗೆ ತಾಗಿಕೊಂಡು ಆಗಿದೆ ಎಂದರೆ ನಾನು ಅದನ್ನು ಗಮನಿಸಿಲ್ಲ ಎನ್ನುತ್ತಾರೆ. ಭಟ್ಕಳದ ಐಬಿ ಅಥವಾ ಪಂಚಾಯತಿ ಕಛೇರಿಗೆ ಹೋಗಬೇಕಾದರೆ ದಕ್ಷಿಣ ಮಾರ್ಗವಾಗಿ ಹೋಗುತ್ತಿರುವ ವಾಹನಗಳು ರಸ್ತೆಯನ್ನು ದಾಟಿ ಆಚೆಗೆ ಹೋಗಬೇಕಾಗುತ್ತದೆ ಎಂದರೆ ಸರಿ. ಚಾಸಾ 1 ರವರೇ ನನಗೆ ಅಪಘಾತದ ಸ್ಥಳವನ್ನು ತೋರಿಸಿದ್ದಾರೆ. ಪಿರ್ಯಾದಿದಾರರು, ಇಬ್ಬರು ಪಂಚರು , ನಾನು ಘಟನಾ ಸ್ಥಳಕ್ಕೆ ಹೋಗಿದ್ದೇವು. ನಮ್ಮ ಮೇಲಾಧಿಕಾರಿಯು ತಿಳಿಸಿದ ಪ್ರಕಾರ ನಾನು ಪಂಚನಾಮೆಯನ್ನು ಬರೆದಿದ್ದೇನೆ ಹಾಗೂ ನಕ್ಷೆಯನ್ನು ತಯಾರಿಸಿದ್ದೇನೆ. ಸಾಮಾನ್ಯವಾಗಿ ಬೈಕಿನ ಸವಾರರು ರಸ್ತೆಯ ಎಡ ಅಂಚಿನಲ್ಲಿ ಹೋಗಬೇಕಾಗುತ್ತದೆ ಎಂದರೆ ಸರಿ . ಘನ ವಾಹನಗಳು ರಸ್ತೆಯ ಬಲ ಭಾಗದಲ್ಲಿ ಇರಬೇಕು ಎಂದರೆ ಸರಿ. ಸದರಿ ಅಪಘಾತವು ಬೈಕ್ ಸವಾರಿನ ಅಜಾಗರುಕತೆಯಿಂದ ಸಂಭವಿಸಿದರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 718/2023**

**ಸಾಕ್ಷಿಃ ಸಿಡಬ್ಲ್ಯೂಃ 12 , ಪಿ.ಡಬ್ಲ್ಯೂಃ 10**

| | | |
|---|---|---|
| ಸಾಕ್ಷಿದಾರರ ಹೆಸರು | : | ಯಲ್ಲಪ್ಪ ಮಾಧರ |
| ತಂದೆಯ ಹೆಸರು | : | ಹನುಮಂತಪ್ಪ ಮಾಧರ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಪೊಲೀಸ್ ಉಪ ನಿರೀಕ್ಷಕರು , ಬೆಳ್ತಂಗಡಿ ಪೊಲೀಸ ಠಾಣೆ |
| ವಾಸ್ತವ್ಯ | : | ಬೆಳ್ತಂಗಡಿ , ದ.ಕ. |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 21/03/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ**.)

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿಃ 23.07.2021 ರಿಂದ 2024 ಮೇಯವರೆಗೆ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 25.03.2023 ರಂದು ಚಾಸಾ -01 ರವರು ತಂದು ಕೊಟ್ಟಂತಹ ಪಿರ್ಯಾದಿಯನ್ನು ನಾನು ದಾಖಲಿಸಿಕೊಂಡಿದ್ದೇನೆ. ಅದೇ ದಿನ ಆರೋಪಿಗೆ 41 ನೋಟಿಸನ್ನು ಜಾರಿಮಾಡಿರುತ್ತೇನೆ. ಇಬ್ಬರು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.24.07.2023 ರಂದು ಮುದ್ದೆ ಮಾಲುಗಳನ್ನು ಎಫ್.ಎಸ್.ಎಲ್. ಧಾರವಾಡಿಗೆ ಕಳುಹಿಸಿದ್ದೇನೆ. ದಿ. 01.08.2023 ಧಾರವಾಡ ಎಫ್.ಎಸ್.ಎಲ್. ದಿಂದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.ನಂತರ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ವಿಸಿ ಮುಖಾಂತರ ಎಫ್.ಎಸ್.ಎಲ್. ವರದಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಿಸಿ ಮುಖಾಂತರ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ವಿಸಿ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್.ಐ.ಎನ್ ವಕೀಲರಿಂದ,**

3. ನನ್ನ ತನಿಖಾವಧಿಯಲ್ಲಿ ಸಾರಾಯಿ ಪ್ಯಾಕೆಟ್‌ಗಳು ಯಾವ ಅಂಗಡಿಯಿಂದ ಖರೀದಿಸಲಾಗಿದೆ ಎಂದು ನಾನು ತನಿಖೆ ಮಾಡಿಲ್ಲ. ಸಾರಾಯಿ ಪ್ಯಾಕೆಟ್ ಗಳನ್ನು ಪರಿಶೀಲನೆ ಮಾಡಿದಾರೆ ಅಂದರ ಸಂಖ್ಯೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಅಂತಿಮ ವರದಿಯನ್ನು ದಾಖಲಿಸುವ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ಸಾರಾಯಿ ಪ್ಯಾಕೆಟ್ ಗಳು ಮೂಲ ಎಲ್ಲಿಂದ ಬಂದಿವೆ ಎಂದು ಅಂತಿಮ ವರದಿಯಲ್ಲಿ ನಮೂದು ಮಾಡಿದ್ದೇನೆ. ರಂಗಿನಕಟ್ಟೆಯಲ್ಲಿರುವ ಬಾರ್ ಯಿಂದ ಸಾರಾಯಿ ಪ್ಯಾಕೆಟ್ ಗಳನ್ನು ಖರೀದಿ ಮಾಡಿದ್ದೇವೆ ಎಂದು ಹೇಳಿರುತ್ತಾರೆ.

ರಂಗಿನಕಟ್ಟೆಯ ಬಾರ್ ಅವರನ್ನು ನಾನು ವಿಚಾರಣೆ ಮಾಡಿಲ್ಲ. ಎಫ್.ಎಸ್.ಎಲ್ ಪರೀಕ್ಷೆಗೆ ನಾನೇ ಕಳಹಿಸಿಕೊಟ್ಟಿದ್ದೇನೆ. ಸದರಿ ಪ್ರಕರಣದಲ್ಲಿ ನಾನು ಯಾವುದೇ ತನಿಖೆ ಮಾಡದಿದ್ದರೂ ಸಹ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಲ್ಲಿರುವ ಹೊಟೇಲ್ ಯಾರಿಗೆ ಸಂಬಂಧಿಸಿದ್ದು ಎಂದು ನಾನು ಪರಿಶೀಲನೆ ಮಾಡಿದ್ದೇನೆ ಆದರೆ ಯಾವುದೇ ವಿವರವು ಸಿಕ್ಕಿಲ್ಲ. ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ. ನಾನು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಸಹೋದ್ಯೋಗಿ ಆದರ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲನ್ನು ರಾಸಾಯಿನಿಕ ಪರೀಕ್ಷೆಗೆ ಕಳುಹಿಸಿಲ್ಲ ಮತ್ತು ರಾಸಾಯನಿಕ ವರದಿಯನ್ನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

(**ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು** )

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 203/2023**

**ಸಿ.ಡಬ್ಲ್ಯೂಃ 06 , ಪಿ.ಡಬ್ಲ್ಯೂಃ 05**

ಸಾಕ್ಷಿದಾರರ ಹೆಸರು : ಈರಣ್ಣ

ತಂದೆಯ ಹೆಸರು : ಶಿವಲಿಂಗಯ್ಯ ಪೂಜಾರಿ

ವಯಸ್ಸು : 35 ವರ್ಷ

ಉದ್ಯೋಗ : ಪೊಲೀಸ್ ಪೇದೆ, ಭಟ್ಕಳ ಗ್ರಾಮೀಣ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿ ಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2017 ಅಕ್ಟೋಬರಿಂದ ರಿಂದ 2023 ರವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.24.07.2022 ರಂದು ಬೆಳಗಿನ ಜಾವ 6.45 ಗಂಟೆಗೆ ಚಾಸಾ 5, ಚಾಸಾ 4 ಮತ್ತು ಚಾಸಾ 1 ರವರ ಜೊತೆ ವಿಶೇಷ ಕರ್ತವ್ಯದಲ್ಲಿ ಹಳೆ ಬಸ್ ಸ್ಟ್ಯಾಂಡ್ ಹತ್ತಿರ ಇರುವಾಗ ಬಾತ್ಮಿದಾರರು ಚಾಸಾ 1 ರವರಿಗೆ ಮಾಹಿತಿ ನೀಡಿದ್ದು ಭಟ್ಕಳ ಸಿದಿಐಕ್ ಸ್ಟ್ರೀಟ್ ನ ಹವಾಮಂಜಿಲ್ ಎಂಬ ಮನೆಯ ಹಿಂಭಾಗದಲ್ಲಿ ಜಾನುವಾರಗಳನ್ನು ಅಕ್ರಮವಾಗಿ ಸಾಗಾಟ ಮಾಡಿಕೊಂಡು ಬಂದು ವಧೆ ಮಾಡುವರಿದ್ದಾರೆ ಎಂಬ ಮಾಹಿತಿ ಬಂದಿದ್ದು ತಕ್ಷಣ ಪಿ.ಎಸ್.ಐ ರವರು ಆ ವಿಷಯವನ್ನು ಮೇಲಾಧಿಕಾರಿಗೆ ತಿಳಿಸಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ನಮ್ಮನ್ನು ನೋಡಿ ತಕ್ಷಣ 1 ನೇ ಆರೋಪಿ ಹಾಗೂ ಇನ್ನಿತರರು ಸ್ಥಳದಿಂದ ಓಡಿ ಹೋಗಿರುತ್ತಾರೆ. ನಂತರ ಅಲ್ಲೆ ಇದ್ದ ಎರಡು ಆಕಳುಗಳನ್ನು ಠಾಣೆಗೆ ತಂದು ಪಂಚನಾಮೆ ಮಾಡಿ ವಶಕ್ಕೆ ಪಡೆದಿರುತ್ತೇವೆ. ಈ ಸಮಯದಲ್ಲಿ ಚಾಸಾ 1 ರವರ ಆದೇಶದ ಮೇರೆಗೆ ಠಾಣೆಯ ಕ್ಯಾಮರಾದಲ್ಲಿ ಘಟನಾ ಸ್ಥಳದ ಪಂಚನಾಮೆ ಹಾಗೂ ಜಪ್ತುಪಂಚನಾಮೆಯ ಫೋಟೋವನ್ನು ತೆಗೆದು ಅವುಗಳನ್ನು ಕೆಬಲ್ ಮುಖಾಂತರ ಗಣಕಯಂತ್ರಕ್ಕೆ ಹಾಕಿ ನಂತರ ಪೆನ್ ಡ್ರೈವ್ ನಲ್ಲಿ ಡೌನ್ ಲೋಡ್ ಮಾಡಿ ಫೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಅನ್ನು ತೆಗೆದು ನೆಗೆಟಿವ್ ಪ್ರತಿಯನ್ನು ಸಿಡಿಗೆ ಅಪ್ ಲೋಡ್ ಮಾಡಿ , ತನಿಖಾಧಿಕಾರಿಯವರ ಮುಂದೆ ಹಾಜರು ಮಾಡಲಾಯಿತು. ನಿಪಿ.3 ಮತ್ತು 4 ರಲ್ಲಿರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಕಲಂ 65 ಬಿ ಪ್ರಮಾಣ ಪತ್ರವನುನ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್.ಎಲ್.ವಿ. ವಕೀಲರಿಂದ,**

3. ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ಮಾಡಲು ನಮ್ಮ ಇಲಾಖೆಯಲ್ಲಿ ತರಬೇತಿಯನ್ನು ನೀಡಿದ್ದರು. ತರಬೇತಿ ಆದ ನಂತರ ಸರ್ಟಿಫಿಕೆಟ್ ನೀಡಿದ್ದರು. ಸದರಿ ಸರ್ಟಿಫಿಕೆಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕ್ಯಾನಲ್ ಕಂಪೆನಿಯ ಕ್ಯಾಮರಾದಿಂದ ಫೋಟೋವನ್ನು ತೆಗೆದಿದ್ದೇವು. ಫೋಟೋ ತೆಗೆಯುವಾಗ ಪ್ಲಾಶ್ ಬಟನ್ ಅನ್ನು ಹೊಡೆದಿದ್ದರು. ಸಿಡಿ ಹಾಗೂ ಫೋಟೋವನ್ನು ತನಿಖಾಧಿಕಾರಿಗೆ ನೀಡಿದ್ದೇನೆ. ಪಂಚನಾಮೆಯನ್ನು ಸುಧೀರ್ ಕಾಂಬ್ಳೆ ಅವರು ಬರೆದಿದ್ದಾರೆ. ಫೋಟೋವನ್ನು ಪ್ರಿಂಟ್ ತೆಗೆಯಲು ನಾನೇ ಹೋಗಿದ್ದೇನು. ಪ್ರಿಂಟ್ ತೆಗೆದ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಿಡಿಯಲ್ಲಿ ಭರಣ ಮಾಡಿದ ಫೋಟೋ ಸ್ಟೂಡಿಯ ವ್ಯಕ್ತಿಯನ್ನು ಸಾಕ್ಷಿಯನ್ನಾಗಿ ಮಾಡಿಸಿಲ್ಲ. ನಮ್ಮ ಠಾಣೆಯಲ್ಲಿ ಎಲ್ಲರಿಗೂ ಫೋಟೋವನ್ನು ತೆಗೆಯಲು ಬರುತ್ತದೆ. ಪಿರ್ಯಾದಿದಾರರಿಗೆ ಸಹಾಯ ಮಾಡಲು ಸುಳ್ಳು 65 ಬಿ ಸರ್ಟಿಫಿಕೆಟ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ಟಿಫಿಕೆಟ್ ಗೆ ಹಾಗೂ ಆರೋಪಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ಫೋಟೋ ತೆಗೆಯಲು ಯಾವುದೇ ತರಬೇತಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ಠಾಣೆಯಲ್ಲಿ ನಮೂದಾಗಿರುತ್ತದೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 61/2022**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರಳ ಹೆಸರು : ಶಾಯಿನಾ ಪರ್ವಿನ್ ಶಾಬಾಂದ್ರಿ

ಗಂಡನ ಹೆಸರು : ಹುಸೇನ್ ಶಬ್ಬರ್

ವಯಸ್ಸು : 34 ವರ್ಷ

ಉದ್ಯೋಗ : ಮನೆ ವಾರ್ತೆ

ವಾಸ್ತವ್ಯ : ಮಾರ್ಕೆಟ್ ಹತ್ತಿರ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.26.11.2020 ರಂದು ನಾನು ನನ್ನ ಶಾಲೆಯ ವರ್ಗಾವಣೆ ಸರ್ಟಿಫಿಕೆಟ್ ಮತ್ತು ಜನನ ಪ್ರಮಾಣ ಪತ್ರವನ್ನು ತರಲು ನನ್ನ ತಾಯಿಯ ಮನೆಗೆ ಹೋಗಿದ್ದೆನು. ಆಗ ವಾಪಸ್ಸು ಬರುವಾಗ ಕತ್ತಲಲ್ಲಿ ಆರೋಪಿಯಾದ ನನ್ನ ಅಣ್ಣ ಅಲ್ಲಿ ಮುಚ್ಚಿಕೊಂಡು ನಿಂತಿದ್ದು ಹಿಂದಿನಿಂದ ಬಂದು ನನ್ನನ್ನು ನೆಲಕ್ಕೆ ದೂಡಿ ನನ್ನ ಬೆನ್ನಿಗೆ ಪೊರಕೆಯಿಂದ ಜೋರಾಗಿ ಹೊಡೆದು ಹಲ್ಲೆ ಮಾಡಿದ್ದು ಆಗ ನಾನು ಜೋರಾಗಿ ಕಿರುಚಾಡಿದೆ. ಆಗ ಜನರು ಬಂದು ನನ್ನನ್ನು ಕಾಪಾಡಿದರು ಆರೋಪಿಯು ನನಗೆ ಈ ದಿನ ನೀನು ತಪ್ಪಿಸಿಕೊಂಡಿದ್ದಿಯ ಇನ್ನೊಂದು ಸಾರಿ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ನನಗೆ ಜೀವದ ಬೆದರಿಕೆ ಹಾಕಿದನು. ನಂತರ ನಾನು ನನ್ನನ್ನು ಭಟ್ಕಳದ ತಾಲೂಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನನಗೆ ಚಿಕಿತ್ಸೆಯನ್ನು ನೀಡಿದ್ದರು. ಮರುದಿನ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನು. ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದರು. ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ. ಕಪ್ಪು ಬಣ್ಣದ ಬುರ್ಕಾ ವನ್ನು ಮುದ್ದೆ ಮಾಲು 1 ಎಂದು , ಪೊರಕೆಯನ್ನು ಮುದ್ದೆ ಮಾಲು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಮಾಡಲು ಆರೋಪಿಪರ ವಕೀಲರು ಕಾಲವಕಾಶ ಕೇಳಿದ್ದು , ಕಾಲವಕಾಶ ನೀಡಲಾಯಿತು .**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಪ್ರ.ದ.ನ್ಯಾ.ದಂ.,ಭಟ್ಕಳ.

**ಸಿಸಿ ನಂಬರಃ 541/2023**

**ಸಾಕ್ಷಿಃ ಸಿ.ಡಬ್ಲ್ಯೂಃ 02**

**(ಇಂದು ತಾಃ 19/03/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಪಿರ್ಯಾದುದಾರರ ಪರ ಶ್ರೀ ಕೆ. ಹೆಚ್. ಎನ್. ವಕೀಲರಿಂದ .**

ಮೃತ ವ್ಯವಕ್ತಿಯು ನಮ್ಮ ಮನೆಯ ಹತ್ತಿರ ವಾಸವಾಗಿದ್ದರು . ಸದರಿ ಅಪಘಾತವು ಶಂಸುದ್ದೀನ್ ಸರ್ಕಲ್ ಬಳಿ ಆಗಿದೆ . ಅಲ್ಲಿ ಸಿಸಿ ಕ್ಯಾಮರಾ ಇದೆ . ಅಪಘಾತವು ರಸ್ತೆಯ ಮಧ್ಯದಲ್ಲಿ ಆಗಿದೆ . ಪಂಚನಾಮೆಯ ಕಾಲಕ್ಕೆ ಪೊಲೀಸರು ಸಿಸಿ ಕ್ಯಾಮರಾವನ್ನು ಪರಿಶೀಲನೆ ಮಾಡಿರಬಹುದು. ರಸ್ತೆಯನ್ನು ಹಟಾಂತವಾಗಿ ದಾಡುವಾಗ ಕಾರಿಗೆತಾಗಿ ಸದರಿ ಅಪಘಾತವಾಗಿದೆ ಎಂದು ನನಗೆ ಹೇಳಿರತ್ತಾರೆ . ಮೃತ ವ್ಯಕ್ತಿಯು ಲಾರಿಯ ಅಡಿಗೆ ಬಿದಿದ್ದರು . ಆ ಕಾರಣಕ್ಕೆ ಅವರ ಸಾವು ಆಗಿದೆ ಎಂದು ಪೊಲೀಸರು ನನಗೆ ಹೇಳಿದ್ದರು . ಪಂಚನಾಮೆಯ ಕಾಲಕ್ಕೆ ಘಟನಾ ಸ್ಥಳದಲ್ಲಿ ಲಾರಿ ಇರಲಿಲ್ಲ . ಲಾರಿಯ ಅಡಿಯಲ್ಲಿ ಬಿದಿದ್ದರು ಎಂದು ಪಂಚನಾಮೆಯಲ್ಲಿ ಬರೆದಿದ್ದರೂ ಅಥಾವಾ ಇಲ್ಲ ಎಂದು ನಾನು ಓದಿ ನೋಡಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಎರಡೂ ಪಂಚನಾಮೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ಸಾಕ್ಷಿ ಅಂತ ನಾನು ಸಹಿ ಮಾಡಿದ್ದೇನೆ . ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 775/2024**

**ಸಿ.ಡಬ್ಲ್ಯೂಃ 03, ಪಿ.ಡಬ್ಲ್ಯೂಃ 03**

ಸಾಕ್ಷಿದಾರಳ ಹೆಸರು : ದೀಪ್ತಿ
ತಂದೆಯ ಹೆಸರು : ನರಸಿಂಹ ಪೂಜಾರಿ
ವಯಸ್ಸು : 28 ವರ್ಷ
ಉದ್ಯೋಗ : ಗ್ರಾಮಾಡಳಿತಾಧಿಕಾರಿ , ಶಿರಾಲಿ
ವಾಸ್ತವ್ಯ : ಕುಂದಾಪುರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2022 ರಿಂದ 2024 ವರೆಗೆ ಭಟ್ಕಳದ ಪುರವರ್ಗದಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 16.06.2023 ಚಾಸಾ 1 ಮತ್ತು 2 ರವರು ನನಗೆ ಫೋನ್ ಕರೆ ಮಾಡಿ ತಾವು ವಾಹನದಲ್ಲಿ ಸಾಗಾಟ ಮಾಡುತ್ತಿರುವ ಅಕ್ಕಿಯನ್ನು ಹಿಡಿದಿರುತ್ತೇವೆ ಎಂದು ತಿಳಿಸಿರುತ್ತಾರೆ. ತದನಂತರ ನಾನು ಸ್ಥಳಕ್ಕೆ ಹೋದಾಗ ಚಾಸಾ 1 ರವರು ಗಾಡಿಯಲ್ಲಿ ಸ್ವಲ್ಪ ಅಕ್ಕಿಯನ್ನು ಶಿರೂರಿಂದ ಭಟ್ಕಳದ ಕಡೆಗೆ ಹೋಗುವಾಗ ನಿಲ್ಲಿಸಿದ್ದೇವೆ ಎಂದು ಹೇಳಿರುತ್ತಾರೆ. ಅಕ್ಕಿಯನ್ನು ತಪಾಸಣೆ ಮಾಡಿದಾಗ ಅದು ಪಡಿತರ ಅಕ್ಕಿ ಎಂದು ತಿಳಿಸಿರುತ್ತಾರೆ. ನಂತರ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಗಾಡಿಯು ಸಿಲ್ವರ್ ಬಣ್ಣದ ಇಕೊ ಕಾರ್ ಸಂಖ್ಯೆ ಕಎ.20.4938 . ಉತ್ತರ ಮತ್ತು ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ , ಪೂರ್ವದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಾಗ ಸರ್ವೆ ನಂಬ್ರ 220 , ಪಶ್ಚಿಮದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಾಗ ಸರ್ವೆ ನಂಬ್ರ 80 ಆಗಿರುತ್ತದೆ. ಸ್ಥಳ ಪಂಚನಾಮೆಯನ್ನು ಸಂಜೆ ಸುಮಾರು 3.30 ರಿಂದ 6.20 ರ ತನಕ ನಡೆಯಿತು. ಸ್ಥಳಕ್ಕೆ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

3. ದಿ. 17.06.2023 ರಂದು ಪೊಲೀಸರು ನನ್ನನ್ನು, ಚಾಸಾ 1 ಮತ್ತು 2 ರವರನ್ನು ಠಾಣೆಗೆ ಕರೆದಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ 14 ಅಕ್ಕಿ ಚೀಲ 510 ಕೇಜಿ ತೂಕ ಮತ್ತು ವಾಹನ ಇತ್ತು. ಪ್ರತಿ ಕೆಜಿ ಅಕ್ಕಿ ಗೆ ಅಜಮಾಸು ರೂ.32 ಮೌಲ್ಯ ಇರುತ್ತದೆ. ಠಾಣೆಯಲ್ಲಿ 2 ನೇ ಪಂಚನಾಮೆಯನ್ನು 11.00 ರಿಂದ 12.00 ಗಂಟೆಯವರೆಗೆ ಮಾಡಿರುತ್ತಾರೆ ಅದಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ.2 ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3 ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ನಿಪಿ.4 ಫೋಟೋವನ್ನು ಸಾಕ್ಷಿ

ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 2 ನೇ ಆರೋಪಿ ಪರ ಶ್ರೀ ಎನ್.ಇ.ಹೆಚ್. ವಕೀಲರಿಂದ,**

4. ಘಟನಾ ಸ್ಥಳದಲ್ಲಿ ನಾನು ಹೋದಾಗ ಚಾಸಾ 1, ಚಾಸಾ 2 ಮತ್ತು ಪೊಲೀಸರು ಇದ್ದರು. ನಾನು ಘಟನೆಯ ದಿನದಂದು ಕರ್ತವ್ಯದಲ್ಲಿ ಇದೆ ಎಂದು ತೋರಿಸಲು ದಾಖಲೆ ಇದೆ. ಅದನ್ನು ತನಿಖಾಧಿಕಾರಿಗೆ ನೀಡಿಲ್ಲ. ಪಂಚನಾಮೆಗೆ ಬರಬೇಕು ಎಂದು ಚಾಸಾ 1 ಹಾಗೂ ಚಾಸಾ 2 ರವರು ಹೇಳಿದ್ದರು. ಚಾಸಾ 1 ಮತ್ತು 2 ರವರು ನಮ್ಮ ಹಿರಿಯ ಅಧಿಕಾರಿ ಆಗಿದ್ದಾರೆ. ಕಛೇರಿಯಿಂದ ನಾವು ಹೊರಗೆ ಹೋಗುವ ಕಾಲಕ್ಕೆ ಚಲನವಲನ ಪುಸ್ತಕದಲ್ಲಿ ನಮೂದು ಮಾಡುವುದಿಲ್ಲ ಕಾರಣ ನಮ್ಮದು ಪೀಲ್ಡ ವರ್ಕ್ ಆಗಿದೆ. ಗುನ್ನಾ ಸ್ಥಳದ ರಸ್ತೆಯು ಉತ್ತರ ದಕ್ಷಿಣವಾಗಿದೆ. ಗುನ್ನಾ ಸ್ಥಳದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ವಾಸದ ಮನೆಗಳು ಇವೆ . ಗುನ್ನಾ ಸ್ಥಳವು ರಾಷ್ಟ್ರೀಯ ಹೆದ್ದಾರಿ ಆಗಿದೆ. ಗುನ್ನಾ ಸ್ಥಳದಲ್ಲಿ ಪೊಲೀಸ್ ಚೆಕ್ ಪೊಸ್ಟ್ ಇದೆ. ಚೆಕ್ ಪೊಸ್ಟ್ ನಲ್ಲಿ ಸಿಸಿ ಕ್ಯಾಮರಾ ಇರುವ ಬಗ್ಗೆ ನಾನು ಗಮನಿಸಿಲ್ಲ. ಚೆಕ್ ಪೊಸ್ಟ್ ನ ರಸ್ತೆಯ ಎರಡು ಬದಿಗೆ ಬ್ಯಾರೆಕೆಡ್ ಅನ್ನು ಹಾಕಿದ್ದಾರೆ. ಪಂಚನಾಮೆಗೆ ದಿಕ್ಕುಗಳು ಹಾಗೂ ಅಕ್ಕಿ ಚೀಲಗಳ ಬಗ್ಗೆ ಹೇಳಿದ್ದೇನೆ . ಪಂಚನಾಮೆಯಲ್ಲಿ ಯಾವೆಲ್ಲ ಪೊಲೀಸ್ ಅಧಿಕಾರಿ ಇದ್ದರು ಎಂದು ಅವರ ಹೆಸರುಗಳನ್ನು ನಾನು ಹೇಳಿಲ್ಲ . ಪಂಚನಾಮೆ ಕಾಲಕ್ಕೆ ನನ್ನ ಗಮನಕ್ಕೆ ಬರುಹಾಗೆ ಯಾವುದೇ ಫೋಟೋವನ್ನು ತೆಗೆದಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ಮಾಡಿರುವ ಪಂಚನಾಮೆಗೆ ನಾನು ಯಾವುದೇ ಮಾಹಿತಿಯನ್ನು ನೀಡಿಲ್ಲ. ನನ್ನ ಸಮಕ್ಷಮ ಅಕ್ಕಿ ಚೀಲದ ತೂಕವನ್ನು ಮಾಡಿಲ್ಲ. ಪೊಲೀಸ್ ಠಾಣೆಯಲ್ಲಿ ಆದ ಪಂಚನಾಮೆಯನ್ನು ಟೈಪ್ ಮಾಡಿದ್ದರು . ಟೈಪ್ ಹಾಗೂ ದಸ್ತುರು ಯಾರು ಮಾಡಿದ್ದರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ಪೊಲೀಸ್ ಠಾಣೆಯಲ್ಲಿ ಚೀಲದಿಂದ ತೆಗೆದಿದ್ದರು. ಮುದ್ದೆ ಮಾಲಿನ ಮೇಲೆ ಚೀಟಿಯನ್ನು ಅಂಟಿಸುವುದಕ್ಕೆ ನನ್ನ ಸಹಿಯನ್ನು ಪಡೆದಿಲ್ಲ. ನಮ್ಮ ಸಹಿ ಇರುವ ಚೀಟಿಯನ್ನು ಮುದ್ದೆ ಮಾಲಿಗೆ ಅಂಟಿಸಿದ್ದಾರೆ ಎಂದು ಮುದ್ದೆ ಮಾಲಿಗೆ ಬರೆದಿರುವ ವಿಷಯ ತಪ್ಪಾಗಿದೆ. ಪಡಿತರ ಅಕ್ಕಿ ಹಾಗೂ ಸಾಮಾನ್ಯವಾಗಿ ಅಂಗಡಿಯಲ್ಲಿ ಸಿಗುವ ಅಕ್ಕಿಗೆ ವ್ಯತ್ಯಾಸ ಇದೆ. ಮುದ್ದೆ ಮಾಲಿನ ಅಕ್ಕಿಯನ್ನು ಪಡಿತರ ಅಕ್ಕಿಯೆಂದು ಖಚಿತ ಪಡಿಸಿಕೊಳ್ಳಲು ಯಾವುದೇ ಪರೀಕ್ಷೆಯನ್ನು ಮಾಡಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಮುಖಾಂತರ ಅಕ್ಕಿಯನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು,ಅಕ್ಕಿ, ವಾಹನ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂರದೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಅಕ್ಕಿಯು ಪಡಿತರ ಅಕ್ಕಿ ಅಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಅಂಕಿ ಸಂಖ್ಯೆಗಾಗಿ ದಾಖಲಿಸಿರುವ ಸುಳ್ಳು ಪ್ರಕರಣಕ್ಕೆ ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ . ನ್ಯಾಯಾಯಲದ ಮುಂದೆ ಹಾಜರು ಪಡಿಸಿದ ಫೋಟೋಗಳನ್ನು ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1050/2019**

**ಸಿ.ಡಬ್ಲ್ಯೂಃ 17, ಪಿ.ಡಬ್ಲ್ಯೂಃ 06**

ಸಾಕ್ಷಿದಾರರ ಹೆಸರು : ಲೊಕಪ್ಪ ಸಿದ್ದಪ್ಪ ಕತ್ತಿ

ತಂದೆಯ ಹೆಸರು : ಸಿದ್ದಪ್ಪ ಕತ್ತಿ

ವಯಸ್ಸು : 30 ವರ್ಷ

ಉದ್ಯೋಗ : ಪೊಲೀಸ್ ಪೇದೆ, ಮುರ್ಡೇಶ್ವರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿ ಗೃಹ , ಮುರ್ಡೇಶ್ವರ ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 20.11.2015 ರಿಂದ 30.11.2024 ರವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಭಟ್ಕಳ ಶಹರ ಪೊಲೀಸ್ ಠಾಣಾ ಗುನ್ನಾ ನಂಬ್ರ 63/2019 ಪ್ರಕರಣದಲ್ಲಿ ತನಿಖಾಧಿಕಾರಿಯಾದ ಚಾಸಾ 18 , ಚಾಸಾ 19 ರವರು ದಿ.25.04.2019 ರಂದು ಸದರಿ ಪ್ರಕರಣದಲ್ಲಿ ಪಂಚನಾಮೆಯ ವೇಳೆ ಫೋಟೋ ಗ್ರಾಫಿ ಮತ್ತು ಛಾಯಾ ಗ್ರಾಫಿ ಮಾಡಲು ತಿಳಿಸಿದಂತೆ ಠಾಣೆಗೆ ಒದಗಿಸಿದ ಕ್ಯಾಮರಾ ಮತ್ತು ನನ್ನ ಮೊಬೈಲಿನಲ್ಲಿ ಫೋಟೋ ಗ್ರಾಫಿ ಮತ್ತು ವಿಡಿಯೋ ಗ್ರಾಫಿ ಮಾಡಿ ತನಿಖಾಧಿಕಾರಿಗೆ ಹಾಜರುಪಡಿಸಿದ ಬಗ್ಗೆ ಕಲಂ 65 ಬಿ ರಲ್ಲಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನಿಪಿ.4, ನಿಪಿ.7 ರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರು ಕೃತ್ಯ ಮಾಡಿದ ಸ್ಥಳವನ್ನು ತೋರಿಸಿದ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 65 ಬಿ ಹೇಳಿಕೆಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ.9 ಎಂದು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್.ಎಸ್.ಎಮ್. ವಕೀಲರಿಂದ,**

3. ಕಲಂ 65 ಬಿ ಪ್ರಮಾಣ ಪತ್ರದಲ್ಲಿ ನನಗೆ ಫೊಟೋ ತೆಗೆಯುವ ತರಬೇತಿ ಆಗಿದೆ ಎಂದು ನಮೂದಿಸಿದ್ದೇನೆ ಆದರೆ ಯಾವುದೇ ಸರ್ಟಿಫಿಕೆಟ್ ಅನ್ನು ಹಾಜರುಪಡಿಸಿಲ್ಲ. ಕಲಂ 65 ಬಿ ಪ್ರಮಾಣ ಪತ್ರದಲ್ಲಿ ಕ್ಯಾಮರಾ ಹಾಗೂ ಗಣಕಯಂತ್ರದ ಬಗ್ಗೆ ವಿವರವನ್ನು ಬರೆದಿಲ್ಲ. ಫೊಟೋವನ್ನು ತೆಗೆದಾಗ ಕ್ಲೊನಿಂಗ್ ಮಾಡಲಾಗುತ್ತದೆ ಅದರ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆದಿಲ್ಲ. ಸ್ಟೂಡಿಯೋದಲ್ಲಿ ಫೋಟೋವನ್ನು ಪ್ರಿಂಟ್ ಹಾಕಿದ ಬಗ್ಗೆ ರಸೀದಿಯನ್ನು ಹಾಜರುಪಡಿಸಿಲ್ಲ. ಸುಳ್ಳು 65 ಬಿ ಪ್ರಮಾಣ ಪತ್ರವನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಫೋಟೋ ಹಾಗೂ ವಿಡಿಯೋ ಯಾವುದು ಸದರಿ ಪ್ರಕರಣಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 898/2014**

**ಸಿ.ಡಬ್ಲ್ಯೂಃ 06, ಪಿ.ಡಬ್ಲ್ಯೂಃ 03**

ಸಾಕ್ಷಿದಾರರ ಹೆಸರು : ಅಮೀರ್ ಶೇಖ್

ತಂದೆಯ ಹೆಸರು : ಶೇಖ್ ಬಾಷಾ

ವಯಸ್ಸು : 57 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಮೂಸಾನಗರ , ಬೆಳ್ನಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ19/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ

**(ಈ ಹಂತದಲ್ಲಿ ಎಪಿಪಿಯವರು ಷದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿನಾಂಕ 29.01.2014 ರಂದು ನಾನು ನನ್ನ ಕೆಲಸದ ನಿಮಿತ ತಗ್ಗರಗೋಡಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಮಯ 11.30 ಗಂಟೆ ಸುಮಾರಿಗೆ ಈ ಪ್ರಕರಣದ ಪಿರ್ಯಾದಿಯ ಮನೆಯ ಮುಂದೆ ಬಹಳಷ್ಟು ಜನರು ಸೇರಿರುತ್ತಾರೆ ಎಂದರೆ ನನನಗೆ ಗೊತ್ತಿಲ್ಲ. ಸದರಿ ಅವರು ಆರೋಪಿ 1 ರಿಂದ 19 ರವರೆಗೆ ಕ್ರಮವಾಗಿ ಇದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಪಿರ್ಯಾದ ಮನೆಗೆ ಅಕ್ರಮ ಪ್ರವೇಶ ಮಾಡಿ ನೀನು ಈ ಜಾಗದಲ್ಲಿ ಉಳಿಯ ಬೇಕು ಎಂದರೆ ರೂ.15 ಲಕ್ಷ ಹಣವನ್ನು ನೀಡಬೇಕು ಇಲ್ಲದಿದ್ದರೆ ನಿಮ್ಮನೆಲ್ಲ ಕೊಂದು ಬಿಸಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನ ನಂತರ ಆರೋಪಿ 10 ಮತ್ತು 12 ರವರು ಪಿರ್ಯಾದಿಯ ಮನೆಯ ಒಳಗೆ ಅಕ್ರಮವಾಗಿ ಪ್ರವೇಶಿಸಿ ಅವಳ ಕೈಯನ್ನು ಹಿಡಿದು ಎಳೆದಾಡಿ ಮನೆಯ ಒಳಗಿಂದ ಅವಳನ್ನು ಎಳೆದು ತಂದು ಹೊರಗೆ ದುಡಿಹಾಕಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು , ಚಾಸಾ 6 , 7, 8, 9, 10 ಮತ್ತು 11 ರವರು ಆರೋಪಿತರು ಪಿರ್ಯಾದಿಗೆ ಪುನಃ ಹೊಡೆಯುವುದನ್ನು ತಪ್ಪಿಸಿರುತ್ತೇವೆ ಮತ್ತು ಅಲ್ಲಿ ಜನರು ಸೇರುವುದನ್ನು ನೋಡಿ ಆರೋಪಿತರು ಅಲ್ಲಿಂದ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಎಲ್ಲಾ ವಿಚಾರಗಳ ಬಗ್ಗೆ ಮಾಹಿತಿ ಇದ್ದರೂ ಕೂಡ , ಘಟನೆಯನ್ನು ಪ್ರತ್ಯೇಕ್ಷವಾಗಿ ಕಂಡಿದ್ದರು ಸಹ ಆರೋಪಿಗೆ ಸಹಾಯ ಆಗಲೆಂದು , ಈ ಘಟನೆಯಿಂದ ಮುಕ್ತಿ ಸಿಗಲೆಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

ಮರುವಿಚಾರಣೆ ಇಲ್ಲ

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1775/2024**

**ಸಿ.ಡಬ್ಲ್ಯೂಃ 04, ಪಿ.ಡಬ್ಲ್ಯೂಃ 04**

| | | |
|---|---|---|
| ಸಾಕ್ಷಿದಾರರ ಹೆಸರು | : | ವಾಸು |
| ತಂದೆಯ ಹೆಸರು | : | ರಾಮ ನಾಯ್ಕು |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಟೈಲರಿಂಗ್ |
| ವಾಸ್ತವ್ಯ | : | ದೇವಿನಗರ , ಜಾಲಿ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿನಾಂಕ 09.05.2024 ರಂದು ಸಂಜೆ 7.45 ಕ್ಕೆ ದೇವಿನಗರದಲ್ಲಿರುವ ಬ್ಯೂಟಿ ಪಾರ್ಲರ್ ಹತ್ತಿರ ನನ್ನ ಹೆಂಡತಿ ಚಾಸಾ 1 ರವರ ಜೊತೆ ಆರೋಪಿತನು ಎರಡರಿಂದ ಮೂರು ಜನರನ್ನು ಸಾರಾಯಿ ಕುಡಿಸಿಕೊಂಡು ಬಂದು ನನ್ನ ಹೆಂಡತಿಯ ಅಂಗಡಿಯ ಹತ್ತಿರ ಕಟ್ಟೆಯ ಮೇಲೆ ಕುಳಿಸಿಕೊಂಡು , ನೀರಿನ ಬಾಟಲಿನಲ್ಲಿ ಮಲ-ಮೂತ್ರ ಮಾಡುವುದು ಮಾಡುತ್ತಿದ್ದರು. ಅದನ್ನು ನಾನು ಪ್ರಶ್ನೆ ಮಾಡಲು ಹೋದಾಗ ಸದರಿ ಆರೋಪಿತನು ನನ್ನ ಮೇಲೆ ಎರಗಿ ಬಂದಿರುತ್ತಾನೆ. ಸದರಿ ವಿಷಯವನ್ನು ನನ್ನ ಹೆಂಡತಿ ಚಾಸಾ 1 ರವರ ಬಳಿ ಹೇಳಿದಾಗ ಅವರು ಅದನ್ನು ಪ್ರಶ್ನಿಸಿದಾಗ ಆರೋಪಿತನು ಅವಳ ಮೇಲೆ ಹಲ್ಲೆ ಮಾಡಿ ಅವಳ ಚೂಡಿದಾರ ಟಾಪ್ ಬೂಜದ ಹತ್ತಿರ ಹರಿದು , ಅದನ್ನು ತಪ್ಪಿಸಲು ಹೋದ ನನ್ನನ್ನು ಕೂಡ ದೂಡಿ ನೆಲಕ್ಕೆ ಕೆಡವಿರುತ್ತಾನೆ. ತದನಂತರ ಆಟೋ ರೀಕ್ಷಾದ ಮೇಲೆ ನನ್ನ ಹೆಂಡತಿಯನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಉಪಚರಿಸಿರುತ್ತೇನೆ. ಈ ಕುರಿತು ನನ್ನ ಹೆಂಡತಿ ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್.ಐ.ಎನ್ ವಕೀಲರಿಂದ,**

2. ನನ್ನ ಮೇಲೆ ಒಟ್ಟು ಎರಡು ಕೇಸುಗಳು ಇದ್ದವು. ನನ್ನ ಹೆಂಡತಿ ನನ್ನ ಮೇಲೆ ಕಿರುಕುಳ ಹಾಗೂ ವರದಕ್ಷಿಣೆಯ ಪ್ರಕರಣವನ್ನು ದಾಖಲಿಸಿರುತ್ತಾರೆ. ನನ್ನ ವಿರುದ್ಧ ಸಾರಾಯಿ ಮಾರಾಟದ ಪ್ರಕರಣವು ದಾಖಲಾಗಿದೆ. ಇದೇ ಅಂಗಡಿಯಲ್ಲಿ ಸಾರಾಯಿ ಮಾರಾಟ ಮಾಡುತ್ತಿದ್ದೆ ಎಂದು ಪೊಲೀಸರು ನನ್ನ ವಿರುದ್ಧ ಪ್ರಕರಣ ದಾಖಲಿಸಿದರು. ಸದರಿ ಪ್ರಕರಣದ ಮೊದಲು ಸಾರಾಯಿ ಮಾರಾಟ ಮಾಡುತ್ತಿದ್ದೆ ಎಂದು ಪೊಲೀಸರು ಪ್ರಕರಣವನ್ನು ದಾಖಲಿಸಿಲ್ಲ. ಆರೋಪಿಯು ನನ್ನ ಸ್ವಂತ ಚಿಕ್ಕಪ್ಪನ ಮಗ ಆಗಿದ್ದಾನೆ. ಆರೋಪಿಯು ನಾವು ಸಾರಾಯಿ ಮಾರಾಟ ಮಾಡುತ್ತೇವೆ ಎಂದು ಬುದ್ಧಿವಾದ

ಹೇಳಿದ್ದರು ಎಂದರೆ ಸರಿಯಲ್ಲ. ಸಾರಾಯಿ ಮಾರಾಟ ಮಾಡುವುದರಿಂದ ಕುಟುಂಬದ ಮರ್ಯಾದೆ ಹೋಗುತ್ತದೆ ಎಂದು ಆರೋಪಿಯು ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ನನಗೆ 10 ವರ್ಷಗಳ ಹಿಂದೆ ಸಕ್ಕರೆ ಕಾಯಿಲೆಯಿಂದ ಗ್ಯಾಂಗ್ರೀನ್ ಆಗಿತ್ತು.

3. ಆರೋಪಿತನು ಎರಡರಿಂದ ಮೂರು ಜನರನ್ನು ಕರೆದುಕೊಂಡು ನನ್ನ ಅಂಗಡಿಯ ಬಳಿ ಕುರುತ್ತಿದ್ದರು ಆದರೆ ಅವರ ಹೆಸರುಗಳು ನನಗೆ ಗೊತ್ತಿಲ್ಲ. ಸದರಿ ಪ್ರಕರಣಕ್ಕೂ ಒಂದುವರೆ ತಿಂಗಳು ಮೊದಲು ಆರೋಪಿಯು ಇಬ್ಬರೂ ಜನರೊಂದಿಗೆ ನಮ್ಮ ಅಗಂಡಿಯ ಮುಂದೆ ಕುಡುತ್ತಾರೆ ಎಂದು ದೂರನ್ನು ದಾಖಲಿಸಲು ಹೋಗಿದ್ದೆ ಆದರೆ ದಾಖಲಿಸಿಲ್ಲ. ಆರೋಪಿ ಹಾಗೂ ಇಬ್ಬರೂ ಜನರಿಗೆ ನಾವು ಅಂಗಡಿಯ ಬಳಿ ಕುಳಿತುಕೊಳ್ಳಬೇಡಿ ಎಂದು ಹೇಳಿದ್ದೇವೆ. ಸದರಿ ಎರಡು ಜನರ ವಿರುದ್ಧ ಪಿರ್ಯಾದಿಯನ್ನು ನೀಡಿಲ್ಲ. ಸಾರಾಯಿ ಮಾರಾಟ ಮಾಡಲು ಆರೋಪಿಯು ತೊಂದರೆ ನೀಡುತ್ತಿದ್ದ ಕಾರಣ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಅಂಗಡಿಯ ಮುಂದೆ ಕುಳಿತುಕೊಳ್ಳುವ ಇಬ್ಬರು ಜನರ ಹೆಸರನ್ನು ದೂರಿನಲ್ಲಿ ನೀಡಿಲ್ಲ. ಹಲ್ಲೆಯಲ್ಲಿ ನನ್ನ ಹೆಂಡತಿಗೆ ಕುತ್ತಿಗೆ ಹಾಗೂ ಕೈಗೆ ಪೆಟ್ಟಾಗಿತ್ತು. ಆರೋಪಿತಗೆ ನಾನು ಒಂದೇ ಬಾರಿ ಬುದ್ಧಿವಾದ ಹೇಳಿದ್ದೇನು.

4. ನಾವು ತಿಮ್ಮಯ್ಯ ಗೊಂಡ ಹಾಗೂ ಗಣಪತಿ ಗೊಂಡ ಅವರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದೇವೆ. ಸದರಿ ಘಟನೆಯ ಕಾಲಕ್ಕೆ ಬೇರೆ ಯಾರು ಇರಲಿಲ್ಲ. ಆರೋಪಿಯು ಯಾವತ್ತು ನಮ್ಮ ಅಂಗಡಿ ಮುಂದೆ ಬಂದಿಲ್ಲ ಮತ್ತು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಅಂಗಡಿಯಿಂದ ಪೊಲೀಸ್ ಠಾಣೆಯು ಒಂದೂವರೆ ಕಿಲೋಮಿಟರ್ ದೂರದಲ್ಲಿ ಇದೆ . ಸಾರಾಯಿ ಪ್ರಕರಣವನ್ನು ದಾಖಲಿಸಲು ಆರೋಪಿ ಕಾರಣ ಎಂದು ತಿಳಿದುಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಪದೇ ಪದೇ ಬೇರೆಯವರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಿರುದ್ಧ ಸಾರಾಯಿ ಮಾರಾಟದ ಹಲವು ಪ್ರಕರಣಗಳು ದಾಖಲಾಗಿದ್ದೇವೆ ಎಂದರೆ ಸರಿಯಲ್ಲ. ಸಿಸಿ ನಂಬರ 1242/2024 ಹಾಗೂ  ಸಿಸಿ ನಂಬರ್ 1047/2013 ನಮ್ಮ ವಿರುದ್ಧ ದಾಖಲಾಗಿದೆ. ಮನೆಯಿಂದ ನಮ್ಮ ಅಂಗಡಿಯು 200 ಮಿಟರ್ ದೂರದಲ್ಲಿ ಇದೆ. ಗಲಾಟೆಯನ್ನು ಯಾರೆಲ್ಲಾ ನೋಡಿದ್ದಾರೆ ಎಂದು ನನಗೆ ಗೊತ್ತಿಲ್ಲ.  ಗಲಾಟೆಯ ಸಮಯದಲ್ಲಿ ಕೆಲವು ಅಂಗಡಿಗಳು ತೆಗೆದಿದ್ದವು ಇನ್ನು ಕೆಲವು ಅಂಗಡಿಗಳು ಮುಚ್ಚಿದ್ದವು. ಯಾವೆಲ್ಲಾ ಅಂಗಡಿಗಳು ತೆಗೆದಿದ್ದವು ಅವರ ಹೆಸರುಗಳು ನನಗೆ ಗೊತ್ತಿಲ್ಲ. ನಮ್ಮ ಅಂಗಡಿಯ ಹತ್ತಿರ ನನ್ನ ತಮ್ಮನ ಅಂಗಡಿ ಇತ್ತು ಅವರು ಗಲಾಟೆಯನ್ನು ಬಿಡಿಸಲು ಬಂದಿಲ್ಲ. ಹಣ ವಸೂಲಿಗಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಸ್ಥಳವನ್ನು ಪೊಲೀಸರಿಗೆ ನಾನು ತೋರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಯ ಕಾಲಕ್ಕೆ ಬಟ್ಟೆಯನ್ನು ಜಪ್ತಿ ಮಾಡಿದ್ದಾರೆ . ಬಟ್ಟೆಯನ್ನು ನನ್ನ ಹೆಂಡಿತಯು ಎಲ್ಲಿಂದ ತಂದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಪಂಚರನ್ನು ಪೊಲೀಸರೇ ಕರೆತಂದಿದ್ದರು. ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 744/2024**

**ಸಾಕ್ಷಿಃ ಸಿಡಬ್ಲ್ಯೂಃ 01, ಪಿ.ಡಬ್ಲ್ಯೂಃ 04**

ಸಾಕ್ಷಿದಾರರ ಹೆಸರು : ಸೋಮರಾಜ್

ತಂದೆಯ ಹೆಸರು : ಠಾಕರು ರಾಥೋಡ್

ವಯಸ್ಸು : 54 ವರ್ಷ

ಉದ್ಯೋಗ : ಪೊಲೀಸ್ ಉಪ ನಿರೀಕ್ಷಕರು , ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2023 ಅಕ್ಟೋಬರ್ ನಿಂದ ಇಲ್ಲಿಯವರೆಗೆ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 26.10.2023 ರಂದು ಭಟ್ಕಳ ಶಹರದಲ್ಲಿ ಗಸ್ತು ಕರ್ತವ್ಯಕ್ಕೆ ಹೋದಾಗ ಚಾಸಾ6 ರವರನ್ನು ಜೊತೆಯಲ್ಲಿ ಕರೆದುಕೊಂಡು ಭಟ್ಕಳ ಶಹರದ ಗಸ್ತು ಸಂಚಲಕ್ಕೆ ಹೋಗಿ ಹಳೆ ಬಸ್ ಸ್ಟಾಂಡ್, ಮಿಲಿಯಾ ಮಸೀದಿ , ಜಾಲಿ , ಸರ್ಕಲ್ ಕಡೆಗೆ ತಿರುಗಿ ದಿನಾಂಕ 27.10.2023 ರಂದು ಬೆಳಗ್ಗೆ 4.30 ಗಂಟೆಗೆ ಪುರವರ್ಗದ ಹತ್ತಿರ ಬರುವಾಗ 1 ಮತ್ತು 2 ನೇ ಆರೋಪಿಗಳು ಸೇರಿಕೊಂಡು ಅಕ್ರಮವಾಗಿ ಒಂದು ಹೋರಿಯನ್ನು ಜನತಾಕೋ ಆಪ್ ರೇಟಿವ್ ಬ್ಯಾಂಕ್ ಹಿಂದುಗಡೆ ಕ್ರಾರ್ಸ್ಟ್ರೀಟ್‌ದ 1 ನೇ ಆರೋಪಿ ಮನೆಯ ಹತ್ತಿರ ಖುಲ್ಲಾ ಜಾಗದಲ್ಲಿ ತೆಂಗಿನ ಮರಕ್ಕೆ ಒಂದು ಹೋರಿಯನ್ನು ಹಗ್ಗದಿಂದ ಕಟ್ಟಿ ವಧೆ ಮಾಡಲು ತಯಾರು ಮಾಡಿರುತ್ತಾರೆ ಎಂದು ಮಾಹಿತಿ ಬಂದ ಮೇರೆಗೆ ಗಸ್ತು ಕರ್ತವ್ಯದಲ್ಲಿ ಇದ್ದ ಚಾಸಾ 4 ಮತ್ತು 5 , ಚಾಸಾ 2 ಮತು 3 ಪಂಚರನ್ನು ಕರೆದುಕೊಂಡು ಅವರಿಗೆ ಮಾಹಿತಿ ಬಂದ ಬಗ್ಗೆ ತಿಳಿಹೇಳಿ ನಾವೆಲ್ಲರೂ ಸೇರಿ ಪೊಲೀಸ್ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಖುಲ್ಲಾ ಜಾಗದಲ್ಲಿ ತೆಂಗಿನ ಮರಕ್ಕೆ ಹಗ್ಗದ ಸಹಾಯದಿಂದ ಕಟ್ಟಿದ ಒಂದು ಹೋರಿಯನ್ನು ನೋಡಿದ್ದೇವು. ಅಲ್ಲೆ ಇದ್ದ ಇಬ್ಬರೂ ಆರೋಪಿತರೂ ನಮ್ಮನ್ನು ನೋಡಿ ಓಡಲು ಪ್ರಾರಂಭಿಸಿದ್ದು ಅವರನ್ನು ನಮ್ಮ ಸಿಬ್ಬಂದಿಗಳು ಹಿಡಿಯಲು ಬೆನ್ನತ್ತಿ ಪ್ರಯತ್ನಿಸಿದರೂ ಸಿಗಲಿಲ್ಲ. ಆ ವೇಳೆಗೆ ಓಡಿ ಹೋದವರ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ 1 ನೇ ಆರೋಪಿ ಮೊಹಮ್ಮದ್ ಅಬ್ಬಾನ್ ತಂದೆ ಹಸ್ಸನ್ ಜೊಗಲೆ ಮತ್ತು 2 ನೇ ಆರೋಪಿ ಜಮಿಲ್ ತಂದೆ ಜುಬೇರ್ ಎಂದು ತಿಳಿದುಬಂತು. ಪಂಚರ ಸಮಕ್ಷಮದಲ್ಲಿ ತೆಂಗಿನ ಮರಕ್ಕೆ ಹಗ್ಗದಿಂದ ಕಟ್ಟಿದ ಒಂದು ಹೋರಿಯನ್ನು ಪರಿಶೀಲಿಸಿ ನೋಡಲಾಗಿ ಹೋರಿಯ ಮೈ ಬಣ್ಣ ಕೆಂಪಗಿದ್ದು ಅದು ಗಂಡು ಹೋರಿ ಆಗಿರುತ್ತದೆ. ವಧೆ ಮಾಡಲಿಕ್ಕೆ ತಂದ ಕತ್ತಿ ಒಂದು ಹಾಗೂ ಹೋರಿಯನ್ನು ಕಟ್ಟಲು ತಂದ ಮೂರು ಹಗ್ಗಗಳು ಪಂಚರ ಸಮಕ್ಷಮ ತೆರೆದು ನೋಡಲಾಗಿ

ಕತ್ತಿಯ ಅಜಮಾಸು ಕಿಮ್ಮತ್ತು 20 ರೂಪಾಯಿ ಹಾಗೂ ಹಗ್ಗದ ಅಜಮಾಸು ಕಿಮ್ಮತ್ತು 10 ರೂಪಾಯಿ ಹಾಗು ಹೋರಿಯ ಅಜಮಾಸು ಕಿಮ್ಮತ್ತು 20,000 ರೂಪಾಯಿ ಆಗಬಹುದಂತ ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ಹೋರಿ, ಕತ್ತಿ ಹಾಗೂ ಹಗ್ಗಳನ್ನು ಕೇಸಿನ ಪೂರಾವೆ ಕುರಿತು ನನ್ನ ತಾಬಾಗೆ ತೆಗೆದುಕೊಂಡಿರುತ್ತೇನೆ. ಅದೇ ದಿನ ದಿನಾಂಕ 27.10.2023 ರಂದು ಬೆಳಗ್ಗೆ 5.15 ಗಂಟೆಯಿಂದ ಪಂಚನಾಮೆ ಚಾಸಾ 5 ರವರಲ್ಲಿ ಹೇಳಿ ಬರೆಸಿದ್ದು 6.45 ಗಂಟೆಗೆ ಬರೆದು ಮುಕ್ತಾಯ ಮಾಡಿರುತ್ತೇವೆ. ಘಟನಾ ಸ್ಥಳದ ಫೋಟೋ ಚಾಸಾ 7 ರವರಿಂದ ಮಾಡಿಸಿರುತ್ತೇನೆ. ಒಂದು ಹೋರಿ , ಕತ್ತಿ ಹಾಗೂ ಮೂರು ಹಗ್ಗವನ್ನು ಸಿಬ್ಬಂದಿಯವರ ಸಹಾಯದಿಂದ ಠಾಣೆಗೆ ತಂದು ಠಾಣೆ ಹೆಸ್.ಹೆಚ್.ಒ ರವರಲ್ಲಿ ಕಾನೂನಿನಂತೆ ಕ್ರಮ ಜರುಗಿಸಲು ಪಿರ್ಯಾದು ನೀಡಿ ಒಂದು ಹೋರಿ , ಒಂದು ಕತ್ತಿ ಹಾಗೂ ಮೂರು ಹಗ್ಗವನ್ನು ಪಿ.ಎಸ್.ಐ ಅವರ ತಾಬಾ ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದು ನಿಪಿ.2, ಅದರಲ್ಲಿರುವ ತನ್ನ ಸಹಿಯನ್ನು ನಿಪಿ. 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.1 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮು.ಮಾ.1 ಮತ್ತು 2 ರನ್ನು ನೋಡಿ ಗುರುತಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್. ಎಲ್. ವಿ. ವಕೀಲರಿಂದ,**

3. ನಾನು ಕರ್ತವ್ಯದಲ್ಲಿ ಇದ್ದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೇನೆ. ಇಬ್ಬರೂ ಪಂಚರ ಹೆಸರು ನನಗೆ ಗೊತ್ತಿದೆ. ಪಂಚರು ಆಧಾರ್ ಕಾರ್ಡ್‌ನ್ನು ನೀಡಿಲ್ಲ. ಘಟನಾ ಸ್ಥಳಕ್ಕೆ ಬೆಳಗ್ಗೆ 5.15 ಕ್ಕೆ ಹಾಜರಿದ್ದೇವು. ಆ ಸಮಯದಲ್ಲಿ ಕತ್ತಲು ಇತ್ತು ಆದರೆ ದಾರಿ ದೀಪ ಇತ್ತು. ಹೋರಿಯನ್ನು ತೆಂಗಿನ ಗಿಡದ ಬುಡಕ್ಕೆ ಕಟ್ಟಿದ್ದರು. ತೆಂಗಿನ ಬುಡಕ್ಕೆ ಕಟ್ಟಿದ ಹಗ್ಗ ಎಷ್ಟು ಉದ್ದ ಇತ್ತು ಎಂದು ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಮೊದಲು ಪಂಚನಾಮೆಯನ್ನು ಮಾಡಿ ನಂತರ ಪ್ರಕರಣವನ್ನು ದಾಖಲಿಸಿದ್ದೇವು. ಕತ್ತಿ ಮತ್ತು ಹಗ್ಗ ಘಟನಾ ಸ್ಥಳದಲ್ಲಿ ಇದ್ದವು. ಘಟನಾ ಸ್ಥಳದ ಅಕ್ಕ-ಪಕ್ಕದಲ್ಲಿ ಮನೆಗಳು, ಅಂಗಡಿಗಳು ಇದ್ದವು. ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮಾಡಿದ್ದೇವು. ಘಟನಾ ಸ್ಥಳದಲ್ಲಿಯೇ ಪಂಚರ ಸಹಿಯನ್ನು ಪಡೆದಿದ್ದೇವು. ಘಟನಾ ಸ್ಥಳದಲ್ಲಿ ಆರೋಪಿತರು ವಾಕಿಂಗ್ ಮಾಡುವಾಗ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಅಂಕೆ ಸಂಖ್ಯೆ ತೋರಿಸಲು ಸದರಿ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮುದ್ದೆ ಮಾಲು ಸಾಮಾನ್ಯವಾಗಿ ಎಲ್ಲಾ ಸ್ಥಳದಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ನ್ಯಾಯಾದಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ.

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 3035/2024**

**ಸಾಕ್ಷಿಃ ಸಿಡಬ್ಲ್ಯೂಃ 04, ಪಿ.ಡಬ್ಲ್ಯೂಃ 02**

ಸಾಕ್ಷಿದಾರರ ಹೆಸರು : ಯೋಗೇಶ
ತಂದೆಯ ಹೆಸರು : ತಿಮ್ಮಯ್ಯ ನಾಯ್ಕ
ವಯಸ್ಸು : 34 ವರ್ಷ
ಉದ್ಯೋಗ : ಸಂಟ್ರಿಂಗ್ ಕೆಲಸ
ವಾಸ್ತವ್ಯ : ಜಾಲಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/03/2025**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿ. 04.10.2024 ರಂದು ಮಧ್ಯಾಹ್ನದ ಸಮಯದದಲ್ಲಿ ಆಸರ್ಕೇರಿಯ ನಮ್ಮ ಸಂಬಂಧಿಕರ ಮದುವೆಯು ಆಸರ್ಕೇರಿ ದೇವಸ್ಥಾನದಲ್ಲಿ ಇತ್ತು. ಅಲ್ಲಿ ನಾನು ಮತ್ತು ಚಾಸಾ 1 ರವರು ಮದುವೆಯ ಮಂಟಪದಲ್ಲಿ ಊಟ ಮಾಡಿಕೊಂಡು ಮಧ್ಯಾಹ್ನ 2.15 ಗಂಟೆಯ ಸಮಯಕ್ಕೆ ಭಟ್ಕಳದಿಂದ ತಲಗೆರಿಗೆ ನನ್ನ ಮೊಟಾರು ಸೈಕಲ್ ನಂಬ್ರ ಕೆಎ.47.ಡಬ್ಲೂ.6970 ನೇದರಲ್ಲಿ ಹೋಗುತ್ತಿದ್ದೇವು. ಮೊಟಾರು ಸೈಕಲ್ ನ್ನು ಚಾಸಾ 1 ರವರು ಚಲಾಯಿಸುತ್ತಿದ್ದು ನಾನು ಹಿಂಬದಿ ಸವಾರನಾಗಿ ಪ್ರಯಾಣ ಮಾಡುತ್ತಿದ್ದೇನು. ಆ ಸಮಯದಲ್ಲಿ ಜಾಲಿ ಕೋಲಾ ಗ್ರೌಂಡ್ ಕ್ರಾಸ್ ಹತ್ತಿರ ಮಧ್ಯಾಹ್ನ 2.30 ರ ಸಮಯಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿತನು ಅತೀ ವೇಗ ಮತ್ತು ನಿಶ್ಕಾಳಜಿತನದಿಂದ ತನ್ನ ಮೊಟಾರು ಸೈಕಲ್ ನಂಬ್ರ ಕೆಎ.37.ಆರ್.1403 ನೇದರಲ್ಲಿ ಚಾಸಾ 7 ರವರನ್ನು ಹಿಂದುಗಡೆ ಕುಳಿಸಿಕೊಂಡು ಬಂದು ನಮ್ಮ ವಾಹನಕ್ಕೆ ಢಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಬಲಗಾಲಿನ ಪಾದದ ಗಂಟಿಗೆ ತೀವ್ರವಾದ ಗಾಯವಾಗಿ ರಕ್ತ ಬಂದು ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದ್ರಿ ಅಪಘಾತವು ಮೋಟಾರು ಸೈಕಲ್ ಸವಾರ ಆರೋಪಿತ ನಿಶ್ಕಾಳಜಿತನ ಮತ್ತು ಅತೀ ವೇಗದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಎಲ್ಲಾ ವಿಷಯಗಳ ಬಗ್ಗೆ ಅರಿವಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 3035/2024**

**ಸಾಕ್ಷಿಃ ಸಿಡಬ್ಲ್ಯೂಃ, ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು :
ತಂದೆಯ ಹೆಸರು :
ವಯಸ್ಸು : ವರ್ಷ
ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ
ವಾಸ್ತವ್ಯ :

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/03/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.07.2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕ ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿರ್ವಹಿಸಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಯು ಹೆಚ್ ಎನ್ ವಕೀಲರಿಂದ,**

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸ್ವದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 2056/2024**

**ಸಿ.ಡಬ್ಲ್ಯೂಃ 03, ಪಿ.ಡಬ್ಲ್ಯೂಃ 03**

| | | |
|---|---|---|
| ಸಾಕ್ಷಿದಾರರ ಹೆಸರು | : | ರಮೇಶ |
| ತಂದೆಯ ಹೆಸರು | : | ಮಾಸ್ತಿ ಗೊಂಡ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಚಾಲಕ |
| ವಾಸ್ತವ್ಯ | : | ಸರ್ಪನಾಕಟ್ಟೆ ಯಲ್ವಡಿಕೌರ್, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ನಾನು ಪೊಲೀಸ್ ಠಾಣೆಯಲ್ಲಿ ಖಾಲಿ ಹಾಳೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 15.06.2024 ರಂದು ಪೊಲೀಸರು ಪಂಚನಾಮೆಗೆ ಕರೆದಿರುತ್ತಾರೆ. ಠಾಣಾವಧಿಯಲ್ಲಿ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 3 ರವರು ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ. ಆರೋಪಿತರು ಎರಡು ಕೋಣಗಳನ್ನು ಭಟ್ಕಳ ಕಡೆಯಿಂದ ಬೈಲೂರು ಕಡೆಗೆ ಸಾಗಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರಲ್ಲಿ ಯಾವುದೇ ಪಾಸ್ ಅಥವಾ ಪರ್ಮಿಟ್ ಇದರ ಬಗ್ಗೆ ಪೊಲೀಸರು ಹೇಳಿದ್ದರು ಎಂದರೆ ಸರಿಯಲ್ಲ. ಎರಡು ಕೋಣಗಳನ್ನು ಹಿಂಸಾತ್ಮಕವಾಗಿ ಕಟ್ಟಲಾಗಿತ್ತು ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ಪಂಚನಾಮೆ ತಯಾರಿಸಿ ನನ್ನ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ಕಪ್ಪು ಬಣ್ಣದ ಎರಡು ಕೋಣಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಹಾಗೂ ಮಹೀಂದ್ರ ಬ್ಯೂಲೆರೋ ಪಿಕ್ ಅಪ್ ವಾಹನದ ಸಂಖ್ಯೆ ಕೆಎ. 47. ಎ. 1683 ನ್ನು ಜಪ್ತುಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ

ಪಂಚನಾಮೆಯು ಅದೇ ದಿನ ಬೆಳಿಗ್ಗೆ 5 ರಿಂದ 6.45 ಗಂಟೆಯವರೆಗೆ ಪಂಚನಾಮೆ ಮಾಡಿ ಸಹಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಪರಿಚಯ ಇದ್ದನ್ನು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ.,ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2056/2024**

**ಸಿ.ಡಬ್ಲ್ಯೂಃ02, ಪಿ.ಡಬ್ಲ್ಯೂಃ 02**

ಸಾಕ್ಷಿದಾರರ ಹೆಸರು : ಪರಮೇಶ್ವರ

ತಂದೆಯ ಹೆಸರು : ಮಂಜುನಾಥ ಗೊಂಡ

ವಯಸ್ಸು : 34 ವರ್ಷ

ಉದ್ಯೋಗ : ಮೀನುಗಾರಿಕೆ

ವಾಸ್ತವ್ಯ : ಸರ್ಪನಾಕಟ್ಟೆ, ಯಲ್ವಡಿಕೌರ್, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 15.06.2024 ರಂದು ಪೊಲೀಸರು ಪಂಚನಾಮೆಗೆ ಕರೆದಿರುತ್ತಾರೆ. ಠಾಣಾವಧಿಯಲ್ಲಿ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 3 ರವರು ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ. ಆರೋಪಿತರು ಎರಡು ಕೋಣಗಳನ್ನು ಭಟ್ಕಳ ಕಡೆಯಿಂದ ಬೈಲೂರು ಕಡೆಗೆ ಸಾಗಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರಲ್ಲಿ ಯಾವುದೇ ಪಾಸ್ ಅಥವಾ ಪರ್ಮಿಟ್ ಇದರ ಬಗ್ಗೆ ಪೊಲೀಸರು ಹೇಳಿದ್ದರು ಎಂದರೆ ಸರಿಯಲ್ಲ. ಎರಡು ಕೋಣಗಳನ್ನು ಹಿಂಸಾತ್ಮಕವಾಗಿ ಕಟ್ಟಲಾಗಿತ್ತು ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ಪಂಚನಾಮೆ ತಯಾರಿಸಿ ನನ್ನ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ಕಪ್ಪು ಬಣ್ಣದ ಎರಡು ಕೋಣಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಹಾಗೂ ಮಹೀಂದ್ರ ಬ್ಲೂಲೆರೋ ಪಿಕ್ ಅಪ್ ವಾಹನದ ಸಂಖ್ಯೆ ಕೆಎ. 47. ಎ. 1683 ನ್ನು ಜಪ್ತುಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯು ಅದೇ ದಿನ ಬೆಳಿಗ್ಗೆ 5 ರಿಂದ 6.45 ಗಂಟೆಯವರೆಗೆ ಪಂಚನಾಮೆ ಮಾಡಿ ಸಹಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಪರಿಚಯ ಇದ್ದನ್ನು

ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ.,ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2613/2024**

**ಸಿ.ಡಬ್ಲ್ಯೂ 01 , ಪಿ.ಡಬ್ಲ್ಯೂ 01**

ಸಾಕ್ಷಿದಾರರ ಹೆಸರು : ಕೃಷ್ಣ

ತಂದೆಯ ಹೆಸರು : ದಿ. ಎಮ್. ಶಂಕರ್

ವಯಸ್ಸು : 56 ವರ್ಷ

ಉದ್ಯೋಗ : ಅಬಕಾರಿ ಉಪ ನಿರೀಕ್ಷಕರು, ಉಡುಪಿ

ವಾಸ್ತವ್ಯ : ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿ.06.02.2024 ರಿಂದ ದಿ.10.06.2024 ರವರೆಗೆ ಭಟ್ಕಳ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ದಿ.02.04.2024 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಮಾನ್ಯ ಅಬಕಾರಿ ಜಂಟಿ ಆಯುಕ್ತರು ಮಂಗಳೂರು ವಿಭಾಗ ಮತ್ತು ಅಬಾಕಾರಿ ಆಯುಕ್ತರು ಕಾರವಾರ ಮತ್ತು ಅಬಕಾರಿ ಉಪಅಧೀಕ್ಷರು ಹೊನ್ನಾವರ ವಿಭಾಗ ಹೊನ್ನಾವರ ಇವರುಗಳ ನಿರ್ದೇಶನ ಮತ್ತು ಮಾರ್ಗದಶನದ ಮೇರೆಗೆ 2024 ರ ಲೋಕ ಸಭಾ ಚುನಾವಣೆಯ ಬಗ್ಗೆ ಅಕ್ರಮ ಅಬಕಾರಿ ಅವ್ಯಾವಹಾರಗಳನ್ನು ನಿಗ್ರಹಿಸುವ ಬಗ್ಗೆ ನಾನು ಮತ್ತು 3 ರವರೊಂದಿಗೆ ಸರಕಾರಿ ದ್ವಿಚಕ್ರ ವಾಹನದ ಸಂಖ್ಯೆ ಕೆಎ.30.ಜಿ.678 ಮತ್ತು ಚಾಸಾ 2 ರವರು ತಮ್ಮ ಸ್ವಂತ ವಾಹನದಲ್ಲಿ ಒಟ್ಟಾಗಿ ನಾವು ಭಟ್ಕಳ ತಾಲೂಕಿನ ಸಾಗರ ರಸ್ತೆಯ ಗುಲ್ಮಿ ಸೆತುವೆಯ ಬಳಿ ರಸ್ತೆಗಾವಲು ಸಾಧಾರಣ ರಾತ್ರಿ 9.15 ಗಂಟೆ ಸಮಯದಲ್ಲಿ ಗುಲ್ಮಿ ಕ್ರಾಸ್ ಕಡೆಯಿಂದ ಒಂದು ಕಪ್ಪು ಬಣ್ಣದ ದ್ವಿಚಕ್ರ ವಾಹನ ಹೋಗುವುದನ್ನು ನಮ್ಮ ಸಿಬ್ಬಂದಿಯವರು ನೋಡಿದಾಗ ಅದರಲ್ಲಿ ಎರಡು ಬಿಳಿ ಬಣ್ಣದ ಚೀಲವನ್ನು ಸ್ಕೂಟರ್ ನ ಕಾಲು ಇಡುವ ಜಾಗದಲ್ಲಿ ಹೊಂದಕೊಂಡು ಸಾಗಾಣಿಕೆ ಮಾಡುತ್ತಿರುವುದನ್ನು ಕಂಡು ನಂತರ ನಾವುಗಳು ಆ ವಾಹನವನ್ನು ಗುಲ್ಮಿ ಕಡೆಯ ಹೋಗುವ ರಸ್ತೆಯಿಂದ ಹಿಂಬಾಲಿಸಿಕೊಂಡು ಹೋಗುತ್ತಿರುವ ಸಮಯದಲ್ಲಿ ಎದುರಿದ್ದ ದಿವ್ವಚಕ್ರ ವಾಹನ ಹತ್ತಿರ ಬರುವಾಗಲೆ ಆತನು ತನ್ನ ಸ್ಕೂಟರ್ ನ್ನು ಬದಿಯಲ್ಲಿ ರಬಸದಿಂದ ಇಳಿದು ಸ್ಕೂಟರ್ ನ್ನು ಬಿಟ್ಟು ಪಕ್ಕದ ಕಾಡಿನಲ್ಲಿ ಓಡಿ ಹೋಗುತ್ತಿರುವಾಗ ನಮ್ಮ ಸಿಬ್ಬಂದಿಯವರು ನಮ್ಮ ದ್ವಿಚಕ್ರ ಲೈಟ್ ನಿಂದ ಓಡಿಹೋದ ವ್ಯಕ್ತಿಯು ಸಾಧಾರಣ 40-50 ವರ್ಷದ ವಯಸ್ಸಿನವರಾಗಿದ್ದು , ಉದ್ದ ತೋಳಿನ ಬಿಳಿ ಶರ್ಟ್ ಮತ್ತು ಹಸಿರು ಬಣ್ಣದ ಲುಂಗಿಯನ್ನು ಧರಿಸಿದ್ದರು. ಕತ್ತಲೆ ಹಾಗೂ ಕಾಡು ಜಾಗವಾಗಿದ್ದರಿಂದ ಓಡಿ ಹೋದ ವ್ಯಕ್ತಿಯನ್ನು ಹಿಡಿಯಲು ಸಾಧ್ಯವಾಗಲಿಲ್ಲ. ನಂತರ ವಾಹನವನ್ನು ಶೋಧಿಸುವ ಬಗ್ಗೆ ಕರ್ನಾಟಕ ಅಬಕಾರಿ ಖಾಯ್ದೆ 1965 ಕಲಂ 54 ರ ಪ್ರಕಾರ

ಶೋಧನಾ ಸಮ್ಮುಚಿ ವಾರಂಟ್ ನ್ನು ತಯಾರಿಸಿ , ನಡೆಸುವ ಮಹಜರಿಗೆ ಪಂಚರಿಗಾಗಿ ದಾರಿ ಹೋಕರನ್ನು ಸ್ವಲ್ಪ ಕಾದು ಮತ್ತು ಕೆಲವು ವಾಹನ ಸವಾರುಗಳನ್ನು ನಿಲ್ಲಿಸಿದ್ದರು ಸಹ ಅವರು ನಿಲ್ಲಿಸಲಿಲ್ಲ . ಆಗ ಸಮಯ 9.40 ಆಗಿತ್ತು. ನಂತರ ವಾಹನವನ್ನು ನಾನು ಶೋಧಿಸಲಾಗಿ ಇಲಾಖಾ ಪಂಚರ ಸಮಕ್ಷಮ ದ್ವಿಚಕ್ರ ವಾಹನದ ಕಾಲಿಡುವ ಕಳಗಡೆ ಎರಡು ಬಿಳಿಯ ಬಣ್ಣದ ವಿಮಲ್ ಕಂಪೆನಿಯ ಚೀಲವಿದ್ದು , ಈ ಚೀಲವನ್ನು ನುಮ್ಮ ಸಿಬ್ಬಂದಿಯವರಾದ ಚಾಸಾ 2 ಮತ್ತು 3 ರವರು ದ್ವಿಚಕ್ರವಾಹನದಿಂದ ಕೆಳಗೆ ಇಳಿಸಿ ಒಂದು ಚೀಲವನ್ನು ಕ್ರಮ ಸಂಖ್ಯೆ 1 ಎಂದು ಗುರುತಿಸಿಕೊಂಡರು , ನಂತರ ಸದರಿ ಚೀಲವನ್ನು ಬಿಡಿಸಿ ನೋಡಲಾಗಿ ಅದರಲ್ಲಿ ಹೈವರ್ಡ್ ವಿಸ್ಕಿ 180 ಎಮ್ ಎಲ್ ಸಾಮರ್ಥ್ಯದ 48 ಸೆಚೆಟ್ಸ್ ಹಾಗೂ ಇನ್ನೊಂದು ಬಾಕ್ಸಿನಲ್ಲಿ ಹೈವರ್ಡ್ ವಿಸ್ಕಿ 90 ಎಮ್ ಎಲ್ ಸಾಮರ್ಥ್ಯದ 96 ಸೆಚೆಟ್ಸ್ ಇರುತ್ತದೆ. ಸದರಿ ಎರಡು ಬಾಕ್ಸ್ ಗಳನ್ನು ಕ್ರಮ ಸಂಖ್ಯೆ "ಎ" ಮತ್ತು "ಬಿ" ಎಂದು ಗುರುತಿಸಲಾಯಿತು. ನಂತರ ಇನ್ನೊಂದು ಚೀಲವನ್ನು ಕ್ರಮ ಸಂಖ್ಯೆ 2 ಎಂದು ಗುರುತಿಸಿಕೊಂಡರು. ಅದನ್ನು ತೆಗೆದು ನೋಡಲಾಗಿ ಅದರಲ್ಲಿ 650 ಮಿಲಿ ಸಾಮರ್ಥ್ಯದ Royal Challenge strong ಬಿಯರ್ 12 ಬಾಟಲ್ ಗಳು ಇರುತ್ತದೆ. ಅದನ್ನು ಕ್ರಮ ಸಂಖ್ಯೆ " ಸಿ " ಎಂದು ಗುರುತಿಸಲಾಯಿತು. ಅದರಲ್ಲಿ ಇನ್ನೊಂದು ಕಪ್ಪು ಬಣ್ಣದ ಒಂದು ಪ್ಲಾಸ್ಟಿಕ್ ಚೀಲವಿದ್ದು ಅದರಲ್ಲಿ 180 ಮಿಲಿ ಸಾಮರ್ಥ್ಯದ Original Choice 20 ಮಧ್ಯ ತುಂಬಿದ ಸೆಚೆಟ್ಸ್ ಇರುತ್ತದೆ. ಅದೇ ರೀತಿಯಾಗಿ .650 ಮಿಲಿ ಸಾಮರ್ಥದ Royal Challenge strong ಬಿಯರ್ 3 ಬಾಟಲ್ ಗಳು ಇರುತ್ತದೆ. ಅದನ್ನು ಕ್ರಮಸಂಖ್ಯೆ "ಡಿ" ಎಂದು ಗುರುತಿಸಲಾಯಿತು. ಒಟ್ಟು 19.080 ಲಿಟರ್ ಮಧ್ಯ, ಬಿರು 9.750 ಲಿಟರ್ ಇತ್ತು. ನಂತರ ಈ ಪ್ರಕರಣದ ಬಗ್ಗೆ ಘೋರ ಪ್ರಕರಣವೆಂದು ನಾವುಗಳು ತೀರ್ಮಾನಿಸಿ ಕರ್ನಾಟಕ ಅಬಕಾರಿ ಕಾಯ್ದೆ ಯ ಪ್ರಕಾರ ಓಡಿ ಹೋದ ವ್ಯಕ್ತಿಯ ಬಗ್ಗೆ ತೀರ್ಮಾನಿಸಿ , ನಂತರ ವಾಹನ ಸಿಡಿಯ ಕೆಳಗಡೆ ಇರುವ ಡಿಕ್ಕಿಯನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಆರ್ . ಸಿ. ನಕಲು ಪ್ರತಿ ಇತ್ತು. ಅದನು ನೋಡಲಾಗಿ ಅದರಲ್ಲಿ ಹೆಸರು ನರಸಿಂಹ ನಾರಾಯಣ ಮೋಗೆರ , ನಾಗಪ್ಪನ ಮನೆ , ಹೆಬಳೆ , ಗಾಂಧಿನಗರ , ಭಟ್ಕಳ ತಾಲೂಕು ಎಂದು ನಮೂದಿತವಾಗಿತ್ತು. ನಂತರ ವಾಹನದ ಇಂಜಿನ್ ನಂಬ್ರ ಮತ್ತು ಚೆಸ್ ನಂಬರನ್ನು ನಮ್ಮ ಸಿಬ್ಬಂಧಿ ಪರಿಶೀಲಿಸಿ ದ್ವಿಚಕ್ರ ವಾಹನ ಕಪ್ಪು ಬಣ್ಣದ Hero ಕೆಂಪೆನಿಯ ಮೆಸ್ಟ್ರೊ ಆಗಿತ್ತು. ಅದರ ನೊಂದಣಿ ಸಂಖ್ಯೆ ಕೆಎ.42.ಕ್ಯೂ.2181 ಆಗಿತ್ತು. ನಂತರ ಜಪ್ತುಪಡಿಸಿಕೊಂಡು ಮಧ್ಯದಲ್ಲಿ 180 ಮಿಲಿ ಸಾಮರ್ಥ್ಯದ High wards Cheers whisky ಯ 10 ಸೆಚೆಟ್ಸ್ ಗಳನ್ನು ಮತ್ತು 90 ಮಿಲಿ ಸಾಮರ್ಥ್ಯದ High wards Cheers whisky ಯ 10 ಸೆಚೆಟ್ಸ್ ಗಳನ್ನು ಅದೇ ರೀತಿಯಾಗಿ 90 ಮಿಲಿ ಸಾಮರ್ಥ್ಯದ Original Choice 10 ಸೆಚೆಟ್ಸ್ ಗಳನ್ನು ಹಾಗೂ .650 ಮಿಲಿ ಸಾಮರ್ಥ್ಯದ Royal Challange strong ಬಿಯರ್ ನ 12 ಬಾಕ್ಸ್ ಗಳನ್ನು , ಎಲ್ಲಾವನ್ನು ಪ್ರತ್ಯೇಕವಾಗಿ ಒಂದು ಬಿಳಿ ಬಟ್ಟೆಯನ್ನು ಸುತ್ತಿ ದಾರದಿಂದ ಕಟ್ಟಿ ಮೊಹರನ್ನು ಮಾಡಿ ಗುರುತಿನ ಚೀಟಿಯನ್ನು ಅಂಟಿಸಲಾಯಿತು. ಪ್ರಕರಣವನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 12, 14, 15 ಮತ್ತು ಇದೇ ಕಾಯ್ದೆಯ 32

(1) , 38 (ಎ) ಮತ್ತು 48(ಎ) ಪ್ರಕಾರ ದಾಖಲಿಸಲಾಯಿತು. ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಶೋಧನಾ ಸಮ್ಮುಚಿತ ವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಆರ್.ಟಿ.ಒ ರವರಿಗೆ ನೀಡಿರುವ ನೋಟಿಸನ್ನು ನಿಪಿ.5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಎಫ್.ಎಸ್.ಎಲ್.ಗೆ ಕಳುಸಿರುವ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.ಸದರಿ ಮಹಜರನ್ನು ರಾತ್ರಿ 9.40 ರಿಂದ 11.00 ಗಂಟೆಯವರೆಗೆ ಬೈಕಿನ ಲೈಟಿನಿಂದ ಗಜಾನನ ರವರು ಬರೆದಿದ್ದರು. ಶೋಧನಾ ಸಮ್ಮುಚಿತವನ್ನು ನಾನೇ ಬರೆದಿರುತ್ತೇನೆ. ಸ್ವತ್ತು ಸ್ವಾಧೀನತ ಪಟ್ಟಿಯನ್ನು ಕಛೇರಿಯ ಸಿಬ್ಬಂದಿಯಾದ ಪ್ರದೀಪ್ ಇವರು ಬರೆದಿರುತ್ತಾರೆ. ಘಟನಾ ಸ್ಥಳದ ಚೆಕ್ ಬಂಧಿ ಪೂರ್ವಕ್ಕೆ ಸಾಗರು ಕಡೆ ಹೋಗುವ ರಸ್ತೆ , ಪಶ್ಚಿಮಕ್ಕೆ ಭಟ್ಕಳ ಕಡೆಗೆ ಹೋಗುವ ರಸ್ತೆ, ದಕ್ಷಿಣಕೆ ಗುಲ್ಮಿ ಕಡೆಗೆ ಹೋಗುವ ರಸ್ತೆ ಮತ್ತು ಉತ್ತರಕ್ಕೆ ಅರಣ್ಯ ಪ್ರದೇಶ ಇರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಜಪ್ತುಪಡಿಸಿಕೊಂಡಿರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ. ಘಟನಾ ಸ್ಥಳವನ್ನು ಗಜಾನನ ರವರು ತಮ್ಮ ಸ್ವಂತ ಮೊಬೈಲಿನಿಂದ ಚಿತ್ರೀಕರಣ ಮಾಡಿರುತ್ತಾರೆ. ನಂತರ ವಶಪಡಿಸಿಕೊಂಡ ಸ್ವತ್ತುಗಳನ್ನು ಹಾಗೂ ಮೊಹರನ್ನು ಇಲಾಖಾ ವಶಕ್ಕೆ ಪಡೆದುಕೊಂಡು ಕಛೇರಿಗೆ ಬಂದಿರುತ್ತೇವೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಜೆ.ಎನ್. ವಕೀಲರಿಂದ,**

3. ಭಟ್ಕಳದಲ್ಲಿ ನಾನು 5 ತಿಂಗಳ ಕಾಲ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ನನ್ನ ಕರ್ತವ್ಯದ ಲ್ಲಿ ದಾಖಲಿರುವ ಎಲ್ಲಾ ಪ್ರಕರಣಗಳಲ್ಲಿ ಚಾಸಾ 2 ಮತ್ತು 3 ರವರೆ ಸಾಕ್ಷಿಗಳಾಗಿರುತ್ತಾರೆ. ಸದರಿ ಪ್ರಕರಣದಲ್ಲಿ ನಾನು , ಚಾಸಾ 2 ಮತ್ತು 3 ರವರು ಪಂಚಸಾಕ್ಷಿಗಳಾಗಿದ್ದೇವೆ. ಸದರಿ ಪ್ರಕರಣ ಪಿರ್ಯಾದಿದಾರರು ನಾನೇ ಆಗಿದ್ದೇನೆ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಮನೆಗಳು ಇರಬಹುದು ಆದರೂ ದೂರ ಇರಬಹುದು. ಘಟನಾ ಸ್ಥಳದ ಕುರಿತು ವಾಸ್ತವ್ಯ ಚಿತ್ರ ನನಗೆ ಗೊತ್ತಿಲ್ಲ. 8.30 ಗಂಟೆಗೆ ಗಸ್ತು ಕರ್ತವ್ಯಕ್ಕೆ ಹೋಗಿದ್ದೇವೆ. ನನ್ನ ಜೊತೆ ಚಾಸಾ 2 ಮತ್ತು 3 ರವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಇಲಾಖಾ ಬೈಕಿನಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದೇವೆ. ಆರೋಪಿಯನ್ನು ಈ ಮೊದಲು ನಾನು ನೋಡಿದ್ದೇನೆ. ಆರೋಪಿಯನ್ನು ಬೆನ್ನತ್ತಿ ಚಾಸಾ 2 ರವರು ಹೋಗಿದ್ದರು. 5 ನಿಮಿಷಗಳ ನಂತರ ಮುದ್ದೆ ಮಾಲುಗಳನ್ನು ಜಪ್ತುಮಾಡಿದ್ದೇವೆ. ಮುದ್ದೆ ಮಾಲುಗಳನ್ನು ಜಪ್ತುಮಾಡಿರುವ ಕಾಲಕ್ಕೆ ಛಾಯಾ ಚಿತ್ರಗಳನ್ನು ತೆಗೆದಿದ್ದೇವೆ. ಸ್ಯಾಂಪಲ್ ಅನ್ನು ತೆಗೆಯುವ ಕಾಲಕ್ಕೆ ಫೋಟೋಗಳನ್ನು ಮಾಡಿದ್ದೇವೆ.

ದಾಳಿಗೆ ಸಮವಸ್ತ್ರದಲ್ಲಿ ಹೋಗಿಲ್ಲ. ಪಂಚನಾಮೆಯನ್ನು ಚಾಸಾ 2 ರವರು ನನ್ನ ಮಾಹಿತಿಯ ಮೇರೆಗೆ ಬರೆದಿದ್ದಾರೆ. ಪಂಚನಾಮೆ ಬರೆಯುವ ಪೂರ್ವದಲ್ಲಿ ನಮ್ಮ ಅಂಗಶೋಧನೆ ಮಾಡಿಕೊಂಡಿದ್ದೇವೆ ಆದರೆ ಪ್ರತ್ಯೇಕ ಪಂಚನಾಮೆಯನ್ನು ಮಾಡಿಲ್ಲ ಮತ್ತು ಜಪ್ತುಪಂಚನಾಮೆಯಲ್ಲಿ ಅದನ್ನು ಉಲ್ಲೇಖ ಮಾಡಿಲ್ಲ. ಪಂಚನಾಮೆ ಕಾಲಕ್ಕೆ ಬೇಕಾಗುವ ಸಾಮುಗ್ರಿಗಳು ನಮ್ಮ ಬಳಿ ಇದ್ದವು. ಘಟನಾ ಸ್ಥಳದಲ್ಲಿ ಬಿಳಿ ಬಣ್ಣದ 2 ಚೀಲಗಳು ಇದ್ದವು. ಬಿಳಿ ಬಣ್ಣದ ಚೀಲಗಳಲ್ಲಿ ಟೆಟ್ರಾ ಪ್ಯಾಕಟ್ ಗಳು ಇದ್ದವು. ಯಾವೆಲ್ಲಾ ಚೀಲಗಳಲ್ಲಿ ಎಷ್ಟು ಪ್ಯಾಕೇಟ್ ಗಳು ಇದ್ದವು ಎಂದು ಪ್ರತ್ಯೇಕವಾಗಿ ಪಂಚನಾಮೆಯನ್ನು ಮಾಡಿಲ್ಲ. 180 ಮಿಲಿ ಸಾರ್ಮರ್ಥ್ಯದ Highward cheers whisky 10 , 90 ಮಿಲಿ ಸಾರ್ಮರ್ಥ್ಯದ Highward cheers whisky 10, 90 ಮಿಲಿ ಸಾರ್ಮರ್ಥ್ಯದ Original Choice drygine 10 ಮತ್ತು 650 ಮಿಲಿ ಸಾರ್ಮರ್ಥ್ಯದ Royal Challange Strong ಬಿಯರ್ 12 ಅನ್ನು ಪರೀಕ್ಷೆಗಾಗಿ ತೆಗೆಯಲಾಯಿತು. ಪಂಚನಾಮೆಯ ಕಾಲಕ್ಕೆ ಯಾವೆಲ್ಲಾ ಬಾಕ್ಸಿನಲ್ಲಿ ಎಷ್ಟು ಟ್ರೆಟ್ರಾ ಪ್ಯಾಕೆಟ್ ಗಳು ಇದ್ದವು ಎಂದು ಉಲ್ಲೇಖ ಮಾಡಿದ್ದೇವೆ. ಜಪ್ತುಮಾಡಿರುವ ಮುದ್ದೆ ಮಾಲು ಸರ್ಕಾರದಿಂದ ಮಂಜೂರಾದ ಮಧ್ಯೆ ಆಗಿದೆ. ಸದರಿ ಪ್ರಥಮ ವರ್ತಮಾನ ವರದಿ ಸಂಖ್ಯೆಯು ಮತ್ತೊಂದು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸರ್ಕಾರಕ್ಕೆ ಅಂಕಿ–ಸಂಖ್ಯೆ ತೋರಿಸಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಠಾಣೆಯ ಸೃಷ್ಠಿ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು :

ತಂದೆಯ ಹೆಸರು :

ವಯಸ್ಸು : ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.07.2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿರ್ವಹಿಸಿರುತ್ತೇನೆ.

ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ- ಎಂದು , ಸಾಕ್ಷಿಯ ಸಹಿಯನ್ನು ನಿಪಿ- ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-3 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ / ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1416/2023**

**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಸೈಯದ್ ಇದಾಯಿತುಲ್ಲಾ

ತಂದೆಯ ಹೆಸರು : ಸೈಯದ್ ಅಮೀರ್

ವಯಸ್ಸು : 56 ವರ್ಷ

ಉದ್ಯೋಗ : ತಂಜೀಮ್ ಸಂಸ್ಥೆಯಲ್ಲಿ ಕ್ಲರ್ಕ

ವಾಸ್ತವ್ಯ : ಬಸ್ತಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಚಾಸಾ –1 ರವರ ಮನೆಯಲ್ಲಿ ಬಾಡಿಗೆಗೆ ಇದ್ದು ಅವರ ಮನೆಯೊಳಗೆ ಜಾಗದ ವಿಷಯಕ್ಕೆ ದಿಃ 29.10.2023 ರಂದು ಗಲಾಟೆ ಆಗುತ್ತಿತ್ತು. ನಂತರ ಪೊಲೀಸರು ಬಂದಿದ್ದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು 4 .00 ರಿಂದ 5.00 ಗಂಟೆಯವರೆಗೆ ಮಾಡಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನಾನು ಪಿಯುಸಿ ವರೆಗೆ ಓದಿರುತ್ತೇನೆ. ನಾನು ನನ್ನ ಕೈ ಯಲ್ಲಿ ಪಂಚನಾಮೆಯ ದಿನಾಂಕಗಳನ್ನು ಬರೆದುಕೊಂಡು ಬಂದಿರುತ್ತೇನೆ. ಪಂಚನಾಮೆಯ ದಿನಾಂಕವನ್ನು ನೋಡದೇ ಹೇಳಲು ಆಗುವುದಿಲ್ಲ. ಪಿರ್ಯಾದಿದಾರರು ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿದ್ದಾರೆ. 2 ದಾಖಲೆಗಳಿಗೆ ನಾನು ಸಹಿಯನ್ನು ಪಿರ್ಯಾದಿಯ ಮನೆಯ ಹತ್ತಿರ ಮಾಡಿರುತ್ತೇನೆ. ಗುನ್ಹಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆ ಇವೆ. ಗಲಾಟೆಯು ದಿಃ 29.10.2023 ರಂದು ಆಗಿದೆ ಎಂದು ಪಂಚನಾೆಮಯಲ್ಲಿ ಬರೆದಿರುತ್ತಾರೆ. ನಾನು ಪಂಚನಾಮೆಯನ್ನು ಓದಿ ನೋಡಿರುತ್ತೇನೆ. ದಿಃ 29.10.2023 ರಂದು ಗಲಾಟೆ ಆದದನ್ನು ನಾನು ನೋಡಿರುತ್ತೇನೆ. ದೂರುದಾರರು ಜಮಾತಿನ ಸ್ಕ್ರೇಟರಿ ಆಗಿದ್ದಾರೆ. ಸದರಿ ಪ್ರಕರಣದ ಪಿರ್ಯಾದಿದಾರರ ಮಾತು ಕೇಳಿ ಸುಳ್ಳಾಗಿ ಬರೆದ ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ಕೇಸ್ ಡೈರಿಯನ್ನು ನೋಡಿ ನಾನು ದಿನಾಂಕವನ್ನು ಬರೆದುಕೊಂಡು ಬಂದಿರುತ್ತೇನೆ. ಪಿರ್ಯಾದಿದಾರರ

ಹಾಗೂ ಪೊಲೀಸರ ಒತ್ತಾಯಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ಪಂಚನಾಮೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2006 /2022**

**ಸಾಕ್ಷಿಃ ಸಿಡಬ್ಲ್ಯೂಃ 5 , ಪಿ.ಡಬ್ಲ್ಯೂಃ 7**

ಸಾಕ್ಷಿದಾರನ ಹೆಸರು : ಲೋಕಪ್ಪ

ತಂದೆಯ ಹೆಸರು : ಸಿದ್ದಪ್ಪ ಕತ್ತಿ

ವಯಸ್ಸು : 29 ವರ್ಷ

ಉದ್ಯೋಗ : ಪೇದೆ , ಮೂರ್ಡೇಶ್ವರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 15/03/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು 2015 ನೇ ಇಸವಿಯಿಂದ 2023 ರ ಫೆಬ್ರುವರಿಯವರೆಗೆ ಪೇದೆಯಾಗಿ ಭಟ್ಕಳ ಶಹರ ಪೋಲೀಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 18.04.2022 ರಂದು ಚಾಸಾ – 1, 4 ರವರೊಂದಿಗೆ ನಾನು ಬೆಳಿಗ್ಗೆ 6.15 ಗಂಟೆಗೆ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ –1 ರವರಿಗೆ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಜಾಲಿ ರಸ್ತೆಯಿಂದ ಭಟ್ಕಳದ ಮುಖ್ಯ ರಸ್ತೆಯ ಕಡೆಗೆ ಒಮಿನಿ ವಾಹನ ಸಂಖ್ಯೆಃ ಕೆಎ 19 ಎಎ 560 ನೇದರಲ್ಲಿ ಆರೋಪಿಯು ಮಾಂಸ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಇರುತ್ತದೆ. ನಾನು ಚಾಸಾ –1 ರವರ ಜೊತೆಗೆ ಇದ್ದು ಅವರಿಗೆ ಸೂಕ್ತ ಸಹಾಯ ಮಾಡಿ ಚಾಸಾ –8 ರವರ ಆದೇಶದಂತೆ ಗುನ್ಹಾ ಸ್ಥಳದ ಹಾಗೂ ಜಪ್ತು ಪಂಚನಾಮೆ ಕಾಲಕ್ಕೆ ಪೊಟೋ ತೆಗೆದು ತನಿಖಾಧಿಕಾರಿಗೆ ಹಾಜರುಪಡಿಸಿದ್ದು ಈ ಬಗ್ಗೆ ಕಲಂ 65 ಬಿ ಹೇಳಿಕೆ ನೀಡಿರುತ್ತೇನೆ. ದನದ ಮಾಂಸ 80 ಕೆಜಿ ಇದ್ದು ಅಂದಾಜು ಮೌಲ್ಯ ರೂ. 80,000 ಇತ್ತು. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ಘಟನೆಯ ದಿನದಂದು ನಾನು ಪೆಟ್ರೋಲಿನ್ ಕರ್ತವ್ಯದಲ್ಲಿದ್ದು ಆ ಬಗ್ಗೆ ವರದಿಯನ್ನು ತನಿಖಾಧಿಕಾರಿಗೆ ನೀಡಿದ್ದು ಇರುತ್ತದೆ. ಘಟನೆಯ ದಿನ ಪಿರ್ಯಾದಿದಾರರಿಗೆ ಮಾಹಿತಿ ಬಂದಾಗ ನಾನು ಅವರ ಜೊತೆಯಲ್ಲಿ ಇದ್ದೇನು. ಬಾತ್ಮಿದಾರರು ಪೋನ್ ಮೂಲಕ ಮಾಹಿತಿ ನೀಡಿರುತ್ತಾರೆ.

ಎಂದರೆ ಸರಿಯಲ್ಲ. ಚಾಸಾ –8 ರವರು ನನಗೆ ಪೊಟೋ ತೆಗೆಯಲು ಆದೇಶ ಮಾಡಿದ್ದರು. ಪಂಚರನ್ನು ತನಿಖಾಧಿಕಾರಿಗಳು ಪೋನ್ ಮೂಲಕ ಕರೆದಿದ್ದರು. ಪಂಚರು ಯಾವ ಊರಿನವರು ಹಾಗೂ ಎಲ್ಲಿಯವರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಟೋವನ್ನು ಠಾಣೆಯ ಸೋನಿ

ಕಂಪನಿಯ ಕ್ಯಾಮೇರಾದಲ್ಲಿ ತೆಗೆದಿರುತ್ತೇನೆ. ಪೊಟೋ ತೆಗೆಯಲು ತರಭೇತಿ ಪಡೆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು ಹಾಜರುಪಡಿಸಿರುತ್ತಾರೆ. ಪೊಟೋವನ್ನು ಸ್ಟೂಡಿಯೋದಲ್ಲಿ ಪ್ರಿಂಟ್ ಹಾಕಿಸಿ ಸಿಡಿ ಮಾಡಿದ್ದು ಇರುತ್ತದೆ. ಗುನ್ಹಾ ಸ್ಥಳ ಭಟ್ಕಳದ ಜಾಲಿ ಕ್ರಾಸ್ ನಲ್ಲಿ ಬರುತ್ತದೆ. ನಾನು ಯಾವುದೇ ಪೊಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನನಗೆ ಗುನ್ಹಾ ಸ್ಥಳದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಸಹಾಯಾ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಪೊಟೋಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಲಂ 65 ಬಿ ಪ್ರಮಾಣಪತ್ರವು ನಮ್ಮ ಠಾಣೆಯ ಸೃಷ್ಟಿಯಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2150/2022**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ದೇವೆಂದ್ರ
ತಂದೆಯ ಹೆಸರು : ಜಟ್ಟಪ್ಪ ನಾಯ್ಕ
ವಯಸ್ಸು : 36 ವರ್ಷ
ಉದ್ಯೋಗ : ಮೀನುಗಾರಿಕೆ
ವಾಸ್ತವ್ಯ : ಮುಂಡಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮಧ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಛೆ ಇಲ್ಲ. ಪೊಲೀಸರು ನನ್ನಿಂದ ದೂರು ಮತ್ತು ಪಂಚನಾಮೆಗೆ ನನ್ನ ಸಹಿ ಪಡೆದಿದ್ದು ಆದರೆ ಸದರಿ ದಾಖಲೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೊಟೋ ತೆಗೆದಿದ್ದು ಅದನ್ನು ಯಾಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 29.05.2022 ರಂದು 10.30 ಗಂಟೆ ಸುಮಾರಿಗೆ ಚೌತಣಿಯ ಮಾರುತಿ ಬಿಲ್ಡಿಂಗ್ ಪ್ರೆಸ್ ಹತ್ತಿರ ನಾನು ಇರುವಾಗ ಇಬ್ಬರು ಆರೋಪಿತರು ಬೈಕಿನ ಮೇಲೆ ಬಂದು ನನಗೆ ಅಡ್ಡಗಟ್ಟಿ ಅವಾಚ್ಯ ಶಬ್ದದಿಂದ ಬೈದಿದ್ದರು ಎಂದರೆ ಸರಿಯಲ್ಲ. ಹರಿತವಾದ ಆಯುಧದಿಂದ ನನ್ನ ತಲೆ ಹಿಂಬದಿಗೆ ಹೊಡೆದು ರಕ್ತಗಾಯಪಡಿಸಿದ್ದರು ಎಂದರೆ ಸರಿಯಲ್ಲ. ನನಗೆ ಕೈಯಿಂದ ಮುಖ ಹಾಗೂ ಎದೆಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನ್ನ ಸ್ನೇಹಿತರು ಖಾಸಗಿ ವಾಹನದಲ್ಲಿ ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಉಪಚಾರಕ್ಕೆ ಕುಂದಾಪುರ ಸ್ಕ್ಯಾನಿಂಗ್ ಸೆಂಟರಿಗೆ ಹೋಗಿ ಸ್ಕ್ಯಾನಿಂಗ್ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 29.05.2022 ರಂದು ಚಾಸಾ –2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳವನ್ನು ಚಾಸಾ –

10 ರವರ ಸಮಕ್ಷಮ ನಾನು ತೋರಿಸಿ ಸ್ಥಳದಲ್ಲಿ ಪಂಚನಾಮೆ ತಯಾರಿಸಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೆ 6.00 ರಿಂದ 7.30 ರವರೆಗೆ ಸ್ಥಳದಲ್ಲಿ ಜರುಗಿಸಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಆರೋಪಿತರು ಕೃತ್ಯಕ್ಕೆ ಬಳಸಿದ ಸಿಲ್ವರ್ ಬಣ್ಣದ ಚಾಕುವನ್ನು ಪೊಲೀಸರು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕೃತ್ಯ ನಡೆದ ದಿನ ನಾನು ಧರಿಸಿದ್ದ ಟೀ ಶರ್ಟನ್ನು ಆ ಸಮಯದಲ್ಲಿ ಹಾಜರುಪಡಿಸಿದ್ದು ಅದು ಕೆಂಪು ಬಣ್ಣದಾಗಿದ್ದು ಎದೆಯ ಭಾಗಕ್ಕೆ ಮತ್ತು ಎಡಭುಜದ ಹತ್ತಿರ ಹರಿದಿದ್ದುನ್ನು ಪುರಾವೆಗಾಗಿ ಪೊಲೀಸರು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿದಂತಹ ಘಟನೆ ನಡೆದಿದ್ದರೂ ಸಹ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ.,ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2069/2022**

**ಸಾಕ್ಷಿಃ ಸಿಡಬ್ಲ್ಯೂಃ 9, ಪಿ.ಡಬ್ಲ್ಯೂಃ 9**

| | |
|---|---|
| ಸಾಕ್ಷಿದಾರನ ಹೆಸರು | : ಹೆಚ್ ಬಿ ಕುಡಗುಂಟಿ |
| ತಂದೆಯ ಹೆಸರು | : ಬಸಪ್ಪ ಕುಡಗುಂಟಿ |
| ವಯಸ್ಸು | : 57 ವರ್ಷ |
| ಉದ್ಯೋಗ | : ಪಿಎಸ್‌ಐ , ಮುಂಡಗೋಡ ಪೋಲಿಸ ಠಾಣೆ |
| ವಾಸ್ತವ್ಯ | : ಬೃಂದಾವನ ಲೇ ಔಟ್ , ಮುಂಡಗೋಡ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15 /03 /2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 08.09.2015 ರಿಂದ ದಿನಾಂಕಃ 31.01.2020 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 11.07.2020 ಬೆಳಿಗ್ಗೆ- 11.30 ಗಂಟೆಗೆ ಠಾಣೆಯಲ್ಲಿದ್ದಾಗ ಚಾಸಾ - 1 ರವರು ಠಾಣೆಗೆ ಹಾಜರಾಗಿ ಸರಕಾರದ ಪರವಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣೆಯ ಗುನ್ನಾ ಸಂಖ್ಯೆ 36/2020 ರಡಿಯಲ್ಲಿ ದಾಖಲಿಸಿ ಪ್ರ ವ ವರದಿಯನ್ನು ನ್ಯಾಯಾಲಕ್ಕೆ ನಿವೇದಿಸಿದ್ದು ಇರುತ್ತದೆ. ಪಂಚನಾಮೆ ಕಾಲಕ್ಕೆ ನನ್ನ ತಾಬಾಕ್ಕೆ ನೀಡಿದ 30 ಕೆಜಿ ಮಾಂಸವನ್ನು ಮುಂದಿನ ಕ್ರಮಕ್ಕಾಗಿ ಎಸಿ ಯವರಿಗೆ ನಿವೇದಿಸಿದ್ದು ಇರುತ್ತದೆ. ಸ್ಬಿಬಂದಿಗಳಾದ ಚಾಸಾ -4 , 5 ಮತ್ತು 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ -6 ರವರ ಕಲಂ 65 ಬಿ ಹೇಳಿಕೆ ಪಡೆದಿರುತ್ತೇನೆ. ವಶಪಡಿಸಿದ ಮಾಂಸದ ಪರಿಶೀಲನೆ ಮಾಡಿ ಪ್ರಮಾಣಪತ್ರ ನೀಡಲು ಪಶು ವೈಧ್ಯಾಧಿಕಾರಿ ಭಟ್ಕಳರವರಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಜಪ್ತು ಪಡಿಸಿದ ಮಾಂಸದ ವಿಲೇವಾರಿಗೆ ಎಸಿ ಕಚೇರಿಯವರು ಅನುಮತಿ ನೀಡಿದ್ದು ಇರುತ್ತದೆ. ವಶಪಡಿಸಿದ ಮಾಂಸದ ವಿಲೇವಾರಿಗಾಗಿ ಪುರಸಭೆಯ ಮುಖ್ಯಾಧಿಕಾರಿಗಳಿಗೆ ನಿವೇದಿಸಿದ್ದು ಅವರು ಇದಕ್ಕೆ ಅನುಮತಿ ನೀಡಿದ್ದು ಇರುತ್ತದೆ. ದಿಃ 15.07.2022 ರಂದು ಮಾಂಸ ವಿಲೇವಾರಿ ಮಾಡಿದ ಬಗ್ಗೆ ಪ್ರಮಾಣಪತ್ರ ನೀಡಿರುತ್ತಾರೆ. ದಿಃ

23.08.2020 ರಂದು ಪಶು ವೈಧ್ಯಾಕಾರಿಗಳು ನೀಡಿದ ಪ್ರಮಾಣಪತ್ರ ಪಡೆದಿರುತ್ತೇನೆ. ದಿಃ 02.10.2020 ರಂದು ಸದರಿ ಪ್ರಕರಣದ ಆರೋಪಿಗೆ ನೊಟೀಸು ನೀಡಿದ್ದು ಇರುತ್ತದೆ. ದಿಃ 03.10.2020 ರಂದು ಆರೋಪಿತರು ತನಿಖೆಗೆ ಹಾಜರಾಗಿ ಜಾಗದ ಬಗ್ಗೆ ಆರ್ ಟಿ ಸಿ ನೀಡಿದ್ದು ಇರುತ್ತದೆ. ಆರ್ ಟಿ ಸಿಯನ್ನು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ನಂತರ ಸಂಪೂರ್ಣ ತನಿಖೆ ಮುಗಿದ ಕಾರಣ ದೋಷಾರೆೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿದ್ದು ಇರುತ್ತದೆ.

3. ಸಾಕ್ಷಿಯು ವಿಸಿ ಮೂಲಕ ನಿಪಿ-1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಎಸಿ ಕಚೇರಿಯವರಿಗೆ ನೀಡಿದ ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪುರಸಭೆ ಭಟ್ಕಳರವರಿಗೆ ನೀಡಿದ ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 8 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ಚಾಸಾ -1 ರವರು ನಮ್ಮ ಅಂದಿನ ಸಮಾನ ಅಧಿಕಾರಿ ಆಗಿದ್ದರು. ಸದರಿ ಪ್ರಕರಣದಲ್ಲಿ ಪ್ರಥಮವಾಗಿ ಪಂಚನಾಮೆ ಮಾಡಿ ನಂತರ ದೂರು ದಾಖಲಿಸಿದ್ದು ಇರುತ್ತದೆ. ಸದರಿ ಪ್ರಕರಣ ದಾಖಲಾದ ನಂತರ ನಾನು ಗುನ್ನಾ ಸ್ಥಳಕ್ಕೆ ಹೋಗಿರುತ್ತೇನೆ. ಗುನ್ನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ವಾಸದ ಮನೆಗಳು ಇವೆ. ಸದರಿ ಘಟನೆಗೆ ಸಂಬಂಧಿಸಿ ಅಕ್ಕಪಕ್ಕದ ಜನರನ್ನು ವಿಚಾರಣೆ ಮಾಡಿದ್ದು ಅವರು ಏನೂ ಗೊತ್ತಿಲ್ಲವೆಂದು ಹೇಳಿರುತ್ತಾರೆ. ಸದರಿ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ಸದರಿ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದು ಆದರೆ ಯಾವುದೇ ಹೇಳಿಕೆ ನೀಡಿರಲಿಲ್ಲ. ಆದರೆ ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. ಸದರಿ ಪ್ರಕಣದಲ್ಲಿ ಇರುವ ಮಾಂಸವನ್ನು ಎಲ್ಲಿಂದ , ಯಾರಿಂದ ತರಲಾಗಿದೆ ಎಂದು ವಿಚಾರಣೆ ಮಾಡಿದ್ದು ಇರುವುದಿಲ್ಲ. ಸದರಿ ಪ್ರಕಣದಲ್ಲಿರುವ ಮಾಂಸ 30 ಕೆ ಜಿ ಇದೆ ಎಂದು ಅಜಮಾಸು ಹೇಳಲಾಗಿದೆ. ಮಾಂಸ ಧಫನ್ ಮಾಡಲು ಎಸಿ, ಭಟ್ಕಳರವರು ಲಖಿತವಾಗಿ ಆದೇಶ ಮಾಡಿದ್ದಾರೆ. ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ಸಿಬ್ಬಕಂದಿಗಳು ಹಾಗೂ ಪುರಸಭೆ ಸಿಬ್ಬಂದಿಗಳು ಮಾಂಸ ಧಫನ್ ಮಾಡಿದ್ದಾರೆ. ನಮ್ಮ ಸಿಬ್ಬಂದಿಗಳು ಯಾರೆಲ್ಲಾ ಧಫನ್ ಮಾಡಲು ಹಾಜರಿದ್ದರೆಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಧಫನ್ ಮಾಡಿದ ಬಗ್ಗೆ ಪಂಚನಾಮೆ ಜರುಗಿಸಿಲ್ಲ. ಅದರಂತೆ ಧಫನ್ ಮಾಡಿದ ಬಗ್ಗೆ ಪೊಟೋ ಹಾಗೂ ವಿಡಿಯೋಗ್ರಾಫಿಯನ್ನು ಮಾಡಿದ್ದು

ಇರುವುದಿಲ್ಲ. ಸದರಿ ಪ್ರಕರಣದಲ್ಲಿ ದಾಳಿ ಮಾಡಿದ ನಮ್ಮ ಸಿಬ್ಬಂದಿಗಳು ಕರ್ತವ್ಯದಲ್ಲಿದ್ದ ಬಗ್ಗೆ ದಾಖಲೆಗಳು ಇವೆ. ಇಂತಹ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ–2 ಪೊಟೋವನ್ನು ಯಾವ ಅಂಗಡಿಯಲ್ಲಿ ಪ್ರಿಂಟ್ ಹಾಕಲಾಗಿದೆ. ಎಂದು ನನಗೆ ಗೊತ್ತಿಲ್ಲ. ನಿಪಿ–2 ಪೊಟೋವನ್ನು ಪ್ರಿಂಟ್ ಹಾಕಿದ ಬಗ್ಗೆ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಗುನ್ಹಾ ಸ್ಥಳದ ಸರ್ವೇ ನಂಬರ್ ಹಾಗೂ ವಿಸ್ತೀರ್ಣದ ಬಗ್ಗೆ ನಾನು ತನಿಖೆ ಮಾಡಿಲ್ಲ. ನಾನು ಹೇಳುವಂತೆ ನಾನು ಹೇಳುವ ದಿನಾಂಕಂದು ಯಾವುದೇ ದಾಳಿ ಮಾಡಿಲ್ಲ ಹಾಗೂ ಮಾಂಸವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಪಿ–2 ನಮ್ಮ ಠಾಣೆಯ ವೈಜ್ಞಾನಿಕ ಸೃಷ್ಟಿಯಾಗಿದೆ ಎಂದರೆ ಸರಿಯಲ್ಲ. ನಾಧಾರಿಯಾಗಿ ಬಿದ್ದ ವಸ್ತುವನ್ನು ಅಂಕಿ ಅಂಶಕ್ಕಾಗಿ ನಮ್ಮ ಸಿಬ್ಬಂದಿಗಳು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಗಳು ಉಪಯೋಗಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಹಾಗೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಅಫಾನ್ ಖಾನ್

ತಂದೆಯ ಹೆಸರು : ಇಸ್ಮಾಯಿಲ ಖಾನ್

ವಯಸ್ಸು : 36 ವರ್ಷ

ಉದ್ಯೋಗ : ವಾಹನ ಮಾರಾಟ

ವಾಸ್ತವ್ಯ : ಆಜಾದ್ ನಗರ, ಜಾಲಿ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 07.01.2022 ರಂದು ಕಡನಗದ್ದೆಯ ಶಾಲೆ ಹತ್ತಿರ ಪೊಲೀಸರು ನನ್ನನ್ನು ಹಾಗೂ ಚಾಸಾ – 2 ರವರನ್ನು ಪಂಚನಾಮೆಗೆ ಕರೆದಿದ್ದರು. ಪಂಚನಾಮೆಯನ್ನು 2.00 ರಿಂದ 3.00 ಗಂಟೆಯವರೆಗೆ ಮಾಡಿದ್ದು ಇರುತ್ತದೆ. ಮರ ಕಡಿದ ವಿಷಯಕ್ಕೆ ಜಗಳವಾಗಿದ್ದು ಆ ಕಾರಣಕ್ಕೆ ಪಂಚನಾಮೆ ಮಾಡಿರುತ್ತಾರೆ. ಸ್ಥಳವನ್ನು ಪೊಲೀಸರು ತೋರಿಸಿರುತ್ತಾರೆ. ಪಂಚನಾಮೆ ಕಾಲಕ್ಕೆ ನನ್ನ ಸಹಿ ಪಡೆದಿರುತ್ತಾರೆ.

2. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–5 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನಾನು 6 ನೇ ತರಗತಿ ಉರ್ದುವಿನಲ್ಲಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಸಮಕ್ಷಮ ಪಂಚನಾಮೆ ಬರೆದಿರುತ್ತಾರೆ. ಪಂಚನಾಮೆಯ ದಿನಾಂಕವನ್ನು ಕೈಯಲ್ಲಿ ಬರೆದುಕೊಂಡಿರುವುದನ್ನು ನೋಡಿ ಹೇಳಿರುತ್ತೇನೆ. ನನ್ನ ಸ್ನೇಹಿತನ ಹತ್ತಿರ ಪಂಚನಾಮೆಯ ದಿನಾಂಕವನ್ನು ಕೇಳಿ ಬರೆದುಕೊಂಡಿರುತ್ತೇನೆ. ಪಂಚನಾೆಮಯಲ್ಲಿ ಏನೆಲ್ಲಾ ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ಒಂದ ಸಹಿ ಹಾಕಲು ಹೇಳಿದ ಕಾರಣ ನಾನು ಸಹಿ ಹಾಕಿರುತ್ತೇನೆ. ಮರ ಕಡಿದು ಕಾಂಡ ಉಳಿದಿದ್ದು ಗುನ್ನಾ ಸ್ಥಳದಲ್ಲಿ ಇತ್ತು . ನಾನು ಪಂಚನಾೆಮಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ

ಎಂದರೆ ಸರಿಯಲ್ಲ. ನನಗೆ ಸುಮ್ಮನೆ ಗುನ್ನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಫಾನ್ ಖಾನ್ |
| ತಂದೆಯ ಹೆಸರು | : | ಇಸ್ಮಾಯಿಲ ಖಾನ್ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವಾಹನ ಮಾರಾಟ |
| ವಾಸ್ತವ್ಯ | : | ಆಜಾದ್ ನಗರ, ಜಾಲಿ ರಸ್ತೆ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 07.01.2022 ರಂದು ಕಡನಗದ್ದೆಯ ಶಾಲೆ ಹತ್ತಿರ ಪೊಲೀಸರು ನನ್ನನ್ನು ಹಾಗೂ ಚಾಸಾ – 2 ರವರನ್ನು ಪಂಚನಾಮೆಗೆ ಕರೆದಿದ್ದರು. ಪಂಚನಾಮೆಯನ್ನು 2.00 ರಿಂದ 3.00 ಗಂಟೆಯವರೆಗೆ ಮಾಡಿದ್ದು ಇರುತ್ತದೆ. ಮರ ಕಡಿದ ವಿಷಯಕ್ಕೆ ಜಗಳವಾಗಿದ್ದು ಆ ಕಾರಣಕ್ಕೆ ಪಂಚನಾಮೆ ಮಾಡಿರುತ್ತಾರೆ. ಸ್ಥಳವನ್ನು ಪೊಲೀಸರು ತೋರಿಸಿರುತ್ತಾರೆ. ಪಂಚನಾಮೆ ಕಾಲಕ್ಕೆ ನನ್ನ ಸಹಿ ಪಡೆದಿರುತ್ತಾರೆ.

2. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–5 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನಾನು 6 ನೇ ತರಗತಿ ಉರ್ದುವಿನಲ್ಲಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಸಮಕ್ಷಮ ಪಂಚನಾಮೆ ಬರೆದಿರುತ್ತಾರೆ. ಪಂಚನಾಮೆಯ ದಿನಾಂಕವನ್ನು ಕೈಯಲ್ಲಿ ಬರೆದುಕೊಂಡಿರುವುದನ್ನು ನೋಡಿ ಹೇಳಿರುತ್ತೇನೆ. ನನ್ನ ಸ್ನೇಹಿತನ ಹತ್ತಿರ ಪಂಚನಾಮೆಯ ದಿನಾಂಕವನ್ನು ಕೇಳಿ ಬರೆದುಕೊಂಡಿರುತ್ತೇನೆ. ಪಂಚನಾಮೆಯಲ್ಲಿ ಏನೆಲ್ಲಾ ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ಒಂದ ಸಹಿ ಹಾಕಲು ಹೇಳಿದ ಕಾರಣ ನಾನು ಸಹಿ ಹಾಕಿರುತ್ತೇನೆ. ಮರ ಕಡಿದು ಕಾಂಡ ಉಳಿದಿದ್ದು ಗುನ್ನಾ ಸ್ಥಳದಲ್ಲಿ ಇತ್ತು . ನಾನು ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸುಮ್ಮನೆ ಗುನ್ನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 352/2018**

**ಸಾಕ್ಷಿಃ ಸಿಡಬ್ಲ್ಯೂಃ 10, ಪಿ.ಡಬ್ಲ್ಯೂಃ 8**

ಸಾಕ್ಷಿದಾರನ ಹೆಸರು : ಹೆಚ್ ಬಿ ಕುಡಗುಂಟಿ

ತಂದೆಯ ಹೆಸರು : ಬಸಪ್ಪ ಕುಡಗುಂಟಿ

ವಯಸ್ಸು : 57 ವರ್ಷ

ಉದ್ಯೋಗ : ಪಿಎಸ್ಐ , ಮುಂಡಗೋಡ ಪೋಲಿಸ ಠಾಣೆ

ವಾಸ್ತವ್ಯ : ಬೃಂದಾವನ ಲೇ ಔಟ್ , ಮುಂಡಗೋಡ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12 /03 /2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 15.09.2015 ರಿಂದ ದಿನಾಂಕಃ 381.03.2018 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 25.08.2016 ರಂದು ಬೆಳಿಗ್ಗೆ 11.15 ಗಂಟೆಗೆ ಎಸಿ ಕಚೇರಿಯಿಂದ ಬಂದ ದೂರನ್ನು ಸ್ವೀಕರಿಸಿ ಠಾಣೆಯ ಗುನ್ನಾ ನಂಬರ್ 216/16 ನ್ನು ದಾಖಲಿಸಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿದ್ದು ಇರುತ್ತದೆ. ಅದೇ ದಿನ ಪಿರ್ಯಾದಿಯ ಮರು ಹೇಳಿಕೆ ಪಡೆದಿರುತ್ತೇನೆ. ದಿಃ 26.08.2016 ರಂದು ಗುನ್ನಾ ಸ್ಥಳಕ್ಕೆ ಭೇಟಿ ಪಂಚರಾದ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 8.30 ರಿಂದ 9.30 ಗಂಟೆಯವರೆಗೆ ಪಿರ್ಯಾದಿ ತೋರಿಸಿದ ಗುನ್ನಾ ಸ್ಥಳವಾದ ಹಳೆ ಬಸ್ಸು ನಿಲ್ದಾಣದ ಹತ್ತಿರ ವಸಂತ ಭವನದ ಒಳಗಡೆ ಪಂಚನಾಮೆ ಮಾಡಿರುತ್ತೇನೆ. 2 ನೇ ಪಂಚನಾಮೆ ಯನ್ನು ನಿಶಾಂತ ನರ್ಸಿಂಗ್ ಹೊಂ ಆಸ್ಪತ್ರೆಯ ಒಳಗೆ ಪಂಚರಾದ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.45 ರಿಂದ

11.30 ಗಂಟೆಯವರೆಗೆ ಮಾಡಿದ್ದು ಇರುತ್ತದೆ. 3 ನೇ ಪಂಚನಾೆಮಯನ್ನು ಪಿರ್ಯಾದಿಯವರು ನನಗೆ ಭೇಟಿ ನೀಡಿ ಅವರ ಹೆಂಡತಿಯಾದ ಸಾಜಿಯಾ ಬಾನು ಅವರ ಸಮಕ್ಷಮ ಹಾಗೂ ಪಂಚರಾದ 2 ಮತ್ತು 3 ರವರ ಸಮಕ್ಷಮ 12.30 ರಿಂದ 1.15 ಗಂಟೆಯವರೆಗೆ ಪಿರ್ಯಾದಿಯ ಮನೆಯಲ್ಲಿ ಪಂಚನಾಮೆ ಮಾಡಿರುತ್ತೇವೆ. ಅದೇ ದಿನ ಸಾಕ್ಷಿದಾರರಾದ 4 ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ. ಸದರಿ ಪ್ರಕರಣದ ಆರೋಪಿತರು ದಿಃ 26.08.2016 ರಂದು ಮೂಸಾ ನಗರದ ಭಟ್ಕಳದಲ್ಲಿ ಸಿಕ್ಕಿದ್ದು ಅವರನ್ನು ಠಾಣೆಗೆ ಕರೆದು ತಂದು ದಸ್ತಗಿರಿ ನಿಯಮ ಪಾಲಿಸಿ ಅವರನ್ನು ವೈದ್ಯಕೀಯ ಉಪಚಾರಪಡಿಸಿ ನ್ಯಾಯಾಲಯಕ್ಕೆ ಠಾಣೆಯ ಸಿಬ್ಬಂದಿಯವರ ಭದ್ರತೆಯಲ್ಲಿ ಹಾಜರುಪಡಿಸಿರುತ್ತೇನೆ. ದಿಃ 27.08.2016 ರಂದು ಎಸಿ ಭಟ್ಕಳರವರ ಆದೇಶದಂತೆ ಇದು ಮಹತ್ವದ ಪ್ರಕರಣವಾದ್ದರಿಂದ ಚಾಸಾ – 11 ರವರಿಗೆ ತನಿಖೆ ಹಸ್ತಾಂತರ ಮಾಡಿರುತ್ತೇನೆ.

3. ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ವಿಸಿ ಮೂಲಕ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 2 ಮತ್ತು 6 ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ದಿಃ 07.07.2016 ರಂದು ಸದರಿ ಪ್ರಕರಣದಲ್ಲಿ ನಾವು ಸಾಧಿಸುವಂತಹ ಘಟನೆಯು ನಡೆದಿರುತ್ತದೆ. ದಿಃ 25.08.2016 ರಂದು ಪ್ರ . ವ. ವರದಿಯನ್ನು ದಾಖಲು ಮಾಡಿರುತ್ತೇವೆ. ಸದರಿ ಪ್ರಕರಣದಲ್ಲಿ ಪ್ರಥಮ ಬಾರಿಗೆ ದೂರನ್ನು ಎಸ್ ಪಿ, ಕಾರವಾರ ರವರ ಮುಂದೆ ದಾಖಲಾಗಿತ್ತು. ಎಸ್ ಪಿ , ಕಾರವಾರ ರವರಿಗೆ ದೂರು ನೀಡುವ ಮೊದಲು ನಮ್ಮ ಠಾಣೆಯಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿ ಯಾವುದೇ ದೂರು ದಾಖಲಾಗಿಲ್ಲ. ಹಾಗೆ ಒಂದು ವೇಳೆ ನಮ್ಮ ಠಾಣೆಯಲಿ ದೂರು ನೇರವಾಗಿ ದಾಖಲಾಗಿದ್ದರೆ ದಾಖಲೆಗಳು ಇರುತ್ತವೆ. 3 ಪಂಚನಾಮೆಗಳಿಗೆ ಚಾಸಾ –2 ಮತ್ತು 3 ರವರೇ ಪಂಚರಾಗಿದ್ದಾರೆ. ಚಾಸಾ –2 ಸದರಿ ಪ್ರಕರಣದ ಪಿರ್ಯಾದಿದಾರರ ಅಕ್ಕನ ಮಗ ಆಗಿದ್ದಾರೆ. ಚಾಸಾ – 3 ಇವರು ಪಿರ್ಯಾದಿದಾರರ ಸ್ನೇಹಿತರಾಗಿದ್ದಾರೆ. ಚಾಸಾ –4 ರವರು ಪಿರ್ಯಾದಿರಾರರ ಹೆಂಡತಿ , ಚಾಸಾ –6 ಮತ್ತು 7 ರವರು ಪಿರ್ಯಾದಿದಾರರ ಸ್ನೇಹಿತರಾಗಿದ್ದಾರೆ. ಸದರಿ ಪ್ರಕರಣದಲ್ಲಿ ತೆಗೆದ ಪೊಟೋಗಳನ್ನು ಯಾವ ಸ್ಟೂಡಿಯೋ ದಲ್ಲಿ ಪ್ರಿಂಟ್ ಹಾಕಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ –8 ರವರು ಸದರಿ ಪೋಟೋಗಳನ್ನು ಪ್ರಿಂಟ್ ಮಾಡಿದ ಬಗ್ಗೆ ಸ್ಟೂಡಿಯೋಗೆ ಹಣ ನೀಡಿದ ಕುರಿತು ರಶೀದಿ ನೀಡಿಲ್ಲ. ಸದರಿ ಪ್ರಕರಣದಲ್ಲಿ ಆರೋಪಿತರು ಬಳಸಿದ ಶಿಫ್ಟ ಕಾರನ್ನು ತನಿಖೆ ಮಾಡಿದ ಬಗ್ಗೆ ನನಗೆ ಕಂಡುಬಂದಿಲ್ಲ. ಸದರಿ ಪ್ರಕರಣದಲ್ಲಿ ಉಪಯೋಗಿಸಿದ ಶಿಫ್ಟ ಕಾರಿನ ನಂಬರನ್ನು ನಾನು ತನಿಖೆ

ಮಾಡಿಲ್ಲ. ಪಿರ್ಯಾದಿದಾರರ ಮನೆಯ ಅಕ್ಕಪಕ್ಕ ಸಾಕಷ್ಟು ವಾಸದ ಮನೆಗಳು ಇವೆ. ವಸಂತ ಭವನ ಇದು ಭಟ್ಕಳದ ಪಟ್ಟಣದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಭವನ ಆಗಿದೆ ಎಂದರೆ ಸರಿ. ನಿಶಾಂತ್ ನರ್ಸಿಂಗ್ ಹೊಂ ಇಲ್ಲಿ ಯಾವಾಗಲೂ ವೈದ್ಯರೂ ಮತ್ತು ರೋಗಿಗಳು ಇರುವ ಸ್ಥಳವಾಗಿದ್ದು ಇದು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಇದು. ಇದರ ಪಕ್ಕದಲ್ಲಿ ಹೊಟೇಲು ಹಾಗೂ ಅಂಗಡಿಗಳು ಇವೆ. ಚಾಸಾ –2 ಇವರು ಭದ್ರಿಯಾ ಕಾಲನಿಯ ನಿವಾಸಿ ಎಂದರೆ ಸರಿ. ಬದ್ರಿಯಾ ಕಾಲನಿ ಇದು 3 ಘಟನಾ ಸ್ಥಳದಿಂದ ಅಂದಾಜು 3 ಕಿಮೀ ದೂರದಲ್ಲಿ ಇದೆ. ಚಾಸಾ –3 ಇವರು ಮದಿನಾ ಕಾಲನಿಯ ನಿವಾಸಿ ಎಂದರೆ ಸರಿ. ಮದಿನಾ ಕಾಲನಿ ಇದು 3 ಘಟನಾ ಸ್ಥಳದಿಂದ ಅಂದಾಜು 2 ಕಿಮೀ ದೂರದಲ್ಲಿ ಇದೆ. ನಾನು ಹೇಳುವಂತಹ ದಿನಾಂಕದಂದು ನಾವು ಹೇಳುವ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಸಾಕ್ಷಿದಾರರು ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರು ಸೃಷ್ಟಿಸಿದ ಸುಳ್ಳು ದೂರಿಗೆ ಠಾಣೆಯಲ್ಲಿ ಪಂಚನಾಮೆ ತಯಾರಿಸಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1, 3 ರಿಂದ 5 ನೇ ಆರೋಪಿ ಪರ ವಿ ಆರ್ ಎಸ್ ವಕೀಲರು 2 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಾಕ್ಷಿಃ ಸಿಡಬ್ಲ್ಯೂಃ , ಪಿ.ಡಬ್ಲ್ಯೂಃ**

| | |
|---|---|
| ಸಾಕ್ಷಿದಾರನ ಹೆಸರು | : ಹೆಚ್ ಬಿ ಕುಡಗುಂಟಿ |
| ತಂದೆಯ ಹೆಸರು | : ಬಸಪ್ಪ ಕುಡಗುಂಟಿ |
| ವಯಸ್ಸು | : 57 ವರ್ಷ |
| ಉದ್ಯೋಗ | : ಪಿಎಸ್ಐ , ಮುಂಡಗೋಡ ಪೋಲಿಸ ಠಾಣೆ |
| ವಾಸ್ತವ್ಯ | : ಬೃಂದಾವನ ಲೇ ಔಟ್ , ಮುಂಡಗೋಡ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 20 /02 /2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 08.09.2019 ರಿಂದ ದಿನಾಂಕಃ 31.01.2023 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 04.05.2021 ರಂದು ಚಾಸಾ -8 ರವರು ವರ್ಗಾವಣೆಯಾದ ಕಾರಣ ನಾನು ಸದರಿ ಪ್ರಕರಣದ ಕಡತವನ್ನು ವಹಿಸಿಕೊಂಡಿರುತ್ತೇನೆ. ದಿಃ 08.09.2021 ರಂದು ಉಪ ಅಧಿಕ್ಷಕರು,

ಪುರಾತತ್ವ ಇಲಾಖೆ ,ದಾರವಾಡದಿಂದ ಮಾಹಿತಿ ಪಡೆದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ಸದರಿ ಪ್ರಕರಣದ ಸಂಪೂರ್ಣ ತನಿಖೆ ಮುಗಿದ ಕಾರಣ ಆರೋಪ ಸಾಬಿತಾದ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿಯು ವಿಸಿ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ಸದರಿ ಪ್ರಕರಣದಲ್ಲಿ

ಅಂಕಿಸಂಕೆಗಾಗಿ ಸುಳ್ಳಾಗಿ ಸೃಷ್ಟಿಸಿದ ದಾಖಲೆಗೆ ಸುಳ್ಳು ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 718/2023**

**ಸಿ.ಡಬ್ಲ್ಯೂಃ 9, ಪಿ.ಡಬ್ಲ್ಯೂಃ 9**

ಸಾಕ್ಷಿದಾರರ ಹೆಸರು : ಮಹಾಂತೇಶ ಹಿರೇಮಠ

ತಂದೆಯ ಹೆಸರು : ಶಿವಯ್ಯ

ವಯಸ್ಸು : 33 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ವಸತಿಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.06.2020 ರಿಂದ ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 31.07.2023 ರಂದು ಚಾಸಾ – 12 ರವರು ನೇಮಿಸಿದಂತೆ ಎಫ್ ಎಸ್ ಎಲ್ ಕಚೇರಿ, ದಾರವಾಡಕ್ಕೆ ಎಕ್ಸ ಸೈಜ್ ಆರ್ಟಿಕಲನ್ನು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿದ ವಸ್ತುಗಳ ಪ್ರಮಾಣಪತ್ರ ಮತ್ತು ಸ್ವತ್ತನ್ನು ದಿಃ 01.08.2023 ರಂದು ತಂದಿದ್ದು ಅದನ್ನು ಮೇಲಾಧಿಕಾರಿಗಳಿಗೆ ಒಪ್ಪಿಸಿರುತ್ತೇನೆ.

3. ಸಾಕ್ಷಿಯು ಮುದ್ದೆಮಾಲು 1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಐ ಎನ್ ವಕೀಲರಿಂದ,**

ಮುದ್ದೆಮಾಲನ್ನು ಚೀಲದಲ್ಲಿ ಹಾಕಿ ಇಟ್ಟಿದ್ದರು. ಮುದ್ದೆ ಮಾಲನ್ನು ಧಾರವಾಡ ರಾಸಾಯನಿಕ ಪರೀಕ್ಷಾ ಕೇಂದ್ರದಿಂದ ಬಿರಾದಾರ್ ಎಂಬುವವರಿಂದ ತಂದಿರುತ್ತೇನೆ. ಬಿರಾದರ್ ಇವರ ಡೆಸಿಗ್ ನೇಶನ್ ನನಗೆ ಗೊತ್ತಿಲ್ಲ. ಬಿರಾದಾರ್ ಅವರೇ ಮುದ್ದೆ ಮಾಲನ್ನು ಪರೀಕ್ಷೆ ಮಾಡಿ ನನಗೆ ವರದಿ ನೀಡಿರುತ್ತಾರೆ. ನನ್ನ ಎದುರಿಗೆ ಪರೀಕ್ಷೆ ಮಾಡಿಲ್ಲ. ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ನಾನು ಒಂದೇ ಬಾರಿ ಇದೇ ಪ್ರಥಮ ಬಾರಿಗೆ ಹೋಗಿರುತ್ತೇನೆ. ರಾಸಾಯನಿಕ ಪರೀಕ್ಷಾ ಕೇಂದ್ರವು ಬಸ್ಸು ನಿಲ್ದಾಣದಿಂದ ಒಂದುವರೆ ಕಿಮೀ ದೂರದಲ್ಲಿ ಇದೆ. ರಾಸಾಯನಿಕ ಪರೀಕ್ಷಾ ಕೇಂದ್ರ ಎಂದು ಇಂಗ್ಲೀಷ ಹಾಗೂ ಕನ್ನಡ ಭಾಷೆಯಲ್ಲಿ ಬೋರ್ಡ ನ್ನು ಹಾಕಲಾಗಿತ್ತು. ವರದಿಯನ್ನು ಎನವಲೋಪ್ ನಲ್ಲಿ ಹಾಕಿ ನೀಡಿದ್ದರು. ವರದಿಯನ್ನು ನಾನು ನೋಡಿರುತ್ತೇನೆ. ಅಂತಹ ಯಾವುದೇ ವರದಿಯನ್ನು ತರಲು ನಾನು ಧಾರವಾಡದ ರಾಸಾಯನಿಕ ಪರೀಕ್ಷ್ಣೆ ಕೇಂದ್ರಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 718/2023**

**ಸಿ.ಡಬ್ಲ್ಯೂಃ 8, ಪಿ.ಡಬ್ಲ್ಯೂಃ 8**

ಸಾಕ್ಷಿದಾರರ ಹೆಸರು : ಸಚೀನ್

ತಂದೆಯ ಹೆಸರು : ಆನಂದ ನಾಯ್ಕ

ವಯಸ್ಸು : 26 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2023 ರಿಂದ ಇಲ್ಲಿಯವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 24.07.2023 ರಂದು ಚಾಸಾ –12 ರವರು ಜಪ್ತಿ ಮಾಡಿದ ಸರಾಯಿ ಪ್ಯಾಕೇಟುಗಳನ್ನು ಎಪ್ ಎಸ ಎಲ್ ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದಂತೆ ಧಾರವಾಡ ಎಪ ಎಸ್ ಎಲ್ ಗೆ ತೆಗೆದುಕೊಂಡು ಹೋಗಿದ್ದು ಇರುತ್ತದೆ.

ಸಾಕ್ಷಿಯು ಮುದ್ದೆ ಮಾಲು 1 ರಿಂದ 4 ನೋಡಿ ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಐ ಎನ್ ವಕೀಲರಿಂದ,**

ರಾಸಾಯನಿಕ ಪರೀಕ್ಷಾ ಕೇಂದ್ರದ ಸಂಪೂರ್ಣ ವಿಳಾಸ ನನಗೆ ಗೊತ್ತಿಲ್ಲ. ನಾನು ಆಟೋದಲ್ಲಿ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಹೋಗಿರುತ್ತೇನೆ. ರಾಸಾಯನಿಕ ಪರೀಕ್ಷಾ ಕೇಂದ್ರ , ಧಾರವಾಡ ಎಂದು ಬೋರ್ಡ ಅನ್ನು ಹಾಕಲಾಗಿತ್ತು. ಯಾವೆಲ್ಲಾ ಭಾಷೆಯಲ್ಲಿ ಬೋರ್ಡು ಇತ್ತು ಎಂದು ನಾನು ನೋಡಿಲ್ಲ. ನಾನು ಯಾವ ಪರೀಕ್ಷಕರಿಗೆ ಮು.ಮಾಲನ್ನು ನೀಡಿದ್ದೇ ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಔಟ್ ವರ್ಡ ಇನ್ ವರ್ಡಗೆ ಸಹಿ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಧಾರವಾಡ ಬಸ್ಸು ನಿಲ್ದಾಣದಿಂದ ಪರೀಕ್ಷಾ ಕೇಂದ್ರ ಎಷ್ಟು ದೂರ ಇದೆ ಎಂದು ನನಗೆ ಗೊತ್ತಿಲ್ಲ. ರಾಸಾಯನಿಕ ಪರೀಕ್ಷಕರ ಹೆಸರಿನ ಬೋರ್ಡ ಇರಲಿಲ್ಲ. ನಾನು ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಹೋಗದೇ ಇದ್ದ ಕಾರಣ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಕುಳಿತು ನನ್ನ ಮೇಲಾಧಿಕಾರಿಯ ಅದೇಶದ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 221 /2023**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು : ಡಾ. ಶಿವಕುಮಾರ

ತಂದೆಯ ಹೆಸರು : ಬಸಪ್ಪ

ವಯಸ್ಸು : 52 ವರ್ಷ
ಉದ್ಯೋಗ : ಪಶು ವೈಧ್ಯಾಧಿಕಾರಿ, ಸರಕಾರಿ ಪಶು ಆಸ್ಪತ್ರೆ , ಭಟ್ಕಳ
ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/03/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ಪೊಲೀಸರ ಕೋರಿಕೆ ಮೇರೆಗೆ ಸದರಿ ಮಾಂಸವನ್ನು ಪರೀಕ್ಷೆ ಮಾಡಿ ಅದರ ಬಾಲ ಮತ್ತು ಚರ್ಮವನ್ನು ಗಮನಿಸಿ ಅದು ಗೋವಿನ ಮಾಂಸ ಎಂದು ಕಂಡುಬಂದಿದ್ದು ಈ ಪ್ರಕಾರ ನಾನು ವರದಿ ನೀಡಿದ್ದು ಇರುತ್ತದೆ.

2. ಸಾಕ್ಷಿಯು ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 7 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ನಾನು ದಿಃ 10.07.2022 ರಂದು ನಾನು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ದಾಖಲೆಗಳು ಇವೆ. ನಿಪಿ–7 ಪ್ರಮಾಣಪತ್ರವನ್ನು ದಿಃ 22.08.2022 ರಂದು ನೀಡಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ಜಾನುವಾರುವಿನ ಮಾಂಸವನ್ನು ತೋರಿಸಿದ್ದರು. ಅದನ್ನು ಒಂದು ಬಾಕ್ಸ ನಲ್ಲಿ ಇಟ್ಟಿದ್ದರು. ಜಾನುವಾರಿನ ಮಾಂಸದ ಜೊತೆಗೆ ಚರ್ಮ ಮತ್ತು ಬಾಲವನ್ನು ತೋರಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾಂಸವನ್ನು ಪರಿಶೀಲನೆ ಮಾಡಲು ನನಗೆ ಮನವಿ ನೀಡಿದ್ದರು. ಸದರಿ ಪ್ರಕಣದಲ್ಲಿ ಯಾವುದೇ ಬಾಲ ಅಥವಾ ಚರ್ಮವನ್ನು ಜಪ್ತು ಮಾಡಿದ್ದೇ ಇಲ್ಲ ಎಂದರೆ ಸರಿಯಲ್ಲ. ನಿಪಿ–4 ಪೋಟೋದಲ್ಲಿ ಜಾನುವಾರಿನ ಚರ್ಮ ಕಾಣುತ್ತದೆ. ಪೊಟೋದಲ್ಲಿ ಕಾಣುತ್ತಿರುವದು ಪ್ಲಾಸ್ಟಿಕ್ ಆಗಿದೆ ಚರ್ಮ ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೇವಲ ಮಾಂಸವನ್ನು ನೋಡಿ ಅದು ಯಾವ ಪ್ರಾಣಿಯದು ಎಂದು ಹೇಳಲು ಬರುವುದಿಲ್ಲ . ಬೇರೆ ಯಾವುದೇ ಪ್ರಾಣಿಯ ಭಾಗಗಳು ಇಲ್ಲದೇ ಇದ್ದರೂ ಸಹ ಮಾಂಸವನ್ನು ನೋಡಿ ಅದು ಗೋ ವಿನ ಮಾಂಸವಾಗಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯಮಾಡಲು ಅವರ ಕೋರಿಕೆಯಂತೆ ಸುಳ್ಳು ಪ್ರಮಾಣಪತ್ರ ನೀಡಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಂಸವನ್ನು ಎಪ್ ಎಸ್ ಎಲ್ ಗೆ ಕಳುಹಿಸಲು ಶ್ಯಾಂಪಲನ್ನು ಪಡೆದಿಲ್ಲ . ಜಾನುವಾರುವಿನ ಮಾಂಸವನ್ನು ವಿಲೇವಾರಿ ಮಾಡುವ ಮೊದಲು ನನಗೆ ಪರಿಶೀಲನೆ ಮಾಡಲು ಹೇಳಿದ್ದಾರೆ ಆ ಪ್ರಕಾರ ನಾನು ಪರಿಶೀಲನೆ ಮಾಡಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

ಸಿಸಿ ನಂಬರಃ 221/2023

ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 5

ಸಾಕ್ಷಿದಾರನ ಹೆಸರು : ದಿನೇಶ

ತಂದೆಯ ಹೆಸರು : ನಾರಾಯಣ ನಾಯಕ್

ವಯಸ್ಸು : 46 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ಶಹರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2018 ರಿಂದ ಜುಲೈ 2024 ರವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 10.07.2022 ರಂದು ಬೆಳಿಗ್ಗೆ 9.30 ಗಂಟೆ ಸುಮಾರಿಗೆ ನಾನು ಹಾಗೂ ಚಾಸಾ – 5 ನೇಯವರು ಬಕ್ರಿದ್ ಬಂದೋಬಸ್ತಿಗಾಗಿ ಶಂಸುದ್ದೀನ್ ಸರ್ಕಲ ಬಳಿ ಇದ್ದಾಗ ದಂಡಿನ ದುರ್ಗಾ ದೇವಸ್ತಾನದ ಹಿಂದಿರುವ ಮನೆಯ ಖಾಲಿ ಜಾಗದಲ್ಲಿ ದನ ಕಟಾವು ಮಾಡುವ ಬಗ್ಗೆ ಚಾಸಾ – 1 ರವರಿಗೆ ಮಾಹಿತಿ ಬಂದಂತೆ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ ಅವರ ಮಾರ್ಗದರ್ಶನದಂತೆ ಇಬ್ಬರು ಪಂಚರನ್ನು ಕರೆದು ಗುನ್ನಾ ಸ್ಥಳದ ಹತ್ತಿರ ಒಳಗಡೆ ಕಂಪೌಡಿನಲ್ಲಿ ಹೋದಾಗ ಒಬ್ಬನು ದನ ಕಟಾವು ಮಾಡುತ್ತಿದ್ದುದು ಕಂಡುಬಂದಿದ್ದು ಆತನನ್ನು ಹಿಡಿಯಲು ಹೋದಾಗ ಆತ ಓಡಿ ಹೋಗಿದ್ದು ಇರುತ್ತದೆ. ಆತನ ಬೆನ್ನು ಹತ್ತಿದ್ದರೂ ಅವನು ಸಿಗಲಿಲ್ಲ. ಓಡಿ ಹೋದವನ ಹೆಸರು , ವಿಳಾಸ ಕೇಳಿದಾಗ ಆತನು ಹಮೀರ್ ಎಂದು ತಿಳಿದು ಬಂದಿರುತ್ತದೆ. ಕೂಡಲೇ ನಾವು ಸುಮಾರು 10 ಕೆಜಿ ಮಾಂಸ ಅಂದಾಜು ರೂ. 5,000 ಬೆಲೆ ಬಾಳುವಂತಹದನ್ನು ಕಾನೂನು ದೃಷ್ಟಿಯಿಂದ ಸಾರ್ವಜನಿಕರಿಗೆ ದಕ್ಕೆ ಆಗುವ ಕಾರಣ ಸ್ಥಳದಲ್ಲಿ ಪಂಚನಾಮೆ ಮಾಡದೇ ಮಾಂಸವನ್ನು ಠಾಣೆಗೆ ತಂದು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು ಈ ಕಾಲಕ್ಕೆ ನಾನು ನನ್ನ ಮೇಲಾಧಿಕಾರಿಗೆ ಸೂಕ್ತ ಸಹಾಯ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಸದರಿ ಘಟನೆ ಬಗ್ಗೆ ಮಾಹಿತಿ ಬಂದಾಗ ನಾನು ಸಂಸುದ್ದೀನ್ ಸರ್ಕಲನ ಬಳಿ ಇದ್ದೇನು. ಗುನ್ನಾ ಸ್ಥಳಕ್ಕೆ ಹೋಗುವಾಗ ಶಹರ ಪೊಲೀಸ್ ಠಾಣೆ ದಾಟಿ ಹೋಗಬೇಕಾಗುತ್ತದೆ. ಮೇಲಾಧಿಕಾರಿಗಳಿಗೆ ನಾನು ಸರ್ಕಲ ಬಳಿ ಇರುವಾಗಲೇ ಮಾಹಿತಿ ನೀಡಿದ್ದು ಇರುತ್ತದೆ. ಸದರಿ ಮಾಹಿತಿಯನ್ನು ಎಸ್ ಹೆಚ್ ಒ ರವರಿಗೆ ತಿಳಿಸಿರುತ್ತಾರೆ. ಗುನ್ನಾ ಸ್ಥಳಕ್ಕೆ ಬಜಾರ್ ರಸ್ತೆ ಮೂಲಕ ಹೋಗಬೇಕಾಗುತ್ತದೆ. ಪಂಚರು ಜಪ್ತು ಮಾಡುವ ಕಾಲಕ್ಕೆ ಬಂದಿದ್ದರು. ಗುನ್ನಾ ಸ್ಥಳದಲ್ಲಿ ಇಬ್ಬರು ಪಂಚರು , ನಾನು ಮತ್ತು ಚಾಸಾ –1 ಮತ್ತು 5 ರವರು ಇದ್ದೇವು. ಪಂಚರನ್ನು ಠಾಣೆಗೆ ಬಂದಿದ್ದರು ಅಲ್ಲಿಂದ ಗುನ್ನಾ ಸ್ಥಳಕ್ಕೆ ಕರೆದುಕೊಂಡು

ಹೋಗಿರುತ್ತೇವೆ. ಗುನ್ನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ವಾಸದ ಮನೆ ಇವೆ. ಗುನ್ನಾ ಸ್ಥಳದ ಹಿಂದೆ ದೇವಸ್ಥಾನವಿದೆ. ಅಕ್ಕಪಕ್ಕದವನ್ನು ಸಾಕ್ಷಿದಾರರಾಗಿ ಮಾಡಿರುವುದಿಲ್ಲ. ಗುನ್ನಾ ಸ್ಥಳದಲ್ಲಿರುವ ಮನೆಯ ಕಂಪೌಂಡಿನ 7 ಫೂಟ್ ಎತ್ತರ ಇದೆ. ಗುನ್ನಾ ಸ್ಥಳದ ಮನೆಯ ಸುತ್ತಮುತ್ತ ಕಂಪೌಂಡ್ ವಾಲ್ ಇದೆ. ಕಂಪೌಂಡಿಗೆ ಗೇಟು ಇರಲಿಲ್ಲ. ಗುನ್ನಾ ಸ್ಥಳದಲ್ಲಿ ಇರುವ ಮನೆಗೆ ಹೆಸರು ಮತ್ತು ನಂಬರನ್ನು ಹಾಕಲಾಗಿತ್ತು. ಜಪ್ತು ಮಾಡುವ ಕಾಲಕ್ಕೆ ಮನೆಯಲ್ಲಿ ಯಾರೂ ಇರಲಿಲ್ಲ . ಮಾಂಸವನ್ನು ಜಪ್ತು ಮಾಡಿದ್ದು ಇರುತ್ತದೆ. ಗುನ್ನಾ ಸ್ಥಳದಲ್ಲಿ ಇರುವ ಮನೆಯು ಬಂದಾಗಿತ್ತು. ಗುನ್ನಾ ಸ್ಥಳದಲ್ಲಿ ಮಾಂಸ ಕತ್ತರಿಸಲು ಉಪಯೋಗಿಸುವ ಸಲಕರಣೆಗಳನ್ನು ಜಪ್ತು ಮಾಡಿಲ್ಲ. ಜಾನುವಾರಿನ ಇತರ ದೇಹದ ಭಾಗಗಳನ್ನು ಜಪ್ತು ಮಾಡಿದ್ದುಇರುವುದಿಲ್ಲ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳಕ್ಕೆ ಪಂಚರನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ ಹಾಗೂ ಪಂಚರ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಮಾಡಿರುತ್ತೇವೆ. ಗಲಾಟೆ ಆಗುತ್ತದೆ ಎಂದು ಪಂಚನಾಮೆಯನ್ನು ಗುನ್ನಾ ಸ್ಥಳದಲ್ಲಿ ತಯಾರಿಸಿಲ್ಲ. ಗುನ್ನಾ ಸ್ಥಳದಲ್ಲಿ ಆರೋಪಿಯು ಮಾತ್ರ ಇದ್ದರು. ಗುನ್ನಾ ಸ್ಥಳದಲ್ಲಿ ಅಂತಹ ಯಾವುದೇ ವಸ್ತುಗಳು ಸಿಗದೇ ಇದ್ದ ಕಾರಣ ಪಂಚನಾಮೆಯನ್ನು ಗುನ್ನಾ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಬೇರೆ ಎಲ್ಲೋ ಸಿಕ್ಕಂತಹ ಮಾಂಸವನ್ನು ಜಪ್ತುಪಡಿಸಿ ಸದರಿ ಪ್ರಕರಣದಲ್ಲಿ ಆಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಜಪ್ತು ಕಾಲಕ್ಕೆ ಪೊಟೋ ತೆಗೆದಿರುತ್ತೇವೆ. ಸದರಿ ಪೊಟೋದಲ್ಲಿ ನಾನು ಇಲ್ಲ. ನಾನು ಘಟನೆಯ ದಿನ ಗುನ್ನಾ ಸ್ಥಳದಲ್ಲಿ ಇಲ್ಲದೇ ಇದ್ದ ಕಾರಣ ಪೊಟೋದಲ್ಲಿ ಕಾಣುಸುತ್ತಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು : ಸಂತೋಷ ಕುಮಾರ ಎಮ್

ತಂದೆಯ ಹೆಸರು : ಅಂಜನೇಯ

ವಯಸ್ಸು : 36 ವರ್ಷ

ಉದ್ಯೋಗ : ಪಿ ಎಸ್ಐ , ಮಹಿಳಾ ಪೊಲೀಸ ಠಾಣೆ, ಕಾರವಾರ

ವಾಸ್ತವ್ಯ : ಕಾರವಾರ

**<u>ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/03/2025</u>**

**<u>ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,</u>**

ನಾನು ಪೆಬ್ರುವರಿ , 02, 2023 ಜೂನ್ , 13, 2023 ರವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 01.04.2023 ರಂದು ಭಟ್ಕಳ ಶಹರದ ಸಂಶುದ್ದೀನ ಸರ್ಕಲ ಬಳಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ –4 ರವರು ಬೆಳಿಗ್ಗೆ 9.15 ಗಂಟೆಗೆ ಕರೆ ಮಾಡಿ ಭಟ್ಕಳ ಶಹರದ ಉಮರ್ ಸ್ಟ್ರೀಟ್ , 1 ನೇ ಕ್ರಾಸ್ ಎದುರಿನ ಮನೆಯಲ್ಲಿ ಜಾನುವಾರು ಕಟಾವು ಮಾಡಿ ಮಾರಾಟ ಮಾಡುವ ಬಗ್ಗೆ ಮಾಹಿತಿ ಬಂದಂತೆ ನಂತರ ಈ ಬಗ್ಗೆ ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ ಅವರಿಂದ ಮಾರ್ಗದರ್ಶನ ಪಡೆದು ಅನುಮತಿ ಪಡೆದಿರುತ್ತೇನೆ. ಚಾಸಾ –5 ರವರ ಮೂಲಕ ಇಬ್ಬರ ಪಂಚರನ್ನು ಬರಮಾಡಿ ಅವರಿಗೆ ನನಗೆ ಬಂದ ಮಾಹಿತಿ ತಿಳಿಸಿ ಪಂಚರಾಗಲು ಚಾಸಾ –2 ಮತ್ತು 3 ರವರು ಒಪ್ಪಿರುತ್ತಾರೆ. ನಂತರ ನಾನು , ಸಿಬ್ಬಂದಿಗಳು ಹಾಗೂ ಪಂಚರ ಸಮೇತ ಇಲಾಖಾ ಜಿಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿ ಜಾನುವಾರು ಕಟಾವು ಮಾಡಿ ಮಾಂಸ ಮಾರಾಟ ಮಾಡುತ್ತಿದ್ದು ಇಬ್ಬರು ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ಒಬ್ಬನು ಜಹೀರ್ ಅಹಮದ್ ಸುಲೇಮಾನ್ ಸಾಬ ಎಂದು ಇನ್ನೊಬ್ಬ ವ್ಯಕ್ತಿಯು ತನ್ನ ಹೆಸರು ದಾದಾ ಬೀರ್ ಬೆಳಗಾವ್ ಎಂದು ತಿಳಿಸಿರುತ್ತಾರೆ. ನಂತರ ಅವರು ಜಾನುವಾರು ಕಟಾವು ಮಾಡಿ ಮಾಂಸ ಮಾರಾಟ ಮಾಡುವ ಬಗ್ಗೆ ತಿಳಿಸಿರುತ್ತಾರೆ. ಅವರಿಗೆ ಪಾಸ ಯಾ ಪರಮೀಟು ಇದೆಯಾ ಎಂದು ಕೇಳಿದಾಗ ಅವರು ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಇಬ್ಬರು ಆರೋಪಿಗಳನ್ನು ಹಾಗೂ ರೂ. 20,000 ಮೌಲ್ಯದ 60 ಕೆ ಜಿ ಮಾಂಸವನ್ನು ಹಾಗೂ ಒಂದ ಕತ್ತಿಯನ್ನು ಪಂಚರ ಸಮಕ್ಷಮ ಜಪ್ತು ಪಡಿಸಿರುತ್ತೇನೆ. ಪೊಟೋ ತೆಗೆದಿರುತ್ತೇವೆ. ನಂತರ ಠಾಣೆಗೆ ಬಂದು ಮಾಂಸ ಹಾಗೂ ಆರೋಪಿಗಳು

ಹಾಗೂ ಕಟಾವು ಮಾಡಲು ಬಳಸಿದ ಸಲಕರಣೆಯೊಂದಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,</u>**

ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು : ಮದರಸಾಬ

ತಂದೆಯ ಹೆಸರು : ಜಾಪರ್ ಚಿಕ್ಕೇರಿ

ವಯಸ್ಸು : 43 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ವಸತಿ ಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ /03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ17.10.2023 ರಂದು ಭಟ್ಕಳ ಶಹರ ಠಾಣಾ ಗುನ್ನಾ ಸಂಖ್ಯೆ 124/2023 ರಲ್ಲಿ ಚಾಸಾ – 14 ರವರು ಸದರಿ ಪ್ರಕರಣದಲ್ಲಿ ಮೃತಪಟ್ಟ ಮೃತಳ ಶವ ಪಂಚನಾಮೆಗೆ ಪೊಟೋ ಮತ್ತು ಸಿಡಿಯನ್ನು ತಯಾರಿಸಲು ಹೇಳಿದಂತೆ ನಾನು ಸದರಿ ದಿನ ಶವಪಂಚನಾ ಿಮ ಕಾಲಕ್ಕೆ ಪೊಟೋ ತೆಗೆದು ಸಿಡಿಯಲ್ಲಿ ಹಾಕಿ ಪೊಟೋ ಹಾಗೂ ಸಿಡಿಯನ್ನು ತನಿಖಾಧಿಕಾರಿಗೆ ನೀಡಿ ಕಲಂ 65 ಬಿ ರಡಿ ಪ್ರಮಾಣಪತ್ರ ನೀಡಿರುತ್ತೇನೆ . ಅದೇ ದಿನ ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ –15 ರವರು ಸದರಿ ಪ್ರಕರಣದಲ್ಲಿ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿದ್ದು ಆ ವೇಳೆ ಸದರಿ ಪಂಚನಾ ಿಮಯನ್ನು ನಾನು ಬರೆದು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಕಲಂ 65 ಬಿ ಪ್ರಮಾಣಪತ್ರಕ್ಕೆ ಸುಳ್ಳಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 746/2024**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ರಾಘವೇಂದ್ರ

ತಂದೆಯ ಹೆಸರು : ನಾಗಪ್ಪ ನಾಯ್ಕ

ವಯಸ್ಸು : 28 ವರ್ಷ

ಉದ್ಯೋಗ : ಆಟೋ ಚಾಲಕ

ವಾಸ್ತವ್ಯ : ಮಟ್ಟಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 10/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಯಾವುದೇ ಹೇಳಿಕೆ ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದನ್ನು ಯಾರು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಘಟನೆಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

(**ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**)

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 20.10.2023 ರಂದು ಬೆಳಿಗ್ಗೆ ರಾತ್ರಿ 3.00 ಗಂಟೆ ಸುಮಾರಿಗೆ ಆರೋಪಿತರು ನಮ್ಮ ಮನೆಯ ಕಂಪೌಂಡಿನ ಹೊರಗಡೆ ನಿಂತು ದೊಡ್ಡದಾಗಿ ಕೂಗಾಡುತ್ತಾ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅವಾಚ್ಯ ಶಬ್ದದಿಂ ಬೈದು ನಂತರ ನಾನು ಮತ್ತು ನನ್ನ ತಾಯಿ ಹೊರಗಡೆ ಬಂದಾಗ ಇಲ್ಲಿಗೆ ಬಂದು ಯಾಕೆ ಬಂದು ಗಲಾಟೆ ಮಾಡುತ್ತಿದ್ದೀರಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡನಿಂದ ನನ್ನ ಮನೆಯ ಕಂಪೌಂಡಿನ ಒಳಗೆ ಬಂದು ನನ್ನ ತಾಯಿಗೆ ಅವಾಚ್ಯ ಶಬ್ದದಿಂದ ಬೈದು ಅವರ ಜಡೆ ಹಿಡಿದು ಎಳೆದಾಗಿ ಅವರಿಗೆ ಕೆಳಗೆ ಬಿಳಿಸಿ ಕೈಯಿಂದ ಹೊಡೆದು ನಂತರ ಕೈಯಲ್ಲಿದ್ದ ರಾಡ್ ನಿಂದಅವರ ಕೈ ಹಾಗೂ ಕಾಲಿಗೆ ಹೊಡೆದರು ಎಂದರೆ ಸರಿಯಲ್ಲ. ಇದರಿಂದ ಅವರಿಗೆ ಗಾಯವಾಗಿತ್ತು ಎಂದರೆ ಸರಿಯಲ್ಲ. ನಾನು, ನನ್ನ ಅಣ್ಣ ಹಾಗೂ ನನ್ನ ತಂದೆಯವರು ಸೇರಿ ಜನಗ ಬಿಡಿಸಿದ್ದರು ಎಂದರೆ ಸರಿಯಲ್ಲ. ರಾಡ್ ನಿಂದ ಹಲ್ಲೆ ಮಾಡಿದಾಗ ನನ್ನ ಕುತ್ತಿಗೆ ಹಾಗೂ ಭುಜಕ್ಕೆ ಪೆಟ್ಟು ಆಗಿತ್ತು ಎಂದರೆ ಸರಿಯಲ್ಲ. ಗುನ್ನಾ ಸ್ಥಳಕ್ಕೆ ಸದರಿ

ಸಮಯದಲ್ಲಿ ಯಾರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಕುರಿತು ನಾನು ಯಾವುದೇ ಹೇಳಿದೆಯನ್ನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಸಂಬಂಧಿಕರಾದ ಕಾರಣ ಅವರ ಜೊತೆಗೆ ರಾಜಿ ಮಾಡಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಆಗಿದ್ದರೂ ಸಹ ಆರೋಪಿತರು ನನ್ನ ಸಂಬಂಧಿಕರಾದ ಕಾರಣ ಘಟನೆ ಆಗಲಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 746/20 24**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ನಾಗಮ್ಮ

ಗಂಡನ ಹೆಸರು : ನಾಗಪ್ಪ ನಾಯ್ಕ

ವಯಸ್ಸು : 47 ವರ್ಷ

ಉದ್ಯೋಗ : ಮನೆ ಕೆಲಸ

ವಾಸ್ತವ್ಯ : ಮಟ್ಟಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 10/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಪಿರ್ಯಾದನ್ನು ಬರೆದದ್ದು ನನ್ನ ಮಗ. ಅವರ ಹೆಸರು ರಾಘವೇಂದ್ರ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು. ದೂರಿನಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ . ನನ್ನ ಮಗ ಸಹಿ ಹಾಕಲು ಹೇಳಿದ್ದ ಕಾರಣ ನಾನು ಸಹಿ ಮಾಡಿದ್ದು ಇರುತ್ತದೆ. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು ನಿಪಿ-3 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪೊಟೋವನ್ನು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 20.10.2023 ರಂದು ರಾತ್ರಿ 3.00 ಗಂಟೆ ಸುಮಾರಿಗೆ ಆರೋಪಿತರು ನಮ್ಮ ಮನೆಯ ಕಂಪೌಂಡನ ಹೊರಗಡೆ ನಿಂತು ದೊಡ್ಡದಾಗಿ ಕೂಗಾಡುತ್ತಾ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ. ಎಂದರೆ ಸರಿಯಲ್ಲ. ನೀವು ಇಲ್ಲಿ ರಾತ್ರಿ ಯಾಕೆ ಬಂದು ಗಲಾಟೆ ಮಾಡುತ್ತಿದ್ದೀರಿ ಎಂದು ನಮಗೆ ಕೇಳಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡನಿಂದ ನನ್ನ

ಮನೆಯ ಕಂಪೌಂಡಿನ ಒಳಗೆ ಬಂದು ನನಗೆ ಅವಾಚ್ಯ ಶಬ್ದದಿಂದ ಬೈದು ನನ್ನ ಜಡೆ ಹಿಡಿದು ಎಳೆದಾಗಿ ಕೆಳಗೆ ಬಿಳಿಸಿ ಕೈಯಿಂದ ಹೊಡೆದು ನಂತರ ಕೈಯಲ್ಲಿದ್ದ ರಾಡ್ ನಿಂದ ನನಗೆ ಕೈ ಹಾಗೂ ಕಾಲಿಗೆ ಹೊಡೆದರು ಎಂದರೆ ಸರಿಯಲ್ಲ. ಇದರಿಂದ ನನಗೆ ಗಾಯವಾಗಿತ್ತು ಎಂದರೆ ಸರಿಯಲ್ಲ. ನನ್ನ ಸೀರೆ ಹಿಡಿದು ಎಳೆದಾಗಿ ನನ್ನ ಮಾನಕ್ಕೆ ಕುಂದು ಬರುವಂತೆ ವರ್ತಿಸಿರುತ್ತಾರೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಿಸಿ ದಿಃ 21.10.2023 ರಂದು ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 12.30 ರಿಂದ 1.30 ರವರೆಗೆ ಮಾಡಿದ್ದರು ಎಂದರೆ ಸರಿಯಲ್ಲ. ಪಂಚನಾವೆ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಂಬಂಧಿಕರಾದ ಕಾರಣ ಅವರ ಜೊತೆಗೆ ರಾಜಿ ಮಾಡಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಪಿರ್ಯಾದನ್ನು ನೀಡಿ ಪಂಚನಾಮೆ ಮಾಡಿ ಘಟನೆ ಆಗಿದ್ದರೂ ಸಹ ಆರೋಪಿತರು ನನ್ನ ಸಂಬಂಧಿಕರಾದ ಕಾರಣ ಘಟನೆ ಆಗಿದ್ದರೂ ಸಹ ಆಗಲಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ745/2024**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ನೀಲಾ

ಗಂಡನ ಹೆಸರು : ಆನಂದ ನಾಯ್ಕ

ವಯಸ್ಸು : 37 ವರ್ಷ

ಉದ್ಯೋಗ : ಟೇಲರಿಂಗ್

ವಾಸ್ತವ್ಯ : ಮುಟ್ಟಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 10/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮದ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಚೆ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 19.10.2023 ರಂದು ನನ್ನ ಗಂಡ ಚಾಸಾ –1 ರವರು ಅವರ ಪರಿಚಯದವರಾದ ಮಾರುತಿ ನಾಯ್ಕರವರ ಅಂತ್ಯಸಂಸ್ಕಾರಕ್ಕಾಗಿ ಹೋಗಿದ್ದರು ಎಂದರೆ ಸರಿಯಲ್ಲ. ದಿಃ 20.10.2023 ರಂದು ಬೆಳಿಗ್ಗೆ 3.30 ಗಂಟೆಯ ಸುಮಾರಿಗೆ ನಮ್ಮ ಮನೆಯ ಹೊರಗೆ ಗಲಾಟೆ ಆದ ಶಬ್ದ ಕೇಳಿದ್ದರಿಂದ ನಾನು ಮನೆಯಿಂದ ಹೊರಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ . ಆಗ ಆರೋಪಿತ ನನ್ನ ಗಂಡನನ್ನು ದೂಡಿ ಆತ ನೆಲಕ್ಕೆ ಬಿದ್ದಾಗ 2 ನೇ ಆರೋಪಿ ಚಾಸಾ –1 ರವರನ್ನು ಗಟ್ಟಿಯಾಗಿ ಹಿಡಿದಿದ್ದು 1 ನೇ ಆರೋಪಿಯು ತನ್ನ ಕೈ ಮುಷ್ಟಿಯಿಂದ ಅವರ ಎಡಗಣ್ಣಿನ ಹತ್ತಿರ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ . ಹಾಗೆ 3 ನೇ ಆರೋಪಿಯು ಕಬ್ಬಿಣದ ರಾಡ್ ನಿಂದ ನನ್ನ ಗಂಡನನಿಗೆ ಹೊಡೆಯಲು ಬಂದಾಗ ಅವರು ತಪ್ಪಿಸಿಕೊಂಡಿದ್ದರಿಂದ ಅದು ಅವರ ಹಣೆಗೆ ತಾಗಿ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ . ಆಗ ನಾನು ಅವರನ್ನು ರಕ್ಷಿಸಲು ಬಂದಾಗ ನನ್ನ ಕೈ ಹಿಡಿದು ಎಳೆದು ನನ್ನ ಮಾನಕ್ಕೆ ಕುಂದು ಬರುವಂತೆ ನನಗೆ ದೂಡಿಹಾಕಿ ಗಾಯಪಡಿಸಿರುತ್ತಾರೆ ಎಂದರೆ

ಸರಿಯಲ್ಲ .  ಆಗ ಅಲ್ಲಿದ್ದ ಜನರು ಬಂದು ನನಗೆ ಹಾಗೂ ನನ್ನ ಗಂಡನಿಗೆ ರಕ್ಷಿಸಿರುತ್ತಾರೆ ಎಂದರೆ ಸರಿಯಲ್ಲ .  ಆಗ ಆರೋಪಿಗೂ ನಮಗೆ ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ .  ನಾನು ಹಾಗೂ ನನ್ನ ಗಂಡ  ಸರಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಇರುತ್ತದೆ ಎಂದರೆ ಸರಿಯಲ್ಲ .ಈ ಕುರಿತು ದೂರು ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ.

ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿ ನನ್ನ ಮೇಲೆ ಮರುದೂರು ನೀಡಿದ ಕಾರಣಕ್ಕೆ ಅವರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ745/2024**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಆನಂದ

ತಂದೆಯ ಹೆಸರು : ನಾರಾಯಣ ನಾಯ್ಕ

ವಯಸ್ಸು : 47 ವರ್ಷ

ಉದ್ಯೋಗ : ಆಟೋ ಚಾಲಕ

ವಾಸ್ತವ್ಯ : ಮುಟ್ಟಳ್ಳಿ ಚಿ ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 10/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮಧ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಛೆ ಇಲ್ಲ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ನಾ ಸ್ಥಳದ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು.ಆದರೆ ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 19.10.2023 ರಂದು ನಾನು ಮನೆಯಲ್ಲಿದ್ದಾಗ ನನ್ನ ಪರಿಚಯದವರಾದ ಚಾಸಾ - 2 ರವರು ತಾನು ಮಾರುತಿ ನಾಯ್ಕರವರ ಅಂತ್ಯಸಂಸ್ಕಾರಕ್ಕಾಗಿ ಹೋಗಿದ್ದಾಗಿ ತನಗೆ ಕುಡಿಯಲು ನೀರು ಬೇಕೆಂದು ಫೋನ್ ಮೂಲಕ ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ . ನಾನು ಎದ್ದು ಮನೆಯ ಹೊರಗಡೆ ಬೆಳಿಗ್ಗೆ 3.30 ಗಂಟೆಯ ಸುಮಾರಿಗೆ ಚಾಸಾ -2 ರವರಿಗೆ ಕುಡಿಯಲು ನೀರು

ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . ಆಗ ನಾನು ಹೊರಗಡೆ ಇದ್ದಾಗ ನಮ್ಮ ಪಕ್ಕದ ಮನೆಯವರಾದ ರಾಘವೇಂದ್ರ ನಾಗಪ್ಪ ನಾಯ್ಕ ಈತನು ಯಾಕೆ ಇಷ್ಟು ಹೊತ್ತಿಗೆ ಹೊರಗಡೆ ನಿಂತಿದ್ದೀಯ ಎಂದು ಜೋರಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ . ನಾನು ಏಳುವುದೇ ಇಷ್ಟು ಹೊತ್ತಿಗೆ ಎಂದು ಹೇಳಿದಾಗ ಆತ ನನಗೆ ದೂಡಿಹಾಕಿರುತ್ತಾನೆ ಎಂದರೆ ಸರಿಯಲ್ಲ . ನಂತರ ಆತನ ತಂದೆ ಹಾಗೂ ಅಣ್ಣನಾದ ಆರೋಪಿ 2 ಮತ್ತು 3 ಇವರು ಅಲ್ಲಿಗೆ ಬಂದು ಅವಾಚ್ಯವಾಗಿ ಬೈದು ಕೆಳಗೆ ಬಿದ್ದಿದ್ದ ನನಗೆ ಕೈ ಮುಷ್ಟಿಯಿಂದ ನನ್ನ ಎಡಗಣ್ಣಿನ ಹತ್ತಿರ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ . ಹಾಗೆ 3 ನೇ ಆರೋಪಿಯು ತಾನು ತಂದಿದ್ದ ಕಬ್ಬಿಣದ ರಾಡ್ ನಿಂದ ನನ್ನ ತಲೆ ಹಾಗೂ ಹಣೆಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡಿದ್ದರಿಂದ ಅದು ನನ್ನ ಹಣೆಗೆ ತಾಗಿ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ . ಆಗ ನನ್ನ ಚೀರಾಟ ಕೇಳಿ ನನ್ನ ಹೆಂಡತಿ ಚಾಸಾ 6 ರವರು ಆ ಸ್ಥಳಕ್ಕೆ ಬಂದಿದ್ದು ಆಗ 1 ನೇ ಮತ್ತು ಆರೋಪಿ ಹಾಗೂ ಆತನ ತಂದೆ ನನ್ನ ಹೆಂಡತಿಯನ್ನು ದೂಡಿದಾಗ ಆಕೆ ನೆಲಕ್ಕೆ ಬಿದ್ದು ಆಕೆಗೆ ನೋವು ಆಗಿದ್ದು ಇರುತ್ತದೆ ಎಂದರೆ ಸರಿಯಲ್ಲ . ಸದರಿ ಘಟನೆಯಿಂದಾದ ಗಾಯದ ಕುರಿತು ಸರಕಾರಿ ಅಸ್ಪತ್ರೆಯಲ್ಲಿ ನಾನು ಹಾಗೂ ನನ್ನ ಹೆಂಡತಿ ಚಿಕಿತ್ಸೆ ಪಡೆದಿದ್ದು ಇರುತ್ತದೆ ಎಂದರೆ ಸರಿಯಲ್ಲ . ದಿಃ 20.10.2023 ರಂದು ಈ ಕುರಿತು ದೂರು ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ.

ದಿಃ20.10.2023 ರಂದು ಚಾಸಾ –9 ಇವರು ಘಟನೆ ನಡೆದ ಸ್ಥಳದಲ್ಲಿ ಪಂಚರಾದ 2 ಮತ್ತು 3 ಇವರನ್ನು ಪಂಚನಾಮೆಗೆ ಕರೆದಾಗ ಗುನ್ಹಾ ಸ್ಥಳ ನಾನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಆಗ ಗುನ್ಹಾಸ್ಥಳದಲ್ಲಿ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಕಬ್ಬಿಣದ ರಾಡ್ ಮತ್ತು ಕಟ್ಟಿಗೆ ಬಡಿಗೆಯನ್ನು ನಾನೇ ಪೊಲೀಸರಿಗೆ ನೀಡಿದ್ದು ಅದನ್ನು ಪೊಲೀಸರು ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೆ 4.00 ರಿಂದ 5.00 ರವರೆಗೆ ಸ್ಥಳದಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿ ನನ್ನ ಮೇಲೆ ಮರುದೂರು ನೀಡಿದ ಕಾರಣಕ್ಕೆ ಅವರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1420/2023**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ1**

ಸಾಕ್ಷಿದಾರರ ಹೆಸರು : ವಿನಾಯಕ

ತಂದೆಯ ಹೆಸರು : ಆನಂದ ನಾಯ್ಕ

ವಯಸ್ಸು : 34 ವರ್ಷ

ಉದ್ಯೋಗ : ಕಿರಿಯ ಆರೋಗ್ಯ ನೀರೀಕ್ಷಕರು, ಪಟ್ಟಣ ಪಂಚಾಯತ, ಜಾಲಿ

ವಾಸ್ತವ್ಯ : ಸರಕಾರಿ ವಸತಿ ಗೃಹ, ಪಟ್ಟಣ ಪಂಚಾಯತ , ಜಾಲಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 07/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 18.01.2022 ರಂದು ನಾನು ಪಟ್ಟಣ ಪಂಚಾಯತ ಜಾಲಿ ಕಾರ್ಯಾಲಯಕ್ಕೆ ಹೆಚ ಡಿ ಎಪ್ ಸಿ ಇನ್ಸೂರನ್ಸ ಕಂಪನಿಯವರು ಹೆಚ್ ವಿ ಹರ್ಷವರ್ದನ ಎಂಬುವವರು ಪಟ್ಟಣ ಪಂಚಾಯತದಿಂದ ಮರಣ ಪ್ರಮಾಣಪತ್ರ ಪಡೆದಿದ್ದು ಅದನ್ನು ಸುಳ್ಳು ದಾಖಲೆ ನೀಡಿ ಪಡೆದಿದ್ದು ಅವರು ಮೃತರಾಗಿಲ್ಲವೆಂದು ಮಾಹಿತಿ ನೀಡಿದ್ದು ಇರುತ್ತದೆ. ನಂತರ ಸದರಿ ಪ್ರಮಾಣಪತ್ರ ಪರಿಶೀಲನೆ ಮಾಡಿದಾಗ ನಮ್ಮ ಕಾರ್ಯಾಲಯದಿಂದ ಸದರಿ ಮರಣ ಪತ್ರ ಪಡೆದ ಬಗ್ಗೆ ತಿಳಿಸಿದ್ದು ಮೇಲಾಧಿಕಾರಿಗಳ ಜೊತೆ ಈ ಬಗ್ಗೆ ಚರ್ಚಿಸಿದಾಗ ಅವರ ಅನುಮತಿಯಂತೆ ಪೊಲೀಸ ಠಾಣೆಗೆ ದಿಃ 19.01.2022 ರಂದು ದೂರು ನೀಡಿದ್ದು ಇರುತ್ತದೆ. ಪೊಲೀಸರು ತನಿಖೆ ನಡೆಸಿ ನಮ್ಮ ಕಚೇರಿಯಿಂದ 3 ನೇ ಆರೋಪಿ ಇತರ ಆರೋಪಿಗಳಿಂದ ಹಣ ಪಡೆದು ಸದರಿ ಪ್ರಮಾಣಪತ್ರ ಪಡೆದ ಬಗ್ಗೆ ತಿಳಿಸಿದ್ದು ಇರುತ್ತದೆ. ಸ್ವಲ್ಪ ದಿನಗಳ ನಂತರ ಪೊಲೀಸರು ನಮ್ಮ ಕಚೇರಿಗೆ ಹಾಜರಾಗಿ ಪಂಚನಾಮೆ ನಡೆಸಿರುತ್ತಾರೆ. ದಿಃ 31.05.2022 ರಂದು ಠಾಣೆಗೆ ಕರೆಯಿಸಿ ಮರು ವಿಚಾರಣೆ ನಡೆಸಿದ್ದು ಪೋನ್ ಪೇ ಮೂಲಕ 3 ನೇ ಆರೋಪಿತರು ಹಣ ಪಡೆದಿರುವುದಾಗಿ ತಿಳಿಸಿರುತ್ತಾರೆ.

2. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 3 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಪಿರ್ಯಾದನ್ನು ನೀಡಿಲು ನಮ್ಮ ಮುಖ್ಯಾಧಿಕಾರಿಗಳು ಮೌಖಿಕವಾಗಿ ಆದೇಶ ಮಾಡಿದ್ದರು. ಈ ಬಗ್ಗೆ ನಾನು ಪಿರ್ಯಾದನ್ನು ನೀಡುವ ಕಾಲಕ್ಕೆ ಹೇಳಿರುವುದಿಲ್ಲ. ಸದರಿ ಪ್ರಕರಣದ ತನಿಖಾ ಕಾಲಕ್ಕೆ ತನಿಖಾಧಿಕಾರಿಗಳು ಸದರಿ ದೂರು ದಾಖಲಿಸಲು ನನಗೆ ಅಧಿಕಾರ ಪತ್ರ ಕೇಳಿದ್ದುಇರುವುದಿಲ್ಲ. ದೂರು ದಾಖಲಿಸುವ ಕಾಲಕ್ಕೆ ನಾನು ಪಟ್ಟಣ ಪಂಚಾಯತಿಯಲ್ಲಿ ಕಿರಿಯ

ಆರೋಗ್ಯ ನಿರೀಕ್ಷಕನಾಗಿದ್ದೇನು. ನಮ್ಮ ಕಚೇರಿಯಲ್ಲಿ ಎಷ್ಟು ಜನ ಸಿಬ್ಬಂದಿಗಳು ಇದ್ದಾರೆ ಎಂದು ದಾಖಲೆಗಳು ಇವೆ. ಯಾವ ಯಾವ ಸಿಬ್ಬಂದಿಗಳು ಯಾವೆಲ್ಲಾ ಕರ್ತವ್ಯ ನಿರ್ವಹಿಸಬೇಕೆಂದು ದಾಖಲೆ ಇವೆ. ಮರಣ ಪ್ರಮಾಣ ಪತ್ರವನ್ನು ನೀಡುವ ಅಧಿಕಾರವು ಮುಖ್ಯ ಅಧಿಕಾರಿ ಹಾಗೂ ನೊಂದಣಾಧಿಕಾರಿಗಳಿಗೆ ಇರುತ್ತವೆ. ಆ ಕಾಲಕ್ಕೆ ಜನನ ಮರಣ ನೊಂದಣಾಧಿಕಾರಿಯು ಮುಖ್ಯ ಅಧಿಕಾರಿಯೇ ಆಗಿದ್ದರು. ಮುಖ್ಯ ಅಧಿಕಾರಿಯೇ ಜನನ ಮರಣ ಪ್ರಮಾಣಪತ್ರಕ್ಕೆ ಡಿಜಿಟಲ್ ಸಹಿ ಮಾಡುತ್ತಾರೆ. ಸದರಿ ಪ್ರಕಣದಲ್ಲಿ ಮರಣ ಪ್ರಮಾಣಪತ್ರ ನೀಡುವ ಕಾಲಕ್ಕೆ ರಾಮಚಂದ್ರ ವೆರ್ಣೇಕರ್ ರವರು ಮುಖ್ಯ ಅಧಿಕಾರಿ ಆಗಿದ್ದರು. ಆ ಕಾಲಕ್ಕೆ ಜನನ ಮರಣ ನೊಂದಣಾಧಿಕಾರಿ ನಾನೇ ಆಗಿದ್ದೇನು. ನಮ್ಮ ಕಚೇರಿಯ ಎಲ್ಲಾ ಸೀಲುಗಳು ಮುಖ್ಯ ಅಧಿಕಾರಿಗಳ ಕಬ್ಜಾದಲ್ಲಿ ಇರುತ್ತದೆ. ದೂರು ನೀಡುವ ಸಮಯದಲ್ಲಿ ನಾನು ಯಾವುದೇ ದಾಖಲೆಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದು ಇರುವುದಿಲ್ಲ. 2 ಮತ್ತು 3 ನೇ ಆರೋಪಿಗಳ ಸಹಿ ಯಾವುದೇ ದಾಖಲೆಯ ಮೇಲೆ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ . ಸದರಿ ಪ್ರಕರಣದಲ್ಲಿ ದೂರು ನೀಡುವ ಮೊದಲು ಮರಣ ದಾಖಲೆಗೆ ಸಂಬಂಧಿಸಿದ ಕಡತವನ್ನು ನಾನು ನೋಡಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದ ಮರಣ ದಾಖಲೆಯನ್ನು ನೀಡುವ ಪ್ರಕ್ರಿಯೇಯ ಕಾಲಕ್ಕೆ ಯಾವ ಯಾವ ಸಿಬ್ಬಂದಿಗಳು ಯಾವ ಯಾವ ವಿಭಾಗದಲ್ಕಿ ಕಾರ್ಯನಿರ್ವಹಿಸುತ್ತಿದ್ದರು ಎಂಬ ಬಗ್ಗೆ ದಾಖಲೆಗಳು ಇವೆ ಆದರೆ ತನಿಖಾಧಿಕಾರಿಗಳು ನನ್ನಿಂದ ಅಂತಹ ಯಾವುದೇ ದಾಖಲೆ ಪಡೆದಿಲ್ಲ. ದಿಃ 31.05.2022 ರಂದು ನನ್ನ ಹೇಳಿಕೆಯನ್ನು ಪೊಲೀಸರು ಪಡೆದಿರುತ್ತಾರೆ. 3 ಮತ್ತು 4 ನೇ ಆರೋಪಿತರು ಸದರಿ ಪ್ರಕರಣಕ್ಕೆ ಸಂಬಂಧಿಸಿದ ವಿಷಯದಲ್ಲಿ ಯಾವುದೇ ತಪ್ಪು ಮಾಡಿದ್ದಾರೆ ಎಂದು ನಾನು ಕಡತವನ್ನು ಪರಿಶೀಲನೆ ಮಾಡಿ ದೂರನ್ನು ನೀಡಿಲ್ಲ. ಈ ದಿನ ನಾನು ಸದರಿ ಪ್ರಕ್ರಿಯೆಯ ದಾಖಲೆಗಳನ್ನು ಪರಿಶೀಲನೆ ಮಾಡಿ ಸಾಕ್ಷಿ ನೀಡಲು ಬಂದಿಲ್ಲ. ಮೇಲಾಧಿಕಾರಿಯಾದ ನಮ್ಮ ಮುಖ್ಯ ಅಧಿಕಾರಿಗಳು ದೂರು ನೀಡಲು ಹೇಳಿದ್ದರಿಂದ ದೂರು ನೀಡಿರುತ್ತೇನೆ. 3 ಮತ್ತು 4 ನೇ ಆರೋಪಿತರು ಯಾವುದೇ ಅಪರಾಧ ಮಾಡದಿದ್ದರೂ ಸಹ ಮೇಲಾಧಿಕಾರಿಗಳಿಗೆ ಹೆದರಿ ನಾನು ದೂರು ನೀಡಿದ್ದು ಇರುತ್ತದೆ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯಲ್ಲಿ ಬರೆದ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು : 4 ನೇ ಆರೋಪಿ ಪರ ವಕೀಲರು 3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 187/2020**

**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಸುರೇಶ
ತಂದೆಯ ಹೆಸರು : ದುರ್ಗಾ ನಾಯ್ಕ
ವಯಸ್ಸು : 29 ವರ್ಷ
ಉದ್ಯೋಗ : ಶಿಲ್ಪಿ ಕೆಲಸ
ವಾಸ್ತವ್ಯ : ಕಾರಗದ್ದೆ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 07/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ನೆನಪಿಲ್ಲ. ಪೊಲೀಸರು ನನಗೆ ಸಹಿ ಮಾಡಲು ಕರೆದ ಕಾರಣ ನಾನು ಸಹಿ ಮಾಡಿದ್ದು ಇರುತ್ತದೆ.

2. ಸಾಕ್ಷಿಯು ಗುನ್ಹಾ ಸ್ಥಳದ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- ಎಂದು , ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ಹಾ ಸ್ಥಳದ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿ ಬರೆದ ವಿಷಯದ ಬಗ್ಗೆ ಮಾಹಿತಿ ಇಲ್ಲವೆಂದು ನುಡಿದಿರುತ್ತಾರೆ. ಸಾಕ್ಷಿಯು ನಿಪಿ- 3 ಮತ್ತು 4 ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಯಾವ ಕಾರಣಕ್ಕೆ ತೆಗೆದರು ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 31.10.2019 ರಂದು ಚಾಸಾ -1 ರವರು ನನಗೆ ಹಾಗೂ ಚಾಸಾ 3 ರವರನ್ನು ಭಟ್ಕಳದ ಗುಳ್ಮಿ ಬ್ರಿಜ್ ಹತ್ತಿರ ಬರಮಾಡಿ ಜಪ್ತು ಮಾಡಿದ ಜಾನುವಾರು ಹಾಗೂ ವಾಹನ ಸಂಖೆ ಕೆಎ 19 ಸಿ 6228 ನೇದನ್ನು ಪರಿಶೀಲನೆ ಮಾಡಿ ಪಂಚನಾಮೆ ನಡೆಸಲು ನಮ್ಮನ್ನು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಾಹನ ಹಾಗೂ ಜಾನುವಾರುಗಳನ್ನು ಚಾಸಾ -1 ರವರು ತೋರಿಸಿರುತ್ತಾರೆ

ಎಂದರೆ ಸರಿಯಲ್ಲ. ಸದರಿ ಜಾನುವಾರುಗಳಲ್ಲಿ ಒಟ್ಟು 3 ಆಕಳು , 6 ಹೋರಿಗಳು ಇದ್ದವೆಂದರೆ ಎಂದರೆ ಸರಿಯಲ್ಲ. ಸದರಿ ಜಾನುವಾರುಗಳ ಬಣ್ಣ ಕಪ್ಪು ಹಾಗೂ ಬಿಳಿ ಬಣ್ಣದಾಗಿರತ್ತವೆ ಎಂದರೆ ಸರಿಯಲ್ಲ. ಸದರಿ ವಶಪಡಿಸಿದಕೊಂಡ ವಾಹನ ಬುಲೇರೋ ವಾಹನವಾಗಿದ್ದು ಅದು ಕಪ್ಪು ಮತ್ತು ಹಳದಿ ಬಣ್ಣದಾಗಿದ್ದು ಅದನ್ನು ಪೊಲೀಸರು ನನ್ನ ಸಮಕ್ಷಮ ಜಪ್ತುಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಸಂಜೆ 5.00 ರಿಂದ 6.00 ಗಂಟೆಯ ಸಮಯದಲ್ಲಿ ಸ್ಥಳದಲ್ಲಿ ಬರೆಯಲಾಗಿತ್ತು ಎಂದರೆ ಸರಿಯಲ್ಲ.

ದಿಃ 31.10.2019 ರಂದು ಚಾಸಾ –1 ರವರು ನನಗೆ ಹಾಗೂ ಚಾಸಾ 3 ರವರನ್ನು ಸಾಗರ ರಸ್ತೆಯಲ್ಲಿರುವ ಪುರಸಭೆಯ ಘನತ್ಯಾಜ್ಯ ನಿರ್ವಹಣಾ ಘಟಕದ ಹತ್ತಿರ ಸದರಿ ಪ್ರಕರಣದಲ್ಲಿ ಮೃತಪಟ್ಟ 1 ಆಕಳು , 2 ಹೋರಿಗಳನ್ನು ವಿಲೇವಾರಿ ಮಾಡು ನಡೆಸಿದ ಪಂಚನಾಮೆಯಲ್ಲಿ ನಾನು ಪಂಚನಾಗಿ ಹಾಜರಿದ್ದೇನು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮೃತಪಟ್ಟ 3 ಜಾನುವಾರುಗಳನ್ನು ಧಫನ್ ಮಾಡಿ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 6.30 ರಿಂದ 7.30 ರ ತನಕ ಕೃತಕ ಬೆಳಕಿನ ಸಹಾಯದಿಂದ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಆರೋಪಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

ಸಿಸಿ ನಂಬರಃ11 /2022

ಸಾಕ್ಷಿಃ ಸಿಡಬ್ಲ್ಯೂಃ 14, ಪಿ.ಡಬ್ಲ್ಯೂಃ 10

ಸಾಕ್ಷಿದಾರನ ಹೆಸರು : ದಿವಾಕರ್ ಪಿ ಎಮ್

ತಂದೆಯ ಹೆಸರು : ಮಾರುತಿ ಪಾಯಕ್

ವಯಸ್ಸು : 44 ವರ್ಷ

ಉದ್ಯೋಗ : ಪಿಐ , ಬ್ರಹ್ಮಾವರ ವೃತ್ತ ಪೋಲಿಸ ಠಾಣೆ, ಉಡುಪಿ.

ವಾಸ್ತವ್ಯ : ಬ್ರಹ್ಮಾವರ, ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/03/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 15.10.2021 ರಿಂದ ದಿನಾಂಕಃ 28.01.2023 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 21.07.2021 ರಂದು ಚಾಸಾ 13 ರವರಿಂದ ತನಿಖೆಯವರಿಂದ ವಹಿಸಿಕೊಂಡಿದ್ದು ಇರುತ್ತದೆ. ಅದೇ ದಿನ ಚಾಸಾ 11 ರವರಿಂದ ಪ್ರಮಾಣಪತ್ರ ಪಡೆದಿರುತ್ತೇನೆ. ದಿಃ 26.10.2021 ರಂದು ಸಾಕ್ಷಿದಾರರಾದ ಚಾಸಾ – 10 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 30.11.2021 ರಂದು ಆರ್ ಟಿ ಒ ಕಚೇರಿಯಿಂದ ವಾಹನದ ಬಿ ಎಕ್ಸ್ಟ್ರ್ಯಾಕ್ಟ ಪ್ರತಿ ಪಡೆದಿರುತ್ತೇನೆ. ದಿಃ 25.10.2021 ರಂದು ಪುರಸಭೆ ಭಟ್ಕಳದಿಂದ ಗುನ್ಹಾ ಸ್ಥಳದ ಮನೆಯ ಪ್ರಮಾಣಪತ್ರ ಪಡೆದಿರುತ್ತೇನೆ.ದಿಃ 30.11.2021 ರಂದು ಆರೋಪಿತರ ಮೇಲೆ ಸಾಕ್ಷ ಪುರಾವೆ ಇದ್ದ ಕಾರಣ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

3. ಸಾಕ್ಷಿಯು ವಾಹನದ ಬಿ ಎಕ್ಸ್ಟ್ರ್ಯಾಕ್ಟ ಪ್ರತಿ ನೋಡಿ ಗುರುತಿಸಿದ್ದು ಅದನ್ನು ನಿಪಿ–11 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–7 ಮತ್ತು 8 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಬಿ ಮತ್ತು 8 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲು –1 ನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ಚಾಸಾ –13 ರವರಿಂದ ಕಡತವನ್ನು ಪಡೆದ ನಂತರ ನಾನು ಪರಿಶೀಲನೆ ಮಾಡಿದ್ದೇನೆ. ಸದರಿ ಪ್ರಕರಣದ ಪಿರ್ಯಾದಿದಾರರು ಅಂದಿನ ನಮ್ಮ ಅಧೀನ ಅದಿಕಾರಿ ಆಗಿದ್ದರು. ಸದರಿ ಪ್ರಕರಣದಲ್ಲಿ

ಪಂಚರನ್ನು ಹೊರತುಪಡಿಸಿ ಉಳಿದ ಪ್ರತ್ಯಕ್ಷ ಸಾಕ್ಷಿದಾರರು ನಮ್ಮ ಸಿಬ್ಬಂದಿಗಳು ಆಗಿದ್ದಾರೆ. ಸದರಿ ಪ್ರಕರಣದಲ್ಲಿ ನಾವು ಸಾಧಿಸುವ ಬಂದರ್ ರಸ್ತೆ ಪೂರ್ವ ಪಶ್ಚಿಮವಾಗಿದೆ . ಸದರಿ ರಸ್ತೆಯ ಉತ್ತರಕ್ಕೆ ಹಲವಾರು ಅಂಗಡಿಗಳು ಇವೆ. ಸದರಿ ರಸ್ತೆಯು ಜನನಿಬಿಡವಾಗಿರುವ ರಸ್ತೆ ಆಗಿದೆ ಎಂದರೆ ಸರಿ. ಅಂಗಡಿಕಾರರರು ಸದರಿ ಘಟನೆಯ ಬಗ್ಗೆ ವಿಚಾರಣೆ ಮಾಡಿಲ್ಲ ಕಾರಣ ಯಾರೂ ಮುಂದೆ ಬರಲಿಲ್ಲ. ಸಾಕ್ಷಿ ಕೊಡಲು ಮುಂದೆ ಬರದೇಇದ್ದವರ ವಿರುದ್ಧ ಕ್ರಮ ಕೈಗೊಂಡಿಲ್ಲ. ಗುನ್ಹಾ ಸ್ಥಳದ ಜಾಗದ ಸರ್ವೆ ನಂಬರ್ ಹಾಗೂ ಅದು ಎಷ್ಟು ವಿಸ್ತೀರ್ಣದಲ್ಲಿದೆ ಎಂದು ಗೊತ್ತಿಲ್ಲ ಹಾಗೂ ಅದು ಯಾರ ಹೆಸರಲ್ಲಿ ಇದೆ ಎಂಬ ಬಗ್ಗೆ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಚಾಸಾ –10 ರವರು ನನ್ನ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಾಸಾ –1 ರವರು ಅಂಕೆ ಸಂಕೆಗಾಗಿ ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಯಾವುದೇ ತನಿಖೆ ನಾನು ಮಾಡದೇ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಧನೆ ಮಾಡತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸಧ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ:701 /2021**

**ಸಾಕ್ಷಿ: ಸಿಡಬ್ಲ್ಯೂ: 13, ಪಿ.ಡಬ್ಲ್ಯೂ: 10**

ಸಾಕ್ಷಿದಾರನ ಹೆಸರು : ದಿವಾಕರ್ ಪಿ ಎಮ್

ತಂದೆಯ ಹೆಸರು : ಮಾರುತಿ ಪಾಯಕ್

ವಯಸ್ಸು : 44 ವರ್ಷ

ಉದ್ಯೋಗ : ಪಿಐ , ಬ್ರಹ್ಮಾವರ ವೃತ್ತ ಪೋಲಿಸ ಠಾಣೆ, ಉಡುಪಿ.

ವಾಸ್ತವ್ಯ : ಬ್ರಹ್ಮಾವರ, ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/03/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 15.10.2021 ರಿಂದ ದಿನಾಂಕಃ 28.01.2023 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 05.02.2021 ರಂದು ತನಿಖೆಯನ್ನು ಚಾಸಾ –12 ರವರಿಂದ ವಹಿಸಿಕೊಂಡಿದ್ದು ನಂತರ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು ಇರುತ್ತದೆ. ಪಂಚನಾಮೆ ಕಾಲಕ್ಕೆ ಚಾಸಾ –1 ರವರು ಹಾಜರುಪಡಿಸಿದ ಖಾಕಿ ಯುನಿಫಾರ್ಮ ಹಾಗೂ ಅಲ್ಲಿ ಬಿದ್ದಿದ್ದ ಕಾಡು ಜಾತಿಯ ದೊಣ್ಣೆಯನ್ನು ವಶಪಡಿಸಿಕೊಂಡಿದ್ದು ಸ್ಥಳದಲ್ಲಿ ಕಚ್ಚಾ ನಕಾಶೆ ಹಾಗೂ ಪೊಟೋ ತೆಗೆದಿದ್ದು ಇರುತ್ತದೆ. ಜಪ್ತು ಪಡಿಸಿದ ವಸ್ತುವನ್ನು ಪಿ ಎಫ್ ನಂಬರ್ 8/2021 ರಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ 4 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ. ಚಾಸ –9 ರವರ ಕಲಂ 65 ಬಿ ಪ್ರಮಾಣಪತ್ರ ಪಡೆದಿರುತ್ತೇನೆ. ಅದೇ ದಿನ ಆರೋಪಿ ಪತ್ತೆಗಾಗಿ 7.00 ಗಂಟೆ ಸುಮಾರಿಗೆ ಪಿ ಎಸ್ ಐ ಭಟ್ಕಳರವರು 2,3,5 ಆರೋಪಿಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು ಅವರನ್ನು ವಿಚಾರಣೆ ಮಾಡಿ ದಸ್ತಗಿರಿ ನಿಯಮ ಪಾಲಿಸಿದ್ದು ಇರುತ್ತದೆ. ನಂತರ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿ ನ್ಯಾಯಾಂಗ ಬಂದನಕ್ಕೆ ಕಳುಹಿಸಿದ್ದು ಇರುತ್ತದೆ.

3. ದಿಃ 21.03.2021 ರಂದು ಸದರಿ ಪ್ರಕರಣದ 1 ಮತ್ತು 4 ನೇ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗುವರೆಗೆ ನಿಯಮ ಪಾಲಿಸಿದ್ದು ಇರುತ್ತದೆ. ದಿಃ 07.06.2021 ರಿಂದು ಚಾಸಾ –1 ರವರ ಗಾಯದ ಪ್ರಮಾಣಪತ್ರವನ್ನು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿಃ 22.06.2021 ರಂದು ಡಿ ಎಸ್ ಪಿ ರವರಿಗೆ ಕೋರಿಕೆ ಪತ್ರ ಸಲ್ಲಿಸಿ ಚಾಸಾ –1 ರವರು ಕರ್ತವ್ಯ ನಿರ್ವಹಿಸಿದ ಬಗ್ಗೆ ಪ್ರಮಾಣಪತ್ರ ಪಡೆದಿರುತ್ತೇನೆ. ದಿಃ 29.06.2021 ರಂದು ಗುನ್ನಾ ಸ್ಥಳದ ನಕಾಶೆಯನ್ನು ಪಿ ಡಬ್ಲ್ಯೂ ಡಿ ಅವರಿಗೆ ಕೋರಿಕೆ ಪತ್ರ ನೀಡಿ ಪಡೆದಿರುತ್ತೇನೆ. ದಿಃ 05.07.2021 ರಂದು ಎಲ್ಲಾ 5 ಆರೋಪಿತರ ಮೇಲೆ ಸಾಕ್ಷಿ ಪುರಾವೆ ಇದ್ದ ಕಾರಣ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

4. ಸಾಕ್ಷಿಯು ಡಿ ಎಸ್ ಪಿ ಕಚೇರಿಗೆ ಬರೆ ದ ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಡಿ ಎಸ್

ಪಿ ಕಚೇರಿಯವರು ನೀಡಿದ  ಕರ್ತವ್ಯ ನಿರ್ವಹಿಸಿದ ಬಗ್ಗೆ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 12 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 12 ಎ ಎಂದು  ಗುರುತಿಸಲಾಯಿತು. ಸಾಕ್ಷಿಯು ನಿಪಿ–8 ರಲ್ಲಿರುವ  ತಮ್ಮ ಸಹಿ  ನೋಡಿ ಗುರುತಿಸಿದ್ದು ಅದನ್ನು ನಿಪಿ–8 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ.  ಸಾಕ್ಷಿಯು ಮುದ್ದೆ ಮಾಲು –1 ಮತ್ತು 2 ನ್ನು ವಿಸಿ ಮೂಲಕ ನೋಡಿ ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ  ಪರ ಶ್ರೀ ವಿ ಎಫ್ ಜಿ  ವಕೀಲರಿಂದ,**

ಸದರಿ ಪ್ರಕರಣವು ಪೊಲೀಸರ ಮೇಲೆ ಆದ ಹಲ್ಲೆಯ ಪ್ರಕರಣ ಆಗಿದೆ. ಸದರಿ ಅಪರಾಧವು ಗಂಭೀರವಾದ ಅಪರಾಧವಾಗಿದೆ. ಪಿರ್ಯಾದಿದಾರರ ಪ್ರಕಾರ ದಿಃ 05.02.2021ರ ರಾತ್ರಿ 3.00 ಗಂಟೆಗೆ ಆಗಿದೆ ಎಂದರೆ ಸರಿ. ಸದರಿ ಘಟನೆಗೆ ಸಂಬಂಧಿಸಿ ದೂರು ದಿಃ 05.02.2021ರ ಬೆಳಿಗ್ಗೆ 10.30 ಗಂಟೆಗೆ ದಾಖಲಾಗಿದೆ . ದೂರು ದಾಖಲಾಗುವ ಪೂರ್ವದಲ್ಲಿ ಚಾಸಾ –4 ರಿಂದ 8 ರವರು ಗುನ್ಹಾ ಸ್ಥಳಕ್ಕೆ ಹೋಗಿದ್ದಾರೆ ಎಂದರೆ ಸರಿ. ಚಾಸಾ 4 ರಿಂದ 8 ಇವರೆಲ್ಲರೂ ಪೊಲೀಸ್ ಅಧಿಕಾರಿಗಳು ಆಗಿದ್ದಾರೆ. ಸದರಿ ಘಟನೆಯು ಚಾಸಾ –4 ರಿಂದ 8 ಹಾಗೂ ಪಿರ್ಯಾದಿದಾರರ ಗಮನಕ್ಕೆ ಬಂದಾಗ ಆ ಸಮಯದಲ್ಲಿ ಸದರಿ ಘಟನೆಯ ಬಗ್ಗೆ  ದೂರು ದಾಖಲಿಸಿಲ್ಲ. ದೂರು ನೀಡುವ ಪೂರ್ವದಲ್ಲಿ ಪಿರ್ಯಾದಿದಾರರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದಾರೆ. ಸದರಿ ಹಲ್ಲೆಗೆ  ಸಂಬಂಧಿಸಿ ಆಸ್ಪತ್ರೆಯಿಂದ ನಮ್ಮ ಠಾಣೆಗೆ ಯಾವುದೇ ವರ್ತಮಾನ ಬಂದಿಲ್ಲ.  ಸದರಿ ಘಟನೆಯ ಬಗ್ಗೆ ರಾತ್ರಿ ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿಯ ಗಮನಕ್ಕೆ ಬಂದಿದೆ ಆದರೆ ಅವರು ವರ್ತಮಾನ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಎಲ್ಲಾ ಮಾಹಿತಿಯನ್ನು ಕಲೆ ಹಾಕುವುದು ತನಿಖಾಧಿಕಾರಿಗಳ ಕರ್ತವ್ಯ ಆಗಿದೆ ಎಂದರೆ ಸರಿ. ಪಂಚನಾಮೆಯ ಪೂರ್ವದಲ್ಲಿ ಪಂಚರಿಗೆ ನೊಟೀಸು ನೀಡಿದ್ದು ಇರುತ್ತದೆ. ಪಂಚರ ಹೆಸರು ಮತ್ತು ವಿಳಾಸವನ್ನು ನಮ್ಮ ಸಿಬ್ಬಂದಿ ನೀಡಿದ್ದಾರೆ. ಪಂಚನಾಮೆಯಲ್ಲಿ ದಸ್ತೂರು ಮಾಡಿರುವ  ಪಿಸಿ 767 ಇವರನ್ನು ಸಾಕ್ಷಿದಾರರಾಗಿ ಮಾಡಿರುತ್ತೇವೆ. ಕರ್ತವ್ಯದ ಪ್ರಮಣಪತ್ರ ನೀಡಿದ ಡಿ ವಾಯ್ ಎಸ್ ಪಿ ರವರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಹಲ್ಲೆಯ ಕಾಲಕ್ಕೆ ಪಿರ್ಯಾದಿದಾರರವರೊಂದಿಗೆ ಚಾಸಾ 8 ರವರು ಇದ್ದರು ಎಂದರೆ ಸರಿ. ಆದರೆ ಸದರಿ ವಿಷಯವನ್ನು ಚಾಸಾ 8 ತಮ್ಮ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಗುನ್ಹಾ ಸ್ಥಳವು ಮನೆಗಳು ಇರುವ ಪ್ರದೇಶ ಆಗಿದೆ. ಸದರಿ ಘಟನೆಗೆ ಸಂಬಂಧಿಸಿ ಅಕ್ಕಪಕ್ಕದವನ್ನು ವಿಚಾರಣೆ ಮಾಡಿಲ್ಲ ಎಂದರೆ ಸಾಕ್ಷಿಯ ಅಕ್ಕಪಕ್ಕದವರು ಯಾರುಾ ಸಾಕ್ಷಿ ನುಡಿಯಲು ಮುಂದೆ ಬರದೇ ಇದ್ದ ಕಾರಣ ಅವರನ್ನು ಸಾಕ್ಷಿದಾರರಾಗಿ ಮಾಡಿಲ್ಲ ಎಂದು ನುಡಿದಿರುತ್ತಾರೆ. ಗುನ್ಹಾ ಸ್ಥಳದಲ್ಲಿ ಯಾರೂ ದೊರಕದೇ ಇದ್ದ ಕಾರಣ ಯಾರಿಗೂ ನೊಟೀಸನ್ನು ನೀಡಿಲ್ಲ.  ಪಂಚನಾಮೆಯಲ್ಲಿ

ಸಮಯವನ್ನು ನಜರ್ ಚೂಕ್ ದಿಂದ ತಿದ್ದುಪಡಿ ಮಾಡಲಾಗಿದೆ. ಸದರಿ ತಿದ್ದುಪಡಿಗೆ ಪಂಚರ ಸಹಿ ಪಡೆದಿಲ್ಲ. ಚಾಸಾ –1ರ ಮೇಲೆ ಯಾವುದೇ ಹಲ್ಲೆ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ –1ರವರಿಗೆ ಹಲ್ಲೆಯಿಂದ ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ–1 ನಮ್ಮ ಸಿಬ್ಬಂದಿಯಾದ ಕಾರಣ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆ ಠಾಣೆಯ ಸೃಷ್ಟಿ ಆಗಿದೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ:850/2024**

**ಸಿ.ಡಬ್ಲ್ಯೂ: 8, ಪಿ.ಡಬ್ಲ್ಯೂ: 7**

ಸಾಕ್ಷಿದಾರರ ಹೆಸರು : ಉಮೇಶ

ತಂದೆಯ ಹೆಸರು : ಕೇಶವ ಭಂಡಾರಿ

ವಯಸ್ಸು : 54 ವರ್ಷ

ಉದ್ಯೋಗ : ಮಾರ್ಕೇಟಿಂಗ್ ಸೊಸೈಟಿ , ಭಟ್ಕಳ

ವಾಸ್ತವ್ಯ : ಹೊನ್ನಾವರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 18.01.2024 ರಂದು 38 ಕ್ವಿಂಟಲ್ ಅಕ್ಕಿ ಯನ್ನು ತಹಶೀಲ್ದಾರವರು ಜಪ್ತು ಮಾಡಿ ನಮ್ಮ ಗೊಡೌನ್ ಗೆ ತಂದಿದ್ದರು. ಸದರಿ ಅಕ್ಕಿಯನ್ನು ಭಟ್ಕಳದ ಮಾರ್ಕೇಟಿಂಗ್ ಸೊಸೈಟಿಯ ಗೊಡೌನಲ್ಲಿ ಇಟ್ಟುಕೊಂಡಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ನಾನು ಭಟ್ಕಳದ ಮಾರ್ಕೇಟಿಂಗ್ ಸೊಸೈಟಿಯಲ್ಲಿ 3 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಈಗ ನಾನು ಹೊನ್ನಾವರದಲ್ಲಿ ಕೆಲಸ ಮಾಡುತ್ತಿದ್ದೇನೆ. ತಹಶೀಲ್ದಾರ ರಿಂದ ನಮಗೆ 38 ಕ್ವಿಂಟಾಲ್ 60 ಕೆಜಿ ಅಕ್ಕಿಯನ್ನು ಇಟ್ಟುಕೊಳ್ಳಲು ಮನವಿ ಬಂದಿರುತ್ತದೆ. ಗೊಡೌನಿಗೆ ಬಂದ ನಂತರ ನಾವು ತೂಕ ಮಾಡಿರುತ್ತೇವೆ. ಸದರಿ ಅಕ್ಕಿಯನ್ನುನಾವು ಪ್ರತ್ಯೇಕವಾಗಿ ಇಟ್ಟಿದ್ದೇವು. ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ ಗೊಡೌನ್ ನಲ್ಲಿ ನಾವು ಯಾವುದೇ ಜಪ್ತು ಮಾಡಿದ ಅಕ್ಕಿ ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 3035 /2024**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಕೇಶವ

ತಂದೆಯ ಹೆಸರು : ಜಟ್ಟಪ್ಪ ನಾಯ್ಕ

ವಯಸ್ಸು : 34 ವರ್ಷ
ಉದ್ಯೋಗ : ಸೇಲ್ಸ ಎಕ್ಸಿಕ್ಯೂಟೀವ್
ವಾಸ್ತವ್ಯ : ತಲಗೇರಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಸದರಿ ಪ್ರಕರಣದಲ್ಲಿ ನಾವು ರಾಜೀಯಾಗಿದ್ದು ನನಗೆ ಸದರಿ ಪ್ರಕರಣ ಮುಂದುವರೆಸಲು ನನಗೆ ಇಚ್ಛೆ ಇರುವುದಿಲ್ಲ.

2. ಸಾಕ್ಷಿಯು ದೂರಿನಲ್ಲಿ ಇರುವ ತಮ್ಮ ಸಹಿ ನೋಡಿ ಗುರುತಿಸಿದ್ದು ದೂರಿನಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ಸದರಿ ದೂರನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ನಾ ಸ್ಥಳದ ಮಹಜರಿನಲ್ಲಿ ಇರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಯಾವ ಕಾರಣಕ್ಕೆ ಮಾಡಿದ್ದು ಇರುತ್ತದೆ ಎಂದು ಗೊತ್ತಿಲ್ಲ ಎಂದು ನುಡಿದಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಜಪ್ತು ಮಹಜರಿನಲ್ಲಿ ಇರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ಯಾವ ಕಾರಣಕ್ಕೆ ಮಾಡಿದ್ದಾರೆ ಎಂದು ಗೊತ್ತಿಲ್ಲವೆಂದು ನುಡಿದಿದ್ದು ಅದನ್ನು ನಿಪಿ- 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಪೊಟೋ ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 04.10.2024 ರಂದು ಅಪಘಾತವಾಗಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಪಂಚನಾಮೆ ಕಾಲಕ್ಕೆ ಹಾಗೂ ಠಾಣೆಯಲ್ಲಿ ನಡೆದ ವಾಹನ ಪಂಚನಾಮೆ ಕಾಲಕ್ಕೆ ನಾನು ಹಾಜರಿದ್ದು ಅದಕ್ಕೆ ಸಹಿ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 707/2024**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು : ಮಾರುತಿ

ತಂದೆಯ ಹೆಸರು : ಮಂಜುನಾಥ ನಾಯ್ಕು

ವಯಸ್ಸು : 25 ವರ್ಷ

ಉದ್ಯೋಗ : ಕಿರಿಯ ಇಂಜಿನಿಯರ್ , ಪಿ ಡಬ್ಲ್ಯೂಡಿ , ಭಟ್ಕಳ

ವಾಸ್ತವ್ಯ : ಹೊನ್ನಾವರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 11.09.2023 ರಂದು ಪೊಲೀಸರ ಕೋರಿಕೆ ಪತ್ರದಲ್ಲಿ ಇರುವ ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಪತ್ರದೊಂದಿಗೆ ನೀಡಿದ್ದು ಇರುತ್ತದೆ.

2. ಸಾಕ್ಷಿಯು ಪಿ ಡಬ್ಯೂ ಡಿ , ಬಟ್ಕಳ ಇವರು ನೀಡಿದ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 12 ಎಂದು , ಸಾಕ್ಷಿಯ ಸಹಿಯನ್ನು ನಿಪಿ–12 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ನಡೆದ ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲೀಸರು ಒಬ್ಬರೇ ಬಂದು ನನಗೆ ಗುನ್ನಾ ಸ್ಥಳವನ್ನು ತೋರಿಸಿರುತ್ತಾರೆ. ನಿಪಿ–12 ನಕ್ಷೆಯನ್ನು ನಾನು ಕಚೇರಿಯ ಕಂಪ್ಯೂಟರಿನಲ್ಲಿ ಬಿಡಿಸಿರುತ್ತೇನೆ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳಾಗಿ ನಕ್ಷೆ ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ನಕ್ಷೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1806 /2022**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ರಾಜೇಶ್

ತಂದೆಯ ಹೆಸರು : ರಮೇಶ್ ನಾಯ್ಕ

ವಯಸ್ಸು : 26 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಗೊರಟೆ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 27.01.2020 ರಂದು ನಿಶಾಂತ್ ಕ್ರಾಸ ಹತ್ತಿರ ನಾನು ಹೋಗುವಾಗ ತುಫಾನ್ ಗಾಡಿ ಹಾಗೂ ಕಾರುಗಳ ನಡುವೆ ಅಪಘಾತವಾದ ಬಗ್ಗೆ ನಾನು ಪಂಚನಾಮೆಗೆ ಸಹಿ ಮಾಡಿದ್ದು, ಪಂಚನಾಮೆಯನ್ನು 3.30. ರಿಂದ 4.30 ಗಂಟೆಯವರೆಗೆ ಮಾಡಿದ್ದು ಇರುತ್ತದೆ. ಅದೇ ದಿನ ಠಾಣೆಯಲ್ಲಿ ಇನ್ನೊಂದು ಪಂಚನಾ್ಮ ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿದ್ದು ಇರುತ್ತದೆ. ಗಾಡಿ ನಂಬರ್ ನನಗೆ ನೆನಪಿಲ್ಲ.

2. ಸಾಕ್ಷಿಯು ನಿಪಿ – 2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ – 3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಸಿ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ 2 ಫೋಟೋ ನಿಪಿ–4 ಮತ್ತು 5 ಮತ್ತು 6 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.ಸಾಕ್ಷಿಯು ನಿಪಿ7 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನಾನು 10 ನೇ ತರಗತಿ ಓದಿರುತ್ತೇನೆ. ನಾನು ಗುನ್ಹಾ ಸ್ಥಳಕ್ಕೆ ಹೋಗುವ ಮೊದಲೇ ಪಂಚನಾಮೆ ಬರೆಯಲಾಗಿತ್ತು. ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿದ್ದು ಇರುವುದಿಲ್ಲ . ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಗುನ್ಹಾ ಸ್ಥಳದ ಅಕ್ಕಪಕ್ಕದಲ್ಲಿ ಹೊಟೇಲುಗಳು ಇವೆ. ಅಲ್ಲಿರುವ ಸಿಸಿ ಕ್ಯಾಮೇರಾಗಳನ್ನು ಪರಿಶೀಲನೆ ಮಾಡಿಲ್ಲ. ಪಂಚನಾಮೆಗೆ ಸಹಿ ಮಾಡುವ ಕಾಲಕ್ಕೆ ಅಪಘಾತಪಡಿಸಿದ ವಾಹನಗಳು ಇರಲಿಲ್ಲ. ಅಪಘಾತ ಯಾವ ಕಾರಣಕ್ಕೆ ಆಗಿದೆ ಎಂದು ನನಗೆ ಹೇಳಿಲ್ಲ. ಪೊ್ಲೀಸರು ಸುಳ್ಳಾಗಿ ಬರೆದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 818/2024**

**ಸಿ.ಡಬ್ಲ್ಯೂಃ 3 , ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಇಮತಿಹಾಜ್ ಅಹಮದ್

ತಂದೆಯ ಹೆಸರು : ಅಬ್ದುಲ್ ಖಾನ್

ವಯಸ್ಸು : 34 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಜಾಲಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಚಾಸಾ –1 ರವರ ಬಳಿ ಚಾಲಕ ವೃತ್ತಿ ಮಾಡುತ್ತಿದ್ದೇನು. ನನಗೆ ಒಂದು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿದ್ದು ಇರುತ್ತದೆ. ನನಗೆ ಯಾವ ವಿಷಯಕ್ಕೆ ಸಹಿ ಪಡೆದಿದ್ದರು ಎಂದು ಗೊತ್ತಿಲ್ಲ.

ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ಪೊಟೋ ನೋಡಿ ಗುರುತಿಸಿದ್ದು ಇರುತ್ತದೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 29.09.2022 ರಂದು ನನ್ನ ಸಮಕ್ಷಮದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿ ಕೆಲವು ಕಾಗದಪತ್ರಗಳನ್ನು, ಕಪ್ಪ ಮತ್ತು ನೀಲಿ ಬಣ್ಣ–1 ಸೀಲು, ಕಪ್ಪ ಮತ್ತು ಕೆಂಪು ಬಣ್ಣ–1 ಸೀಲು, ಕಪ್ಪ ಮತ್ತು ಕೆಂಪು ಬಣ್ಣ–1 ಸೀಲು, ಕಪ್ಪ ಮತ್ತು ಕೆಂಪು ಬಣ್ಣ–1 ಸೀಲು, ಕಪ್ಪ ಮತ್ತು ಕೆಂಪು ಬಣ್ಣ–1 ಸೀಲು, ಹಸಿರು ಬಣ್ಣದ ಸೀಲು –1 , ನೀಲಿ ಬಣ್ಣದ ಸೀಲು –1 , ಹಸಿರು ಬಣ್ಣದ ಸೀಲು –, ಕಪ್ಪ ಮತ್ತು ಕೆಂಪು ಬಣ್ಣ–1 ಸೀಲು, ಹಸಿರು ಬಣ್ಣದ ರೌಂಡ್ ಸೀಲು –1 , ಎಸಸ್ ವಿಮೋ ಬುಕ್ ಕಂಪನಿಯ ಲ್ಯಾಪಟಾಪ್ –1, ಕಪ್ಪ ಬಣ್ಣದ ಬ್ಯಾಗ್ –1 ನನ್ನ ಸಮಕ್ಷಮ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 818/2024**

**ಸಿ.ಡಬ್ಲ್ಯೂಃ2 , ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಅಬ್ದುಲ್ ಬಾಶಿದ್

ತಂದೆಯ ಹೆಸರು : ಅಬುಬಕ್ಕರ್

ವಯಸ್ಸು : 40 ವರ್ಷ

ಉದ್ಯೋಗ : ಮನೆಕೆಲಸ

ವಾಸ್ತವ್ಯ : ಚಿನ್ನದ ಪಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಜಾಲಿ ಕ್ರಾಸ್ ಹತ್ತಿರ ಇರುವ ಕ್ಯಾಶು ಪ್ಯಾಕ್ಟೇರಿಯಲ್ಲಿ ನಾನು ಕೆಲಸ ಮಾಡುತ್ತಿರುವಾಗ ನನಗೆ ಸಾಕ್ಷಿ ಗಾಗಿ ಸಹಿ ಮಾಡಲು ಹೇಳಿದ್ದು ನಾನು ಸಹಿ ನೀಡಿದ್ದು ಇರುತ್ತದೆ. ನನಗೆ ಸದರಿ ವಿಷಯವನ್ನು ಹೊರತುಪಡಿಸಿ ಪ್ರಕರಣದ ಕುರಿತು ಬೇರೆ ಏನೂ ಗೊತ್ತಿಲ್ಲ.

ಸಾಕ್ಷಿಯು 1 ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊಂದು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 3 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 3 ಎ ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 29.09.2022 ರಂದು ನನ್ನ ಸಮಕ್ಷಮದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿ ಕೆಲವು ಕಾಗದಪತ್ರಗಳನ್ನು, ಕಪ್ಪು ಮತ್ತು ನೀಲಿ ಬಣ್ಣ–1 ಸೀಲು, ಕಪ್ಪು ಮತ್ತು ಕೆಂಪು ಬಣ್ಣ–1 ಸೀಲು, ಕಪ್ಪು ಮತ್ತು ಕೆಂಪು ಬಣ್ಣ–1 ಸೀಲು, ಕಪ್ಪು ಮತ್ತು ಕೆಂಪು ಬಣ್ಣ–1 ಸೀಲು, ಕಪ್ಪು ಮತ್ತು ಕೆಂಪು ಬಣ್ಣ–1 ಸೀಲು, ಹಸಿರು ಬಣ್ಣದ ಸೀಲು –1 , ನೀಲಿ ಬಣ್ಣದ ಸೀಲು –1 , ಹಸಿರು ಬಣ್ಣದ ಸೀಲು –, ಕಪ್ಪು ಮತ್ತು ಕೆಂಪು ಬಣ್ಣ–1 ಸೀಲು, ಹಸಿರು ಬಣ್ಣದ ರೌಂಡ್ ಸೀಲು –1 , ಎಸಸ್ ವಿಮೋ ಬುಕ್ ಕಂಪನಿಯ ಲ್ಯಾಪಟಾಪ್ –1, ಕಪ್ಪು ಬಣ್ಣದ ಬ್ಯಾಗ್ –1 ನನ್ನ ಸಮಕ್ಷಮ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ.

ದಿಃ 27.09.2023 ರಂದು ಚಾಸಾ –22 ರವರು ನಮಗೆ ಠಾಣೆಗೆ ಕರೆದು ದೂರುದಾರರು ಹಾಜರುಪಡಿಸಿದ ಸ್ವತ್ತನ್ನು ಪರಿಶೀಲನೆ ಮಾಡಿ ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪಿರ್ಯಾದಿದಾರರು ಹಾಜರುಪಡಿಸಿದ್ದ ಸ್ವತ್ತು ಹರ್ಷದ್ ಕ್ಯಾಶು ಇಂಡಸ್ಟ್ರೀ ಅದರ ಕೆಳಗಡೆ ಪಾರ್ಟನರ್ ಎಂದು ಪ್ರಿಂಟ್ ಇದ್ದದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸೀಲಿನಿಂದ 6 ಹಾಳೆಯ ಮೇಲೆ 6 ಬಾರಿ ಮೊಹರು ಒತ್ತಿ ಕೆಂಪು ಶಾಹಿಯಲ್ಲಿ ಮಾರ್ಕ ಮಾಡಿ ಇಂಗ್ಲೀಷ್ ನಲ್ಲಿ ಎಸ್ 1

ರಿಂದ 6 ಎಂದು ಪ್ರಕಣದ ಪುರಾವೆ ಕುರಿತು ಕೈ ಬರಹದ ತಜ್ಞರ ಪರೀಕ್ಷೆಗಾಗಿ ವಶಪಡಿಸಿ ಕವರನಲ್ಲಿ ಹಾಕಿ ಪ್ಯಾಕ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪಿರ್ಯಾದಿ ಆರೋಪಿಗೆ ಸಂಬಂಧಿಸಿದ ಕಾರ್ಮಿಕ ಭವಿಷ್ಯ ನಿಧಿಯನ್ನು ಅನಧೀಕೃತವಾಗಿ ಪತ್ರವ್ಯವಹಾರ ಮಾಡಿದ ಪತ್ರಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪಿರ್ಯಾದಿಯ ಹಸ್ತಾಕ್ಷರ ಇರುವ ಕೋರಿಕೆಯ ಸಹಿಯನ್ನು 6 ಬಿಳಿ ಹಾಳೆಯಲ್ಲಿ ಪಡೆದು ಆರ್ 13 – 18 ಪ್ರಕರಣದ ಪುರಾವೆಗಾಗಿ ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅದರಂತೆ ಹರ್ಷದ್ ಕ್ಯಾಶು ಇಂಡಸ್ಟ್ರೀಸ್ ಪಾರ್ಟನರ್ ಅನ್ನುವ ಸೀಲಿಗೆ ಕ್ಯೂ 7 ರಿಂದ 13 ಎಂದು ಗುರುತು ಮಾಡಲಾಯಿತು ಎಂದರೆ ಸರಿಯಲ್ಲ. ಸೀಲು ಮೇಲೆ ಮಾಡಿದ ಸಹಿಗೆ ಕ್ಯೂ 14 – 20 ಎಂದು ಗುರುತಿಸಲಾಯಿತು ಎಂದರೆ ಸರಿಯಲ್ಲ. ಸೀಲಿನ ಪಕ್ಕದಲ್ಲಿದ್ದ ಸಹಿಯನ್ನು ಕ್ಯೂ 20 –27 ಎಂದು ಗುರುತು ಮಾಡಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೆ 5.15 ರಿಂದ 7.15 ರವರೆಗೆ ಠಾಣೆಯಲ್ಲಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 976/2024**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಶರತ್ ಬಿ . ಶೆಟ್ಟಿ |
| ತಂದೆಯ ಹೆಸರು | : | ರಾಜೀವ್ ಶೆಟ್ಟಿ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಅರಣ್ಯಾಧಿಕಾರಿಗಳು, ಮಂಕಿ ವಲಯ |
| ವಾಸ್ತವ್ಯ | : | ಮಂಕಿ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 15 ನೇ ಜುಲೈ 2024 ರಿಂದ ಮಂಕಿ ವಲಯದಲ್ಲಿ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 19.09.2023 ರಂದು ಐಡೆಂಟಿಪೈ ಮಾಡದ ನಂಬರಿನಿಂದ ನನ್ನ ಪ್ಯಾಮೀಲಿ , ಪಬ್ಲಿಕ್ ಹಾಗೂ ಪ್ರೊಪೇಶನ್ ಲೈಪನ್ನು ಹಾಳು ಮಾಡುತ್ತೇವೆಂದು ಮ್ಯಾಸೇಜ್ ಬಂದಿದ್ದು ನಂತರ ನಾನು ಈ ಬಗ್ಗೆ ಅವರು ಯಾರೆಂದು ತಿಳಿಯಬೇಕೆಂದು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದು ಇರುತ್ತದೆ. ನಂತರ ನನ್ನ ಮೊಬೈಲನ್ನು ಪಂಚನಾಮೆಗಾಗಿ ಠಾಣೆಯವರು ತೆಗೆದುಕೊಂಡಿದ್ದು ಅದರಲ್ಲಿರುವ ಡಾಟಾವನ್ನು ಡೌಲೋಡ್ ಮಾಡಿಕೊಂಡು ನನಗೆ ನೀಡಿದ್ದು ಇರುತ್ತದೆ.

3. ಸಾಕ್ಷಿಯು ಮೊಬೈಲನ್ನು ಹಾಗೂ ಪೆನ್ ಡ್ರಾವ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು -1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ನಾನು ಸದರಿ ಪ್ರಕಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಆರೋಪಿತರನ್ನು ಮೊದಲನೇ ಬ ಬಾರಿ ನೋಡುತ್ತಿದ್ದೇನೆ. ದೂರನ್ನು ನಾನು ಯಾವ ದಿನಾಂಕದಂದು ನೀಡಿದ ಬಗ್ಗೆ ನನಗೆ ನೆನಪಿಲ್ಲ. ದೂರು ನೀಡುವ ಕಾಲಕ್ಕೆ ಯಾರು ನನಗೆ ಮೊಬೈಲ್ ಮ್ಯಾಸೇಜನ್ನು ಮಾಡಿದ್ದಾರೆಂದು ಗೊತ್ತಿರಲಿಲ್ಲ. ಈ ದಿನ ನ್ಯಾಯಾಲಯದಲ್ಲಿ ನಾನು ನನ್ನ ದೂರಿನಲ್ಲಿ ಹೇಳಿದಂತೆ ವಾಟ್ಸಪ್ ನ ಮ್ಯಸೇಜಿನ ಪ್ರತಿಯನ್ನು ನಾನು ನೋಡಿಲ್ಲ. ಪೊಲೀಸರು ತನಿಖೆಯ ಕಾಲಕ್ಕೆ ನನ್ನ ಮೊಬೈಲನ್ನು ಜಪ್ತು ಮಾಡಿಲ್ಲ ಮತ್ತು ನನಗೆ ಹಾಜರುಪಡಿಸಲು ಕೇಳಿಲ್ಲ . ಸಾಕ್ಷಿದಾರರಾದ ಚಾಸಾ – 2 ರವರು ನನ್ನ ಜೀಪಿನ ಚಾಲಕ ಆಗಿದ್ದರು. ಚಾಸಾ -3 ನಮ್ಮ ಇಲಾಖೆಯ ಗುತ್ತಿಗೆದಾರರು ಆಗಿದ್ದಾರೆ. ಚಾಸಾ – 4 ರವರು ನನ್ನ ಅಧೀನ ಸಿಬ್ಬಂದಿಯಾಗಿದ್ದಾರೆ. ಚಾಸಾ -5 ಇವರು ನಮ್ಮ ಇಲಾಖೆಯ ಅರಣ್ಯ ಕಾವಲುಗಾರರು ಆಗಿದ್ದಾರೆ. ನಮ್ಮ ಇಲಾಖೆಯ ಸಿಬ್ಬಂದಿಗಳನ್ನು ನಾನೇ ಠಾಣೆಗೆ ಕರೆದುಕೊಂಡು ಹೋಗಿದ್ದು ಅವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ಪ್ರಕರಣಕ್ಕೆ ಸಾಕ್ಷಿದಾರರ ಅವಶ್ಯಕತೆ ಇದ್ದ ಕಾರಣ ನಮ್ಮ ಸಿಬ್ಬಂದಿಗಳನ್ನು ಠಾಣೆಗೆ ಕರೆಯಿಸಿ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಪೆನ್ ಡ್ರಾ ಅನ್ನು ಯಾರು ಡೌನಲೋಡ್ ಮಾಡಿದ್ದಾರೆಂದು ನನಗೆ ನೆನಪಿಲ್ಲ. ಪೆನ್ ಡ್ರಾವನ್ನು ನಾನು ಪೊಲೀಸರಿಗೆ ನೀಡಿದ ಬಗ್ಗೆ ನನಗೆ ನೆನಪಿಲ್ಲ.

ನಾನು ಹೇಳುವ ಪ್ರಕರಣಕ್ಕೆ ಮತ್ತು ಆರೋಪಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಮ್ಯಾಸೇಜ್ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ:610 /2023**

**ಸಿ.ಡಬ್ಲ್ಯೂ 6, ಪಿ.ಡಬ್ಲ್ಯೂ 5**

ಸಾಕ್ಷಿದಾರರ ಹೆಸರು : ಶ್ರೀನಿವಾಸ

ತಂದೆಯ ಹೆಸರು : ಗಣಪು ಹಳ್ಳೇರ

ವಯಸ್ಸು : 31 ವರ್ಷ

ಉದ್ಯೋಗ : ಭಟ್ಕಳ ಪುರಸಭೆಯಲ್ಲಿ ಕಂದಾಯ ನೀರಿಕ್ಷಕರು

ವಾಸ್ತವ್ಯ : ಕುಂಬಾರ ಕೇರಿ , ಮಂಕಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿಃ 10.09.2024 ರಿಂದ ಇಲ್ಲಿಯವರೆಗೆ ಭಟ್ಕಳ ಪುರಸಭೆಯಲ್ಲಿ ಕಂದಾಯ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನನಗೆ ಸದರಿ ಪ್ರಕರಣ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಮ್ಮ ಮಂಕಿ ಕಚೇರಿಯ ಮುಖ್ಯಾಧಿಕಾರಿಗಳು ಸಾಕ್ಷಿ ಹೇಳಲು ನನಗೆ ಭಟ್ಕಳ ನಗರ ಠಾಣೆಗೆ ಕರೆದಿದ್ದರು. ಸಾಕ್ಷಿಯು ಪೆನ್ ಡ್ರಾವ ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಎಂದು , ಸಾಕ್ಷಿಯ ಸಹಿಯನ್ನು ನಿಪಿ–6 ಎ ಎಂದು ಗುರುತಿಸಲಾಯಿತು. ಅದರಲ್ಲಿ ಇರುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ . ಸಾಕ್ಷಿಯು ಪೊಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಎಂದು , ಸಾಕ್ಷಿಯು ಇನ್ನೊಂದು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊಂದು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊಂದು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 10 ಎ ಎಂದು ಗುರುತಿಸಲಾಯಿತು. ಪಂಚನಾಮೆಗಳಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 28.12.2021 ರಂದು ಚಾಸಾ –16 ಇವರು ನನಗೆ ಹಾಗೂ ಚಾಸಾ – 7 ರವರನ್ನು ಪೆನ್ ಡ್ರಾವ್ ಜಪ್ತು ಪಂಚನಾಮೆಗೆ ಪೋಲೀಸ್ ಠಾಣೆಗೆ ಕರೆದಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಬರಲು ನಮಗೆ ನೊಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಚಾಸಾ –9 ರವರು ಸದರಿ ಪ್ರಕರಣದ ಆರೋಪಿತನು ಮಾತನಾಡಿದ ಸಂಭಾಷಣೆಯ ತುಣುಕುಗಳನ್ನು ಪೆನ್ ಡ್ರಾವಲ್ಲಿ ಹಾಕಿ ಅದನ್ನು ಠಾಣೆಯಲ್ಲಿ ಹಾಜರುಪಡಿಸಿದಾಗ ಅದನ್ನು ಪರಿಶೀಲನೆ ಮಾಡುವ ಸಮಯದಲ್ಲಿ ನಾನು ಹಾಜರಿದ್ದೇನು ಎಂದರೆ ಸರಿಯಲ್ಲ. ಸದರಿ ಪೆನ್ ಡ್ರಾವ ಸ್ಯಾನಡಿಸ್ಕ ಕ್ಲಸರ್ ಬ್ರಾಂಡ್ 16 ಜಿ ಬಿ ಇರುತ್ತದೆ

ಎಂದರೆ ಸರಿಯಲ್ಲ.  ಸದರಿ ಪೆನ್ ಡ್ರಾವನ್ನು ಬಿಳಿ ಬಣ್ಣದ ಕವರಿನಲ್ಲಿ ಹಾಕಿ ತನಿಖಾಧಿಕಾರಿಗಳ ಮತ್ತು ದೂರುದಾರರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.  ಸದರಿ ಪಂಚನಾಮೆಯನ್ನು 4.00 ರಿಂದ 5.00 ಗಂಟೆಯವರೆಗೆ  ನನ್ನ ಸಮಕ್ಷಮ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ.

ದಿಃ 31.10.2022 ರಂದು ಚಾಸಾ –16 ಇವರು ನನಗೆ ಠಾಣೆಗೆ ಕರೆಯಿಸಿ ಆರೋಪಿಯು ನಕಲು ಮಾಡಿದ ಚಾಸಾ –9 ರವರ ಮಾಧರಿ ಸಹಿಗಳನ್ನು ಪಡೆದು ತಯಾರಿಸಿದ್ದ ಪಂಚನಾಮೆಗೆ ನಾನು ಪಂಚನಾಗಿ ಹಾಜರಿದ್ದೇನು ಎಂದರೆ ಸರಿಯಲ್ಲ.  ಸದರಿ ಮಾಧರಿ ಸಹಿಗಳನ್ನು 1 ಹಾಳೆಯಲ್ಲಿ 1 ರಿಂದ 12 , 2 ಸಾಲಿನಲ್ಲಿ ಒಟ್ಟು 6 ಹಾಳೆಗಳಲ್ಲಿ ಪಡೆಯಲಾಗಿತ್ತು ಎಂದರೆ ಸರಿಯಲ್ಲ.  ಸದರಿ ಸಹಿಗಳು ಆಂಗ್ಲ ಭಾಷೆಯ ಸಹಿ ಆಗಿದ್ದು ಅದನು ಕೈಬರಹದ ತಜ್ಞರಿಗೆ ಕಳುಹಿಸಿಕೊಡುವ ಅವಶ್ಯಕತೆ ಇದ್ದುದರಿಂದ ಅವುಗಳಲ್ಲಿ 1 ರಿಂದ 6 ಎಂದು ನಿಶಾನೀಕರಿಸಲಾಯಿತು ಎಂದರೆ ಸರಿಯಲ್ಲ.  ಈ ಪಂಚನಾ ಿಮಯನ್ನು ಬೆಳಿಗ್ಗೆ 10.00 - 11.00 ಗಂಟೆಯ ಸಮಯದಲ್ಲಿ ಮಾಡಿ ಮುಗಿಸಲಾಯಿತು ಎಂದರೆ ಸರಿಯಲ್ಲ.

ದಿಃ 30.10.2022 ರಂದು ಚಾಸಾ 16 ಇವರು ಚಾಸಾ –12 ರವರ ಮಾಧರಿ ಸಹಿಗಳನ್ನು ಪಡೆಯುವ ಪಂಚನಾಮೆಗೆ ತಯಾರಿಸಿದ ಪಂಚನಾಮೆ ಕಾಲಕ್ಕೆ ನಾನು ಹಾಜರಿದ್ದೇನು ಎಂದರೆ ಸರಿಯಲ್ಲ.  ಸದರಿ ಪಂಚನಾಮೆಯನ್ನು ಚಾಸಾ 12 ರವರ ಮಾಧರಿ ಸಹಿಗಳನ್ನು 1 ಹಾಳೆಯಲ್ಲಿ 1 ರಿಂದ 12 , 2 ಸಾಲಿನಲ್ಲಿ ಒಟ್ಟು 6 ಹಾಳೆಗಳಲ್ಲಿ ಪಡೆಯಲಾಗಿತ್ತು ಎಂದರೆ ಸರಿಯಲ್ಲ.  ಸದರಿ ಸಹಿಗಳು ಆಂಗ್ಲ ಭಾಷೆಯ ಸಹಿ ಆಗಿದ್ದು ಅದನ್ನು ಕೈಬರಹದ ತಜ್ಞರಿಗೆ ಕಳುಹಿಸಿಕೊಡುವ ಅವಶ್ಯಕತೆ ಇದ್ದುದರಿಂದ ಕಳುಹಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 11.30 ರಿಂದ 2.30 ಗಂಟೆ ತನಕ ಮಾಡಲಾಗಿತ್ತು ಎಂದರೆ ಸರಿಯಲ್ಲ.

ದಿಃ 31.10.2011 ರಂದು ಚಾಸಾ 16 ಇವರು ಠಾಣೆಗೆ ಕರೆಯಿಸಿ  ಚಾಸಾ –9 ಮತ್ತು 12 ರವರ ಸಹಿ ಇರುವ ನಿರಾಕ್ಷೇಪಣಾ ಪತ್ರಗಳನ್ನು ನನ್ನ ಸಮಕ್ಷಮ ಪರಿಶೀಲನೆ ಮಾಡಿ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ.  ಸದರಿ 2 ನೀರಾಕ್ಷೇಪಣಾ ಪತ್ರಗಳು  ಕ್ರಮವಾಗಿ ಶ್ರೀಮತಿ ಮಂಜಮ್ಮ ದೇವಪ್ಪಾ ನಾಯ್ಕ ಹಾಗೂ ಬಲೀಂದ್ರ ಹನುಮಂತ ನಾಯ್ಕ ಇವರ ಗೃಹ ಬಳಕೆ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ನೀಡುವ ವಿದ್ಯುತ್ ನಿರಾಪೇಕ್ಷಣಾ ಪತ್ರವಾಗಿತ್ತು ಎಂದರೆ ಸರಿಯಲ್ಲ.  ಸದರಿ ಚಾಸಾ –9 ರವರ ಸಹಿ ಇರುವ ನಿರಾಕ್ಷೇಪಣಾ ಪತ್ರದ ಸಹಿಗೆ ಎಸ್ ಎಸ್ 3 ಎಂದು, ಚಾಸಾ –12 ರವರ ಸಹಿ ಇರುವ ಸಹಿಗೆ ಎಸ್ ಎಸ್ 4 ಎಂದು ಗುರುತಿಸಲಾಯಿತು ಮತ್ತು ಸದರಿಗಳನ್ನು ಕೈಬರಹದ ತಜ್ಞರಿಗೆ ಕಳುಹಿಸಿಕೊಡುವ ಅವಶ್ಯಕತೆ ಇದ್ದುದರಿಂದ ಪಡೆಯಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮದ್ಯಾಹ್ನ 2.00 ರಿಂದ 3.00  ರಿಂದ 2.30 ಗಂಟೆ ತನಕ  ನನ್ನ ಸಮಕ್ಷಮ

ಬರೆಯಲಾಗಿತ್ತು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ನನ್ನ ಸಮಕ್ಷಮ 3 ಪಂಚನಾಮೆಗಳನ್ನು ಅಧೀಕೃತವಾಗಿ ಜರುಗಿಸಿದ್ದರೂ ಸಹ ಆರೋಪಿಯು ನನ್ನ ಇಲಾಖೆಯ ನೌಕರನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಎ ಆರ್ ಎಸ್ ವಕೀಲರಿಂದ**

ನಮ್ಮ ಕಚೇರಿಯಿಂದ ನಾವು ಹೊರಗೆ ಹೋಗುವಾಗ ನಮ್ಮ ಮೇಲಾಧಿಕಾರಿಗಳ ಅನುಮತಿ ಪಡೆದು ಹೋಗಬೇಕಾಗುತ್ತದೆ ಎಂದರೆ ಸರಿ. ನಮ್ಮ ಕಚೇರಿಯಿಂದ ಬೇರೆ ಕಡೆ ಕಾರ್ಯದ ನಿಮಿತ್ತ ಹೋಗುವಾಗ ರಜಿಸ್ಟರಿನಲ್ಲಿ ಸಹಿ ಮಾಡಿ ಹೋಗುತ್ತೇವೆ . ನಮ್ಮ ಮೇಲಾಧಿಕಾರಿಗಳ ಮೂಲಕ ನಮಗೆ ನೊಟೀಸು ಬರುತ್ತದೆ. ಸದರಿ ಪ್ರಕರಣದಲ್ಲಿ ಅಂತಹ ಯಾವುದೇ ನೊಟೀಸು ಬಂದ ಬಗ್ಗೆ ನಮ್ಮ ಮೇಲಾಧಿಕಾರಿಗಳು ಹೇಳಿಲ್ಲ . ಪೊಲೀಸರು ನಮಗೆ ಯಾವುದೇ ನೊಟೀಸನ್ನು ನೀಡಿಲ್ಲ, ಸದರಿ ಪ್ರಕಣಕ್ಕೆ ಸಂಬಂಧಿಸಿ ನಾನು 1 ಬಾರಿ ಠಾಣೆಗೆ ಹೋಗಿರುತ್ತೇನೆ. ಒಂದೇ ಬಾರಿ ನಾನು ಸುಮಾರು ದಾಖಲೆಗೆ ಸಹಿ ಮಾಡಿರುತ್ತೇನೆ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ:610 /2023**

**ಸಿ.ಡಬ್ಲ್ಯೂ: 5, ಪಿ.ಡಬ್ಲ್ಯೂ: 4**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾರಾಯಣ |
| ತಂದೆಯ ಹೆಸರು | : | ಹೊನ್ನಪ್ಪ ನಾಯ್ಕ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಜಾಲಿ ಗ್ರಾಮ ಪಂಚಾಯತದಲ್ಲಿ ದ್ವಿದ ಸ |
| ವಾಸ್ತವ್ಯ | : | ಜಾಲಿ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 05/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2001 ರಿಂದ ಗ್ರಾಮ ಪಂಚಾಯತದಲ್ಲಿ ಹಾಗೂ 2015 ರಿಂದ ಪಟ್ಟಣ ಪಂಚಾಯತ, ಜಾಲಿ ಯಲ್ಲಿ ದ್ವಿದ ಸ ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 20.12.2021 ರಂದು ಸಂಜೆ 6.30 ರಿಂದ 7.30 ಗಂಟೆಗೆ ನಿರಾಕ್ಷೇಪಣಾ ಪತ್ರ ನೀಡಿದ ಬಗ್ಗೆ ವಿಚಾರಣೆಗೆ ಠಾಣೆಗೆ ಕರೆದಿದ್ದರು. ಅಲ್ಲಿ ನಿರಾಕ್ಷೇಪಣಾ ಪತ್ರವನ್ನು ನನಗೆ ತೋರಿಸಿರುತ್ತಾರೆ. ಕರೆಂಟ್ ಸಂಪರ್ಕಕ್ಕಾಗಿ ಕೊಟ್ಟಂತಹ ನಿರಾಪೇಕ್ಷಣಾ ಪತ್ರ ಇದು ಆಗಿತ್ತು. ಅಲ್ಲಿ ಪೊಟೋ ತೆಗೆದಿರುತ್ತಾರೆ.

3. ಸಾಕ್ಷಿಯು ನಿಪಿ–4 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–5 ಪೊಟೋ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,</u>**

ಘಟನೆ ನಡೆದ ದಿನದಂದು ನಾನು ಜಾಲಿ ಪಟ್ಟಣ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದೇನು. ನಿರಾಕ್ಷೇಪಣಾ ಪ್ರಮಾಣಪತ್ರ ನೀಡುವ ಅಧಿಕಾರವು ಆರೋಪಿಗೆ ಇರುವುದಿಲ್ಲ ಎಂದರೆ ಸರಿ. ಪಂಚನಾಮೆಗೆ ನನಗೆ ಚಾಸಾ – 16 ರವರು ಕರೆದಿದ್ದರು. ನಾನು ಪಟ್ಟಣ ಪಂಚಾಯತಿಯಲ್ಲಿ ಕರ್ತವ್ಯ ಮಾಡುತ್ತಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಇದೆ. ನಮ್ಮ ಮೇಲಾಧಿಕಾರಿಗಳು ನನಗೆ ಪಂಚನಾಮೆಗೆ ಬರಬೇಕು ಹಾಗೂ ಸಹಕರಿಸಬೇಕು ಎಂದು ಹೇಳಿಲ್ಲ . ನಿರಾಕ್ಷೇಪಣಾ ಪ್ರಮಾಣಪತ್ರ ವನ್ನು ನಾನು ಕೂಲಂಕೂಷವಾಗಿ ಪರಿಶೀಲನೆ ಮಾಡಿಲ್ಲ. ನಿರಾಕ್ಷೇಪಣಾ ಪ್ರಮಾಣಪತ್ರ ಪಟ್ಟಣ ಪಂಚಾಯತಿಯವರಿಗೆ ಸೇರಿದ್ದು ಆಗಿತ್ತು. ಪಂಚಾಯತಿಯಲ್ಲಿ ಅವರವರ ಸೀಲು ಅವರವರ ತಾಬಾದಲ್ಲಿರುತ್ತದೆ. ಟಪಾಲನ್ನು ಸ್ವೀಕರಿಸುವುದು ಆರೋಪಿಯ ತಾಬಾದಲ್ಲಿ ಇರಲಿಲ್ಲ . ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಗಳು ಆಗಿದ್ದಾರೆ. ಮೇಲಾಧಿಕಾರಿಗಳು ಹೇಳಿದ ಕರ್ತವ್ಯ ನಾನು ಮಾಡಬೇಕಾಗುತ್ತದೆ. ನಿರಾಕ್ಷೇಪಣಾ ಪ್ರಮಾಣಪತ್ರವು ನಕಲು ಪ್ರತಿಯಾಗಿತ್ತಾ ಅಥವಾ ಮೂಲ ದಾಖಲೆ ಆಗಿತ್ತಾ ಎಂದು ನನಗೆ ಗೊತ್ತಿಲ್ಲ . ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ . ಪಂಚನಾಮೆಯಲ್ಲಿ ಬರೆದ ವಿಷಯವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪಂಚನಾಮೆಯನ್ನು ದೂರುದಾರರ ಹೇಳಿಕೆಯ ಆದಾರದ ಮೇಲೆ ತಯಾರಿಸಿದ್ದಾರೆ. ನಿರಾಕ್ಷೇಪಣಾ ಪ್ರತ್ರ ಯಾವ ತರಹದ್ದು ಆಗಿತ್ತು ಎಂದು ಪಂಚನಾಮೆಯಲ್ಲಿ ಬರೆದಿದ್ದಾರೆ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ಪಂಚನಾೆಮಯಲ್ಲಿ ಚೆಕ್ಕು ಬಂದಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ743 /2024**

**ಸಿ.ಡಬ್ಲ್ಯೂಃ 7 , ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಕಿರಣ್ ಕುಮಾರ್

ತಂದೆಯ ಹೆಸರು : ಗಣಪತಿ ನಾಯ್ಕ

ವಯಸ್ಸು : 50 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ ವಸತಿ ಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2018 ರಿಂದ ಇವತ್ತಿನವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 16.12.2023 ರಂದು ನಾನು ಠಾಣೆಯಲ್ಲಿದ್ದಾಗ 10.30 ಗಂಟೆ ಸುಮಾರಿಗೆ ಚಾಸಾ –1 ರವರು ನನಗೆ ಹಾಗೂ ಚಾಸಾ –6, 8 ನ್ನು ಕರೆದು ಜೀಪಿನ ಮೇಲೆ ಶಹರ ಠಾಣೆಯ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯ ಮಾಡುತ್ತಾ ಜಾಲಿ ಕ್ರಾಸ್ ಹತ್ತಿರ ಬಂದಾಗ ಆರೋಪಿಯು ತನ್ನ ಮನೆಯ ಹಿಂಬದಿಯಲ್ಲಿ 3 ಆಕಳು, 1 ಹೋರಿಯನು ವಧೆ ಮಾಡಿ ಮಾಂಸ ಮಾರಾಟ ಮಾಡುವ ಉದ್ದೇಶದಿಂದ ಕಳುವು ಮಾಡಿರುವ ಬಗ್ಗೆ ಮಾಹಿತಿ ಬಂದಂತೆ ಸದರಿ ವಿಷಯ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನದಂತೆ 2 ಪಂಚರನ್ನು ಕರೆಯಿಸಿ ಅವರಿಗೆ ವಿಷಯ ತಿಳಿಸಿ ನಂತರ ಆಜಾದ ನಗರದ 1 ನೇ ಕ್ರಾಸ್ ನಲ್ಲಿ ಇರುವ ಆರೋಪಿಯ ಮನೆಗೆ ಹೋಗಿ ನೋಡೀದಾಗ ಮನೆಯ ಹಿಂಬದಿಗೆ 3 ಆಕಳು 1 ಹೋರಿ ಕಂಡುಬಂದಿದ್ದು ಈ ಬಗ್ಗೆ ದಾಖಲಾತಿಯನ್ನು ಚಾಸಾ 1 ರವರು ಆರೋಪಿಗೆ ಕೇಳಿದಾಗ ದಾಖಲಾತಿ ಇಲ್ಲವೆಂದು ತಿಳಿಸಿರುತ್ತಾನೆ. ಆತನು ಸದರಿ ಜಾನುವಾರನ್ನು ಕಳುವು ಮಾಡಿದ ಬಗ್ಗೆ ಖಾತ್ರಿ ಯಾದ ಕಾರಣ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿ ಜಾನುವಾರುಗಳನ್ನು ವಶಕ್ಕೆ ಪಡೆದಿರುತ್ತಾರೆ. ಜಾನುವಾರುಗಳ ಕಿಮ್ಮತ್ತು ರೂ. 20,000 ಹಾಗೂ 4 ಹಗ್ಗ 10 ರೂ. ಅಗಿರಬಹುದು. ಸದರಿ ದಾಳಿ ಕಾಲಕ್ಕೆ ನಾನು ಜಪ್ತು ಪಡಿಸಿದ ಜಾನುವಾರು ಹಾಗೂ ಹಗ್ಗವನ್ನು ತರಲು ಸಹಾಯ ಮಾಡಿದ್ದು ಇರುತ್ತದೆ.

3. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ಹಗ್ಗವನ್ನು ನೋಡಿ ಗುರುತಿಸಿದ್ದು ಇರುತ್ತದೆ ಅದನ್ನು ಮುದ್ದೆ ಮಾಲು –1 ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಘಟನೆಯ ಬಗ್ಗೆ ನನಗೆ ಮಾಹಿತಿ ಬಂದಾಗ ನಾನು ಚಾಸಾ –1 ರವರ ಜೊತೆಗೆ ಜಾಲಿ ಕ್ರಾಸ್ ಬಳಿ ಇದ್ದೇನು. ಜಾಲಿ ಕ್ರಾಸ್ ಗುನ್ಹಾ ಸ್ಥಳದಿಂದ 2 ಕಿಮೀ ದೂರದಲ್ಲಿದೆ. ಗುನ್ಹಾ ಸ್ಥಳಕ್ಕೆ ಪಂಚರನ್ನು ಜಾಲಿ ಕ್ರಾಸ್ ನಿಂದ ಕರೆದುಕೊಂಡು ಹೋಗಿದ್ದು ಇರುತ್ತದೆ. ಪಂಚರು ಯಾವ ವೃತ್ತಿ ಮಾಡುತ್ತಾರೆ ನನಗೆ ಗೊತ್ತಿಲ್ಲ ಮತ್ತು ಅವರನ್ನು ಚಾಸಾ 8 ರವರು ಕರೆಯಿಸಿದ್ದರು. ಚಾಸಾ 8 ಪಂಚರನ್ನು ಎಲ್ಲಿಂದ ಕರೆಯಿಸಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗುನ್ಹಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇದ್ದು ಅಲ್ಲಿಯ ಜನರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಗುನ್ಹಾ ಸ್ಥಳದಲ್ಲಿ ಇರುವ ಮನೆಯಾರಿಗೆ ಸೇರಿದ್ದು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಜಾನುವಾರುಗಳನ್ನು ಇಟ್ಟಿರುವ ಸ್ಥಳದಲ್ಲಿ ಶೆಡ್ಡು ಇತ್ತು. ಜಾನುವಾರುಗಳನ್ನು ಸಾಕಲು ಇರುವ ಶೆಡ್ಡು ಇರಲಿಲ್ಲ. ಗುನ್ಹಾ ಸ್ಥಳದಲ್ಲಿ ಪಂಚನಾಮೆ ಮಾಡುವಾಗ ನಾನು ಇದ್ದೇನು. ನಾನು ಪೊಟೋ ತೆಗೆದಿಲ್ಲ. ಪಂಚನಾಮೆ ಕಾಲಕ್ಕೆ ಪೊಟೋ ತೆಗೆಯುವಾಗ ನಾನು ಅಲ್ಲಿ ಇದ್ದೇನು. ನಿಪಿ– 1

ಪೊಟೋದಲ್ಲಿ ನಾನು ಹಾಗೂ ಆರೋಪಿತರು ಮತ್ತು ನಾನು ಹೇಳುವಂತಹ ಶೆಡ್ಡು ಇಲ್ಲ. ಜಪ್ತು ಪಡಿಸಿದ ಜಾನುವಾರುಗಳ ಪ್ರಾಯ ಹಾಗೂ ಲಿಂಗ ನನಗೆ ಗೊತ್ತಿಲ್ಲ. 4 ಹಗ್ಗಗಳನ್ನು ಗುನ್ನಾ ಸ್ಥಳದಲ್ಲಿ ಜಪ್ತು ಮಾಡಿದ್ದು ಇರುತ್ತೇವೆ. ಚಾಸಾ 1 ನನ್ನ ಮೇಲಾಧಿಕಾರಿ ಆಗಿದ್ದಾರೆ. ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ಗುನ್ನಾ ಸ್ಥಳದಿಂದ ಯಾವುದೇ ಜಾನುವಾರುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಪಂಚನಾಮೆ ಮಾಡಿರುವ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಸುತ್ತ ಮುತ್ತ ಕಂಪೌಂಡ ಇದ್ದ ಬಗ್ಗೆ ನನಗೆ ನೆನಪಿಲ್ಲ. ಗೇಟಿನ ಮೇಲೆ ಮತ್ತು ಮನೆಯ ಮೇಲೆ ಹೆಸರು ಬರೆದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಗುನ್ನಾ ಸ್ಥಳದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ನಮ್ಮ ಮೇಲಾಧಿಕಾರಿಗಳು ದಾಖಲು ಮಾಡಿದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 704/2024**

**ಸಾಕ್ಷಿಃ ಸಿಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರನ ಹೆಸರು : ಶಂಕರ ಛಲವಾದಿ

ತಂದೆಯ ಹೆಸರು : ಪಕೀರಪ್ಪ ಛಲವಾದಿ

ವಯಸ್ಸು : 31 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಶಿರಸಿ ಸಂಚಾರಿ ಪೊಲೀಸ ಠಾಣೆ (ಒಒಡಿ)

ವಾಸ್ತವ್ಯ : ಶಿರಸಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 05.05.2018 ರಿಂದ ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 06.02.2024 ರಂದು ನನಗೆ ನೇಮಿಸಿದ್ದ ಹಗಲು ಗಸ್ತು ಕರ್ತವ್ಯದಲ್ಲಿದ್ದಾಗ ಹಳೆ ಬಸ್ಸು ನಿಲ್ದಾಣದ ಹತ್ತಿರ ಯಾರೋ ಒಬ್ಬರು ಚೀಟಿ ಕೊಟ್ಟು ಹಣ ಪಡೆಯುತ್ತಿರುವ ಬಗ್ಗೆ ಕಂಡುಬಂದಿರುತ್ತದೆ. ಓಸಿ ಜೂಗಾರ ಆಟ ಆಡುವ ಬಗ್ಗೆ ಕಂಡುಬಂದಿರುತ್ತದೆ. ಸುಮಾರು 12.45 ಗಂಟೆಗೆ ಠಾಣೆಗೆ ಬಂದು ಚಾಸಾ –5 ರವರಿಗೆ ದೂರು ನೀಡಿದ್ದು ಇರುತ್ತದೆ. ಚಾಸಾ –5 ರವರು ಠಾಣೆಯ ಎನ್ ಸಿ ರಜಿಸ್ಟರ್ ನಮೂದಿಸಿ ನ್ಯಾಯಾಲಯದಿಂದ ಅನುಮತಿ ಪಡೆದು ಹಿರಿಯಅಧಿಕಾರಿಗಳಿಗೆ ವಿಷಯ ತಿಳಿಸಿ ನಂತರ ಚಾಸಾ –4, 2 ಮತ್ತು 3 ರವರನ್ನು ಠಾಣೆಗೆ ಕರೆಯಿಸಿ ವಿಷಯ ತಿಳಿಸಿ ಕರೆದುಕೊಂಡು ಹೋಗಿ ಗುನ್ಹಾ ಸ್ಥಳಕ್ಕೆ ಹೋಗಿರುತ್ತೇವೆ. ನಂತರ ಸ್ವಲ್ಪ ದೂರದಲ್ಲಿ ನಡೆದುಕೊಂಡು ಹೋಗಿ ವಾಚ್ ಮಾಡುತ್ತಿದ್ದಾಗ ಅವರು ಓಸಿ ಆಡುವ ಬಗ್ಗೆ ತಿಳಿದುಬಂದಿದ್ದು ನಂತರ ನಾವು ಆರೋಪಿತರನ್ನು ಹಿಡಿದು ಅವರಿಂದ ಚೀಟಿ , ಹಣವನ್ನು ಜಪ್ತು ಮಾಡಿ ಅವರ ಹೆಸರು ತಿಮ್ಮಯ್ಯ ನಾಯ್ಕ ಎಂದು ತಿಳಿಸಿರುತ್ತಾರೆ. ಆರೋಪಿಗೆ ನಂತರ ಠಾಣೆಗೆ ಕರೆದುಕೊಂಡು ಬಂದು ನೊಟೀಸು ನೀಡಿದ್ದು ಇರುತ್ತದೆ. ಈ ಸಮಯದಲ್ಲಿ ನಾನು ಚಾಸಾ –5 ರವರಿಗೆ ಸಹಾಯ ಮಾಡಿದ್ದು ಇರುತ್ತದೆ.

3. ಸಾಕ್ಷಿಯು ದೂರು ನೋಡಿ ಗುರುತಿಸಿದ್ದು ಅದನ್ನು ನಿಪಿ– 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಇರುತ್ತದೆ. ಅದನ್ನು ಮುದ್ದೆ ಮಾಲು – 1 ಮತ್ತು 2 ಎಂದು ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಎಸ್ ಎಮ್ ವಕೀಲರಿಂದ,</u>**

ಗುನ್ಹಾ ಸ್ಥಳವು ಹಳೆ ಬಸ್ಸು ನಿಲ್ದಾಣದ ಬಳಿ ಇದೆ. ಘಟನೆಯ ದಿನ ನಾನು ಗುನ್ಹಾ ಸ್ಥಳದ ಹತ್ತಿರ ಗಸ್ತು ಕರ್ತವ್ಯದಲ್ಲಿ ಇದ್ದೇನು. ಆರೋಪಿಯು ಓಸಿ ಜೂಗಾರಾಟ ಆಡುತ್ತಿರುವಾಗ ಪೊಟೋ ಅಥವಾ ವಿಡಿಯೋ ಮಾಡಿಲ್ಲ. ಗುನ್ಹಾ ಸ್ಥಳದ ಅಕ್ಕಪಕ್ಕ ಸಾಡಷ್ಟು ಅಂಗಡಿಗಳು ಇವೆ. ಸದರಿ ಅಂಗಡಿಯ ಜನರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಚೀಟಿ ಮತ್ತು ಪೆನ್ನುಗಳು ಸಾಮಾನ್ಯವಾಗಿ ಎಲ್ಲಾ ಸ್ಥಳದಲ್ಲಿ ಸಿಗುತ್ತವೆ. ಪಂಚಸಾಕ್ಷಿಗಳನ್ನು ಠಾಣೆಗೆ ಕರೆಯಿಸಿ ಗುನ್ಹಾ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಪಂಚನಾಮೆಯನ್ನು ಗುನ್ಹಾ ಸ್ಥಳದಲ್ಲಿ ತಯಾರಿಸಿದ್ದು ಇರುತ್ತದೆ. ಆರೋಪಿಯು ಯಾವುದೇ ಓಸಿ ಜೂಗಾರಾಟ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅಕ್ಕಪಕ್ಕದವನ್ನು ಸಾಕ್ಷಿದಾರರಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿಯನ್ನು ನೋಡದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓಸಿ ಆಡುವ ದಿನ ರೂ. 1020 ನ್ನು ಜಪ್ತು ಮಾಡಿದ್ದು

ಇರುತ್ತದೆ. ಯಾವ ಯಾವ ಮುಖಬೆಲೆಯ ನೋಟುಗಳನ್ನು ಜಪ್ತು ಮಾಡಿದ್ದು ನೆನಪಿಲ್ಲ. ಸುಳ್ಳು ಪ್ರಕರಣವನ್ನು ನಮ್ಮ ಮೇಲಾಧಿಕಾರಿಗಳಿಗೆ ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಯಾವುದೇ ಪ್ರಕರಣ ನಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಾಕ್ಷಿಃ ಸಿಡಬ್ಲ್ಯೂಃ , ಪಿ.ಡಬ್ಲ್ಯೂಃ**

| | |
|---|---|
| ಸಾಕ್ಷಿದಾರನ ಹೆಸರು | : ಶಿವಾನಂದ |
| ತಂದೆಯ ಹೆಸರು | : ಕಲ್ಲಪ್ಪ ನವದಗಿ |
| ವಯಸ್ಸು | : 38 ವರ್ಷ |
| ಉದ್ಯೋಗ | : ಪೋಲೀಸ್ ಉಪ ನಿರೀಕ್ಷಕರು , ದಾಂಡೇಲಿ ಗ್ರಾಮೀಣ ಠಾಣೆ |
| ವಾಸ್ತವ್ಯ | : ದಾಂಡೇಲಿ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 16.06.2023 ರಿಂದ 27.11.2024 ರವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿ. 01.04.2024 ರಂದು 10.15 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಬಂದ ಬಾತ್ಮಿಯಂತೆ ಆಜಾದ ನಗರದ 4 ನೇಕ್ರಾಸ್ ನ ಮಸೀದಿ ಹತ್ತಿರ ಒಬ್ಬ ವ್ಯಕ್ತಿ ಅಮಲು ಪದಾರ್ಥ ಸೇವನೆ ಮಾಡಿದಂತೆ ಬಂದ ಮಾಹಿತಿಯಂತೆ ಮಾಹಿತಿಯನ್ನು ಮೇಲಾಧಿಕಾರಿಗೆ ತಿಳಿಸಿ ಚಾಸಾ - 4 , 5, 6 ರವರನ್ನು ಕರೆದುಕೊಂಡು ಹಾಗೂ ಪಂಚರಾದ ಚಾಸಾ 2 ಮತ್ತು 3 ರವರಿಗೆ ನೊಟೀಸನ್ನು ನೀಡಿ ಅವರಿಗೆ ಬಾತ್ಮಿ ಬಂದ ವಿಷಯ ತಿಳಿಸಿ ಠಾಣೆಯ ಜೀಪಿನಲ್ಲಿ ಎಲ್ಲರೂ ಸೇರಿ ಗುನ್ನಾ ಸ್ಥಳದ 100 ಮೀಟರ್ ದೂರದಲ್ಲಿ ಜೀಪನ್ನು ನಿಲ್ಲಿಸಿ ನಡೆದುಕೊಂಡು ಹೋಗಿ 11.00 ಗಂಟೆಗೆ ಅಲ್ಲಿ ಕುಳಿತ ವ್ಯಕ್ತಿಗೆ ಸುತ್ತುವರೆದು ನಂತರ ಅವರ ಬಾಯಿಯಿಂದ ಘಾಟು ವಾಸನೆ ಬರುತ್ತಿದ್ದು ಅವನನ್ನು ಇಲ್ಲಿ ಯಾಕೆ ಕುಳಿತಿರುವೆ ಎಂದು

ಕೇಳಿದಾಗ ಆತನು ಉತ್ತರ ನೀಡಿದ್ದು ಇರುವುದಿಲ್ಲ. ಘಾಟು ವಾಸನೆ ಬಗ್ಗೆ ಕೇಳಿದಾಗ ಇದು ಗಾಂಜಾ ಸೇವನೆ ಮಾಡಿದ್ದು ಎಂದಿದ್ದು ತನ್ನ ಬಳಿ ಗಾಂಜಾ ಇಲ್ಲ ಎಂದು ಹೇಳಿರುತ್ತಾನೆ. 2 – 3 ದಿನದ ಹಿಂದೆ ತಾನು ಮಣಿಪಾಲದಿಂದ ತಂದು ಸಿಗರೇಟಿನಲ್ಲಿ ಹಾಕಿ ಸೇವನೆ ಮಾಡುತ್ತಿದ್ದೇನೆ ಎಂದು ಹೇಳಿರುತ್ತಾನೆ. ಪಂಚರ ಸಮಕ್ಷಮ ಆತನ ಹೆಸರು ಕೇಳಿದಾಗ ಮೊಹಮದ್ ರಫಿ ಎಂದು ತಿಳಿಸಿರುತ್ತಾನೆ. ತಾನು ಗಾಂಜಾ ಸೇವನೆ ಮಾಡಿದ ಬಗ್ಗೆ ಒಪ್ಪಿದ್ದು ಅಲ್ಲಿ ಸುತ್ತಮುತ್ತ ಯಾವುದೇ ವಸ್ತು ಸಿಕ್ಕಿರುವುದಿಲ್ಲ. ಗಾಂಜಾ ಸೇವನೆ ಮಾಡಿದ್ದು ಒಪ್ಪಿಕೊಂಡ ಕಾರಣ ಪಂಚರ ಸಮಕ್ಷಮ 11.00 ರಿಂದ 12.00 ಗಂಟೆಯವರೆಗೆ ಸ್ಥಳದಲ್ಲಿ ಪಂಚನಾ ೆಮ ತಯಾರಿಸಿ ಚೆಕ್ಕುಬಂದಿ ತಯಾರಿಸಲಾಯಿತು. ಉತ್ತರಕ್ಕೆ ಗಾರ್ಡನ್ , ಪೂರ್ವ ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಖುಲ್ಲಾ ಜಾಗ ಇದೆ. ಪಂಚನಾಮೆ ಸಹಿತ ಠಾಣೆಗೆ 1.00 ಗಂಟೆಗೆ ಬಂದು ಆರೋಪಿಗೆ ಗಾಂಜಾ ಸೇವನೆ ಮಾಡಿದ ಬಗ್ಗೆ ವೈದ್ಯಕೀಯ ಪರೀಕ್ಷೆ ಸಲುವಾಗಿ ಆತನ ಅನುಮತಿ ಪತ್ರ ಪಡೆದು ಶ್ರೀ ಮಾತಾ ಆಸ್ಪತ್ರೆ ಕುಂದಾಪುರದ ವೈದ್ಯಾಧಿಕಾರಿಗಳು ಇವರಿಗೆ ಗಾಂಜಾ ಸೇವನೆ ಮಾಡಿದ ಬಗ್ಗೆ ದೃಢೀಕರಣಕ್ಕಾಗಿ ಕೋರಿಕೆ ಪತ್ರವನ್ನು ಚಾಸಾ –4 ಮತ್ತು 5 ರವರೊಂದಿಗೆ ಕೋರಿಕೊಂಡಿರುತ್ತೇನೆ. ಅವರು ಗಾಂಜಾ ಸೇವನೆ ದೃಢ ಪಟ್ಟ ಬಗ್ಗೆ ವರದಿ ಜೊತೆಗೆ ಠಾಣೆಗೆ ಬಂದು ಹಾಜರಾಗಿದ್ದರಿಂದ ಆರೋಪಿಯ ಮೇಲೆ ಸರಕಾರದ ಪರವಾಗಿ ದೂರನ್ನು ದಾಖಲಿಸಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 775/2024**

**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ವಿಶ್ವನಾಥ

ತಂದೆಯ ಹೆಸರು : ಮಾದೇವ ಗಾಂವಕಾರ

ವಯಸ್ಸು : 49 ವರ್ಷ

ಉದ್ಯೋಗ : ಕಂದಾಯ ನಿರೀಕ್ಷಕರು, ತಹಶೀಲ್ದಾರ ಕಚೇರಿ , ಭಟ್ಕಳ

ವಾಸ್ತವ್ಯ : ರಾಘವೇಂದ್ರ ಮಠದ ಹತ್ತಿರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 16.06.2023 ರಂದು ಚಾಸಾ -4 ರವರು ತಹಶೀಲ್ದಾರವರಿಗೆ ಕರೆ ಮಾಡಿ ಸಮಯ 3.15 ಗಂಟೆಗೆ ಕುಂದಾಪುರದಿಂದ ಪುರವರ್ಗದ ಚೆಕ್ ಪೋಸ್ಟ ಹತ್ತಿರ ಕೆಎ 20 ಎಮ್ ಬಿ -4938

ಸಿಲ್ವರ್ ಬಣ್ಣದ ವಾಹನದಲ್ಲಿ ಅಕ್ರಮ ಅಕ್ಕಿ ಸಾಗಾಟ ಮಾಡುವುದಾಗಿ ತಿಳಿಸಿದ್ದು ವಾಹನ ಪಾಸ್ ಆಗುವಾಗ ಚಾಸಾ – 6 ಮತ್ತು 7 ರವರು ವಾಹನ ತಪಾಸಣೆ ಮಾಡುವಾಗ ಬಿಳಿ ಬಣ್ಣದ ಸಿಮೆಂಟ್ ಚೀಲದಲ್ಲಿ 510 ಕೇಜಿ (5.1 ಕ್ವಿಂಟಲ್ ) ಅಕ್ಕಿಯನ್ನು ವಶಪಡಿಸಿಕೊಂಡಾಗ ಕಾರಿನಲ್ಲಿದ್ದವರು ಓಡಿ ಹೋಗಿದ್ದು ಇರುತ್ತದೆ. 3.15 ರಿಂದ 6.15 ತನಕ ಪಂಚನಾಮೆ ಮಾಡಿದ್ದು ಇರುತ್ತದೆ. ದಿಃ 17.06.2023 ರಂದು ಗೊಡೌನಿನ ಅಕ್ಕಿಯನ್ನು ನಾನು ಸ್ವೀಕರಿಸಿದ್ದು ಅದರಲ್ಲಿ 1 ಕೆ ಜಿ ಅಕ್ಕಿಯ ಶ್ಯಾಂಪಲನ್ನು ಆರೋಗ್ಯ ನಿರೀಕ್ಷಕರು, ಭಟ್ಕಳ ಇವರು ಪರೀಕ್ಷಿಸಿದ್ದು ಇರುತ್ತದೆ. ಗೋಡೌನ್ ನಲ್ಲಿ 9.30 ರಿಂದ 12.30 ಗಂಟೆಗೆ ಪಂಚನಾಮೆಯನ್ನು ಮಾಡಿದ್ದು ಇರುತ್ತದೆ. ಸಾಕ್ಷಿಯು ಮುದ್ದೆಮಾಲು 1 ನ್ನು ನೋಡಿ ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 2 ನೇ ಆರೋಪಿ ಪರ ಶ್ರೀ ಎಸ್ ಇ ಹೆಚ್ ವಕೀಲರಿಂದ,**

ನಾನು ತಹಶೀಲ್ದಾರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ–1 ರವರು ನಮ್ಮ ಕಚೇರಿಯಲ್ಲಿ ಆಹಾರ ನಿರೀಕ್ಷಕರಾಗಿ ಕೆಲಸ ಮಾಡುತ್ತಾರೆ. ಚಾಸಾ –3 ರವರು ನಮ್ಮ ಇಲಾಖೆಯ ವಿಲೇಜ್ ಅಕೌಂಟೇಟ್ ಅಗಿದ್ದಾರೆ. ಘಟನೆ ದಿನ ನಾನು ಕರ್ತವ್ಯದಲ್ಲಿದ್ದ ಬಗ್ಗೆ ದಾಖಲೆ ಇದ್ದು ಅದನ್ನು ತನಿಖಾಧಿಕಾರಿಗೆ ನಾನು ನೀಡಿಲ್ಲ . ಪಂಚನಾಮೆಗೆ ನಾವು ಕಚೇರಿ ಬಿಟ್ಟು ಹೋದ ಬಗ್ಗೆ ಚಲನ ವಲನ ರಜಿಸ್ಟರನಲ್ಲಿ ನಮೂದು ಮಾಡಿಲ್ಲ. ಪಂಚನಾ ಿಮ ಬರೆಯಲು ನಾನು ಮಾಹಿತಿ ನೀಡಿಲ್ಲ. ಪಂಚನಾಮೆಯನ್ನ ಪೊಲೀಸರೇ ಅವರ ಮಾಹಿತಿ ಮೇರೆಗೆ ಬರೆದಿದ್ದು ಅದರಲ್ಲಿ ಬರೆದ ವಿಷಯದ ಬಗ್ಗೆ ನನಗೆ ಗೊತ್ತಿದೆ. ನಾವು ಗುನ್ನಾ ಸ್ಥಳಕ್ಕೆ ಹೊ ೀದಾಗ ಸ್ಥಳದಲ್ಲಿ ವಾಹನ ಚಾಲಕ ಮತ್ತು ಯಾರೂ ಇರಲಿಲ್ಲ. ಘಟನೆಯದಿನ ವಾಹನವನ್ನು ಯಾರು ಚಲಾಯಿಸಿಕೊಂಡು ಬಂದಿದ್ದರು ಮತ್ತು ಯಾರೆಲ್ಲಾ ಇದ್ದರೆಂದು ನನಗೆ ಗೊತ್ತಿಲ್ಲ. ಗುನ್ನಾ ಸ್ಥಳದ ಪಕ್ಕದಲ್ಲಿ ಚೆಕ್ ಪೋಸ್ಟ ಇದ್ದು ಅಲ್ಲಿ ಸಿಸಿ ಕ್ಯಾಮೇರಾಗಳು ಇವೆ. ಗುನ್ನಾ ಸ್ಥಳದ ರಸ್ತೆಯ 2 ಬದಿಗೆ ಬ್ಯಾರಿಕೇಡ್ ಹಾಕಲಾಗಿದೆ. ಗುನ್ನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು , ದೇವಸ್ಥಾನ ಹಾಗೂ ಮಸೀದಿ ಇವೆ. ಗುನ್ನಾ ಸ್ಥಳಕ್ಕೆ ಹೋದಾಗ ಸಾರ್ವಜನಿಕರು ಯಾರೂ ಇರಲಿಲ್ಲ. 1 ಪಂಚನಾಮೆ ಮಾಡುವಾಗ ಗುನ್ನಾ ಸ್ಥಳದಲ್ಲಿ 1 ಪೊಟೋ ತೆಗೆದಿರುತ್ತಾರೆ. ಗೊಡೌನ್ ನಲ್ಲಿ 2 ನೆ ೀ ಪಂಚನಾಮೆ ಮಾಡಿದ್ದು ಗೋಡೌನ್ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಇಲ್ಲಿ ಮಾಡಿದ ಪಂಚನಾಮೆಯನ್ನು ಪೊಲೀಸರೆ ಬೆರಳಚ್ಚು ಮಾಡಿರುತ್ತೇನೆ. ಅದಕ್ಕೆ ನಾನು ಗೊಡೌನಲ್ಲಿ ಸಹಿ

ಮಾಡಿರುತ್ತೇನೆ. ಗೊಡೌನಿನಲ್ಲಿ ಮಾಡಿದ ಪಂಚನಾಮೆಗೆ ನಾನು ಮಾಹಿತಿ ನೀಡಿಲ್ಲ ಪೊಲೀಸರೇ ಪಂಚನಾಮೆ ಮಾಡಿರುತ್ತಾರೆ. . ಗೊಡೌನಿನಲ್ಲಿ ಮಾಡಿದ ಪಂಚನಾಮೆ ಕಾಲಕ್ಕೆ 1 ಪೊಟೋ ತೆಗೆದಿರುತ್ತಾರೆ. 2 ನೇ ಪಂಚನಾಮೆ ಕಾಲಕ್ಕೆ ಚಾಸಾ –3 ರವರು ನನ್ನ ಜೊತೆ ಗೊಡೌನಿನಲ್ಲಿ ಸಹಿ ಮಾಡಿರುತ್ತಾರೆ. ಇಂದು ನ್ಯಾಯಾಲಯದ ಮುಂದೆ ಇದ್ದ ಅಕ್ಕಿಯನ್ನು ಗೊಡೌನಿನಲ್ಲಿ ತೆಗೆದಿರುತ್ತಾರೆ. ನ್ಯಾಯಾಲಯದ ಮುದ್ದೆ ಮಾಲಿನ ಮೇಲೆ ನನ್ನ , ಚಾಸಾ –3 ಹಾಗೂ ಚಾಸಾ –9 ರವರ ಸಹಿ ಇರುವ ಚೀಟಿ ಅಂಟಿಸಿರುತ್ತಾರೆ. ಇಂದು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲಿನ ಮೇಲೆ ನಾವು ಸಹಿ ಮಾಡಿದ ಚೀಟಿ ಇಲ್ಲ. ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಸಿಗುವ ಅಕ್ಕಿ ಹಾಗೂ ಪಡಿತರ ಚೀಟಿಯಲ್ಲಿ ಪಡೆಯುವ ಅಕ್ಕಿಯಲ್ಲಿ ವ್ಯತ್ಯಾಸ ಇದೆ. ಪಡಿತರ ಅಕ್ಕಿ ಎನ್ನುವ ಬಗ್ಗೆ ನಾವು ಯಾವುದೇ ಪರೀಕ್ಷೆ ಮಾಡಿಲ್ಲ. ಅಕ್ಕಿಯನ್ನು ಎಲ್ಲಿಂದ ಹಾಗೂ ಯಾರಿಂದ ತಂದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಗುನ್ನಾ ಸ್ಥಳದಲ್ಲಿ ತೆಗೆದ ಪೊಟೋವನ್ನು ಇಂದು ನ್ಯಾಯಾಲಯದಲ್ಲಿ ನನಗೆ ತೋರಿಸಿದ್ದು ಇರುವುದಿಲ್ಲ . ನಿಪಿ–4 ಪೊಟೋವನ್ನು ಗೊಡೌನಿನಲ್ಲಿ ತೆಗೆದಿಲ್ಲ. ಇಂದು ನ್ಯಾಯಾಲಯದ ಮುಂದಿರುವ ನಿಪಿ–4 ಪೊಟೋವನ್ನು ಭಟ್ಕಳದ ಪೊಲೀಸ್ ಠಾಣೆಯ ಆವರಣದಲ್ಲಿ ತೆಗೆದಿರುತ್ತಾರೆ. ನಿಪಿ–4 ಪೊಟೋವನ್ನ ಯಾವ ದಿನಾಂಕಕ್ಕೆ ತೆಗೆದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹೇಳುವಂತೆ , ನಾನು ಹೇಳುವ ದಿನಾಂಕದಂದು ನಮ್ಮ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ . ಪಿರ್ಯಾದಿದಾರರು ನಮ್ಮ ಇಲಾಖೆಯವರಾದ ಕಾರಣ ಅವರು ಹಾಗೂ ಪೊಲೀಸರು ಹಾಕಿದ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರು ಸೃಷ್ಟಿಸಿದ 2 ಪಂಚನಾಮೆಗಳಿಗೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿತರಿಗೂ ಹಾಗೂ ಸದರಿ ಪ್ರಕರಣದಲ್ಲಿ ಸಾಧಿಸುವ ಅಕ್ಕಿಗೂ ಮತ್ತು ವಾಹನಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ .

**ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ. ಮುಂದುವರೆದು..**

ಸದರಿ ಪ್ರಕರಣದ ದಿನಾಂಕದಂದು ನಾನು ಹಾಗೂ ಚಾಸಾ –1 ಇವರು ಮಿನಿ ವಿಧಾನ ಸೌದದ ಹೊಸಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದುದು ಇರುತ್ತದೆ. ತಹಶೀಲ್ದಾರ ಕಚೇರಿಯಿಂದ ಗುನ್ನಾ ಸ್ಥಳ 6 ಕಿಮೀ ಅಂತರದಲ್ಲಿ ಇದೆ. ಗುನ್ನಾ ಸ್ಥಳದ ರೆವಿನ್ಯೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಚಾಸಾ –1 ರವರು ನೀಡಿದ್ದಾರೆ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು ಹಾಗೂ ಪೊಟೋವನ್ನು ಸದರಿ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾೆಮ ಕಾಲಕ್ಕೆ 1 ಸಹಿಯನ್ನು ಪೊಲೀಸರು ಪಡೆದಿರುತ್ತಾರೆ. 1 ನೇ ಆರೋಪಿಗೂ ಹಾಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ . ಚಾಸಾ –1 ರವರು ಹಾಗೂ ಪೊಲೀಸರ ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಆರೋಪಿಗಳ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 203/2023**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

ಸಾಕ್ಷಿದಾರನ ಹೆಸರು : ಜೈರಾಮ
ತಂದೆಯ ಹೆಸರು : ವೆಂಕಟರಮಣ ಹೊಸ್ಕಟ್ಟಾ
ವಯಸ್ಸು : 52 ವರ್ಷ
ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ಶಹರ ಪೊಲೀಸ್ ಠಾಣೆ
ವಾಸ್ತವ್ಯ : ಪೊಲೀಸ್ ವಸತಿ ಗೃಹ, ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 04/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2019 ರಿಂದ ಇಲ್ಲಿಯವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಆರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 24.07.2022 ರಂದು ಚಾಸಾ –1 ರವರೊಂದಿಗೆ ನಾನು , ಚಾಸಾ –5 , 6 , 7 ನೇ ಯವರು ವಿಶೇಶ ಕರ್ತವ್ಯದಲ್ಲಿ ಭಟ್ಕಳದ ಹಳೆ ಬಸ್ಸು ನಿಲ್ದಾಣದ ಬಳಿ ಇದ್ದಾಗ ಚಾಸಾ 1 ರವರಿಗೆ ಬಾತ್ಮಿದಾರರಿಗೆ ಸಿದ್ದಿಕ್ ಸ್ಟಿಟ್ ನ ಬಳಿ ಇರುವ ಹಾವಾ ಮಂಜೀಲ ಮನೆ ಯ ಕಂಪೌಂಡಿನ ಒಳಗೆ 2 ಜಾನುವಾರುಗಳನ್ನು ವಧೆ ಮಾಡಲು ಅಕ್ರಮವಾಗಿ ಕಟ್ಟಿರುವುದಾಗಿ ಮಾಹಿತಿ ಬಂದಿದ್ದು ನಂತರ ಚಾಸಾ –1ರವರು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಪರವಾನಿಗೆ ಪಡೆದು ದಾಳಿಗೆ ನಮ್ಮನ್ನು ಕರೆದುಕೊಂಡು ಗುನ್ನಾ ಸ್ಥಳಕ್ಕೆ ಹೋಗಿ ನೋಡಿದಾಗ 2 ಜಾನುವಾರುಗಳನ್ನು ಹಿಂಸಾತ್ಮಕವಾಗಿ ಕಟ್ಟಿದ್ದು ಇರುತ್ತದೆ.ನಂತರ ಅದನ್ನು ಪರಿಶೀಲನೆ ಮಾಡಿ ಅಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದಿದ್ದು ಇರುತ್ತದೆ. ಈ ಕಾಲಕ್ಕೆ ನಾನು ಮೇಲಾಧಿಕಾರಿಗಳಿಗೆ ಸಹಾಯ ಮಾಡಿದ್ದು ಇರುತ್ತದೆ. ಜಾನುವಾರುಗಳು ರೂ. 30,000 ಬೆಲೆ ಬಾಳವಂತಹದ್ದು ಇರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ಘಟನೆಯ ದಿನ ಹಳೆ ಬಸ್ಸು ನಿಲ್ದಾಣದ ಹತ್ತಿರ ಕರ್ತವ್ಯದಲ್ಲಿ ಇದ್ದೇನು. ಸಿದ್ದೀಕ್ ಸ್ಟ್ರೀಟ್ ಭಟ್ಟಳದಲ್ಲಿ ದಕ್ಷಿಣ ದಿಕ್ಕಿಗೆ ಬರುತ್ತದೆ. ಗುನ್ನಾ ಸ್ಥಳದಲ್ಲಿ ಇರುವ ಕಂಪೌಂಡು ಯಾರಿಗೆ ಸಂಬಂಧಿಸಿದ್ದು ಎಂದುನಾನು ದಾಖಲೆಯನ್ನು ತನಿಖಾಧಿಕಾರಿಗೆ ನೀಡಿಲ್ಲ. ನಮ್ಮ ಮೇಲಾಧಿಕಾರಿಗಳು ಸದರಿ ಗುನ್ನಾ ಸ್ಥಳದ ದಾಖಲೆಯನ್ನು ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಗುನ್ನಾ ಸ್ಥಳದ ಕಂಪೌಂಡು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಘಟನೆ ಬಗ್ಗೆ ಚಾಸಾ –1 ನನಗೆ ಮಾಹಿತಿ ನೀಡಿದ್ದಾರೆ. ನಾವು ಗುನ್ನಾ ಸ್ಥಳಕ್ಕೆ ಹೋಗುವ ಮೊದಲೇ ಜಾನುವಾರುಗಳನ್ನು ಹಗ್ಗದಿಂದ ಹಿಂಸಾತ್ಮಕವಾಗಿ ಕಟ್ಟಿದ್ದರು. ನ್ಯಾಯಾಲಯದ ಮುಂದೆ ಮಾಲಿನಿಂದ ಜಾನುವಾರುಗಳನ್ನು ಕಟ್ಟಿಗೆಯ ಕಂಬಕ್ಕೆ ಕಟ್ಟಿದ್ದರು. ಗುನ್ನಾ ಸ್ಥಳದಲ್ಲಿ ಓಡಿ ಹೋದ ವ್ಯಕ್ತಿಗಳು ಯಾರೆಂದು ನನಗೆ ಗೊತ್ತಿಲ್ಲ. ಪಂಚರು ಎಲ್ಲಿಂದ ಬಂದರು ಯಾರು ಅವರನ್ನು ಕರೆದರು ಎಂದು ನನಗೆ ಮಾಹಿತಿ ಇಲ್ಲ. ಚಾಸಾ –1 ರವರು ನನಗೆ ಘಟನೆಯ ದಿನ ಕರ್ತವ್ಯಕ್ಕೆ ನೇಮಿಸಿದ್ದ ಕಾರಣ ವರದಿ ನೀಡುವ ಅಗತ್ಯ ಇಲ್ಲ. ನಾನು ಹೇಳುವಂತಹ ಘಟನೆ ನಡೆದಿಲ್ಲ ಎಂದರೆ

ಸರಿಯಲ್ಲ. ಚಾಸಾ –1 ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ಅಂಕೆ ಸಂಕೆಗಾಗಿ ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣವನ್ನು ಅಂಕೆ ಸಂಕೆಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಪೊಟೋ ತೆಗೆದ ಬಗ್ಗೆ ನನಗೆ ಮಾಹಿತಿ ಇಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1050/2019**

**ಸಿ.ಡಬ್ಲ್ಯೂಃ16, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಈರಣ್ಣ

ತಂದೆಯ ಹೆಸರು : ಶಿವಲಿಂಗಯ್ಯ ಪೂಜಾರಿ

ವಯಸ್ಸು : 34 ವರ್ಷ
ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ಗ್ರಾಮೀಣ ಪೊಲೀಸ ಠಾಣೆ
ವಾಸ್ತವ್ಯ : ಪೊಲೀಸ್ ವಸತಿಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04/03 /2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2016 ರಿಂದ 2023 ರ ಜೂನ್ ತಿಂಗಳವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 25.10.2019 ರಂದು ಚಾಸಾ – 19 ರವರು ನನಗೆ ಹಾಗೂ ಚಾಸಾ – 15 ರವರಿಗೆ ಭಟ್ಕಳ ನಗರ ಠಾಣೆಯ ಗುನ್ನಾ ನಂಬರ್ 63/2019 ನೇದರಲ್ಲಿ ಸಂಶಯಾಸ್ಪದ ಆರೋಪಿಯಾದ ಮೊಹಮದ್ ರಿಯಾದ ಈತನನ್ನು ವಿಚಾರಣೆಗೆ ತಂದು ಹಾಜರುಪಡಿಸಲು ಅಧಿಕಾರಿಗಳು ಸೂಚಿಸಿದ್ದು ನಾನು ಹಾಗೂ ಚಾಸಾ 19 ರವರು 13.15 ಗಂಟೆಗೆ ಉಮರ ಸ್ಟ್ರೀಟ್ ನಲ್ಲಿ ಸಿಕ್ಕಿದ್ದ ಆರೋಪಿಗೆ ತನಿಖಾಧಿರಿಗಳ ಮುಂದೆ ಹಾಜರುಪಡಿಸಿದ್ದು ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ ಪಂಚರ ಸಮಕ್ಷಮ ಆರೋಪಿಯನ್ನು ವಿಚಾರಣೆ ಮಾಡಲಾಗಿ ತಾನು ಹಾಗೂ ತನ್ನ ಹೆಂಡತಿ ಪಾತಿಮಾ ಜೊತೆಗೆ ಪಿರ್ಯಾದಿಯಾದ ಮೊಹಮದ್ ಹುಜೇರ್ ರವರ ಮನೆ ಮುಂದೆ ಬಾಡಿಗೆ ಮನೆ ಮಾಡಿಕೊಂಡಿದ್ದು ಇದ್ದಾಗ ಅವರ ಮನೆಯ ಬೀಗದ ಕೈ ಆರೋಪಿಗಳ ಬಳಿ ಇದ್ದುದರಿಂದ ಯಾರು ಇಲ್ಲದ ಸಮಯದಲ್ಲಿ ಮನೆಯ ಬೀಗ ತೆಗೆದು ಬೆಡ್ ರೂಂ ನ ಕಪಾಟಿನಲ್ಲಿದ್ದ ಬಂಗಾರದ ಆಭರಣಗಳನ್ನು ಕಳುವು ಮಾಡಿ ಅವುಗಳನ್ನು ಕುಂದಾಪುರದ ಬಂಗಾರದ ವ್ಯಾಪಾರಿ ಶಾಂತೇಶ ಆಚಾರಿ ಅವರಿಗೆ ಮಾರಾಟ ಮಾಡಿ 2 ಲಕ್ಷ 30 ಸಾವಿರ ಹಣ ಪಡೆದು ಹಾಗೂ ಸದರಿ ಆಭರಣಗಳ ಜೊತೆ 1 ರಿಂಗ್ ಅನ್ನು ಭಟ್ಕಳದ ಪಿವರ್ ಗೋಲ್ಡ ಶಾಪ್ ನ ಪೈಜಾನ್ ಎಂಬುವವರಿಗೆ ಮಾರಾಟ ಮಾಡಿ 5,000 ರೂ ಅನ್ನು ಪಡೆದಿರುತ್ತಾರೆ. ಕಳ್ಳತನ ಮಾಡಿದ ಬಗ್ಗೆ ಆರೊಪಿತರು ಒಪ್ಪಿಕೊಂಡಿದ್ದು ಇರುತ್ತದೆ. ನಂತರ ಠಾಣೆಯ ಜೀಪಿನಲ್ಲಿ ಪಂಚರನ್ನು ಕರೆದುಕೊಂಡ ಕುಂದಾಪುರಕ್ಕೆ ಹೋಗಿ ಬಂಗಾರ ನೀಡಿದ ಅಂಗಡಿಗೆ ಹೊೀಗಿ ಆತನು ಬಂಗಾರವನ್ನು ಆರೋಪಿಗಳು ನೀಡಿದ್ದು ಒಪ್ಪಿದ್ದು ಸದರಿ ಬಂಗಾರ ಕರಗಿಸಿದ್ದು ಇರುತ್ತದೆ ಎಂದು ಹೇಳಿರುತ್ತಾರೆ. ನಂತರ ಕರಗಿದ ಬಂಗಾರದಿಂದ 2 ಬಂಗಾರದ ಗಟ್ಟಿ ಹಾಗೂ 1 ನಾಣ್ಯವನ್ನು ವಶಪಡಿಸಿಕೊಂಡಿದ್ದು ಇರುತ್ತದೆ, ದಿಃ 26.04.2019 ರಂದು ಗುನ್ನಾ ಸ್ಥಳಕ್ಕೆ ಹೋಗಿ ಚಾವಿಯನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ನಂತರ

ಮೊಹಮದ್ ಪೈಜ್ ಅವರನ್ನು ಠಾಣೆಗೆ ಕರೆದು ಬಂಗಾರ ಕರಗಿಸಿದ್ದಾಗಿ ಹೇಳಿದ್ದರಿಂದ ಬಂಗಾರದ ಬಟನ್ ಅನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅರೋಪಿಯ ಭದ್ರತೆಯಲ್ಲಿ ಇದ್ದೇನು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : 1 ನೇ ಆರೋಪಿ ಪರ ಶ್ರೀ ಆರ್ ಎಸ್ ಎಮ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಆರೋಪಿತರನ್ನು ನಾನು ಹಾಜರುಪಡಿಸಿರುತ್ತೇನೆ. 1 ನೇ ಆರೋಪಿಯನ್ನು ಉಮರ್ ಸ್ಟ್ರಿಟ್ ಹತ್ತಿರ ದಸ್ತಗಿರಿ ಮಾಡಿರುತ್ತೇನೆ. ಮೇಲಾಧಿಕಾರಿಗಳ ಮೌಖಿಕ ಆದೇಶದ ಮೇಲೆ 1 ನೇ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇನೆ. 1 ನೇ ಆರೋಪಿಯ ಹೆಸರಲ್ಲಿ ಆತನನ್ನು ಕಂಡುಹಿಡಿದಿರುತ್ತೇನೆ. ಆರೊಪಿಯ ದಸ್ತಗಿರಿ ಕಾಲಕ್ಕೆ ಆದಾರ ಕಾರ್ಡ ಅನ್ನು ಪರಿಶೀಲನೆ ಮಾಡಿದ್ದು ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದು ಇರುವುದಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಲು ಮಾಡಿದ ಆದೇಶದ ಬಗ್ಗೆ ಹೇಳಿಕೆಯಲ್ಲಿ ಹೇಳಿರುತ್ತೇನೆ. ದಸ್ತಗಿರಿ ಮಾಡಿದ ವಿಷಯವನ್ನು ಆರೋಪಿಯ ಸಂಬಂಧಿಸಿಕರಿಗೆ ತಿಳಿಸಿದ್ದು ಇರುವುದಿಲ್ಲ. ದಸ್ತಗಿರಿ ಮಾಡುವ ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ. ನಮ್ಮ ಮೇಲಾಧಿಕಾರಿಗಳ ಆದೇಶವನ್ನು ನಾವು ಪಾಲಿಸುತ್ತೇವೆ. ವಾಹಿತಿ ಸಂಗ್ರಹಿಸಿದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ದಸ್ತಗಿರಿ ಮಾಡಲು ಯಾವಾಗ ಸೂಚನೆ ನೀಡಿದ್ದರು ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ನನಗೆ ಯಾವುದೇ ಅಧಿಕಾರಿ ಇಲ್ಲದಿದ್ದರೂ ಸಹ ಆರೋಪಿಗೆ ಹಿಡಿಯಲು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಕಾಯಿದೇ ಕಾನೂನನ್ನು ತೂರಿ ಆರೋಪಿಗೆ ದಸ್ತಗಿರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ನೇ ಆರೋಪಿ ಪರ ಶ್ರೀ ಆರ್ ಎನ್ ಎನ್ ವಕೀಲರಿಂದ,**

1 ಮತ್ತು 2 ನೇ ಆರೋಪಿತರು ಗಂಡ ಹೆಂಡತಿ ಆಗಿದ್ದಾರೆ. ಇಬ್ಬರೂ ಆರೋಪಿತರು ಒಂದೇ ಮನೆಯಲ್ಲಿ ವಾಸವಾಗಿರುತ್ತಾರೆ. 1 ನೇ ಆರೋಪಿಯನ್ನು ದಸ್ತಗಿರಿ ಮಾಡಿದಾಗ 2 ನೇ ಆರೋಪಿಗೆ ತಿಳಿಸಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕೆ ಸಂಕೆ ತೋರಿಸಲು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1775 /2024**

**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಮೊಹಮದ್ ಅಲಿ ಬ್ಯಾರಿ

ತಂದೆಯ ಹೆಸರು : ಆದಮ್ ಸಾಬ್

ವಯಸ್ಸು : 40 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಬೆಂಡೇಕಾನ್, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 03/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 10.05.2024 ರಂದು ನಾನು ದೇವಿನಗರಕ್ಕೆ ಹೋಗುತ್ತಿರುವಾಗ ಚಾಸಾ – 8 ರವರು ನನಗೆ ದೇವಿನಗರಕ್ಕೆ ಕರೆದು ಗಲಾಟೆ ಆದ ವಿಷಯವಾಗಿ ನನಗೆ ಪಂಚನಾಮೆಗೆ ಸಹಿ ಹಾಕಲು ಹೇಳಿದ್ದರು. ಅಲ್ಲಿ ಪೊಟೋ ತೆಗೆದಿದ್ದರು. ಪಂಚನಾಮೆಯನ್ನು ಬೆಳಿಗ್ಗೆ 11.30 ರಿಂದ 12.30 ಗಂಟೆಗೆ ಮಾಡಿದ್ದು ಇರುತ್ತದೆ. ಸಾಕ್ಷಿ ಮುದ್ದೆ ಮಾಲು –1 ನ್ನು ನೋಡಿ ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 523/2020**

**ಸಾಕ್ಷಿಃ ಸಿಡಬ್ಲ್ಯೂಃ 9 , ಪಿ.ಡಬ್ಲ್ಯೂಃ 10**

ಸಾಕ್ಷಿದಾರರ ಹೆಸರು : ಗಣೇಶ ಕೆ ಎಲ್

ತಂದೆಯ ಹೆಸರು : ದಿವಂಗತ ಲಕ್ಷ್ಮಣ

ವಯಸ್ಸು : 54 ವರ್ಷ

ಉದ್ಯೋಗ : ಡಿ ವಾಯ್ ಎಸ ಪಿ , ಶಿರಸಿ

ವಾಸ್ತವ್ಯ : ಶಿರಸಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 03/03/2025**

**(ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.)**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು 2018 ರಿಂದ 20.08.2019 ರವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 31.01.2019 ರಂದು ಸದರಿ ಪ್ರಕರಣದ ಕಡತವನ್ನು ಬಸವರಾಜ ಹೇರೂರು ರವರಿಂದ ಪಡೆದುಕೊಂಡು ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಚಾಸಾ –1 ರವರು ಗುನ್ಹಾ ಸ್ಥಳದ ಸಮಯದ ಸಿಡಿ ಹಾಜರುಪಡಿಸಿದ್ದು ಅದನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರು ಮೂಲಕ ಅಮಾನತ್ತು ಪಡಿಸಿದ್ದು ಇರುತ್ತದೆ. ಅದನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಲಯಕ್ಕೆ ನೀಡಿರುತ್ತೇನೆ. ನಂತರ ಚಾಸಾ 1 ರವರು ನೀಡಿದ ಕಲಂ 65 ಬಿ ರಡಿ ನೀಡಿದ ಹೇಳಿಕೆ ಸ್ವೀಕರಿಸಿರುತ್ತೇನೆ. ದಿಃ 20.08.2019 ರಂದು ನನಗೆ ವರ್ಗಾವಣೆಯಾದ ಕಾರಣ ಸದರಿ ಪ್ರಕರಣದ ಕಡತವನ್ನು ಚೆಲುವರಾಜ ರವರಿಗೆ ಹಸ್ತಾಂತರಿಸಿರುತ್ತೇನೆ.

3. ಸಾಕ್ಷಿಯು ನಿಪಿ–5 ರಲ್ಲಿರುವ ತಮ್ಮ ಸಹಿ ವಿಸಿ ಮೂಲಕ ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು 65 ಬಿ ಪ್ರಮಾಣಪತ್ರ ವಿಸಿ ಮೂಲಕ ನೋಡಿ ಗುರುತಿಸಿದ್ದು ಅದನ್ನು ನಿಪಿ– 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 10 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿಗಳ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಕಚೇರಿಯಲ್ಲಿಯ ಕಂಪ್ಯೂಟರಿನಿಂದ ಡೌನಲೋಡ್ ಮಾಡಿ ವಿಡಿಯೋವನ್ನು ಸಿಡಿಗೆ ಹಾಕಲಾಗಿದೆ. ಚಾಸಾ –1 ರವರು ಯಾವ ಸಾಧನದಿಂದ ವಿಡಿಯೋವನ್ನು ರೆಕಾರ್ಡ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ವಿಡಿಯೋ ಕೃತ್ಯ ನಡೆದ ದಿನಾಂಕದಂದು ರೆಕಾರ್ಡ ಮಾಡಲಾಗಿತ್ತು. ವಿಡಿಯೋವನ್ನು ಪ್ಲೇ ಮಾಡಿ ಪಂಚರ ಸಮಕ್ಷಮ ನೋಡಿರುತ್ತೇವೆ. ವಿಡಿಯೋದಲ್ಲಿ ಜನರು ಕಾಣುತ್ತಿದ್ದರು ಆದರೆ ಯಾರೆಂದು ನನಗೆ ಗುರುತು ಹಿಡಿಯಲು ಆಗಲಿಲ್ಲ. ಚಾಸಾ – 1 ಇವರು ಸಿಡಿಯಲ್ಲಿ ಆರೋಪಿಯನ್ನು ಗುರುತಿಸಿದ್ದು ಇರುವುದಿಲ್ಲ. ಚಾಸಾ 1 ರವರಿಗೆ ಕರ್ತವ್ಯಕ್ಕೆ ಅಡ್ಡಪಡಿಸಿದ್ದ ಬಗ್ಗೆ ವಿಡಿಯೋದಲ್ಲಿದೆ. 1 ನೇ ಆರೋಪಿಯು ಚಾಸಾ 1 ರವರಿಗೆ ಅಡ್ಡಪಡಿಸಿದವರು ಎಂದು ನನಗೆ ಮಾಹಿತಿ ಬಂದಿರುತ್ತದೆ. ಚಾಸಾ 1 ರವರು ತಮ್ಮ ಮೊಬೈಲಿನಲ್ಲಿ ವಿಡಿಯೋಗ್ರಾಫಿ ಮಾಡಿ ಕಚೇರಿಯ ಕಂಪ್ಯೂಟರಿನಲ್ಲಿ ಹಾಕಿದ್ದರು. ಚಾಸಾ –1 ರವರ ಮೊಬೈಲನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ಮೊಬೈಲು ಯಾವ ಬ್ರಾಂಡಿನದು ಆಗಿತ್ತು ಎಂದು ಪಂಚನಾಮೆಯಲ್ಲಿ ನಾನು ನಮೂದು ಮಾಡಿಲ್ಲ ಮತ್ತು ಈಗ ನನಗೆ ಸದರಿ ಮೊಬೈಲಿನ ಬ್ರಾಂಡ ಯಾವುದೆಂದು ನೆನಪು ಇಲ್ಲ. ಸಿಡಿ ಸದರಿ ಪ್ರಕರಣಕ್ಕೆ ಸಂಬಂಧಿಸಿದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಸದರಿ ಸಿಡಿಯಲ್ಲಿ ಇಲ್ಲದಿದ್ದರೂ ಸಹ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ–10 ದಾಖಲೆಯನ್ನು ಸುಳ್ಳಾಗಿ ಸೃಷ್ಟಿ ಮಾಡಿ ಚಾಸಾ –1 ರವರು ತಂದಿರುತ್ತಾರೆ ಎಂದರೆ ಸರಿಯಲ್ಲ. ಇಂತಹ ನಾವು ಹೇಳುವಂತಹ ಘಟನೆ ವಿಡಿಯೊದಲ್ಲಿ ಇಲ್ಲದೇ ಇದ್ದರೂ ಆರೊಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 579 /2023**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಶಮಶಾದ್

ಗಂಡನ ಹೆಸರು : ಅಮಾನುಲ್ಲಾ

ವಯಸ್ಸು : 28 ವರ್ಷ

ಉದ್ಯೋಗ : ಮನೆಕೆಲಸ

ವಾಸ್ತವ್ಯ : ಆಜಾದ ನಗರ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 01/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮದ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಚೆ ಇಲ್ಲ.

ದೂರು ಮತ್ತು ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿ ದೂರು ಹಾಗೂ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಮತ್ತು 2 ಎಂದು ಸಾಕ್ಷಿಯ ಸಹಿಯನ್ನು ನಿಪಿ–1 ಎ ಹಾಗೂ 2 ಎ ಎಂದು ಮತ್ತು ಪೊಟೋವನ್ನು ನಿಪಿ–3 ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಹಾಗೂ ಪೊಟೋವನ್ನು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 20.05.2023 ರಂದು ರಾತ್ರಿ 11.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ 4 ನೇ ಆರೋಪಿಯು ಸರಾಯಿ ಕುಡಿದು ಬಂದು ನನ್ನ ಗಂಡನನ್ನು ಮತ್ತು ನಮ್ಮ ಕುಟುಂಬವನ್ನು ಕುರಿತು ಅವಾಚ್ಯವಾಗಿ ಬೈಯುತ್ತಿದ್ದಾಗ ನಾನು ಹಾಗೂ ಚಾಸಾ 5 ಇವರು ಅದನ್ನು ಪ್ರಶ್ನಿಸಿದಾಗ 1 ನೇ ಆರೋಪಿಯು ಅವಾಚ್ಯವಾಗಿ ಬೈದು ಕೈಯಿಂದ ಮೈಮೇಲೆ ಹೊಡೆದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದೂರು ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ದಿಃ 20.05.2023 ರಂದು ಮದ್ಯಾಹ್ನ 3.30 ಗಂಟೆಗೆ 1, 2 ಮತ್ತು 3 ನೇ ಆರೋಪಿಗಳು ಕೂಡಿಕೊಂಡು ನಮ್ಮ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡುತ್ತಿಯಾ ಎಂದು ನಿಮಗೆ ಬಿಡುವುದಿಲ್ಲ ಒಂದು ಗತಿ ಕಾಣಿಸುತ್ತೇವೆಂದು ಹೇಳಿದಾಗ ಅದನ್ನು ನಾವು ಪ್ರಶ್ನಿಸಿದಾಗ 1 ಮತ್ತು 2 ಮತ್ತು 3 ನೇ ಆರೋಪಿತರು ಅವಾಚ್ಯವಾಗಿ ಬೈದು 1 ನೇ ಆರೋಪಿಯು ವೇಲ್ ನಿಂದ ಚಾಸಾ –4 ರವರ ಕುತ್ತಿಗೆಯನ್ನು ಹಿಡಿದಾಗ ನಾನು ಚಾಸಾ –4 ಅವರನ್ನು ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ಆ ಕಾಲಕ್ಕೆ ಅವಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ದಿಃ 21.01.2023 ರಂದು ನಾನು ಮರುಹೇಳಿಕೆ ಠಾಣೆಯಲ್ಲಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರ ಜೊತೆ ರಾಜಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ604 /2023**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಸುಲೇವಾನ್

ತಂದೆಯ ಹೆಸರು : ಮೊಹಮದ್ ಹನಿಪ್ ಶೇಖ್

ವಯಸ್ಸು : 34 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಜಾಲಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 01/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮದ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಚೆ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 20.05.2023 ರಂದು ನಾನು ಮತ್ತು ಚಾಸಾ – 4 ಮತ್ತು 5 ರವರು ಭಟ್ಕಳಕ್ಕೆ ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ 5.30 ಗಂಟೆಗೆ ಆಜಾದ ನಗರದ 4 ನೇ ರಸ್ತೆಯಲ್ಲಿ ಇರುವ ಅಮನುಲ್ಲಾ ಮನೆಗೆ ಹೋಗಿ ನಾವು ಮಾತನಾಡುತ್ತಿದ್ದಾಗ 1 ನೇ ಆರೋಪಿಯು ಚಾಸಾ –4 ವರಿಗೆ ಮಾತನಾಡುವಾ ಎಂದು ಕರೆದು ಅವರ ರಸ್ತೆಯ ಮೇಲೆ ಮಾತನಾಡುವಾಗ ಅವರು ಒಮ್ಮೇಲೆ ಸಿಟ್ಟಾಗಿ ಅವಾಚ್ಯ ಶಬ್ದಗಳಿಂದ ಬೈದು ಕಬ್ಬಿಣದ ಕತ್ತಿಯಿಂದ ಹಣೆಗೆ ಹೊಡೆದು ಗಾಯ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಆಗ ಚಾಸಾ –5 ರವರು ಆರೋಪಿಗಳ ಕೈಯಿಂದ ನನ್ನನ್ನು ಬಿಡಿಸಿದ್ದರು ಎಂದರೆ ಸರಿಯಲ್ಲ. 2 ಮತ್ತು 3 ರವರು ಸೇರಿ ಚಾಸಾ –1 ರವರ ಗಂಡನಿಗೆ ಉದ್ದೇಶಿಸಿ 50 ಲಕ್ಷ ರೂ. ಖರ್ಚಾದರೂ ಸಹ ನಿನ್ನನು ಭಟ್ಕಳದ ಚೌಕಿನಲ್ಲಿ ನಿಲ್ಲಿಸಿ ತುಂಡು ತುಂಡು ಮಾಡಿ ಚೀಲದಲ್ಲಿ ತುಂಬುತ್ತೇವೆಂದು ಧಮ್ಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ –1 ರವರ ಜೊತೆಗೆ ನಾನು ಠಾಣೆಯಲ್ಲಿ ದೂರು ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಕತ್ತಿಯನ್ನು ತೋರಿಸಿ ಇದೇ ಕತ್ತಿಯಿಂದ 1 ನೇ ಆರೋಪಿಯು ಚಾಸಾ –4 ಇವರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕತ್ತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿ ಇರುವುದಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರ ಜೊತೆ ರಾಜಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ604 /2023**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಸೈಯಿದಾ

ತಂದೆಯ ಹೆಸರು : ಸಾದಿಕ್ ಸಾಬ್

ವಯಸ್ಸು : 34 ವರ್ಷ

ಉದ್ಯೋಗ : ಮನೆಕೆಲಸ

ವಾಸ್ತವ್ಯ : ಇಂದಿರಾ ನಗರ, ಶಿರಸಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 01/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮದ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಛೆ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು : ಎಪಿಪಿಯವರಿಂದ,</u>**

ದಿಃ 19.05.2023 ರಂದು ರಾತ್ರಿ 8.00 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ಚಾಸಾ 1, 6 ಮತ್ತು 7 ರವರು ರಾತ್ರಿ ಮನೆಯಲ್ಲಿದ್ದಾಗ ಆರೋಪಿ 1 ಮತ್ತು 2 ರವರು ಅವಳ ಮಗಳಿಗೆ ಕಳ್ಳಿ ಕಳ್ಳಿ ಎಂದು ಕರೆಯುತ್ತಿದ್ದಾಗ ಚಾಸಾ –1 ರವರು ಈ ಬಗ್ಗೆ ಪ್ರಶ್ನಿಸಿದಾಗ ಆರೋಪಿತರು ಒಮ್ಮೆಲೆ ಚಾಸಾ –1 ರವರ ಮೈಮೇಲೆ ಏರಿ ಬಂದು ಅವರ ಕೆನ್ನೆಯ ಮೇಲೆ ಹೊಡೆದಿದ್ದರು ಎಂದರೆ ಸರಿಯಲ್ಲ. ದಿಃ 20.05.2023 ರಂದು ನಾನು ಮತ್ತು 5 ರವರು ಚಾಸಾ –1 ರವರ ತಮ್ಮನಾದ ಚಾಸಾ –6 ರವರನ್ನು ನೋಡಲು ಮದ್ಯಾಹ್ನ 1.20 ಗಂಟೆಗೆ ಹೋಗಿದ್ದೇವು ಎಂದರೆ ಸರಿಯಲ್ಲ. ಅದೇ ದಿನ 5.30 ಗಂಟೆಗೆ ಗುನ್ನಾ ಸ್ಥಳದಲ್ಲಿ 1 ನೇ ಆರೋಪಿಯು ಕತ್ತಿಯಿಂದ ನನ್ನ ಹಣೆಗೆ ಹೊಡೆದು ಗಾಯ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಆಗ ಚಾಸಾ –5 ರವರು ಆರೋಪಿಗಳ ಕೈಯಿಂದ ನನ್ನನ್ನು ಬಿಡಿಸಿದ್ದರು ಎಂದರೆ ಸರಿಯಲ್ಲ. 2 ಮತ್ತು 3 ರವರು ಸೇರಿ ಚಾಸಾ –1 ರವರ ಗಂಡನಿಗೆ ಉದ್ದೇಶಿಸಿ 50 ಲಕ್ಷ ರೂ. ಖರ್ಚಾದರೂ ಸಹ ನಿನ್ನನು ಭಟ್ಕಳದ ಚೌಕಿನಲ್ಲಿ ನಿಲ್ಲಿಸಿ ತುಂಡು ತುಂಡು ಮಾಡಿ ಚೀಲದಲ್ಲಿ ತುಂಬುತ್ತೇವೆಂದು ಧಮ್ಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ –1 ರವರ ಜೊತೆಗೆ ಹೋಗಿ ನಾನು ಠಾಣೆಯಲ್ಲಿ ದೂರು ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಕಬ್ಬಿಣದ ಕತ್ತಿಯಿಂದ ಹೊಡೆದಿದ್ದು ನಾನು ಗಾಯಗೊಂಡಿದ್ದರು ಸಹ ಆರೋಪಿತರ ಜೊತೆ ರಾಜಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕತ್ತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿ ಇರುವುದಿಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ604 /2023**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ನಗ್ಮಾ |
| ತಂದೆಯ ಹೆಸರು | : | ಸುಲೇಮಾನ್ ಶೇಖ್ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸ್ತವ್ಯ | : | ಆಜಾದ ನಗರ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 01/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಮ್ಮ ಮತ್ತು ಆರೋಪಿಯ ಮಧ್ಯೆ ರಾಜೀ ಆಗಿದೆ. ಕಾರಣ ನನಗೆ ಸದರಿ ಪ್ರಕರಣದ ನಡೆಸಲು ಇಚ್ಛೆ ಇಲ್ಲ.

ದೂರು ಮತ್ತು ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿ ದೂರು ಹಾಗೂ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಮತ್ತು 2 ಎಂದು ಸಾಕ್ಷಿಯ ಸಹಿಯನ್ನು ನಿಪಿ-1ಎ ಹಾಗೂ 2 ಎ ಎಂದು ಮತ್ತು ಫೊಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಹಾಗೂ ಫೊಟೋವನ್ನು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 19.05.2023 ರಂದು ರಾತ್ರಿ 8.00 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ಆರೋಪಿ 1 ಮತ್ತು 2 ರವರು ನನ್ನ ಮಗಳಿಗೆ ಕಳ್ಳಿ ಕಳ್ಳಿ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಆರೋಪಿತರ ಹತ್ತಿರ ಏಕೆ ಹೀಗೆ ಕರೆಯುತ್ತಿರಿ ಎಂದು ಕೇಳಿದಾಗ 1 ನೇ ಆರೋಪಿತರು ಒಮ್ಮೆಲೆ ನನ್ನ ಮೈಮೇಲೆ ಏರಿ ಬಂದು ನನಗೆ ಕೆನ್ನೆಯ ಮೇಲೆ ಹೊಡೆದಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ಮತ್ತೊಬ್ಬ ಅಣ್ಣನ ಹೆಂಡತಿಯಾದ ಚಾಸಾ -7 ರವರು ಠಾಣೆಯಲ್ಲಿ ಅರ್ಜಿ ನೀಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ದಿಃ 20.05.2023 ರಂದು ಚಾಸಾ -4 ಮತ್ತು 5 ರವರು ತಮ್ಮ ತಮ್ಮನಾದ ಚಾಸಾ -6 ರವರನ್ನು ನೋಡಲು ಮಧ್ಯಾಹ್ನ 1.20 ಗಂಟೆಗೆ ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ಅದೇ ದಿನ 5.30 ಗಂಟೆಗೆ ನನ್ನ ಅಣ್ಣನಾದ ಇಮಾನುಲ್ಲಾ ಅವರ ಮನೆಗೆ ಹೋದಾಗ 1 ನೇ ಆರೋಪಿತರು ನನ್ನ ಗಂಡನ ಅಕ್ಕ ಚಾಸಾ -4 ಇವರಿಗೆ ಅವಾಚ್ಯ ಶಬ್ದಗಳಿಂ ದ ಬೈದು ರಸ್ತೆಗೆ ಕರೆದುಕೊಂಡು ಬಂದು ಕಬ್ಬಿಣದ ಕತ್ತಿಯಿಂದ ಗಾಯಪಡಿಸಿದ್ದರು ಎಂದರೆ ಸರಿಯಲ್ಲ. ಆಗ 2 ಮತ್ತು 3 ರವರು ಸೇರಿ ನನ್ನ ಗಂಡನಿಗೆ ಉದ್ದೇಶಿಸಿ 50 ಲಕ್ಷ ರೂ. ಖರ್ಚಾದರೂ ಸಹ ನಿನ್ನನು ಭಟ್ಕಳದ ಚೌಕಿನಲ್ಲಿ ನಿಲ್ಲಿಸಿ ತುಂಡು ತುಂಡು ಮಾಡಿ ಚೀಲದಲ್ಲಿ ತುಂಬುತ್ತೇವೆಂದು ಧಮ್ಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ತಾನು ಠಾಣೆಯಲ್ಲಿ ದೂರು ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ದಿಃ21.05.2023 ರಂದು ಚಾಸಾ -9 ಇವರು ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಕಾಲಕ್ಕೆ ನಾನು ಗುನ್ನಾ ಸ್ಥಳ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಕೃತ್ಯಕ್ಕೆ

ಬಳಸಿದ ಕತ್ತಿಯನ್ನು ಪೊಲೀಸರು ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಗುನ್ನಾ ಸ್ಥಳದಲ್ಲಿ ಬರೆದು ಮುಗಿಸಿದ್ದಕ್ಕೆ ನಾನು ಸಹಿ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 925 /2015**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ವಿನೋದ

ತಂದೆಯ ಹೆಸರು : ರಾಮದಾಸ ನಾಯ್ಕ

ವಯಸ್ಸು : 52 ವರ್ಷ

ಉದ್ಯೋಗ : ಸಹಾಯಕ ಪೊಲೀಸ್ ಉಪ ನಿರೀಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 28/02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2023 ರಿಂದ ಇಲ್ಲಿಯವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 21.02.2024 ರಂದು ಆರೋಪಿತನ ವಿಳಾಸವಾದ ಉತ್ತರಪ್ರದೇಶಕ್ಕೆ ಹೋಗಿ ವಿಚಾರಣೆ ಮಾಡಿದಾಗ ಆತ ಸಿಕ್ಕಿದ್ದು ಇರುವುದಿಲ್ಲ. ಕಾರಣ ಇಬ್ಬರ ಪಂಚರಾದ ಡಿ ಕೆ ಪ್ರಸಾದ ಹಾಗೂ ಇನ್ನೊಬ್ಬ ಸಂಜಯ ಗೋರೇ ಪ್ರಸಾದ ಇವರಿಬ್ಬರನ್ನು ಕರೆದುಕೊಂಡು ಪಂಚಾಯತದ ಹತ್ತಿರ 2 .00 ರಿಂದ 06.00 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಇರುತ್ತದೆ. 1 ನೇ ಪಂಚನಾಮೆ ತಹಶೀಲ್ದಾರ ಕಚೇರಿಯಲ್ಲಿ , 2 ನೇ ಪಂಚನಾಮೆ ಕಟಿಲಾ ಸಮಯಮಾತಾ ಪೋಲೀಸ್ ಠಾಣೆಯ ಎದುರುಗಡೆ, 3 ನೇ ಪಂಚನಾಮೆಯನ್ನು ಇದ್ವಾ ಊರಿನ ಬಸ್ಸು ನಿಲ್ದಾಣದ ಹತ್ತಿರ ಮಾಡಿರುತ್ತೇವೆ. ಪಂಚನಾಮೆ ಮಾಡಿ ಆರೋಪಿಯ ಮೇಲೆ ಪ್ರೊಕ್ಲೆಮೇಶನ್ ವಾರಂಟ ಆದ ಬಗ್ಗೆ ತಿಳಿಸಿದ್ದು ಇರುತ್ತದೆ. ಪಂಚನಾಮೆ ಕಾಲಕ್ಕೆ ಪೊಟೋವನ್ನು ತೆಗೆದಿರುತ್ತಾರೆ.

3. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 3 ಪೊಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು : ಮಹಾಂತೇಶ ಹಿರೇಮಠ

ತಂದೆಯ ಹೆಸರು : ಶಿವಯ್ಯ

ವಯಸ್ಸು : 33 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ವಸತಿಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.06.2020 ರಿಂದ ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.

3. ಸಾಕ್ಷಿಯು ಮುದ್ದೆಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ನಮ್ಮ ಮೇಲಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಪ್ರ.ದ.ನ್ಯಾ.ದಂ., ಭಟ್ಕಳ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 731 /2023**

**ಸಿ.ಡಬ್ಲ್ಯೂಃ 9, ಪಿ.ಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು : ವೀಣಾ

ತಂದೆಯ ಹೆಸರು : ರಾಮಚಂದ್ರ ಚಿತ್ರಾಪುರ

ವಯಸ್ಸು : 33 ವರ್ಷ

ಉದ್ಯೋಗ : ಪಿಎಸ್ ಐ ಕರಾವಳಿ ಕಾವಲು ಪೊಲೀಸ್ ಠಾಣೆ , ಭಟ್ಕಳ

ವಾಸ್ತವ್ಯ : ಶಿರಾಲಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27 /02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿಃ 13.06.2023 ರಿಂದ 18.08.2023 ರವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 13.06.2023 ರಂದು ತನಿಖೆಯನ್ನು ಮುಂದುವರೆಸಿರುತ್ತೇನೆ. ಚಾಸಾ –5 ರವರಿಂದ ಕಲಂ 65 ಬಿ ಪ್ರಮಾಣಪತ್ರ ಪಡೆದು ಕಡತಕ್ಕೆ ಆಳವಡಿಸಿರುತ್ತೇನೆ. ಪುರಸಬೆ ಅಧಿಕಾರಿಯವರಿಂದ ಪ್ರಕರಣದಲ್ಲಿ ವಶಪಡಿಸಿಕೊಂಡ ಮಾಂಸದ ವಿಲೇವಾರಿಯ ವರದಿ ಪಡೆದು ಕಡತಕ್ಕೆ ಆಳವಡಿಸಿರುತ್ತೇನೆ. ಚಾಸಾ –6 ರವರು ಮಾಂಸ ವನ್ನು ಪರೀಕ್ಷೆ ಮಾಡಿ ನೀಡಿದ ವರದಿಯನ್ನು ಕಡತಕ್ಕೆ ಆಳವಡಿಸಿರುತ್ತೇನೆ. ಸದರಿ ಮಾಂಸ ಗೋವಿಗೆ ಸೇರಿದ್ದು ಎಂದು ಚಾಸಾ –6 ರವರು ಅಭಿಪ್ರಾಯ ಪಟ್ಟಿರುತ್ತಾರೆ. ಸದರಿ ತನಿಖೆಯಿಂದ ಆರೋಪಿ ವಿರುದ್ಧ ಆರೋಪ ಸಾಬಿತಾದ ಕಾರಣ ದಿಃ 30.07.2023 ರಂದು ಅಂತಿಮ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ. ಸಾಕ್ಷಿ ಆರೊಪಿಯನ್ನು ನೆಾಡಿ ಗುರುತಿಸಿದ್ದು ಇರುತ್ತದೆ.

3. ಸಾಕ್ಷಿಯು ಕಲಂ 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪಶುವೈಧ್ಯಾಧಿಕಾರಿ ನೀಡಿದ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು – 1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್  ವಕೀಲರಿಂದ,**

ಸದರಿ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ . ಸದರಿ ಪ್ರಕರಣದಲ್ಲಿ ಗೋ ಮಾಂಸ ಮತ್ತು ಕತ್ತಿಯನ್ನು ಜಪ್ತು ಮಾಡಿರುತ್ತಾರೆ. ಮಾಂಸವನ್ನು ವಿಲೇವಾರಿ ಮಾಡಲು ನಾನು ಯಾರಿಗೂ ಕೋರಿಕೆ ಪತ್ರ ನೀಡಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನೋಡಿ ನಾನು ಅಂತಿಮ ವರದಿ ನೀಡಿದ್ದು ಇರುತ್ತದೆ. ಎಸಿ ಕಚೇರಿಯವರು ಮಾಂಸ  ವಿಲೇವಾರಿ ಮಾಡಲು ಜಾಲಿ ಪಟ್ಟಣ ಪಂಚಾಯತಿಯವರಿಗೆ ಕೋರಿಕೆ ಪತ್ರ ನೀಡಿರುತ್ತಾರೆ ಎಂದರೆ ಸರಿ. ಮಾಂಸ ವಿಲೇವಾರಿ ಮಾಡಿದ ಬಗ್ಗೆ ದಾಖಲೆಯನ್ನು ಮುಖ್ಯಾಧಿಕಾರಿಗಳು , ಪುರಸಭೆ , ಭಟ್ಕಳ  ರವರಿಂದ ಪಡೆದಿರುತ್ತೇವೆ. ಮಾಂಸ ವಿಲೇವಾರಿ ಮಾಡುವ ಕಾಲಕ್ಕೆ ಫೊಟೋ ಮತ್ತು ವಿಡಿಯೋ ಗ್ರಾಫಿ ಮಾಡಿಲ್ಲ. ನಿಪಿ–3 ನ್ನು ದಿಃ 01.06.2023 ರಂದು ನೀಡಿದ್ದು ಇರುತ್ತದೆ. ನಿಪಿ–3 ರಲ್ಲಿ ದಿನಾಂಕ ತಿದ್ದುಪಡಿ ಆಗಿದೆ ಎಂದರೆ ಸರಿ. ತಿದ್ದುಪಡಿ ಯಾರು  ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–3 ನ್ನು ನಾನು ಪಡೆಯುವಾಗ ದಿನಾಂಕ ತಿದ್ದುಪಡಿ ಯಾದ ಬಗ್ಗೆ ನನಗೆ ನೆನಪಿಲ್ಲ. ಸದರಿ ಪ್ರಕರಣದ ಮಾಂಸವನ್ನು ಎಫ್ ಎಸ್ ಎಲ್ ವರದಿಗೆ ಕಳುಹಿಸಿಲ್ಲ. ಸದರಿ ಪ್ರಕರಣದಲ್ಲಿ ಜಾನುವಾರುಗಳ ಇತರ ಅಂಗವನ್ನು ಜಪ್ತು ಮಾಡಿದ ಬಗ್ಗೆ ಯಾವುದೇ ದಾಖಲೆ ಇಲ್ಲ. ಮಾಂಸವನ್ನು ಮಾತ್ರ ನೋಡಿದರೆ ಅದು ಯಾವ ಪ್ರಾಣಿಗೆ ಸೇರಿದ್ದು ಎಂದು ಹೇಳಲು ಸಾಧ್ಯ ಇಲ್ಲ. ದೂರುದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿ ಆಗಿದ್ದಾರೆ. ದೂರುದಾರರಿಗೆ ಸಹಾಯಮಾಡಲು ನಾನು ಸುಳ್ಳು  ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಮನೆ ಅಥವಾ ಅಂಗಡಿಗಳು ಇವೆ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ಗುನ್ನಾ ಸ್ಥಳದಲ್ಲಿ ಮನೆ ಅಥವಾ ಅಂಗಡಿಯ ಮಾಲೀಕರ ದಾಖಲೆ ನಾನು ಪಡೆದಿಲ್ಲ. ಗುನ್ನಾ ಸ್ಥಳ ಪಟ್ಟಣ ಪಂಚಾಯತಿ ಜಾಲಿ ವ್ಯಾಪ್ತಿಯಲ್ಲಿ ಬರುತ್ತದೆ ಅಥವಾ ಪುರಸಭೆ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಲು ಬರುವುದಿಲ್ಲ. ನಿಪಿ–5 ನ್ನು ಅಂದಾಜಿನ ಮೇರೆಗೆ ನೀಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಸದರಿ ಪ್ರಕರಣದಲ್ಲಿ ಯಾವ ಪ್ರಾಣಿಯ ಮಾಂಸ ಜಪ್ತು ಮಾಡಿದ್ದೇವೆಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.  ಸದರಿ ಪ್ರಕರಣದಲ್ಲಿ ಜಪ್ತು ಮಾಡಿದ ಮಾಂಸಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.  ಮಾಂಸ ಆರೋಪಿಗೆ ಸಂಬಂಧಿಸಿದ್ದು ಇಲ್ಲ ಎಂದರೆ ಸರಿಯಲ್ಲ.  ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 731 /2023**

**ಸಿ.ಡಬ್ಲ್ಯೂಃ 7, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಸುರೇಶ ಎಮ್ ಕೆ

ತಂದೆಯ ಹೆಸರು : ಕರಿಯಪ್ಪ ಎಮ್

ವಯಸ್ಸು : 53 ವರ್ಷ

ಉದ್ಯೋಗ : ಮುಖ್ಯಾಧಿಕಾರಿ , ಜೋಗ

ವಾಸ್ತವ್ಯ : ಸಾಗರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27 /02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಪುರಸಭೆಯಲ್ಲಿ ದಿಃ 11.05.2022 ರಿಂದ 11.09.2023 ರವರೆಗೆ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 01.04.2023 ರಂದು ಭಟ್ಕಳ ಶಹರ ಠಾಣೆಯವರು ಕೋರಿದ್ದು ಅದರಂತೆ 60 ಕೇಜಿ ಮಾಂಸವನ್ನು ನಿಯಮಾನುಸಾರ ಅದನ್ನು ದಪನ್ ಮಾಡಿ ಪೊಲೀಸರಿಗೆ ವರದಿ ನೀಡಿದ್ದು ಇರುತ್ತದೆ.

3. ಸಾಕ್ಷಿಯು ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಮಾಂಸ ದಪನ್ ಮಾಡಲು ಪೊಲೀೕಸರು ಕೋರಿಕೆ ಪತ್ರ ನೀಡಿದ್ದರು. ದಪನಿ ಮಾಡಿದ ಸ್ಥಳ ನಮ್ಮ ಭಟ್ಕಳ ಪುರಸಭೆಯ ವ್ಯಾಪ್ತಿಗೆ ಬರುತ್ತದೆ. ದಪನ್ ಮಾಡಿದ ಮಾಂಸ ಯಾವ ಜಾನುವಾರಿಗೆ ಸಂಬಂಧಿಸಿದ್ದು ಎಂದು ನನಗೆ ಮಾಹಿತಿ ಇಲ್ಲ. ದಪನ ಮಾಡುವಾಗ ಸರಿಯಾದ ಪ್ರಕ್ರಿಯೆ ಅನುಸರಿಸಿಲ್ಲ ಎಂದರೆ ಸರಿಯಲ್ಲ. ನಿಪಿ- 3 ನ್ನು ಪೊಲೀಸರ ಕೋರಿಕೆ ಮೇರೆಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ–3 ರಲ್ಲಿ ದಿನಾಂಕವನ್ನು ಯಾರು ತಿದ್ದುಪಡಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ದಿಃ 06.04.2023 ರಂದು ನಿಪಿ–3 ನ್ನು ನೀಡಿದ್ದು ಇರುತ್ತದೆ. ಪೊಲೀಸರ ಕೋರಿಕೆ ಮೇರೆಗೆ ನಾನು ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2069/2022**

**ಸಿ.ಡಬ್ಲ್ಯೂಃ 8, ಪಿ.ಡಬ್ಲ್ಯೂಃ 8**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ಎಮ್ ಕೆ |
| ತಂದೆಯ ಹೆಸರು | : | ಕರಿಯಪ್ಪ ಎಮ್ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಮುಖ್ಯಾಧಿಕಾರಿ , ಜೋಗ |
| ವಾಸ್ತವ್ಯ | : | ಸಾಗರ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27 /02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಪುರಸಭೆಯಲ್ಲಿ ದಿಃ 11.05.2022 ರಿಂದ 11.09.2023 ರವರೆಗೆ ಕಾರ್ಯನಿರ್ವಹಿಸಿರುತ್ತೇನೆ.

2. ಭಟ್ಕಳ ಶಹರ ಠಾಣೆಯವರು 30 ಕೇಜಿ ಕೋಣದ ಮಾಂಸವನ್ನು ದಪನ್ ಮಾಡಲು ರಿಕ್ವೆಸ್ಟ ಮಾಡಿದ್ದು ನಿಯಮಾನುಸಾರ ಅದನ್ನು ದಪನ್ ಮಾಡಿ ಪೊಲೀಸರಿಗೆ ವರದಿ ನೀಡಿದ್ದು ಇರುತ್ತದೆ.

3. ಸಾಕ್ಷಿಯು ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ಯಾವುದೇ ಪ್ರಾಣಿಯನ್ನು ದಪನ್ ಮಾಡಲು ಅದಕ್ಕೆ ಅದರದೇ ಆದ ಪ್ರಕ್ರಿಯೇ ಇದೆ. ಸದರಿ ಪ್ರಕರಣದಲ್ಲಿ ಜಾನುವಾರು ದಪನ್ ಮಾಡುವ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದ್ದು ಇರುವುದಿಲ್ಲ. ಸದರಿ ಪ್ರಕರಣದಲ್ಲಿ ದಪನ್ ಮಾಡಿದ ಬಗ್ಗೆ ವಿಡಿಯೋ ಹಾಗೂ ಪೊಟೋಗಳನ್ನು ನಾನು ನೋಡಿಲ್ಲ.ನಿಪಿ–5 ರಲ್ಲಿ ಎಷ್ಟು ಜನ ಪೊಲೀಸರು ಮತ್ತು ಅವರ ಹುದ್ದೆಯನ್ನು ನಮೂದು ಮಾಡಿದ್ದು ಇರುವುದಿಲ್ಲ. ನಿಪಿ–5 ನ್ನು ಪೊಲೀಸರು ನೀಡಿದ ಪತ್ರದ ಆಧಾರದ ಮೇಲೆ ನೀಡಿರುತ್ತೇನೆ. ಆದರೆ ನಮ್ಮ ಇಲಾಖೆಯಲ್ಲಿ ಅದಕ್ಕೆ ಸಂಬಂಧಿಸಿದ ದಾಖಲೆಗಳು ಇಲ್ಲ. ನನ್ನ ಸಮಕ್ಷಮ ಯಾವುದೇ ದಪನ್ ಆದ ದಾಖಲೆಗಳು ಇಲ್ಲ. ದಪನ್ ಮಾಡುವ ಕಾಲಕ್ಕೆ ಯಾರೆಲ್ಲಾ ಹಾಜರಿದ್ದರು ಎಂಬ ಬಗ್ಗೆ ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ದಪನ್ ಮಾಡಲು ಎಸಿ ಯವರ ಆದೇಶವನ್ನು ಪೊಲೀಸರು ಪಡದಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಆದೇಶದ ಪ್ರತಿಯನ್ನು ನಾನು ನೋಡಿಲ್ಲ. ನಿಪಿ–5 ರಲ್ಲಿ ನಾನು ಎಸಿ ಯವರ ಆದೇಶದ ಮೇರೆಗೆ ನಿಪಿ–5 ನ್ನು ನೀಡಿದ್ದೇನೆಂದು ನಮೂದು ಮಾಡಿಲ್ಲ. ಪೊಲೀಸರು ಸೃಷ್ಟಿ ಮಾಡಿದ ದಪನ್ ಕ್ರಿಯೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರಿ ಕೋರಿಕೆ ಮೇರೆಗೆ ಸದರಿ ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1954/2022**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 7**

ಸಾಕ್ಷಿದಾರರ ಹೆಸರು : ರಮೇಶ್

ತಂದೆಯ ಹೆಸರು : ನಾರಾಯಣ ಮೊಗೇರ

ವಯಸ್ಸು : 37 ವರ್ಷ

ಉದ್ಯೋಗ : ಮೀನುಗಾರಿಕೆ

ವಾಸ್ತವ್ಯ : ಮುಂಗರಿ ಮನೆ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ27/02/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ದಿಃ 27.11.2021 ರಂದು ಬೆಳಿಗ್ಗೆ 7.30 ಗಂಟೆಗೆ ನಾನು , ಚಾಸಾ –5 ಮತ್ತು 7 ರವರು ಸೇರಿ ಜಾಲಿ ಕ್ರಾಸ್ ಹತ್ತಿರ ಬಸ್ಸಿಗೆ ಕಾಯುತ್ತಿರುವಾಗ ಎದುರುಗಡೆ ತಿಮ್ಮಪ್ಪ ಮತ್ತು ಭಾಸ್ಕರ ಎನ್ನುವವನು ಶಿರಾಲಿಯಿಂದ ಭಟ್ಕಳಕ್ಕೆ ಹೋಗುತ್ತಿದ್ದರು. ಆಗ ಭಟ್ಕಳದಿಂದ ಶಿರಾಲಿ ಕಡೆ ಒಂದು ಕಾರು ಕೆಎಲ 65 – ಎಲ್ 7080 ಚಾಸಾ –1 ರವರ ಗಾಡಿಗೆ ಅಜಾರೂಕತೆಯಿಂದ ವೇಗವಾಗಿ ಬಂದು ಗುದಿದ್ದು ತಿಮ್ಮಪ್ಪ

ಅವರನ್ನು ನಾವು ಎಬ್ಬಿಸಿ ಉಪಚಾರ ಮಾಡಲು  ಹೋಗಿದ್ದು ಅವರಿಗೆ ತಲೆ, ಕಾಲು ಮತ್ತು ಮುಖಕ್ಕೆ ಪೆಟ್ಟು ಆಗಿತ್ತು, ಅವನು ಎಚ್ಚರ ತಪ್ಪಿದ್ದು ಇರುತ್ತದೆ.  ನಂತರ ನಾವು ಖಾಸಗಿ ವಾಹನದಲ್ಲಿ ಅವರನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಲಾಗಿದ್ದು ನಂತರ ಹೆಚ್ಚಿನ ಚಿಕಿತ್ಸೆಗೆ ಮಣಿಪಾಲಕ್ಕೆ ಕರೆದುಕೊಂಡು ಹೋಗಲು ಹೇಳಿದ್ದು ಅವರನ್ನು ಆ್ಯಂಬುಲನ್ಸ ನಲ್ಲಿ ಮಣಿಪಾಲಕ್ಕೆ  ಕರೆದುಕೊಂಡು ಹೋಗಿದ್ದು ಇರುತ್ತದೆ. ಆಗ ದಿ 27.11.2021 ರಂದು ಮೃತರಾದ ಬಗ್ಗೆ ಮರುಹೇಳಿಕೆ ನೀಡಿರುತ್ತಾರೆ. ಅಪಘಾತ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸಾಕ್ಷಿಯ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್  ವಕೀಲರಿಂದ,**

ಅಪಘಾತವಾದ  ಕಾಲಕ್ಕೆ ಕಾರಿನ ನಂಬರನ್ನು ನಾನು ನೋಡಿರುತ್ತೇನೆ. ನನ್ನ ಮನೆ ಗುನ್ನಾ ಸ್ಥಳದಿಂದ 7 – 8 ಕಿಮೀ ದೂರದಲ್ಲಿರುತ್ತದೆ. ಮೃತ ವ್ಯಕ್ತಿ ನಮ್ಮ ಊರಿನವರು ಆಗಿರುತ್ತಾರೆ. ನುಮ್ಮ ಮನೆಯಿಂದ ಮೃತರ ಮನೆ 300 ಮೀಟರ್ ದೂದರಲ್ಲಿ ಇದೆ. ಮೃತರು ನನ್ನ ಸ್ನೇಹಿತ ಆಗಿದ್ದಾರೆ. ಚಾಸಾ 7 ರವರು ನನ್ನ ದೂರದ ಸಂಬಂಧಿ ಆಗಿದ್ದಾರೆ. ನಾನು , ಚಾಸಾ –7 ರವರು ಒಟ್ಟಿಗೆ ಗುನ್ನಾ ಸ್ಥಳಕ್ಕೆ ಬೇರೆಯವರನ್ನು ಭೇಟಿಯಾಗಲು  ಬಂದಿರುತ್ತೇವೆ. ನಾನು ಚಾಸಾ –7 ರವರ ಬೈಕಿನ  ಮೇಲೆ ಬಂದಿರುತ್ತೇನೆ. ಅಪಘಾತದ ರಸ್ತೆ ಒಂದು ಪಥದ ರಸ್ತೆ ಆಗಿದೆ. ರಸ್ತೆಯು ಉತ್ತರದಿಂದ ದಕ್ಷಿಣ ದಿಕ್ಕಿನಲ್ಲಿ ಇದೆ.  ಉತ್ತರ ಅಂದರೆ ಶಿರಾಲಿ ದಕ್ಷಿಣ ಎಂದರೆ ಮಂಗಳೂರು .  ನಾವು ಗುನ್ನಾ ಸ್ಥಳದ ಪೂರ್ವದ ಅಂಚಿನಲ್ಲಿ ಮಾತನಾಡುತ್ತಾ ಇದ್ದೇವು. ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿದ ಬಗ್ಗೆ ನನಗೆ ನೆನಪಿಲ್ಲ. ಘಟನೆಯ ಕಾಲಕ್ಕೆ ರಸ್ತೆ ಮೇಲೆ ಸಾಕಷ್ಟು ಜನ ಓಡಾಡುತ್ತಿರಲಿಲ್ಲ. ಮೃತರು ಶಿರಾಲಿ ಕಡೆಯಿಂದ ಭಟ್ಕಳಕ್ಕೆ ಬರುತ್ತಿದ್ದರು. ಅಪಘಾತದ ಶಬ್ದ ಕೇಳಿದ ನಂತರ  ಅಪಘಾತ  ಆದ ಬಗ್ಗೆ ಗೊತ್ತಾಗಿರುತ್ತದೆ. ಇದನ್ನು ನಾನು ಪೊಲೀಸರಿಗೆ ಹೇಳಿದ್ದ ಬಗ್ಗೆ ನನಗೆ ನೆನಪಿಲ್ಲ. ರಾಷ್ಟ್ರೀಯ ಹೆದ್ದಾರಿಯ ಪಶ್ಚಿಮದ ಅಂಚಿನಿಂದ ಪೂರ್ವಕ್ಕೆ 3– 4 ಪೂಟ್ ಅಂತರದಲ್ಲಿ ಅಪಘಾತ ಆಗಿದೆ . ಸದರಿ ಪ್ರಕರಣದ ತನಿಖಾ ಕಾಲಕ್ಕೆ ತನಿಖಾಧಿಕಾರಿಗಳು  ನನಗೆ  ಗುನ್ನಾ ಸ್ಥಳಕ್ಕೆ ಕರೆದೊಯ್ದು ಬಗ್ಗೆ  ನನಗೆ  ನೆನಪಿಲ್ಲ. ಅಪಘಾತವಾದ ಸ್ಥಳದಲ್ಲಿ ಕಾರು ನಿಂತಿತ್ತು. ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿದ್ದು ಇರುವುದಿಲ್ಲ ಅದು ಮೃತರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.ಮೃತ ವ್ಯಕ್ತಿ ತನ್ನ ವಾಹನವನ್ನು ಕಾರಿನ ಮುಂದು ಬಂದು ನಿರ್ಲಕ್ಷತನದಿಂದ ಚಲಾಯಿಸಿದ ಕಾರಣ ಸದರಿ   ಅಪಘಾತ ಆಗಿದೆ ಎಂದರೆ ಸರಿಯಲ್ಲ. ಮೃತರು ನನ್ನ ಸಂಬಂಧಿ ಮತ್ತು ನನ್ನ ಊರಿನವರು ಅದ ಕಾರಣ ಅವರ ಕುಟುಂಬಕ್ಕೆ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರಿನ ಚಾಲಕನ ನಿರ್ಲಕ್ಷತದಿಂದ  ಅಪಘಾತ  ಆಗಿದೆ  ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1954/2022**

**ಸಿ.ಡಬ್ಲ್ಯೂಃ 7, ಪಿ.ಡಬ್ಲ್ಯೂಃ 6**

| | |
|---|---|
| ಸಾಕ್ಷಿದಾರರ ಹೆಸರು | : ಚೇತನ್ |
| ತಂದೆಯ ಹೆಸರು | : ಜನಾರ್ದನ್ ಮೊಗೇರ |
| ವಯಸ್ಸು | : 38 ವರ್ಷ |
| ಉದ್ಯೋಗ | : ಮೀನುಗಾರಿಕೆ |
| ವಾಸ್ತವ್ಯ | : ಅಳ್ವೇಕೋಡಿ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ27/02/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ದಿಃ 27.11.2021 ರಂದು ಬೆಳಿಗ್ಗೆ 7.30 ಗಂಟೆಗೆ ನಾನು , ಚಾಸಾ –5 ಮತ್ತು 6 ರವರು ಸೇರಿ ಜಾಲಿ ಕ್ರಾಸ್ ಹತ್ತಿರ ಬಸ್ಸಿಗೆ ಕಾಯುತ್ತಿರುವಾಗ ಎದುರುಗಡೆ ತಿಮ್ಮಪ್ಪ ಎನ್ನುವವನು ಶಿರಾಲಿಯಿಂದ

ಭಟ್ಕಳಕ್ಕೆ ಹೋಗುತ್ತಿದ್ದರು. ಅವರ ಹಿಂದೆ ಚಾಸಾ –1 ರವರು ಹೋಗುತ್ತಿದ್ದರು. ಆಗ ಭಟ್ಕಳದಿಂದ ಶಿರಾಲಿ ಕಡೆ ಒಂದು ಕಾರು ಕೆಎಲ 65 – ಎಲ್ 7080 ಚಾಸಾ –1ರವರ ಗಾಡಿಗೆ ಅಜಾರೂಕತೆಯಿಂದ ವೇಗವಾಗಿ ಬಂದು ಗುದಿದ್ದ್ದು ಆಗ ತಿಮ್ಮಪ್ಪ ಅವರು ಬಿದ್ದಿದ್ದು ಅವರನ್ನು ನಾವು ಎಬ್ಬಿಸಿ ಉಪಚಾರ ಮಾಡಲು ಹೋಗಿದ್ದು ಅವರಿಗೆ ತಲೆ, ಕಾಲು ಮತ್ತು ಮುಖಕ್ಕೆ ಪೆಟ್ಟು ಆಗಿತ್ತು, ಅವನು ಎಚ್ಚರ ತಪ್ಪಿದ್ದು ಇರುತ್ತದೆ. ನಂತರ ಅವರನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಲಾಗಿದ್ದು ನಂತರ ಹೆಚ್ಚಿನ ಚಿಕಿತ್ಸೆಗೆ ಮಣಿಪಾಲಕ್ಕೆ ಕರೆದುಕೊಂಡು ಹೋಗಲು ಹೇಳಿದ್ದು ಅವರನ್ನು ಆ್ಯಂಬುಲನ್ಸ ನಲ್ಲಿ ಮಣಿಪಾಲಕ್ಕೆ ಕರೆದುಕೊಂಡು ಹೋಗಿದ್ದು ಇರುತ್ತದೆ. ಅಪಘಾತ ಚಾಲಕನ ತಪ್ಪಿನಿಂದ ಆಗಿರುತ್ತದೆ. ಪೊಲೀಸರಿಗೆ ನಾನು ಮರುಹೇಳಿಕೆ ನೀಡಿದ್ದು ಇರುತ್ತದೆ. ಸಾಕ್ಷಿಯ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,</u>**

ನನ್ನ ಮನೆ ಗುನ್ನಾ ಸ್ಥಳದಿಂದ 7 – 8 ಕಿಮೀ ದೂರದಲ್ಲಿರುತ್ತದೆ. ಮೃತ ವ್ಯಕ್ತಿ ನಮ್ಮ ಊರಿನವರು ಅಗಿರುತ್ತಾರೆ. ನಾನು , ಚಾಸಾ 5 ಮತ್ತು 6 ರವರು ಗುನ್ನಾ ಸ್ಥಳದಲ್ಲಿ ಬಸ್ಸಿಗೆ ಕಾಯುತ್ತಾ ನಿಂತಿರುತ್ತೇವೆ. ಸದರಿ ವಿಷಯವನ್ನು ಪೊಲೀಸರಿಗೆ ಹೇಳಿರುತ್ತೇನೆ. ಗುನ್ನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಅಂಗಡಿ ಇವೆ. ರಾಷ್ಟ್ರೀಯ ಹೆದ್ದಾರಿಯು ಉತ್ತರದಿಂದ ದಕ್ಷಿಣ ದಿಕ್ಕಿನಲ್ಲಿ ಇದೆ. ಅಪಘಾತವಾದ ಸ್ಥಳದ ರಸ್ತೆ ಒಂದೇಪಥದ್ದು ಅಥವಾ 2 ಪಥದ ರಸ್ತೆ ಆಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಗುನ್ನಾ ಸ್ಥಳದ ಪಶ್ಚಿಮ ಅಂಚಿನಲ್ಲಿ ನಾವು ಮಾತನಾಡುತ್ತಾ ನಿಂತಿದ್ದೇವು. ಅಪಘಾತದ ಶಬ್ದ ಕೇಳಿದ ನಂತರ ಅಪಘಾತ ಆದ ಬ ಗ್ಗೆ ಗೊತ್ತಾಗಿರುತ್ತದೆ. ಇದನ್ನು ನಾನು ಪೊಲೀಸರಿಗೆ ಹೇಳಿದ್ದು ಇರುತ್ತದೆ. ಪೊಲೀಸರು ಸದರಿ ವಿಷಯವನ್ನು ಹೇಳಿಕೆಯಲ್ಲಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವು ಪಶ್ಚಿಮದ ಟಾರ್ ರಸ್ತೆಯ 4 – 5 ಪೂಟ್ ಅಂತರದಲ್ಲಿ ಆಗಿರುತ್ತದೆ. ಪೊಲೀಸರು ಎಷ್ಟು ಪೂಟ್ ಅಂತರದಲ್ಲಿ ಅಪಘಾತ ಆಗಿತ್ತು ಎಂದು ನನಗೆ ಕೇಳಿರುವುದಿಲ್ಲ . ಅಪಘಾತ ಆದ ನಂತರ ಕಾರು ಎಷ್ಟು ದೂರದಲ್ಲಿ ನಿಂತಿದೆ ಎಂದು ನಾನು ಪೊಲೀಸರಿಗೆ ಹೇಳಿಲ್ಲ. ಕಾರಿಗೆ ಬ್ರೆಕ್ ಹಾಕಿದ ಶಬ್ದ ಕೇಳಿತ್ತು. ಅಪಘಾತ ವಾದ ಕಾಲಕ್ಕೆ ಸಾಕಷ್ಟು ವಾಹನಗಳು ಹೆದ್ದಾರಿಯ ಮೇಲೆ ಓಡಾಡುತ್ತಿದ್ದವು. ಸದರಿ ಪ್ರಕರಣದ ತನಿಖಾ ಕಾಲಕ್ಕೆ ತನಿಖಾಧಿಕಾರಿಗಳು ನನಗೆ ಗುನ್ನಾ ಸ್ಥಳಕ್ಕೆ ಕರೆದೊಯ್ದು ಗುನ್ನಾ ಸ್ಥಳದ ದಿಕ್ಕುಗಳನ್ನು ಕೇಳಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿಕ್ಕುಗಳನ್ನು ನಾನು ಹೇಳಿರುತ್ತೇನೆ. ಅಪಘಾತ ವು ಕಾರಿನ ಚಾಲಕನ ತಪ್ಪಿನಿಂದ ಆಗಿದ್ದು ಇರುವುದಿಲ್ಲ ಅದು ಮೃತರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.ಮೃತ ವ್ಯಕ್ತಿ ತನ್ನ ವಾಹನವನ್ನು ಕಾರಿನ ಮುಂದು ಬಂದು ಚಲಾಯಿಸಿದ ಕಾರಣ ಸದರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಮೃತರು ನನ್ನ ಸಂಬಂಧಿ ಮತ್ತು ನನ್ನ ಊರಿನವರು ಅದ ಕಾರಣ ಪರಿಹಾರಕ್ಕಾಗಿ

ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರಿನ ಚಾಲಕನ ನಿರ್ಲಕ್ಷತದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 3/2022**

**ಸಿ.ಡಬ್ಲ್ಯೂ:5 , ಪಿ.ಡಬ್ಲ್ಯೂ: 5**

ಸಾಕ್ಷಿದಾರರ ಹೆಸರು : ಗೌತಮ್

ತಂದೆಯ ಹೆಸರು : ರಾಜು ದೊಡ್ಡಣ್ಣನವರ್

ವಯಸ್ಸು : 32 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಕಾರವಾರ ನಗರ ಪೊಲೀಸ ಠಾಣೆ

ವಾಸ್ತವ್ಯ : ಬಾಂಡಿಶೆಟ್ಟ , ಕಾರವಾರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ25/02/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2017 ರಿಂದ 2023 ರ ಜೂನ್ ತಿಂಗಳವರೆಗೆ ಪೊಲೀಸ್ ಆರಕ್ಷಕನಾಗಿ ನಿರ್ವಹಿಸಿದ್ದೇನೆ.

2. ದಿಃ 30.11.2021 ರಂದು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಚಾಸಾ –1 ಮತ್ತು 4 ರವರ ಜೊತೆಗೆ ಹಾಗೂ ಇಬ್ಬರ ಪಂಚರ ಜೊತೆಗೆ ಸರಕಾರಿ ಜೀಪಿನಲ್ಲಿ ಮೈಸೂರು ಕೆಫೆ ರಸ್ತೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಸಿ ಮಟಕಾ ನಡೆಯುತ್ತಿದೆ ಎಂದು ಚಾಸಾ 6 ರವರು ಮಾಹಿತಿ ನೀಡಿದಂತೆ ಚಾಸಾ 1 ರವರು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಪಂಚರನ್ನು ಬರಮಾಡಿ ಠಾಣೆಯ ಜೀಪಿನ ಮೇಲೆ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳದಿಂದ ಸ್ವಲ್ಪ ದೂರದಲ್ಲಿ ನಿಂತು ಜೀಪು ನಿಲ್ಲಿಸಿ ಕಾಲ್ನಡಿಗೆಯಲ್ಲಿ ಹೋಗಿ ನೋಡಿದಾಗ 2 ಜನ ಆರೋಪಿಗಳು ಓಸಿ ಮಟಕಾ ಆಡುತ್ತಿರುವುದು ಖಾತ್ರಿಯಾದ ನಂತರ ನಾವು ದಾಳಿ 10.30 ಗಂಟೆಗೆ ಮಾಡಿದ್ದು ಇರುತ್ತದೆ. ನಂತರ ಒಬ್ಬನನ್ನು ಹಿಡಿದು ಹೆಸರು ಕೇಳಿದಾಗ ಅಬ್ದುಲ ರಜಾಕ್ ಶೇಖ ಎಂದು ಹೇಳಿದ್ದು ಇನ್ನೊಬ್ಬ ಓಡಿ ಹೋಗಿದ್ದು ಆತನ ಹೆಸರು ನಾರಾಯಣ ನಾಯ್ಕ

ಎಂದು ಹೇಳಿದ್ದು ಇರುತ್ತದೆ. ಪಂಚರ ಸಮಕ್ಷಮ ಒಂದು ಒಸಿ ಚೀಟಿ , ಪೆನ್ನು ಹಾಗೂ ರೂ. 2450 ಹಣವನ್ನು ವಶಪಡಿಸಿಕೊಂಡಿರುತ್ತೇವೆ. ಒ ಚೀಟಿಯಲ್ಲಿ ಮೊದಲನೇ ಅಂಕೆ 26 ,76, 97 (150) ಎಂದು ಬರೆದಿತ್ತು ಕೊನೆಯ ಅಕ್ಷರ 59 , 55 (55) ಎಂದು ಬರೆದಿದ್ದು ಇರುತ್ತದೆ. ಇದನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿದ್ದು ಇರುತ್ತದೆ. ಠಾಣೆಯ ಕ್ಯಾಮೇರಾದಲ್ಲಿ ಫೋಟೋ ತೆಗೆದು ಠಾಣೆಗೆ ತಂದು ಠಾಣೆಯ ಕಂಪ್ಯೂಟರಿನಲ್ಲಿ ವರ್ಗಾವಣೆ ಮಾಡಿ ಸ್ಟೂಡಿಯೋಗೆ ಹೋಗಿ ಪ್ರಿಂಟ್ ಮಾಡಿ ಕಾಪಿ ತೆಗೆದು ಸಿಡಿ ಹಾಗೂ ಪ್ರಿಂಟನ್ನು ಚಾಸಾ –1 ರವರಿಗೆ ನೀಡಿದ್ದು ಕಲಂ 65 ಬಿ ರಡಿಯಲ್ಲಿ ಪ್ರಮಾಣಪತ್ರ ನೀಡಿದ್ದು ಇರುತ್ತದೆ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ.

4. ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–2 ಫೋಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ಕಲಂ 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ–4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ಹಾಗೂ ಮುದ್ದೆ ಮಾಲು 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜಿ ವಕೀಲರಿಂದ,</u>**

ದೂರುದಾರರು ನಮ್ಮ ಮೇಲಾಧಿಕಾರಿ ಆಗಿದ್ದಾರೆ. ಗುನ್ಹಾ ಸ್ಥಳದ ಉತ್ತರ ದಿಕ್ಕಿಗೆ ಸಿಂಡಿಕೇಟ್ ಬ್ಯಾಂಕ್ ಹಾಗೂ ಇತರ ಬ್ಯಾಂಕುಗಳು ಇವೆ. ಗುನ್ಹಾ ಸ್ಥಳದ ದಕ್ಷಿಣಕ್ಕೆ ಸಿದ್ದಾರ್ಥ ಕಾಲೇಜು ಹಾಗೂ ನೌಕರರ ಸಂಘ ಇರುವ ಕಾಂಪ್ಲೆಕ್ಸ ಇದೆ. ಪೂರ್ವ ಹಾಗೂ ಪಶ್ಚಿಮಕ್ಕೆ ಅಂಗಡಿಗಳು ಇವೆ. ಗುನ್ಹಾ ಸ್ಥಳದ ಪಶ್ಚಿಮಕ್ಕೆ ಹೊಂದಿಕೊಂಡು ಆಟೋ ನಿಲ್ದಾಣ ಇದೆ. ಗುನ್ಹಾ ಸ್ಥಳ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಇದೆ ಎಂದರೆ ಸರಿ. ದಾಳಿಗೆ ಹೋದ ಬಗ್ಗೆ ರಜಿಸ್ಟರಿನಲ್ಲಿ ನಮೂದು ಇದೆ. ಸದರಿ ದಾಖಲಾತಿಯನ್ನು ನಾನು ತನಿಖಾಧಿಕಾರಿಗೆ ನೀಡಿದ್ದು ಇರುತ್ತದೆ. ಗುನ್ಹಾ ಸ್ಥಳದಲ್ಲಿ ಇರುವ ಬ್ಯಾಂಕುಗಳ ಹೊರ ಭಾಗಕ್ಕೆ ಸಿಸಿ ಕ್ಯಾಮೇರಾ ಆಳವಡಿಸಿದ್ದು ಇರುತ್ತದೆ ಎಂದರೆ ಇರಬಹುದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲವೆಂದು ಉತ್ತರಿಸಿರುತ್ತಾರೆ. ಗುನ್ಹಾ ಸ್ಥಳದ ಹಿಂಭಾಗಕ್ಕೆ ಮೈಸೂರು ಕೆಪೆ ಬಿಲ್ಡಿಂಗ್ ಇದೆ ಎಂದರೆ ಸರಿ. ಗುನ್ಹಾ ಸ್ಥಳದಲ್ಲಿರುವ ಸಿಸಿ ಕ್ಯಾಮೇರಗಗಳ ಬಗ್ಗೆ ನಾವು ಪರಿಶೀಲನೆ ಮಾಡಿಲ್ಲ. ಘಟನೆ ನಡೆಯದೆ ಇದ್ದ ಕಾರಣ ನೈಜ ಸಂಗತಿ ಗೊತ್ತಾಗುತ್ತದೆ ಎಂದು ಸಿಸಿ ಕ್ಯಾಮೇರಾ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ.ಮುದ್ದೆಮಾಲುಗಳು ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಆದರೆ ಗುನ್ಹಾ ಸ್ಥಳದಲ್ಲಿ ಸಿಕ್ಕಿದ ಮುದ್ದೆ

ಮಾಲು ಇದೆ ಆಗಿದೆ. ಮುದ್ದೆ ಮಾಲನ್ನು ಸದರಿ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅಕ್ಷರಸ್ಥರಲ್ಲ ಎಂದರೆ ಸರಿಯಲ್ಲ. ನಮ್ಮ ದಾಳಿಯ ಕಾಲಕ್ಕೆ ಗುನ್ನಾ ಸ್ಥಳದಲ್ಲಿ ಸಾರ್ವಜನಿಕರು ಓಡಾಡುತ್ತಾ ಇದ್ದರು. ನಮ್ಮ ಠಾಣೆಯಿಂದ ಗುನ್ನಾ ಸ್ಥಳ ಅಜಮಾಸು 1 ಕಿಮಿ ದೂರದಲ್ಲಿ ಇದೆ. ನಾವು ಗುನ್ನಾ ಸ್ಥಳಕ್ಕೆ  ನುರುಪಳ್ಳಿ ರಸ್ತೆಯಿಂದ ಸ್ಟೇಟ್ ಬ್ಯಾಂಕ್ ಮಾರ್ಗದಿಂದ ಹೊಗಿದ್ದು ಇರುತ್ತದೆ. ಇದ್ಗಾ ಮೈದಾನದ ಹತ್ತಿರ ನಮ್ಮ ವಾಹನ ನಿಲ್ಲಿಸಿರುತ್ತೇವೆ. ಪಂಚನಾಮೆ ಬರೆಯುವ ಕಾಲಕ್ಕೆ ಪೊಟೋ ಮತ್ತು ವಿಡಿಯೋ ಮಾಡಿಲ್ಲ. ಪೊಟೋವನ್ನು ದಾಳಿಯ ಕಾಲಕ್ಕೆ ಠಾಣೆಯ ಕ್ಯಾನಲ್ ಕ್ಯಾಮೇರಾದಿಂದ  ನಾನೇ ತೆಗೆದಿರುತ್ತೇನೆ. ಪೊಟೋ ತೆಗೆಯಲು ನನಗೆ ಪ್ರತ್ಯೇಕ ತರಬೇತಿ ನೀಡಿಲ್ಲ. ಕ್ಯಾಮೇರಾದ ಬಗ್ಗೆ ನನಗೆ ಮಾಹಿತಿ ಇದೆ. ಕ್ಯಾಮೇರಾದಲ್ಲಿರುವ ಕ್ಯಾಪೆಸಿಟಿ , ರೆಷ್ಯೂ , ಸೆನ್ಸರ್ ಟೆಕ್ನಾಲಜಿ  ಬಗ್ಗೆ ಮಾಹಿತಿ ಇಲ್ಲ. ಕ್ಯಾಮೇರಾದ ಪೋಕಲ್ ಲೆಂತ್ ಗೊತ್ತಿಲ್ಲ. ಕ್ಯಾಮೇರಾದ ಲೆನ್ಸ ಮ್ಯಾನುಪೆಕ್ಚರ್ ಬಗ್ಗೆ ಗೊತ್ತಿಲ್ಲ. ಕ್ಯಾಮೇರಾದ ಮೊಡಲ್ ನಂಬರ್ ಬಗ್ಗೆ ಮಾಹಿತಿ ಇಲ್ಲ. ಕ್ಯಾಮೇರಾದಲ್ಲಿರುವ ಸಾಪ್ಟವೇರ್ ಬಗ್ಗೆ ಮಾಹಿತಿ ಇಲ್ಲ. ಕ್ಯಾಮೇರಾದಲ್ಲಿರುವ ಚಿಪ ಅನ್ನು ತೆಗೆದು ಕಂಪ್ಯೂಟರಿಗೆ ಹಾಕಿರುತ್ತೇನೆ. ಸದರಿ ಚಿಪ್ ಯಾವ ಕಂಪನಿಯದು, ಎಷ್ಟು ಜಿಬಿಯದು ಆಗಿದೆ ಎಂದು ನನಗೆ ಗೊತ್ತಿಲ್ಲ. ಪೊಟೋ ಸೈಜ್ , ರೆಸಲ್ಯೂಷನ್ ಎಷ್ಟು ಎಂದು ನನಗೆ ಗೊತ್ತಿಲ್ಲ.  ಪಂಚರ ಸಮಕ್ಷಮ ಪೊಟೋವನ್ನು ಸಿಡಿಗೆ ಹಾಕಿಲ್ಲ. ಸದರಿ ಸಿಡಿಯನ್ನು ನಾನು ಖರೀದಿ ಮಾಡಿದ್ದು ಖರೀದಿ ಮಾಡಿದ ಬಗ್ಗೆ ಬಿಲ್ಲನ್ನು ಪಡೆದಿಲ್ಲ . ಸಿಡಿ ಯಾವ ಕಂಪನಿಯದು ಎಂದು ಗೊತ್ತಿಲ್ಲ. ಯಾವುದೇ ಪೊಟೋ ವನ್ನು ಸಿಡಿಯಲ್ಲಿ ಹಾಕಿಲ್ಲ ಎಂದರೆ ಸರಿಯಲ್ಲ. ಸಿಡಿಗೆ ಪೊಟೋವನ್ನು ಕಂಪ್ಯೂಟರಿನಲ್ಲಿ ಡೌನ ಲೋಡ್ ಮಾಡಿ ಹಾಕಿರುತ್ತೇವೆ.  ನನಗೆ ಕಾಮೇರಾ  ಹಾಗೂ ಪೊಟೋದ  ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳಾಗಿ ಪ್ರಮಾಣ ಪತ್ರ ನೀಡಿದ್ದೇನೆ  ಎಂದರೆ ಸರಿಯಲ್ಲ.  ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.  ಲಕಂ 65 ಬಿ ಪ್ರಮಾಣಪತ್ರವನ್ನು ಸದರಿ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.  ಯಾವುದೇ ಪೊಟೋವಿನ ನ್ಯಾಗೇಟಿವ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 3/2022**

**ಸಿ.ಡಬ್ಲ್ಯೂಃ 4 , ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ನಾಗರಾಜ

ತಂದೆಯ ಹೆಸರು : ವೆಂಕಟರಮಣ ಮೊಗೇರ

ವಯಸ್ಸು : 44 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ಗ್ರಾಮೀಣ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 25/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಗ್ರಾಮೀಣ ಪೊಲೀಸ ಠಾಣೆಯಲ್ಲಿ 2017 ರಿಂದ 2023 ರವರೆಗೆ ಭಟ್ಕಳ ಶಹರ ಠಾಣೆಯಲ್ಲಿ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 30.11.2021 ರಂದು ಬೆಳಿಗ್ಗೆ 10.10 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ – 1 ರವರು 5 ರವರನ್ನು ಕರೆದು ಬಂದರು ರಸ್ತೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಸಿ ಮಟಕಾ ನಡೆಯುತ್ತಿದೆ ಎಂದು ಚಾಸಾ 6 ರವರು ಮಾಹಿತಿ ನೀಡಿದಂತೆ ಚಾಸಾ 1 ರವರು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಪಂಚರನ್ನು ಬರಮಾಡಿ ಠಾಣೆಯ ಜೀಪಿನ ಮೇಲೆ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳದಿಂದ ಸ್ವಲ್ಪ ದೂರದಲ್ಲಿ ನಿಂತು ಜೀಪು ನಿಲ್ಲಿಸಿ ಕಾಲ್ನಡಿಗೆಯಲ್ಲಿ ಹೋಗಿ ನೋಡಿದಾಗ 2 ಜನ ಆರೋಪಿಗಳು

ಅವರ ಲಾಭಕ್ಕಾಗಿ ಓಸಿ ಮಟಕಾ ಆಡುತ್ತಿರುವುದು ಖಾತ್ರಿಯಾದ ನಂತರ ನಾವು ದಾಳಿ 10.45 ಗಂಟೆಗೆ ಮಾಡಿದ್ದು ಇರುತ್ತದೆ. ನಂತರ ಒಬ್ಬನನ್ನು ಹಿಡಿದು ಹೆಸರು ಕೇಳಿದಾಗ ಅಬ್ದುಲ ರಜಾಕ್ ಶೇಖ ಎಂದು ಹೇಳಿದ್ದು ಇನ್ನೊಬ್ಬ ಓಡಿ ಹೋಗಿದ್ದು ಆತನ ಹೆಸರು ನಾರಾಯಣ ನಾಯ್ಕ ಎಂದು ಹೇಳಿದ್ದು ಇರುತ್ತದೆ. ಪಂಚರ ಸಮಕ್ಷಮ ಒಂದು ಒಸಿ ಚೀಟಿ , ಪೆನ್ನು ಹಾಗೂ ರೂ. 2450 ಹಣವನ್ನು ವಶಪಡಿಸಿಕೊಂಡಿರುತ್ತೇವೆ. ಒಸಿ ಚೀಟಿಯಲ್ಲಿ ಮೊದಲನೇ ಅಂಕೆ 26 ,76, 97 (150) ಎಂದು ಬರೆದಿತ್ತು ಕೊನೆಯ ಅಕ್ಷರ 58 , 55 (55) ಎಂದು ಬರೆದಿದ್ದು ಇರುತ್ತದೆ. ಇದನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿದ್ದು ಇರುತ್ತದೆ. ದಾಳಿ ಕಾಲಕ್ಕೆ ಚಾಸ 1 ರವರಿಗೆ ಸೂಕ್ತ ಸಹಾಯ ಮಾಡಿದ್ದು ಇರುತ್ತದೆ. ಸಾಕ್ಷಿಯು ಮುದ್ದೆ ಮಾಲು 1 ಮತ್ತು 2 ನ್ನು ನೋಡಿ ಹಾಗೂ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜಿ ವಕೀಲರಿಂದ,**

ಗುನ್ಹಾ ಸ್ಥಳ ಸಾರ್ವಜನಿಕ ಸ್ಥಳವಾಗಿದೆ. ಗುನ್ಹಾ ಸ್ಥಳದ ಉತ್ತರ ದಿಕ್ಕಿಗೆ ಸಿಂಡಿಕೇಟ್ ಬ್ಯಾಂಕ್ ಹಾಗೂ ಇತರ ಬ್ಯಾಂಕುಗಳು ಇವೆ. ಗುನ್ಹಾ ಸ್ಥಳದ ದಕ್ಷಿಣಕ್ಕೆ ಸಿದ್ಧಾರ್ಥ ಕಾಲೇಜು ಹಾಗೂ ನೌಕರರ ಸಂಘ ಇರುವ ಕಾಂಪ್ಲೆಕ್ಸ ಇದೆ. ಪೂರ್ವ ಹಾಗೂ ಪಶ್ಚಿಮಕ್ಕೆ ಅಂಗಡಿಗಳು ಇವೆ. ಗುನ್ಹಾ ಸ್ಥಳದ ಪಶ್ಚಿಮಕ್ಕೆ ಹೊಂದಿಕೊಂಡು ಆಟೋ ನಿಲ್ದಾಣ ಇದೆ. ಗುನ್ಹಾ ಸ್ಥಳ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಇದೆ ಎಂದರೆ ಸರಿ. ದಾಳಿಗೆ ಹೋದ ಬಗ್ಗೆ ರಜಿಸ್ಟರಿನಲ್ಲಿ ನಮೂದು ಇದೆ. ಸದರಿ ದಾಖಲಾತಿಯನ್ನು ನಾನು ತನಿಖಾಧಿಕಾರಿಗೆ ನೀಡಿಲ್ಲ ಹಾಗೂ ಅವರು ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವುದೇ ದಾಳಿ ನಡೆಯದೇ ಇದ್ದ ಕಾರಣ ಅಂತಹ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಗುನ್ಹಾ ಸ್ಥಳದಲ್ಲಿ ಇರುವ ಬ್ಯಾಂಕುಗಳ ಹೊರ ಭಾಗಕ್ಕೆ ಸಿಸಿ ಕ್ಯಾಮೇರಾ ಅಳವಡಿಸಿದ್ದು ಇರುತ್ತದೆ ಆದರೆ ಅವರ ರಕ್ಷಣೆಗೆ ಅಳವಡಿಸಿಕೊಂಡಿರುತ್ತಾರೆ. ಗುನ್ಹಾ ಸ್ಥಳದ ಹಿಂಭಾಗಕ್ಕೆ ಮೈಸೂರು ಕೆಪೆ ಬಿಲ್ಡಿಂಗ್ ಇದೆ ಎಂದರೆ ಸರಿ. ಗುನ್ಹಾ ಸ್ಥಳದಲ್ಲಿರುವ ಸಿಸಿ ಕ್ಯಾಮೇರಗಗಳ ಬಗ್ಗೆ ನಾವು ಪರಿಶೀಲನೆ ಮಾಡಿಲ್ಲ. ಘಟನೆ ನಡೆಯದ ಇದ್ದ ಕಾರಣ ನೈಜ ಸಂಗತಿ ಗೊತ್ತಾಗುತ್ತದೆ ಎಂದು ಸಿಸಿ ಕ್ಯಾಮೇರಾ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ.ಮುದ್ದೆಮಾಲುಗಳು ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಆದರೆ ಗುನ್ಹಾ ಸ್ಥಳದಲ್ಲಿ ಸಿಕ್ಕಿದ ಮುದ್ದೆ ಮಾಲು ಇದೆ ಆಗಿದೆ. ಮುದ್ದೆ ಮಾಲನ್ನು ಸದರಿ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅಕ್ಷರಸ್ಥರಲ್ಲ ಎಂದರೆ ಸರಿಯಲ್ಲ. ನಮ್ಮ ದಾಳಿಯನ್ನು ಯಾರೂ ಸಾರ್ವಜನಿಕರು ನೋಡಿಲ್ಲ. ನಮ್ಮ ಠಾಣೆಯಿಂದ ಗುನ್ಹಾ ಸ್ಥಳ ಅಜಮಾಸು 1 ಕಿಮಿ ದೂರದಲ್ಲಿ ಇದೆ. ಗುನ್ಹಾ ಸ್ಥಳಕ್ಕೆ ಹೋಗಲು 2 – 3 ರಸ್ತೆ ಇವೆ. ಅದರೆ ನಾವು ಯಾವ ಮಾರ್ಗದಿಂದ ಬಂದಿರುತ್ತೇವೆ ಎಂದು ನನಗೆ

ನೆನಪಿಲ್ಲ. ನಾವು ಗುನ್ನಾ ಸ್ಥಳಕ್ಕೆ ಸರಕಾರಿ ವಾಹನದಲ್ಲಿ ಹೋಗಿದ್ದು ಅದರ ಸಂಖ್ಯೆ ನೆನಪಿಲ್ಲ. ಗುನ್ನಾ ಸ್ಥಳದ 50 ಕಿಮಿ ದೂರದಲ್ಲಿ ಸೋನಾರಕೇರಿ ಕ್ರಾಸ್ ಹತ್ತಿರ ನಮ್ಮ ವಾಹನ ನಿಲ್ಲಿಸಿರುತ್ತೇವೆ. ಸೋನಾರಕೇರಿ ಕ್ರಾಸ್ ನ ಹತ್ತಿರ ಸ್ಟೇಟ್ ಬ್ಯಾಂಕ್ ಇದೆ ಎಂದರೆ ಅದು ನೂರುಪಳ್ಳಿ ರಸ್ತೆಗೆ ಹೋಗುವಲ್ಲಿ ಇದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ನಾವು ದಾಳಿಗೆ ಹೋಗಿದ್ದೆ ಇಲ್ಲ ಎಂದರೆ ಸರಿಯಲ್ಲ. ನಾವು ಗುನ್ನಾ ಸ್ಥಳಕ್ಕೆ ಪಂಚರನ್ನು ಕರೆದು ಹೋಗಿರುತ್ತೇವೆ ಎಂದರೆ ಸರಿಯಲ್ಲ. ದೂರುದಾರರು ನಮ್ಮ ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೇಳುವಂತಹ ಯಾವುದೇ ಘಟನೆ ನಡೆಯದೇ ಇದ್ದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 718/2023**

**ಸಿ.ಡಬ್ಲ್ಯೂಃ 7 , ಪಿ.ಡಬ್ಲ್ಯೂಃ 7**

ಸಾಕ್ಷಿದಾರರ ಹೆಸರು : ಜಗಧೀಶ

ತಂದೆಯ ಹೆಸರು : ಈಶ್ವರ ನಾಯ್ಕು

ವಯಸ್ಸು : 31 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿ ಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22 /02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಕಳೆದ 4 ವರ್ಷಗಳಿಂದ ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 25.03.2023 ರಂದು ಸಂಜೆ ಸುಮಾರ 7.00 ಗಂಟೆಗೆ ಚಾಸಾ – 6 ರವರು ಚಾಸಾ – 1 ರವರಿಗೆ ಪೋನ್ ಕರೆ ಮಾಡಿ ಒಬ್ಬ ವ್ಯಕ್ತಿ ಒಂದು ಬಾಕ್ಸ ಹಾಗೂ ಚೀಲಗಳನ್ನು ಹಿಡಿದು ವ್ಯಾಪಾರ ಮಾಡುತ್ತಿರುವ ಬಗ್ಗೆ ಹೇಳಿದ್ದು ಇರುತ್ತದೆ. ನಾನು ಚಾಲಕನಾಗಿದ್ದು ಚಾಸಾ –4 ಮತ್ತು 5 ರವರು ನನಗೆ ಗುನ್ನಾ ಸ್ಥಳವಾದ ಪುಷ್ಪಾಂಜಲಿ ಕ್ರಾಸ್ ಹತ್ತಿರ ಹೋಗಲು ಹೇಳಿದ್ದು ಇರುತ್ತದೆ. ನಂತರ ಗುಳ್ಮಿ ಕ್ರಾಸ್

ನಿಂದ ಪಂಚರನ್ನು ವಾಹನದಲ್ಲಿ ಕರೆದುಕೊಂಡು ಗುನ್ನಾ ಸ್ಥಳದ ಸ್ವಲ್ಪ ಹತ್ತಿರ ನಿಲ್ಲಿಸಿ ಕಾಲ್ನಡಿಗೆಯಲ್ಲಿ ನಡೆದುಕೊಂಡು ಹೋಗಿ ನಂತರ ಸದರಿ ಆರೋಪಿಯನ್ನು ಹಿಡಿದುಕೊಂಡು ಅವರ ಹೆಸರು ಕೇಳಿದಾಗ ಆತನು ನಾರಾಯಣ ಕುಪ್ಪಯ್ಯ ನಾಯ್ಕ ಎಂದು ಹೇಳಿರುತ್ತಾರೆ. ಅವರ ಬಳಿ ಪಾಸ ಯಾ ಪರಮೀಟು ಇಲ್ಲವೆಂದು ಹೇಳಿರುತ್ತಾರೆ. ಪಂಚರ ಸಮಕ್ಷಮ ಬಾಟಲಿಗಳನ್ನು ಸೀಸ್ ಮಾಡಿದ್ದು ಇರುತ್ತದೆ. ಅವರನ್ನು ನಂತರ ದಸ್ತಗಿರಿ ಮಾಡಿದ್ದು ಇರುತ್ತದೆ. ಸಾಕ್ಷಿಯು ಆರೋಪಿ ಹಾಗೂ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಐ ಎನ್ ವಕೀಲರಿಂದ,**

ಹಳ್ಳಿಮನೆ ಹೊಟೇಲಿನ ಒಳಗಡೆ ದಾಳಿ ನಡೆದಿರುತ್ತದೆ. ನಾನು ಹಳ್ಳಿಮನೆ ಹೊಟೇಲಿನ ಒಳಗೆ ದಾಳಿಗೆ ಹೋಗಿಲ್ಲ. ಹಳ್ಳಿಮನೆ ಹೊಟೆೀಲಿನ ಒಳಗೆ ಆದ ವಿಷಯ ನನಗೆ ಗೊತ್ತಿಲ್ಲ. ನಾನು ಜೀಪಿನಿಂದ ದಾಳಿಯ ಸ್ಥಳಕ್ಕೆ ಹೋಗಿರುತ್ತೇನೆ. ನನ್ನ ಹೇಳಿಕೆಯಲ್ಲಿ ನಾನು ದಾಳಿ ಕಾಲ್ಕೆ ಹೊಟೇಲಿನ ಒಳಗೆ ಹೋಗಿಲ್ಲ ಎಂದು ಹೇಳಿರುತ್ತೇನೆ. ಚಾಸಾ –1 , 4 , 5 ರವರು ಹೊಟೇಲಿನ ಒಳಗೆ ಹೋಗಿದ್ದರು. ನಾನು 15 ಮೀಟರ್ ದೂರದಲ್ಲಿ ನಿಂತು ಸದರಿ ಪ್ರಕ್ರಿಯೆಯನ್ನು ನೋಡಿರುತ್ತೇನೆ. ಗುನ್ನಾ ಸ್ಥಳದ ಚೆಕ್ಕು ಬಂದಿ ಹೇಳಲು ಬರುವುದಿಲ್ಲ. ಹಳ್ಳಿಮನೆ ಹೊಟೇಲಿನ ಒಳಗೆ ಸದರಿ ದಾಳಿ ನಡೆದಿದೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನನ್ನ ಹೇಳಿಕಯನ್ನು ನಾನು ಓದಿ ನೋಡಿರುತ್ತೇನೆ. ಮುದ್ದೆಮಾಲನ್ನು ಜಪ್ತು ಮಾಡುವಾಗ ಹಾಗೂ ಜೀಪಿನಲ್ಲಿ ಹಾಕುವಾಗ ನಾನು ಇದ್ದೇನು. ಒಟ್ಟು 137 ಬಾಟಲಿ ಮತ್ತು ಪ್ಯಾಕೇಟುಗಳು ಇದ್ದವು. ಯಾವ ಯಾವ ಹಾಗೂ ಎಷ್ಟು ಎಷ್ಟು ಬಾಟಲಿ ಹಾಗೂ ಪ್ಯಾಕೇಟು ಇತ್ತು ಎಂದು ನನಗೆ ನೆನಪಿಲ್ಲ. ಹಳ್ಳಿಮನೆ ಹೊಟೇಲಿನಲ್ಲಿ ಆರೋಪಿ ಇದ್ದರು. ಸಾರ್ವಜನಿಕ ರಸ್ತೆ ಹಳ್ಳಿಮನೆ ಹೊಟೇಲಿನ ಒಳಗಡೆ ಇಲ್ಲ. ಸಾರ್ವಜನಿಕ ರಸ್ತೆ ಹಳ್ಳಿಮನೆ ಹೊಟೇಲಿನಿಂದ 15 ಮೀಟರ್ ದೂರದಲ್ಲಿ ಇದೆ. ಸಾರ್ವಜನಿಕ ರಸ್ತೆ ಮೇಲೆ ಇದ್ದ ವ್ಯಕ್ತಿಯನ್ನು ನಾವು ಹಿಡಿದಿರುವುದಾಗಿ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಮತ್ತು ಅದನ್ನು ಯಾರು ನನ್ನ ಹೇಳಿಕೆಯಲ್ಲಿ ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಹೋದಾಗ ಹಳ್ಳಿಮನೆ ಹೊಟೇಲಿನಲ್ಲಿ ಅಂದಾಜು 7 ಜನ ಗ್ರಾಹಕರಿದ್ದರು. ಆರೋಪಿಯು ಆಗ ಹಳ್ಳಿಮನೆ ಹೊಟೇಲಿನ ಕೌಂಟರಿನಲ್ಲಿ ಇದ್ದರು. ಮುದ್ದೆಮಾಲುಗಳ ಮೇಲೆ ಗುರುತನ್ನು ಹಾಕಿದ ಬಗ್ಗೆ ನಾನು

ನೋಡಿಲ್ಲ. ಬಣ್ಣ ಹಾಗೂ ಬಾಕ್ಸ ನ್ನು ಗುರುತು ಮಾಡಿ ಇದೇ ಮುದ್ದೆಮಾಲನ್ನು ನಾವು ಜಪ್ತು ಮಾಡಿರುವುದಾಗಿ ಹೇಳುತ್ತಿದ್ದೇನೆ. ಮುದ್ದೆಮಾಲುಗಳು ಬೇರೆ ಬೇರೆ ಬಣ್ಣದ್ದು ಆಗಿರುವುದಿಲ್ಲ. ಹಾಗಾಗಿ ಇದೇ ಮುದ್ದೆಮಾಲನ್ನು ನಾವು ಜಪ್ತು ಮಾಡಿದ್ದೇವೆಂದು ನನಗೆ ಸರಿಯಾಗಿ ನೆನಪಿಲ್ಲ . ಮುದ್ದೆಮಾಲಿನ ಮೇಲೆ ಇರುವ ನಂಬರುಗಳನ್ನು ಬರೆದು ಇಟ್ಟು ಕೊಂಡಿರುವ ಬಗ್ಗೆ ನಾನು ನೋಡಿಲ್ಲ ಕಾರಣ ನಾನು ಚಾಲಕನಾಗಿದ್ದೇನು. ಪಂಚನಾಮೆ ಬರೆದ ಬಗ್ಗೆ ನಾನು ನೋಡಿಲ್ಲ. ಪಂಚನಾಮೆಯಲ್ಲಿ ಎಷ್ಟು ಮುದ್ದೆಮಾಲನ್ನು ಜಪ್ತು ಮಾಡಿದ್ದಾರೆಂದು ಬರೆದಿರುವ ಬಗ್ಗೆ ನಾನು ನೋಡಿಲ್ಲ. ಪಿರ್ಯಾದಿದಾರುರ ಹೇಳಿದಂತೆ ಇಂತಿಷ್ಟು ಮುದ್ದೆಮಾಲನ್ನು ಜಪ್ತು ಮಾಡಿದ್ದಾರೆಂದು ಹೇಳಿದ್ದನ್ನು ಕೇಳಿದಂತೆ ನಾನುಹೇಳಿರುತ್ತೇನೆ. ನಾವು ಘಟನೆ ದಿನ ದಾಳಿಗೆ ಹೋಗಿದ್ದೆ ಇಲ್ಲ ಹಾಗೂ ಮುದ್ದೆಮಾಲನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅಂಗಜಪ್ತಿ ಮಾಡಿಕೊಂಡಿಲ್ಲ. ಅಂಗಜಪ್ತಿ ಮಾಡಿದ ಬಗ್ಗೆ ನಾನು ಹೇಳಿಕೆ ನೀಡಿಲ್ಲ . ಹಾಗೇ ಹೇಳಿದ ಬಗ್ಗೆ ನನ್ನ ಹೇಳಿಕೆಯಲ್ಲಿ ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ದಾಳಿ ಯ ಮೊದಲು ಪ್ರ ವ ವರದಿ ದಾಖಲಿಸಿಲ್ಲ . ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಗೂ, ಆರೋಪಿಗೂ ಹಾಗೂ ಮುದ್ದೆಮಾಲಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 979/2020**

**ಸಿ.ಡಬ್ಲ್ಯೂಃ 12 , ಪಿ.ಡಬ್ಲ್ಯೂಃ 12**

ಸಾಕ್ಷಿದಾರರ ಹೆಸರು : ಅರುಣ ಪಿಂಟೋ

ತಂದೆಯ ಹೆಸರು : ಜೂಜೆ ಪಿಂಟೋ

ವಯಸ್ಸು : 43 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಶಿರಾಲಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22 /02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು  ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಕಳೆದ 2 ವರ್ಷಗಳಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 20.11.2019 ರಂದು ಭಟ್ಕಳ ವಲಯದ ಜಾಲಿ ಅರಣ್ಯ ಸರ್ವೆ ನಂಬರ್ 73 ರಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು ಅದಕ್ಕೆ ಸಂಬಂಧಿಸಿ ತೆರವು ಕಾರ್ಯಾಚರಣೆ ಹಮ್ಮಿಕೊಂಡಿದ್ದು ಆಗ ಯಾವುದೇ ಅಹಿತಕರ ಘಟನೆ ನಡೆಯದಂತೆ ಚಾಸಾ 1 ರವರು ಮುಂಜಾಗ್ರತೆಗಾಗಿ ಪೊಲೀಸ್ ಬಂದೋಬಸ್ತಿಗಾಗಿ ಮೇಲಾಧಿಕಾರಿಗಳಿಗೆ ಕೋರಿದಂತೆ ಚಾಸಾ – 16 ರವರು  ನನಗೆ ಹಾಗೂ ಚಾಸಾ – 11 ರವರವರನ್ನು ನೇಮೀಸಿದಂತೆ ಕರ್ತವ್ಯಕ್ಕೆ ನಾನು  ವರದಿ ಮಾಡಿಕೊಂಡಿದ್ದು ಇರುತ್ತದೆ. ಹನುಮಾನ ನಗರದ ಅರಣ್ಯ ಕ್ರಾಸ್ ನಲ್ಲಿ 2 ನೇ ಆರೋಪಿತರು ಅರಣ್ಯ ಭೂಮಿ ಅತಿಕ್ರಮಣ ಮಾಡಿಕೊಂಡು ಹೊಸದಾಗಿ ಸ್ಲಾಬ್ ನಿರ್ಮಾಣಕ್ಕೆ ಸೆಂಟರಿಂಗ್ ಸಾಮಗ್ರಿಗಳನ್ನು ಆಳವಡಿಸಿದ್ದು , ಅರಣ್ಯ ರಕ್ಷಕ ಭಟ್ಕಸ ಗಸ್ತು ಪ್ರ ವ ವರದಿ ಸಂಖ್ಯೆ 24301 / 2019 ರಂದು ಪ್ರ ವ ದಿ ದಾಖಲಿಸಿ ತೆರವುಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇದರ ಬಗ್ಗೆ ರೂಪರೇಷೆಗಳನ್ನು ಅರಣ್ಯಾಧಿಕಾಧಿಗಳು ಕಚೇರಿಯಲ್ಲಿ ವಿವರಿಸಿದ್ದು ಇರುತ್ತದೆ. ನಂತರ ಕಚೇರಿಯಿಂದ ಇಲಾಖೆಯ ವಾಹನದಲ್ಲಿ ನಮಗೆ ಹಾಗೂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೆಲ್ಲಾ ಸೇರಿ ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. 1 ನೇ ಆರೋಪಿತರು  ನಮಗೆ ಹಾಗೂ ಅರಣ್ಯ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ನೋಡಿ ತನ್ನ ಮೊಬೈಲಿನಲ್ಲಿ ವಿಡಿಯೋ ಮಾಡುತ್ತಾ ಕಿರುಚಾಡುತ್ತಾ ತೊಡಗಿದ್ದಳು. ಸಿಮೇ ಎಣ್ಣೆಯ ಕ್ಯಾನನ್ನು ಹೊಸದಾಗಿ ನಿರ್ಮಿಸುತ್ತಿದ್ದ ಕಟ್ಟಡದಿಂದ ತಂದು ನಮ್ಮನ್ನು ನೋಡಿ ಕಿರುಚಾಡುತ್ತಿದ್ದಳು. ಮನೆ ಹತ್ತಿರ ತಲುಪುತ್ತಿದಂತೆ ಎಣ್ಣೆಯ ಕ್ಯಾನನ್ನು ತೆಗೆದುಕೊಂಡು ಮನೆಯ  ಪಕ್ಕಕ್ಕೆ ಓಡಿದ್ದು ನಂತರ ಅಲ್ಲಿಂದ ಕಲ್ಲುಗಳನ್ನು ತಂದು ಕಟ್ಟಡದ ಮುಂದೆ ಬಂದು ಅರಣ್ಯ ಇಲಾಖೆಯ ಸಿಬ್ಬಂದಿಗಳ ಕೈಯಲ್ಲಿದ್ದ ಕಲ್ಲನ್ನು ನೆಲಕ್ಕೆ ಇಟ್ಟು ರಣ್ಯ ಇಲಾಖೆಯ ಸಿಬ್ಬಂದಿಗಳ ಪಿಕಾಸನ್ನು ಎಳೆದು ಕಸಿಯುವ ಪ್ರಯತ್ನ ಮಾಡಿರುತ್ತಾಳೆ. ಪ್ರಯತ್ನ ಫಲಿಸದೇ ಇದ್ದಾಗ ಅರಣ್ಯ ಸಿಬ್ಬಂದಿಗಳ ಮೇಲೆ ಕಲ್ಲನ್ನು ಎಸೆದು ಮನಯ ಪಕ್ಕಕ್ಕೆ ಓಡಿರುತ್ತಾಳೆ.

4. ನಾವು ಮೊದಲು ಅವರಿಗೆ ನಿಮ್ಮ ಸಮಸ್ಯೆಯನ್ನು ತಿಳಿಸು ಎಂದು ಅರಣ್ಯಾಧಿಕಾರಿಗಳು ತಿಳಿಸಿದಾಗ ಅವರು ಪುನಃ ಮನೆಯ ಮುಂದೆ ಬಂದು ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ಸೆಂಟರಿಂಗ ಸಾಮಾನನ್ನು ತೆರವುಗೊಳಿಸುವಾಗ ಅಲ್ಲಿ ಬಿದ್ದಂತಹ ಮರದ ತುಂಡು ಹಾಗೂ ಕಲ್ಲನ್ನು ಎಸೆದಿರುತ್ತಾಳೆ. ಈ ಸಮಯದಲ್ಲಿ ಚಾಸಾ –9 ರವರಿಗೆ ಹಿಂಬದಿಯಿಂದ ಬಿಸಿದ ಕಲ್ಲು ಅವರ ಬಲಗಾಲಿಗೆ ತಾಗಿ ಗಾಯವಾಗಿದ್ದು ಇರುತ್ತದೆ ಹಾಗೂ ಕಲ್ಲನ್ನು ಉಳಿದೆಲ್ಲಾ ಸಿಬ್ಬಂದಿಗಳ ಮೇಲೆ ಎಸೆದಿರುತ್ತಾಳೆ. ಆಗ ಚಾಸಾ –1 ಹಾಗೂ 11 ರವರು ಮತ್ತು ಇತರ ಮಹಿಳಾ ಸಿಬ್ಬಂಗದಿಗಳು 1 ನೇ ಆರೋಪಿಯನ್ನು ಹಿಡಿದಾಗ ಅವಳು ನೆಲಕ್ಕೆ ಬಿದ್ದ ಹಾಗೆ ಮಾಡಿರುತ್ತಾಳೆ. ಕಟ್ಟಡದ ಒಳಗೆ ಅರಣ್ಯ ಸಿಬ್ಬಂದಿಗಳು ಕಂಬ

ತೆರವು ಮಾಡುವಾಗ ಆಗಲೂ 2 ಮತ್ತು 3 ಆರೋಪಿತರನ್ನು ಮನೆಯ ಹೊರಗೆ ಕರೆದಾಗ ನೆಲಕ್ಕೆ ಕುಳಿತಿದ್ದ 1 ನೇ ಆರೋಪಿಯು ಚಾಸಾ –11 ಇವರಿಗೆ ನೋಡಿ ಬಲಗೈ ಹಿಡಿದು ಕಲ್ಲಿನಿಂದ ಬಲಗೈಗೆ ಕಚ್ಚಿದ್ದು ಅವರಿಗ ರಕ್ತಗಾಯವಾಗಿರುತ್ತದೆ. ಉಳಿದ ಅರಣ್ಯ ಸಿಬ್ಬಂದಿಗಳಿಗೂ ಹಾಗೂ ಉಪ ವಲಯ ಅರಣ್ಯಾಧಿಕಾರಿಗಳಿಗೂ ಗಾಯವಾಗಿದ್ದು ಇರುತ್ತದೆ. ಸದರಿ ಕಾರ್ಯಾಚರಣೆ ಮುಗಿಸಿ ನಮಗೆ ಹಾಗೂ ಅರಣ್ಯ ಸಿಬ್ಬಂದಿಗಳನ್ನು ವಲಯ ಅರಣ್ಯಾಧಿಕಾರಿಗಳು ತಮ್ಮ ಕಚೇರಿಗೆ ಕರೆದುಕೊಂಡು ಬಂದಿದ್ದು ಗಾಯಗೊಂಡಿದ್ದ ಸಿಬ್ಬಂದಿಗಳನ್ನು ಭಟ್ಕಳ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ನಮಗೆ ಠಾಣೆಗೆ ಬಿಟ್ಟಿರುತ್ತಾರೆ. ಸಮವಸ್ತ್ರದಲ್ಲಿದ್ದ ಅರಣ್ಯ ಹಾಗೂ ಪೊಲೀಸ್ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಅರೋಪಿತರ ಮೇಲೆ ದೂರು ದಾಖಲಿಸಿದ ಬ ಗ್ಗೆ ನನಗೆ ಮಾಹಿತಿ ಇರುತ್ತದೆ. ಸಾಕ್ಷಿಯು ಮುದ್ದೆಮಾಲು 1 ಮತ್ತು 2 ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜಿ ವಕೀಲರಿಂದ,**

ನಾವು ಸಾಧಿಸುವಂತಹ ಘಟನೆಯಲ್ಲಿ ನನ್ನ ಮೇಲೆ ಹಲ್ಲೆ ಆಗಿಲ್ಲ ಮತ್ತು ನನಗೆ ರಕ್ತಗಾಯವಾಗಿಲ್ಲ. ನನ್ನ ಹೇಳಿಕೆಯಲ್ಲಿ ನನ್ನ ಬಲಗೈಗೆ ಕಚ್ಚಿ ಗಾಯವಾಗಿದೆ ಎಂದು ನಮೂದಿಸಿದ್ದು ಸರಿಯಲ್ಲ. ಗುನ್ಹಾ ಸ್ಥಳವು ಜನನಿಬಿಡ ಪ್ರದೇಶವಾಗಿದೆ . ಘಟನಾ ಸ್ಥಳದ ಬಗ್ಗೆ ನನಗೆ ಮಾಹಿತಿ ಇದೆ. ಗುನ್ಹಾ ಸ್ಥಳದ ಚತುರ್ಗಡಿ , ಪೂರ್ವಕ್ಕೆ 50 ಅಡಿ ಅಂತರದಲ್ಲಿ ಕೃಷ್ಣಾ ಆಚಾರಿಯವರ ಮನೆ, ಪಶ್ಚಿಮಕ್ಕೆ ಮಾರುತಿ ಆಚಾರಿ ಯವರ ಮನೆ, ದಕ್ಷಿಣಕ್ಕೆ ಒಂದು ಮನೆ ಇದ್ದು ಅದರ ಹಿಂದುಗಡೆ ಕನ್ನಡ ಶಾಲೆ , ಉತರಕ್ಕೆ 15 ಅಡಿ ಅಂತರದಲ್ಲಿ ಹನುಮಾನ ನಗರಕ್ಕೆ ಹೋಗುವ ದಾರಿ ಇದೆ. ಗುನ್ಹಾ ಸ್ಥಳವು ಮುಖ್ಯ ರಸ್ತೆಯಿಂದ ಹತ್ತಿರ ಇರುವುದರಿಂದ ಜನಸಂಚಾರ ಇರುತ್ತದೆ ಎಂದರೆ ಸರಿ. ಗುನ್ಹಾ ಸ್ಥಳಕ್ಕೆ ಹೋದಾಗ ಸಾರ್ವಜನಿಕರು ಇದ್ದರು ಆದರೆ ಎಷ್ಟು ಜನರಿದ್ದರು ಎಂದು ಹೇಳಲು ಆಗುವುದಿಲ್ಲ. ಗುನ್ಹಾ ಸ್ಥಳಕ್ಕೆ ಹೋದ ಬಗ್ಗೆ ನಮ್ಮ ಠಾಣೆಯ ಡೈರಿಯಲ್ಲಿ ನಮೂದು ಇರುತ್ತದೆ. ಅಂತಹ ದಾಖಲಾತಿಗಳನ್ನು ನಮ್ಮ ತನಿಖಾಧಿಕಾರಿಗೆ ನೀಡಿಲ್ಲ. ಗುನ್ಹಾ ಸ್ಥಳಕ್ಕೆ ಹೋಗಲು ಅಧೀಕೃತವಾದ ಆದೇಶ ಇದೆ. 1 ನೇ ಆರೋಪಿಯು ನಾವೆಲ್ಲರೂ ಅವರ ಮೇಲೆ ಹಲ್ಲೆ ಮಾಡಿದ್ದೇವೆ ಎಂದು ಕ್ರೈಂ ನಂಬರ್ 159/2019 ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ಇಂದು ನ್ಯಾಯಾಲಯದ ಮುಂದೆ ಸೀಮೆ ಎಣ್ಣೆ ಕ್ಯಾನು ಹಾಗೂ ಪಿಕಾಸನ್ನು ನಾನು ನೋಡಿರುವುದಿಲ್ಲ. ನ್ಯಾಯಾಲಯದ ಮಂದೆ ಇರುವ ಮುದ್ದೆಮಾಲುಗಳು ಸಾಮಾನ್ಯವಾಗಿ ಎಲ್ಲಾ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಸದರಿ ಘಟನೆಯಲ್ಲಿ ಚಾಸಾ –1, ,7,8, 9 ಮತ್ತು 11 ರವರಿಗೆ ಪೆಟ್ಟು ಆಗಿತ್ತು. ಗುನ್ಹಾ ಸ್ಥಳದಲ್ಲಿ ಯಾರಿಗೂ ಗಾಯವಾಗಿತ್ತು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಹಾಗೂ ಕಚ್ಚಿಲ್ಲ ಎಂದರೆ ಸರಿಯಲ್ಲ. ನಾನು ದಾಳಿಯಲ್ಲಿ ಭಾಗವಹಿಸಿಲ್ಲ ಹಾಗೂ ನಾವು ಹೇಳಿದಂತಹ ದಾಳಿ ಸುಳ್ಳು

ಎಂದರೆ ಸರಿಯಲ್ಲ. 1 ನೇ ಆರೋಪಿಯು ನೀಡಿದ ದೂರಿನಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕಣಕ್ಕೆ ತಯಾರಿಸಿದ ಸುಳ್ಳು ಹೇಳಿಕೆಯಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಗೂ, ಆರೋಪಿಗೂ ಹಾಗೂ ಮುದ್ದೆಮಾಲಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂ಼  , ಪಿ.ಡಬ್ಲ್ಯೂ಼**

ಸಾಕ್ಷಿದಾರರ ಹೆಸರು : ಮದರಸಾಬ

ತಂದೆಯ ಹೆಸರು : ಜಾಪರ್ ಚಿಕ್ಕೇರಿ

ವಯಸ್ಸು : 43 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ವಸತಿ ಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ /02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ17.10.2023 ರಂದು ಭಟ್ಕಳ ಶಹರ ಠಾಣಾ ಗುನ್ನಾ ಸಂಖ್ಯೆ 124/2023 ರಲ್ಲಿ ಚಾಸಾ –14 ರವರು ಸದರಿ ಪ್ರಕರಣದಲ್ಲಿ ಮೃತಪಟ್ಟ ಮೃತಳ ಶವ ಪಂಚನಾಮೆಗೆ ಪೊಟೋ ಮತ್ತು ಸಿಡಿಯನ್ನು ತಯಾರಿಸಲು ಹೇಳಿದಂತೆ ನಾನು ಸದರಿ ದಿನ ಶವಪಂಚನಾೆಮ ಕಾಲಕ್ಕೆ ಪೊಟೋ ತೆಗೆದು ಸಿಡಿಯಲ್ಲಿ ಹಾಕಿ ಪೊಟೋ ಹಾಗೂ ಸಿಡಿಯನ್ನು ತನಿಖಾಧಿಕಾರಿಗೆ ನೀಡಿ ಕಲಂ 65 ಬಿ ರಡಿ ಪ್ರಮಾಣಪತ್ರ ನೀಡಿರುತ್ತೇನೆ . ಅದೇ ದಿನ ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ –15 ರವರು ಸದರಿ ಪ್ರಕರಣದಲ್ಲಿ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿದ್ದು ಆ ವೇಳೆ ಸದರಿ ಪಂಚನಾೆಮಯನ್ನು ನಾನು ಬರೆದು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಕಲಂ 65 ಬಿ ಪ್ರಮಾಣಪತ್ರಕ್ಕೆ ಸುಳ್ಳಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 742/2023**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 5**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಕಾಂತ |
| ತಂದೆಯ ಹೆಸರು | : | ನಾರಾಯಣ ನಾಯ್ಕ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಮಾಜಿ ಸೈನಿಕ |
| ವಾಸ್ತವ್ಯ | : | ಆಸರಕೇರಿ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 21 /02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 03.03.2023 ರಂದು ಸಂಜೆ 6.30 ಗಂಟೆ ಸುಮಾರಿಗೆ ಭಟ್ಕಳದ ಮಾರಿಕಾಂಬಾ ದೇವಸ್ಥಾನದ ಎದುರಿಗೆ ಇರುವ ರಸ್ತೆಯಲ್ಲಿ ನಾನು ಮತ್ತು ಚಾಸಾ – 7 ರವರು ಮಾತನಾಡುತ್ತಿದ್ದಾಗ ರಸ್ತೆಯ ಮಧ್ಯದಲ್ಲಿ ರಿಕ್ಷಾ ಸಂಖ್ಯೆ ಕೆಎ –47 ಎ 2719 ಅನ್ನು ನಿಲ್ಲಿಸಿದ್ದರು. ರಿಕ್ಷಾದಲ್ಲಿ ಒಬ್ಬಳು ಮಹಿಳೆ ಇದ್ದಳು. ರಿಕ್ಷಾವನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದರು. ಆಗ ಟ್ರಾಫಿಕ್ ಜಾಮ್ ಆದ ಕಾರಣ ಪೊಲೀಸರು ಸದರಿ ರಿಕ್ಷಾವನ್ನು ತೆಗೆಯಲು ಹೇಳಿದಾಗ 1 ನೇ ಆರೋಪಿಯು ಏರು ಧ್ವನಿಯಲ್ಲಿ ಮಾತನಾಡಿ ಪೊಲೀಸ್ ಸಿಬ್ಬಂದಿಗೆ ಅವಾಚ್ಯ ಶಬ್ದದಿಂದ ಮಾತನಾಡಿದ್ದು ಇರುತ್ತದೆ ಹಾಗೂ ಬೆದರಿಕೆಯನ್ನು ಹಾಕಿದ್ದು ಇರುತ್ತದೆ. ನಂತರ ರಿಕ್ಷಾದಲ್ಲಿ ಇದ್ದ ಮಹಿಳೆಯೂ ಸಹ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಇತರ ಪೊಲೀಸ ಸಿಬ್ಬಂದಿಗಳು ಬಂದಿರುತ್ತಾರೆ ಹಾಗೂ ಜನರೂ ಸೇರಿರುತ್ತಾರೆ. ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ಹೇಳಿಕೆ ನೀಡಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 461/2023**

**ಸಿ.ಡಬ್ಲ್ಯೂಃ 5 , ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ರಾಮ

ತಂದೆಯ ಹೆಸರು : ಜಟ್ಟಪ್ಪ ನಾಯ್ಕ

ವಯಸ್ಸು : 66 ವರ್ಷ

ಉದ್ಯೋಗ : ಮನೆ ಕೆಲಸ

ವಾಸ್ತವ್ಯ : ಸಾಗರ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 21 /02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನನಗೆ ಒಂದು ದಾಖಲೆಗೆ ಸಹಿ ಮಾಡಲು ಹೇಳಿದ್ದ ಕಾರಣ ನಾನು ಸಹಿ ಮಾಡಿರುತ್ತೇನೆ. ದಾಖಲೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

ಸಾಕ್ಷಿಯು ನಿಪಿ–4 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 16.07.2022 ರಂದು ಚಾಸಾ –11 ರವರು ನನಗೆ ಹಾಗೂ ಚಾಸಾ –4 ರವರನ್ನು ಠಾಣೆಗೆ ಸದರಿ ಪ್ರಕರಣದ ವಾಹನ ನಂಬರ ಕೆಎ 47 ಎಕ್ಸ 1666 ರ ಪಂಚನಾಮೆಗೆ ಕರೆದಿದ್ದರು ಎಂದರೆ ಸರಿಯಲ್ಲ. ಸದರಿ ವಾಹನದ ಮೌಲ್ಯ ರೂ. 80,000 ಅಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 12.00 ಗಂಟೆಯ ನಡುವೆ ಠಾಣೆಯ ಆವರಣದಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ /20**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

ಸಾಕ್ಷಿದಾರರ ಹೆಸರು : ಸುಮಾ ಬಿ .

ತಂದೆಯ ಹೆಸರು : ಜಿ ಕೆ ಭಾಸ್ಕರ

ವಯಸ್ಸು : 31 ವರ್ಷ

ಉದ್ಯೋಗ : ಪೊಲೀಸ್ ಉಪ ನಿರೀಕ್ಷಕರು, ಉಡುಪಿ

ವಾಸ್ತವ್ಯ : ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 20/02/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 22.02.2022 ರಿಂದ 2023 ರ ಜನೇವರಿ ತಿಂಗಳವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 18.04.2022 ರಂದು ಠಾಣೆಯಲ್ಲಿದ್ದಾಗ ಚಾಸಾ – 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 49/2022 ರಂತೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ನೀಡಿದ್ದು ಇರುತ್ತದೆ ಹಾಗೂ ಪಂಚನಾಮೆ ಮತ್ತು 20 ಕೆಜಿ ಮಾಂಸ ಹಾಗೂ ಒಮಿನಿ ಕಾರು ಮತ್ತು ಆರೋಪಿ ಯನ್ನು ಹಾಜರುಪಡಿಸಿರುತ್ತೇನೆ. ಅದೇ ದಿನ ಜಾನುವಾರಿನ ಮಾಂಸ ಪರಿಶೀಲನೆ ಮಾಡಲು ಪಶುವೈದ್ಯಾಧಿಕಾರಿಗಳಿಗೆ ಕೋರಿಕೆ ಪತ್ರ ನೀಡಿದ್ದು ಇರುತ್ತದೆ. ಅದೇ ದಿನ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ– 3 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಗುನ್ನಾ ಸ್ಥಳದ ಮಹಜರು ಮಾಡಿದ್ದು ಇರುತ್ತದೆ. ಪೊಟೋವನ್ನು ಪಡೆದಿರುತ್ತೇನೆ. ಅದೇ ದಿನ ಜಾನುವಾರುಗಳ ಮಾಂಸವನ್ನು ಪಶುವೈದ್ಯಾಧಿಕಾರಿಗಳು ಪರೀಕ್ಷೆ ಮಾಡಿದ ನಂತರ ವಿಲೇವಾರಿಗೆ ಎಪಿ ನ್ಯಾಯಾಲಯಕ್ಕೆ ನಿವೇದಿಸಿ ಚಾಸಾ –7 ರವರಿಗೆ ಕೋರಿಕೆ ಪತ್ರ ನೀಡಿದ್ದು ಇರುತ್ತದೆ. ಅದೇ ದಿನ ಆರೋಪಿಗೆ ನೊಟೀಸನ್ನು ನೀಡಿದ್ದು ಹಾಗೂ ವಾಹನಕ್ಕೆ ಸೇರಿದ ದಾಖಲಾತಿ ಪಡೆದಿರುತ್ತೇನೆ. ಅದೇ ದಿನ ಚಾಸಾ 4 ಮತ್ತು 5 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ ಹಾಗೂ ಅದೇ ದಿನ ಚಾಸಾ 5 ರವರಿಂದ 65 ಬಿ

ಪ್ರಮಾಣಪತ್ರ ಪಡೆದಿರುತ್ತೇನೆ. ದಿಃ 21.04.2022 ರಂದು ಚಾಸಾ –7 ರವರು ನೀಡಿದ ಪ್ರಮಾಣಪತ್ರ ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿಃ 11.09.2022 ರಂದು ಚಾಸಾ –6 ರವರು ನೀಡಿದ ಪ್ರಮಾಣಪತ್ರವನ್ನು ಕಡತಕ್ಕೆ ಆಳವಡಿಸಿರುತ್ತೇನೆ. ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ನೀಡಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದ,**

ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ಚಾಸಾ –1 ರವರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 708/2024**

**ಸಿ.ಡಬ್ಲ್ಯೂಃ 7 , ಪಿ.ಡಬ್ಲ್ಯೂಃ 7**

ಸಾಕ್ಷಿದಾರರ ಹೆಸರು : ಉದಯ ನಾಯ್ಕ

ತಂದೆಯ ಹೆಸರು : ಲಕ್ಷ್ಮಯ್ಯ ನಾಯ್ಕ

ವಯಸ್ಸು : 43 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಶಿರಾಲಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 20 /02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಕಳೆದ ನಾಲ್ಕು ವರ್ಷಗಳಿಂದ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 02.12.2023 ರಂದು ಚಾಸಾ –1 ರವರ ನಿರ್ದೇಶನದಂತೆ ದಿಃ 01.12.2023 ರಂದು ಭಟ್ಕಳ ಶಹರ ಠಾಣೆಗೆ ನೀಡಿದ ಕ್ಯಾಮೇರಾದಲ್ಲಿ ಗುನ್ನಾ ಸ್ಥಳದ ಪೊಟೋಗ್ರಾಫಿ ಮಾಡಿದ್ದು ಇರುತ್ತದೆ. ಅದನ್ನು ಠಾಣೆಯ ಗಣಕಯಂತ್ರಕ್ಕೆ ವರ್ಗಾಯಿಸಿ ಪೊಟೋ ಸ್ಟೂಡಿಯೋದಲ್ಲಿ ಪ್ರಿಂಟ್ ತೆಗೆಸಿ ಸಿಡಿ ಮಾಡಿ ಠಾಣೆಗೆ ಒಪ್ಪಿಸಿದ್ದು ಇರುತ್ತದೆ. ಅದರಂತೆ ಕಲಂ 65 ಬಿ ರಡಿಯಲ್ಲಿ ಪ್ರಮಾಣಪತ್ರ ನೀಡಿದ್ದು ಇರುತ್ತದೆ. ಸಾಕ್ಷಿಯು ಪೊಟೋ ನೋಡಿ ಗುರುತಿಸಿದ್ದು ಇರುತ್ತದೆ.

3. ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ– 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 4 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ನಾನು ಪೊಟೋ ಮಾತ್ರ ತೆಗೆದಿದ್ದು ದಾಳಿಯಲ್ಲಿ ಭಾಗವಹಿಸಿಲ್ಲ. ಪೊಟೋದ ಬಗ್ಗೆ ಮಾತ್ರ ಮಾಹಿತಿ ಇದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂ ತೆ ಯಾವುದೇ ಮಾಹಿತಿ ಇಲ್ಲ. ಪೊಟೋ ತೆಗೆಯಲು ಇಲಾಖೆಯ ವತಿಯಿಂದ ತರಬೇತಿ ಪಡೆದಿರುತ್ತೇನೆ. ಪೊಟೋವನ್ನು ಠಾಣೆಯ ಕ್ಯಾಮೇರಾದಿಂದ ತೆಗೆದಿರುತ್ತೇನೆ. ಗುನ್ನಾ ಸ್ಥಳದ ಪಂಚನಾಮೆ ಕಾಲಕ್ಕೆ ಪೊಟೋ ತೆಗೆದಿರುತ್ತೇನೆ. ದಿನೇಶ್ ಸ್ಟೂಡಿಯೋದಲ್ಲಿ ಪೊಟೋವನ್ನು ಪ್ರಿಂಟ್ ಹಾಕಿಸಿರುತ್ತೇನೆ ಮತ್ತು ಹಣವನ್ನು ಪಾವತಿಸಿ ರಶೀದಿ ಪಡೆದಿರುತ್ತೇನೆ. ಅಂತಹ ರಶೀದಿಯನ್ನು ನಮ್ಮ ಮೇಲಾಧಿಕಾರಿಗೆ ನೀಡಿರುತ್ತೇನೆ, ಸದರಿ ರಶೀದಿಯನ್ನು ಇಂದು ನ್ಯಾಯಾಲಯದಲ್ಲಿ ನೋಡಿಲ್ಲ. ಪಂಚನಾಮೆ ಮಾಡುವಾಗ ಪೊಟೋವನ್ನು ತೆಗೆದಿರುತ್ತೇನೆ. ನಾನು ಯಾವುದೇ ಪೊಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 708/2024**

**ಸಿ.ಡಬ್ಲ್ಯೂಃ 6 , ಪಿ.ಡಬ್ಲ್ಯೂಃ 6**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂಜೀವ ಮರಾಠಿ |
| ತಂದೆಯ ಹೆಸರು | : | ಅಣ್ಣಪ್ಪ ಮರಾಠಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ |
| ವಾಸ್ತವ್ಯ | : | ಒಡೆಯರ್ ಮಠ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 20 /02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ನವೆಂಬರ್ 2021 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 01.12.2023 ರಂದು ರಾತ್ರಿ 10.30 ಗಂಟೆಗೆ ಚಾಸಾ –1 ರವರು ನನಗೆ ಮತ್ತು ಚಾಸಾ –4 , 5 ರವರನ್ನು ಠಾಣೆಗೆ ಕರೆದು ಚಾಸಾ –1 ರವರು ಶಮಸುದ್ದೀನ್ ಸರ್ಕಲ ನಲ್ಲಿ ಕರ್ತವದಲ್ಲಿದ್ದಾಗ ಅವರಿಗೆ ಬಂದ ಮಾಹಿತಿಯಂತೆ , ಮುಗ್ದುಮ್ ಕಾಲನಿಯ ಅತಿಯಾ ಮಂಜಿಲ್ ನಲ್ಲಿ ಯಾರೋ ಜಾನುವಾರುಗಳನ್ನು ಕಟಾವು ಮಾಡುತ್ತಿರುವ ಬಗ್ಗೆ ತಿಳಿಸಿದ್ದು , ಇದನ್ನು ಚಾಸಾ –1 ರವರು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದು ಇರುತ್ತದೆ. ನನಗೆ ಜೀಪಿನ ಚಾಲಕನಾಗಿ ಹೇಳಿದ್ದು ಚಾಸಾ – 4 ರವರ ಮೂಲಕ ಇಬ್ಬರು ಪಂಚರನ್ನು ಬರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ಪಂಚರನ್ನು ಹಾಗೂ ಸಿಬ್ಬಂದಿ ಸಮೇತ ಗುನ್ಹಾ ಸ್ಥಳಕ್ಕೆ ಹೋಗಿ ನೋಡಿದಾಗ ಇಬ್ಬರು ಅರೊಪಿತರು ಜಾನುವಾರು ಕಟಾವು ಮಾಡಿದ್ದು ಕಂಡುಬಂದಿರುತ್ತದೆ. ಚಾಸಾ –1 ರವರು ಅವರ ಹೆಸರನ್ನು ಕೇಳಿದಾಗ ಒಬ್ಬನು ಅಮೀರ್ ಬಾಪಾ ಎಂದು ಇನ್ನೊಬ್ಬರ ಹೆಸರು ದಸ್ತಗಿರಿ ಅಹಮದ್ ಎಂದು ತಿಳಿಸಿದ್ದು ಇರುತ್ತದೆ. ಚಾಸಾ –1 ರವರು ಪರವಾನಿಗೆ ಬಗ್ಗೆ ಕೇಳಿದಾಗ ಅವರು ಇಲ್ಲವೆಂದು ತಿಳಿಸಿದ್ದು ಮಾಂಸ ಮಾರಾಟ ಮಾಡಲು ಕಟಾವು ಮಾಡುವ ಬಗ್ಗೆ ತಿಳಿಸಿರುತ್ತಾರೆ. ರೂ. 18,000 ಮೌಲ್ಯದ 65 ಕೆಜಿ ಮಾಂಸ, ತೂಕದ ಯಂತ್ರ –1, 2 ಕತ್ತಿ , 1 ತಡಪಾಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ನಾನು ಸದರಿ ಪ್ರಕರಣದಲ್ಲಿ ಚಾಲಕನಾಗಿದ್ದು ಚಾಸಾ –1 ರವರ ಅಗತ್ಯ ಸಹಾಯ ಮಾಡಿದ್ದು ಇರುತ್ತದೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮುದ್ದೆಮಾಲು 1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಚಾಸಾ –1 ನಮ್ಮ ಮೇಲಾಧಿಕಾರಿಗಳು ಆಗಿದ್ದಾರೆ. ಚಾಸಾ –2, 3 , 8, ರವನ್ನು ಹೊರತುಪಡಿಸಿ ಉಳಿದೆಲ್ಲಾ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ನಾನು ಮತ್ತು ಚಾಸಾ – 5 ರವರು ಘಟನೆಯ ಕಾಲಕ್ಕೆ ರಾತ್ರಿ ಗಸ್ತು ಕರ್ತವ್ಯದಲ್ಲಿ ರಂಗಿನಕಟ್ಟಾ ಬಳಿ ಇದ್ದೇವು. ನಮಗೆ ಗುನ್ಹಾ ಸ್ಥಳಕ್ಕೆ ರಾತ್ರಿ 10.30 ಕ್ಕೆ ಕರೆದಿರುತ್ತಾರೆ. ನಾವುಗುನ್ಹಾ ಸ್ಥಳಕ್ಕೆ 11.00 ಗಂಟೆಗೆ ತಲುಪಿರುತ್ತೇವೆ. ನಾವೆಲ್ಲರೂ ಸರಕಾರಿ ವಾಹನದಲ್ಲಿ ಗುನ್ಹಾ ಸ್ಥಳಕ್ಕೆ ಹೋಗಿರುತ್ತೇವೆ. ಪಂಚರನ್ನು ಚಾಸಾ – 4 ರವರು ಠಾಣೆಗೆ ಕರೆಯಿಸಿದ್ದರು. ಗುನ್ಹಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇವೆ. ಸದರಿ ದಾಳಿಯನ್ನು

ಅಕ್ಕಪಕ್ಕದ ಜನರು ನೋಡಿರುತ್ತಾರೆ. ದಾಳಿ ಕಾಲಕ್ಕೆ ಗುನ್ಹಾ ಸ್ಥಳದಲ್ಲಿ ಮಾಂಸ, ತೂಕದ ಯಂತ್ರ –1, 2 ಕತ್ತಿ , 1 ತಡಪಾಲು ಇತ್ತು. ಮುದ್ದೆಮಾಲನ್ನು ಜಪ್ತು ಮಾಡುವಾಗ ಫೋಟೋ ವನ್ನು ಚಾಸಾ – 7 ರವರು ತೆಗೆದಿರುತ್ತಾರೆ. ಪಂಚನಾಮೆಯನ್ನು ಚಾಸಾ –1 ರವರು ಕೈಯಿಂದ ಬರೆದಿದ್ದಾರೊ ಅಥವಾ ಬೆರಳಚ್ಚು ಮಾಡಿದ ಬಗ್ಗೆ ನನಗೆ ನೆನಪಿಲ್ಲ . ಜಪ್ತು ಪಡಿಸಿದ ಮುದ್ದೆಮಾಲನ್ನು ಬುಲೇರೋ ವಾಹನದಲ್ಲಿ ಸಾಗಾಟ ಮಾಡಿದ್ದಾರೆ. ಬುಲೇರೋ ವಾಹನ ಯಾರದು ಗೊತ್ತಿಲ್ಲ. ಆದರೆ ಚಾಸಾ –4 ರವರು ಕರೆಯಿಸಿದ್ದರು. ಜಪ್ತು ಮಾಡಿದ ಮುದ್ದೆಮಾಲನ್ನು ವಾಹನಕ್ಕೆ ಚಾಸಾ –4 ರವರು ಸ್ಥಳಾಂತರ ಮಾಡಿರುತ್ತಾರೆ. ಪಶುವೈದ್ಯರು ಗುನ್ಹಾ ಸ್ಥಳಕ್ಕೆ ಬಂದಿರಲಿಲ್ಲ. ಯಾವುದೇ ದಾಳಿ ಮಾಡಿದ್ದೇ ಇಲ್ಲ. ನಮ್ಮ ಮೇಲಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೊಪಿಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕೆ ಸಂಕೆ ತೋರಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

– –

**ಸಿಸಿ ನಂಬರಃ 610 /2023**

**ಸಾಕ್ಷಿಃ ಸಿಡಬ್ಲ್ಯೂಃ 4, ಪಿ.ಡಬ್ಲ್ಯೂಃ 3**

**(ಇಂದು ತಾಃ 19/02/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರಿದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಸರಕಾರಿ ಸಹಾಯಕ ಅಭಿಯೋಜಕರು ಹೇಳಿದ್ದಾರೆ.**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ನಾನು ಜಾಲಿ ಪಟ್ಟಣ ಪಂಚಾಯತಿಯಲ್ಲಿ ಆಗಸ್ಟ 2021 ರಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಿರಾಕ್ಷೇಪಣಾ ಪತ್ರ ನಮ್ಮ ಕಚೇರಿಯಿಂದ ಹೋಗದೇ ಇದ್ದ ಕಾರಣ ನನಗೆ ಅದರ ದಿನಾಂಕ ಗೊತ್ತಿಲ್ಲ. ನಿರಾಕ್ಷೇಪಣಾ ಪತ್ರ ಯಾರಿಗೆ ನೀಡಲಾಗಿದೆ ಎಂದು ಸದರಿ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆ ಆಗುವವರೆಗೆ ನನಗೆ ಸದರಿ ದಾಖಲೆ ಬಗ್ಗೆ ಮಾಹಿತಿ ಇರಲಿಲ್ಲ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಗಳು ಆಗಿದ್ದಾರೆ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮೇಲಾಧಿಕಾರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಿರಾಪೇಕ್ಷಣಾ ಪತ್ರವನ್ನು ಹಾಜರುಪಡಿಸುವವರೆಗೂ ಸದರಿ ದಾಖಲೆ ಬಗ್ಗೆ ನಮ್ಮ



ಮೇಲಾಧಿಕಾರಿಗೆ ಯಾವುದೇ ಮಾಹಿತಿ ಇರಲಿಲ್ಲ. ಸದರಿ ದಾಖಲೆಯ ಬಗ್ಗೆ ಇಂತಹ ವ್ಯಕ್ತಿಯು ನಮ್ಮ ಕಚೇರಿಗೆ ಬಂದು ಹೋಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪಟ್ಟಣ ಪಂಚಾಯತಿಯಲ್ಲಿ ನಾನು ಕಂದಾಯ ನಿರೀಕ್ಷಕನಾಗಿದ್ದೇನು. ನಿರಾಪೇಕ್ಷಣಾ ಪತ್ರದ ಮೇಲೆ ಜಾಲಿ ಪಟ್ಟಣ ಪಂಚಾಯತಿ ಎಂದು ನಮೂದು ಮಾಡಿದ್ದರು. ಸದರಿ ದಾಖಲೆಯಲ್ಲಿ ಮುಖ್ಯ ಅಧಿಕಾರಿಗಳು ಸಹಿ ಮಾಡಿದ್ದಾರೆಂದು ಕಾಣುತ್ತಿದೆ. ಸದರಿ ಮುಖ್ಯ ಅಧಿಕಾರಿಗಳು ಸದರಿ ದಾಖಲೆಯನ್ನು ನೀಡಿದ್ದರೂ ಸಹ ಅವರ ಮೇಲೆ ಬರುತ್ತದೆ ಎಂದು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕ ಆಗಿದ್ದರು. ನಮ್ಮ ಕಚೇರಿಯ ಸೀಲು ಆರೋಪಿಯ ಬಳಿ ಇರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ನಿರಾಪೇಕ್ಷಣಾ ಪತ್ರ ನೀಡುವುದು ಆರೋಪಿಯ ಕೆಲಸದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿ. ನಮ್ಮ ಮೇಲಾಧಿಕಾರಿಗಳು ಹೇಳಿದ ಮೇರೆಗೆ ನಾನು ಪಂಚನಾಮೆಗೆ ಹೋಗಿರುತ್ತೇನೆ. ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿದ್ದು ಇರುತ್ತದೆ. ಪಂಚನಾಮೆಯನ್ನು ಪಿರ್ಯಾದಿದಾರರ ಹೇಳಿಕೆ ಮೇರೆಗೆ

ಬರೆದಿರುತ್ತಾರೆ. ಪಂಚನಾಮೆಯಲ್ಲಿ ಚೆಕ್ಕು ಬಂದಿ ಯಾವ ರೀತಿ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮೇಲಾಧಿಕಾರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1436 /2024**

**ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ನೂರಿಯಾ ಆಪಶಿಯಾ

ತಂದೆಯ ಹೆಸರು : ಮೊಹಮದ್ ಇಸ್ಮಾಯಿಲ್

ವಯಸ್ಸು : 33 ವರ್ಷ

ಉದ್ಯೋಗ : ನ್ಯ್ಯೂ ಶಮ್ ಸ್ಕೂಲ್ ಶಾಲೆಯ ವ್ಯವಸ್ಥಾಪಕಿ

ವಾಸ್ತವ್ಯ : ಹನಿಪಾ ಬಾದ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ದಿನಾಂಕ ನೆನಪಿಲ್ಲ. ಹೋದ ವರ್ಷದ ಮಾರ್ಚ ತಿಂಗಳಲ್ಲಿ ನಾನು ಆಟೋದ ಮೇಲೆ ಮಾಹಿಸ್ ಕಂಪ್ಯೂಟರ್ ಕಲಿಕಾ ಕೇಂದ್ರಕ್ಕೆ ಹೋಗುತ್ತಿದ್ದೇನು. ಒಂದು ಬಸ್ಸು ನಾನು ಪ್ರಯಾಣಿಸುತ್ತಿದ್ದ ಆಟೋಗೆ ಬಂದು ಡಿಕ್ಕಿ ಹೊಡೆದಿರುತ್ತದೆ. ಆಗ ನಾನು ಪುಸ್ತಕ ಓದುತ್ತಾ ಕುಳಿತಿದ್ದು ಇರುತ್ತದೆ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ ಕಾರಣ ನಾನು ಆಗ ಪುಸ್ತಕ ಓದುತ್ತಿದ್ದೇನು. ಅಪಘಾತ ನನ್ನ ಎಡ ಕೈಣ್ಣಿಗೆ , ಎಡ ಕೆನ್ನೆಗೆ , ಸೊಂಟಕ್ಕೆ ಗಾಯವಾಗಿತ್ತದೆ. ನಂತರ ನಾನು ವೆಲ್ ಪೆರ್ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದು ಇರುತ್ತದೆ. ನಂತರ ಒಂದು ವಾರ ಮನೆಯಲ್ಲಿ ಉಪಚಾರ ಪಡೆದಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಅಪಘಾತವು ಬಸ್ಸಿನ ಚಾಲಕನ ನಿರ್ಲಕ್ಷತದಿಂದ ಆಗಿದೆ ಎಂದರೆ ನನಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ಅಪಘಾತವಾದ ಸ್ಥಳವು ಸಮಸುದ್ದೀನ್ ಸರ್ಕಲದಿಂದ ಸ್ವಲ್ಪ ದೂರದಲ್ಲಿ ಇದೆ. ಬಸ್ಸನ್ನು ತಿರುಗಿಸಿದ ಕಾರಣ ಅಪಘಾತ ಆಗಿದೆ ಎಂದರೆ ನನಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ .

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 850/2024**

**ಸಿ.ಡಬ್ಲ್ಯೂಃ 7 , ಪಿ.ಡಬ್ಲ್ಯೂಃ 6**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಶ್ವ |
| ತಂದೆಯ ಹೆಸರು | : | ಮಾದೇವ ನಾಯ್ಕ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಅಟೋ ಚಾಲಕ |
| ವಾಸ್ತವ್ಯ | : | ತೆಂಗಿನ ಗುಂಡಿ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 18.01.2024 ರಂದು ಬೆಳಿಗ್ಗೆ ಸದರಿ ಪ್ರಕರಣದ ಆರೋಪಿ ತನ್ನ ಆಟೋ ನಂಬರ್ ಕೆಎ 47 –4290 ರಲ್ಲಿ ಅನಧೀಕೃತವಾಗಿ ಪಡೀತರ ಅಕ್ಕಿ ಚೀಲ ತುಂಬಿಕೊಂಡು ಹೋಗುವಾಗ ಚಾಸಾ –4

ಮತ್ತು 5 ರವರು ಸದರಿ ಆಟೋವನ್ನು ತಡೆದು ಪರಿಶೀಲನೆ ಮಾಡಿ ಆರೋಪಿ ಹತ್ತಿರ ಪಡಿತರ ಅಕ್ಕಿ ಚೀಲ ಸಾಗಾಟ ಮಾಡಲು ಅಧೀಕೃತ ಪಾಸ್ ಯಾ ಪರಮೀಟ ಇದೆ ಎಂದು ನನ್ನ ಸಮಕ್ಷಮ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 12 ಅಕ್ಕಿ ಚೀಲಗಳಲ್ಲಿ 360 ಕೆಜಿ ಪಡಿತರ ಅಕ್ಕಿಯನ್ನು ಪೊಲೀಸರು ನನ್ನ ಸಮಕ್ಷಮ ಆಟೋ ರಿಕ್ಷಾ ಸಮೇತ ಮತ್ತು ಆರೋಪಿಯನ್ನು ತಮ್ಮ ವಶಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಪಡಿತರ ಅಕ್ಕಿಯ ಮೌಲ್ಯ ರೂ. 12,260 ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಈ ಬಗ್ಗೆ ಸದರಿ ಆರೋಪಿಯ ಮೇಲೆ ಚಾಸಾ –1 ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎನ್ ವಕೀಲರಿಂದ,**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ449 /2020**

**ಸಿ.ಡಬ್ಲ್ಯೂಃ 3 , ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ಮೆಹಬೂಬ ಬಾಷಾ
ತಂದೆಯ ಹೆಸರು : ಬಾಬು ಸಾಬ್
ವಯಸ್ಸು : 24 ವರ್ಷ
ಉದ್ಯೋಗ : ಮೇಸ್ತ್ರೀ ಕೆಲಸ
ವಾಸ್ತವ್ಯ : ಮದಿನಾ ಕಾಲನಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ಟೈಲ್ಸ ಕಳ್ಳತನವಾದ ಬಗ್ಗೆ ಪೊಲೀಸರು ನನಗೆ ಪಂಚನಾಮೆಗೆ ಸಹಿ ಮಾಡಲು ಕರೆದಿದ್ದರು. ನಾನು ಪಂಚನಾಮೇಗೆ ಸಹಿ ಹಾಕಿರುತ್ತೇನೆ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಯು ನಿಪಿ-7 ಮತ್ತು 8 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಸಿ ಮತ್ತು 8 ಸಿ ಎಂದು ಗುರುತಿಸಲಾಯಿತು. ಆದರೆ ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಯು ಪೊಟೋ ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸಧ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 01.07.2019 ರಂದು ಚಾಸಾ –1 ರವರು ಸದರಿ ಪಂಚನಾಮೆ ಕಾಲಕ್ಕೆ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 21.06.2019 ರಂದು ರಾತ್ರಿ 11.30 ಗಂಟೆಯಿಂದ ದಿಃ 22.06.2019 ರ ಬೆಳಿಗ್ಗೆ 10.00 ಗಂಟೆ ಅವಧಿಯಲ್ಲಿ ಪಿರ್ಯಾದಿಗೆ ಸೇರಿದ ಸಿಂಪ್ರೋಲೋ ಹೆಸರಿನ 125 ಟೈಲ್ಸ ಬಾಕ್ಸಗಳು ಅಜಮಾಸು ರೂ. ಒಂದು ಲಕ್ಷ ಮೌಲ್ಯದಾಗಿದ್ದು ಅವುಗಳನ್ನು ಕಳ್ಳತನವಾದ ಬಗ್ಗೆ ನಡೆದ ಪಂಚನಾಮೆಗೆ ನಾನು ಹಾಗೂ ಚಾಸಾ –2 ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಗುನ್ನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕಣದ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 477/2023**

**ಸಿ.ಡಬ್ಲ್ಯೂಃ 9, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಜಗಧೀಶ

ತಂದೆಯ ಹೆಸರು : ಸುಕ್ರಪ್ಪ ನಾಯ್ಕ

ವಯಸ್ಸು : 38 ವರ್ಷ

ಉದ್ಯೋಗ : ಹೊಟೇಲಿನಲ್ಲಿ ಕೆಲಸ

ವಾಸ್ತವ್ಯ : ಮುಟ್ಟಳ್ಳಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 14.12.2022 ರಂದು ರಾತ್ರಿ 11.30 ಗಂಟೆಗೆ ಅಪಘಾತವಾಗಿತ್ತು. ಈ ಬಗ್ಗೆ ಚಾಸಾ – 1 ರವರು ನನಗೆ ಮಾಹಿತಿ ನೀಡಿದ್ದರು. ನಾನು ರಾತ್ರಿ 11.30 ಗಂಟೆಗೆ ಮುಟ್ಟಳ್ಳಿ ಬೈ ಪಾಸ್ ಬಂದಿರುತ್ತೇನೆ ಅಪಘಾತವು ಬೈಕ ನಂಬರ್ ಕೆಎ 47 – ಕೆ , 1172 ಹಾಗೂ ಮೀನು ಗಾಡಿ ನಂಬರ್ ಕೆಎ 47 7678 ಆಗಿದ್ದು ಇವುಗಳ ನಡುವೆ ಆಗಿತ್ತು. ಮೀನು ಗಾಡಿಯು ರಾಂಗ್ ಸೈಡಲ್ಲಿ ಬಂದಿದ್ದ ಕಾರಣ ಅಪಘಾತ ಆಗಿತ್ತು. ಅಪಘಾತದಲ್ಲಿ ಬೈಕಿನಲ್ಲಿ ಇರುವ ಇಬ್ಬರೂ ಮೃತರಾಗಿರುತ್ತಾರೆ. ಸಾಕ್ಷಿಯು ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್   ವಕೀಲರಿಂದ,</u>**

ನನ್ನ ಮನೆ ಅಪಘಾತವಾದ ಸ್ಥಳದಿಂದ 2 ಕಿ ಮೀ ದೂರದಲ್ಲಿ ಇದೆ. ಅಪಘಾತ ಕಾಲಕ್ಕೆ ನಾನು ಮನೆಯಲ್ಲಿ ಇದ್ದೇನು. ಪೋನ್ ಬಂದ ನಂತರ ನಾನು ಅಪಘಾತ ಸ್ಥಳಕ್ಕೆ ರಾತ್ರಿ 11.30 ಗಂಟೆಗೆ ಗುನ್ನಾ ಸ್ಥಳಕ್ಕೆ ಬಂದಿರುತ್ತೇನೆ. ನಾನು ಗುನ್ನಾ ಸ್ಥಳಕ್ಕೆ ಹೋದ ನಂತರ ಮೃತರನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಿರುತ್ತೇವೆ. ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ನಾನು ಅಪಘಾತ ನೋಡಿರುವುದಿಲ್ಲ. ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂದು ನಾನು ಹೇಳಿಲ್ಲ. ಈಗಲೂ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲು ಆಗುವುದಿಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 4/2024**

**ಸಿ.ಡಬ್ಲ್ಯೂಃ 8, ಪಿ.ಡಬ್ಲ್ಯೂಃ 8**

ಸಾಕ್ಷಿದಾರರ ಹೆಸರು : ದಾಕ್ಷಾಯಿಣಿ
ತಂದೆಯ ಹೆಸರು : ಆನಂದ ನಾಯ್ಕ
ವಯಸ್ಸು : 26 ವರ್ಷ
ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ
ವಾಸ್ತವ್ಯ : ಚಿತ್ರಾಪುರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಕಳೆದ 3 ವರ್ಷಗಳಿಂದ ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ17.10.2023 ರಂದು ಭಟ್ಕಳ ಶಹರ ಠಾಣಾ ಗುನ್ನಾ ಸಂಖ್ಯೆ 124/2023 ರಲ್ಲಿ ಚಾಸಾ – 14 ರವರು ಮೃತಳ ಶವ ಪಂಚನಾಮೆಗೆ ನನಗೆ ನೇಮಿಸಿದ್ದು ಇರುತ್ತದೆ. ನಂತರ ಶವಪಂಚನಾಮೆ ಆದ ನಂತರ ಶವವನ್ನು ವಾರಸುದಾರರಿಗೆ ನಾನು ಮರಳಿ ನೀಡಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 4/2024**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 7**

| | | |
|---|---|---|
| ಸಾಕ್ಷಿದಾರರ ಹೆಸರು | : | ಮದರಸಾಬ |
| ತಂದೆಯ ಹೆಸರು | : | ಜಾಪರ್ ಚಿಕ್ಕೇರಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ |
| ವಾಸ್ತವ್ಯ | : | ವಸತಿ ಗೃಹ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 18/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ17.10.2023 ರಂದು ಭಟ್ಕಳ ಶಹರ ಠಾಣಾ ಗುನ್ನಾ ಸಂಖ್ಯೆ 124/2023 ರಲ್ಲಿ ಚಾಸಾ – 14 ರವರು ಸದರಿ ಪ್ರಕರಣದಲ್ಲಿ ಮೃತಪಟ್ಟ ಮೃತಳ ಶವ ಪಂಚನಾಮೆಗೆ ಪೊಟೋ ಮತ್ತು ಸಿಡಿಯನ್ನು ತಯಾರಿಸಲು ಹೇಳಿದಂತೆ ನಾನು ಸದರಿ ದಿನ ಶವಪಂಚನಾ ಿಮ ಕಾಲಕ್ಕೆ ಪೊಟೋ ತೆಗೆದು ಸಿಡಿಯಲ್ಲಿ ಹಾಕಿ ಪೊಟೋ ಹಾಗೂ ಸಿಡಿಯನ್ನು ತನಿಖಾಧಿಕಾರಿಗೆ ನೀಡಿ ಕಲಂ 65 ಬಿ ರಡಿ ಪ್ರಮಾಣಪತ್ರ ನೀಡಿರುತ್ತೇನೆ . ಅದೇ ದಿನ ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ –15 ರವರು ಸದರಿ ಪ್ರಕರಣದಲ್ಲಿ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿದ್ದು ಆ ವೇಳೆ ಸದರಿ ಪಂಚನಾ ಿಮಯನ್ನು ನಾನು ಬರೆದು ಸಹಿ ಮಾಡಿರುತ್ತೇನೆ.

3. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–7 ಮತ್ತು 8 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ಕಲಂ 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ–10 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 10 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ಸದರಿ ಘಟನೆಗೆ ಸಂಬಂಧಿಸಿ ಪಂಚನಾಮೆಯನ್ನು ನಮ್ಮ ಮೇಲಾಧಿಕಾರಿಗಳ ಹೇಳಿಕೆ ಮೇರೆಗೆ ಬರೆದಿರುತ್ತೇನೆ ಎಂದರೆ ಸರಿ. ಪಂಚಸಾಕ್ಷಿದಾರರು ಕುಂದಾಪುರದವರು ಆಗಿದ್ದಾರೆ ಅವರನ್ನು ಯಾರು ಕರೆದಿದ್ದರು ಎಂದು ನನಗೆ ಗೊತ್ತಿಲ್ಲ. ಹಾತ್ ನಕಾಶೆಯನ್ನು ಬಿಡಿಸಲು ಯಾರು ಅಳತೆ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಶವ ಪಂಚನಾಮೆ ಕಾಲಕ್ಕೆ ಪೊಟೋವನ್ನು ನಾನೇ ತೆಗೆದಿರುತ್ತೇನೆ. ಕಲಂ 65 ಬಿ ಪ್ರಮಾಣಪತ್ರವನ್ನು ದೃಢೀಕರಣ ಮಾಡಿ ನಾನು ನೀಡಿಲ್ಲ. ಪೊಟೋವನ್ನು ಸ್ಟೂಡಿಯೋದಲ್ಲಿ ಪ್ರಿಂಟ್ ತೆಗೆಯಲಾಗಿದೆ. ಸ್ಟೂಡಿಯೋದವರು ರಶೀದಿಯನ್ನು ನೀಡಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ ಇಲ್ಲ ಹಾಗೂ ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಕಲಂ 65 ಬಿ ಪ್ರಮಾಣಪತ್ರಕ್ಕೆ ಸುಳ್ಳಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1836/2022**

**ಸಿ.ಡಬ್ಲ್ಯೂಃ 2 , ಪಿ.ಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು : ಖಾಲಿಜ್ ಶೇಖ್

ತಂದೆಯ ಹೆಸರು : ಹಯಾದ್ ಅಹಮದ್ ಶೇಖ್

ವಯಸ್ಸು : 34 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಜಾಲಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನಗೆ ಸಹಿ ಹಾಕಲು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

2. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಡಿ ಎಂದು ಗುರುತಿಸಲಾಯಿತು.ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 12.04.2021 ರಂದು ಚಾಸಾ –11 ರವರು ನನಗೆ ಹಾಗೂ ಚಾಸಾ 3 ರವರನ್ನು ಭಟ್ಕಳದ ಮಾರಿ ಕಟ್ಟೆ ಹತ್ತಿರ ಪಂಚನಾಮೆಗೆ ಬರಲು ಹೇಳಿದ್ದರು ಎಂದರೆ ಸರಿಯಲ್ಲ. ಗುನ್ಹಾ ಸ್ಥಳದ ಜಾಗವನ್ನು ಚಾಸಾ –1 ರವರು ತೋರಿಸಿದ್ದರು ಎಂದರೆ ಸರಿಯಲ್ಲ. ಪಂಚನಾಮೆಯನ್ನು 12.00 ರಿಂದ 1.00 ಗಂಟೆಗೆ ಸ್ಥಳದಲ್ಲಿ ಬರೆದು ಕಚ್ಚಾ ನಕಾಶೆಯನ್ನು ತಯಾರಿಸಲಾಗಿತ್ತು ಎಂದರೆ

ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 602/2021**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಶ್ರೀಕಾಂತ್ ವಿ ವಿ
ತಂದೆಯ ಹೆಸರು : ಶ್ರೀದರ್
ವಯಸ್ಸು : 38 ವರ್ಷ
ಉದ್ಯೋಗ : ರೈಲ್ವೆ ಇಲಾಖೆ, ಚೆನ್ನೈ
ವಾಸ್ತವ್ಯ : ಚೆನ್ನೈ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 14.04.2021 ರಂದು ನಾನು ಭಟ್ಕಳ ರೈಲ್ವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನು. ದಿಃ 14.04.2021 ರಂದು 12.05 ಸಮಯಕ್ಕೆ ನಾನು ನಮ್ಮ ಸಿಬ್ಬಂದಿಗಳ ಜೊತೆಗೆ ಭಟ್ಕಳದ ಟಿ ಎಪ್ ಸಿ ಹತ್ತಿರ ಇರುವ ಕೆ ಎಮ್ ಟೂರ್ಸ ಎಂಡ್ ಟ್ರಾವೆಲ್ಸ ಕಚೇರಿಯಲ್ಲಿ ಆರೋಪಿಯು ಕಾನೂನು ಬಾಹಿರವಾಗಿ ರೈಲ್ವೆ ಟಿಕೇಟನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಕಾರಣ ನಾವು ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. ಆರೊಪಿಯು ಅಲ್ಲಿ ಬೇರೆ ಬೇರೆ 15 ಐಡಿ ಕಾರ್ಡಗಳ ಮೂಲಕ ರೈಲ್ವೆ ಟಿಕೇಟುಗಳನ್ನು 100 ರಿಂದ 300 ಹೆಚ್ಚಿನ ಮೌಲ್ಯಕ್ಕೆ ಮಾರಾಟ ಮಾಡುತ್ತಿದ್ದನು. 16 ಟೀಕೆಟುಗಳನ್ನು ಮಾರಾಟ ಮಾಡಲಾಗಿತ್ತು ಮತ್ತು ಅದೇ ದಿನದ 1 ಟಿಕೇಟನ್ನು ಮಾರಾಟ ಮಾಡಿದ್ದರು. ಗುನ್ನಾ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಲಾಗಿತ್ತು. ಗುನ್ನಾ ಸ್ಥಳದಲ್ಲಿ ಲೆನೇವೊ ಲ್ಯಾಪ್ ಟಾಪ್ , ಪ್ರಿಂಟರ್ , ಸ್ಯಾಮಸಂಗ್ ಮೊಬೈಲ್ , ಡೊಂಗಲ್ , ಟಿಕೇಟುಗಳು , ವಿಸಿಟಿಂಗ್ ಕಾರ್ಡಗಳನ್ನು ಜಪ್ತು ಮಾಡಿರುತ್ತೇವೆ. ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ.

2. ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-12 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಡಿ ಎಂದು ಗುರುತಿಸಲಾಯಿತು. ಲ್ಯಾಪ್ ಟಾಪ್ ಅನ್ನು ಆರೋಪಿಗೆ ವಾಪಸ್ಸು ನೀಡಲಾಗಿದೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ  ಎಮ್ ಜಿ ವಕೀಲರಿಂದ,**

ಪಿರ್ಯಾದಿದಾರರು ನನ್ನ ಮೇಲಾಧಿಕಾರಿ ಆಗಿದ್ದಾರೆ. ಟೂರ್ಸ ಎಂಡ್ ಟ್ರಾವೆಲ್ಸ ಕಚೇರಿಯು ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ . ಗುನ್ನಾ ಸ್ಥಳದ ಅಕ್ಕಪಕ್ಕ ಅಂಗಡಿಗಳು ಇವೆ. ಗುನ್ನಾ ಸ್ಥಳಕ್ಕೆ ನಾವು ಮದ್ಯಾಹ್ನ ಹೋದ ಕಾರಣ ಜಾಸ್ತಿ ಜನರು ಇರಲಿಲ್ಲ ಇಬ್ಬರು ಮಾತ್ರ ಇದ್ದರು. ಆರೋಪಿಯ ಟೂರ್ಸ ಎಂಡ್ ಟ್ರಾವೆಲ್ಸ ಕಚೇರಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಟಿಕೇಟು ಗಳನ್ನು ಎಷ್ಟು ಜನರು ಬೇಕಾದರೂ ಪ್ರಿಂಟ್ ತೆಗೆಯಬಹುದು ಎಂದರೆ ಸರಿ. ನಿಪಿ–8 ಮತ್ತು 9 ಟಿಕೇಟಿನಲ್ಲಿ ಆರೋಪಿಯ ಹೆಸರು, ಸಹಿ  ಮತ್ತು ಸೀಲು ಇಲ್ಲ ಎಂದರೆ ಸರಿ.  ನಿಪಿ–8 ಮತ್ತು 9 ಟಿಕೇಟಿನಲ್ಲಿ ಯುಸರ್ ಐಡಿ  ಬೇರೆ ಇದೆ.  ಜಪ್ತು ಮಾಡಿದ ಟಿಕೇಟಿನಲ್ಲಿ ಪ್ರಯಾಣದ ಸ್ಥಳಗಳು ಮತ್ತು ಪ್ರಯಾಣಿಕರ ಹೆಸರುಗಳು  ಹಾಗೂ  ವಿಳಾಸ ಬೇರೆ ಬೇರೆ ಆಗಿದ್ದವು.  ಪ್ರಯಾಣಿಕರು ತಮ್ಮ ಮೊಬೈಲಿನಿಂದ  ವೆಬ್ ಸೈಟಿನಲ್ಲಿ ಹೋಗಿ ಪ್ರಿಂಟ್ ತೆಗೆಯಬಹುದು. ನಿಪಿ–8 ಮತ್ತು 9 ಟಿಕೇಟಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕಾಗಿ ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಸಾರ್ವಜನಿಕರು ಇರಲಿಲ್ಲ. ಹಾತ್ ನಕಾಶೆಯನ್ನು ಪಂಚನಾಮೆಯನ್ನು ನಮ್ಮ ಕಚೇರಿಯಲ್ಲಿ ತಯಾರಿಸಿದ್ದು ಗುನ್ನಾ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ –1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 203/2023**

**ಸಿ.ಡಬ್ಲ್ಯೂಃ3 , ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ವಿಶ್ವನಾಥ
ತಂದೆಯ ಹೆಸರು : ಸುಧಾಕರ ಮಹಾಲೆ
ವಯಸ್ಸು : 42 ವರ್ಷ
ಉದ್ಯೋಗ : ಕ್ಷೌರಿಕ ಕೆಲಸ
ವಾಸ್ತವ್ಯ : ಸಾಗರ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 24.07.2022 ರಂದು 2 ದನಗಳನ್ನು 2 ಹಗ್ಗದಲ್ಲಿ ಕಟ್ಟಿದ್ದು ಅದಕ್ಕೆ ಪಂಚರಾಗಿ ಬರಲು ಚಾಸಾ – 1 ರವರು ಹೇಳಿದ್ದ ಕಾರಣ ನಾನು ಠಾಣೆಗೆ ಹೋಗಿದ್ದು ಇರುತ್ತದೆ. ದನಗಳ ಬೆಲೆ ಬಗ್ಗೆ ನನಗೆ ಮಾಹಿತಿ ಇಲ್ಲ. ಬೆಳಿಗ್ಗೆ 7.00 ರಿಂದ 8.30 ಗಂಟೆಗೆ ಪಂಚನಾಮೆ ಮಾಡಿದ್ದು ಇರುತ್ತದೆ. ನನ್ನ ಸಹಿ ಪಡೆದಿರುತ್ತಾರೆ. ಹಾಗೂ ಪೊಟೋ ತೆಗೆದಿರುತ್ತಾರೆ. ಅದೇ ದಿನ ಗುನ್ನಾ ಸ್ಥಳದಲ್ಲಿ ಇನ್ನೊಂದು ಪಂಚನಾಮೆಯನ್ನು 10.30 ರಿಂದ 11.30 ಗಂಟೆಗೆ ಮಾಡಿದ್ದು ಇರುತ್ತದೆ. ಸ್ಥಳವನ್ನು ಚಾಸಾ – 1 ರವರು ತೋರಿಸಿರುತ್ತಾರೆ. ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ ಹಾಗೂ ಪೊಟೋ ತೆಗೆದಿರುತ್ತಾರೆ. ನನ್ನ ಜೊತೆಗೆ ಚಾಸಾ –2 ರವರು ಇದ್ದರು.

2. ಸಾಕ್ಷಿಯು ಮುದ್ದೆ ಮಾಲು –1 ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ಮತ್ತು 4 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ನಾನು 1 ಪಂಚನಾಮೆಗೆ ಠಾಣೆಯಲ್ಲಿ ಓದಿ ಸಹಿ ಮಾಡಿದ್ದು ಇರುತ್ತದೆ. ದಿಃ 24.02.2022 ರಂದು ನಾನು ಅಂಗಡಿಯಲ್ಲಿ ಇದ್ದೇನು. ನನ್ನ ಅಂಗಡಿಯನ್ನು ಬೆಳಿಗ್ಗೆ 7.30 ಗಂಟೆಗೆ ತೆರೆಯುತ್ತೇನೆ. ಆರ್ಡರ ಇದ್ದಾಗ ನಾನು ಅಂಗಡಿಯಿಂದ ಹೊರಗೆ ಹೋಗುತ್ತೇನೆ. ಚಾಸಾ – 1 ನನಗೆ ಠಾಣೆಗೆ ಪೋನ್ ಮಾಡಿ ಕರೆದಿರುತ್ತಾರೆ. ಘಟನೆಯ ವಿಷಯ ಠಾಣೆಗೆ ಹೋದಾಗ

ಗೊತ್ತಾಯಿತು. ನಂತರ ಸ್ಥಳ ಮಹಜರಿಗೆ ಗುನ್ಹಾ ಸ್ಥಳಕ್ಕೆ ಹೋಗಿದ್ದು ಇರುತ್ತದೆ. ಗುನ್ಹಾ ಸ್ಥಳ ಮುಸ್ಲಿಮರಿಗೆ ಸಂಬಂಧಿಸಿದ್ದು ಇತ್ತು. ಗುನ್ಹಾ ಸ್ಥಳದ ಅಕ್ಕಪಕ್ಕ ಮನೆಗಳು ಇವೆ. ಆಕಳು ಪೊಲೀಸ್ ಠಾಣೆಯ ಶೆಡ್ಡಿನಲ್ಲಿತ್ತು. ನನಗೆ ಸದರಿ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 203/2023**

**ಸಿ.ಡಬ್ಲ್ಯೂಃ2 , ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಕುಮಾರ

ತಂದೆಯ ಹೆಸರು : ಮಂಜಪ್ಪ ನಾಯ್ಕ

ವಯಸ್ಸು : 40 ವರ್ಷ

ಉದ್ಯೋಗ : ಹೊಟೇಲಿನಲ್ಲಿ ಕೆಲಸ

ವಾಸ್ತವ್ಯ : ಹನುಮಾನ ನಗರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 24.02.2022 ರಂದು 2 ಹಸುಗಳನ್ನು ಜಪ್ತು ಮಾಡಿರುವುದಾಗಿ ನನಗೆ ಪಂಚರಾಗಿ ಬರಲು ಹೇಳಿದ್ದ ಕಾರಣ ನಾನು ಠಾಣೆಗೆ ಹೋಗಿದ್ದು ಇರುತ್ತದೆ. ಬೆಳಿಗ್ಗೆ 7.30 ರಿಂದ 8.30 ಗಂಟೆಗೆ ಪಂಚನಾಮೆ ಮಾಡಿದ್ದು ಇರುತ್ತದೆ. 2 ದನ ಹಾಗೂ 2 ಹಗ್ಗಗಳನ್ನು ಜಪ್ತು ಮಾಡಿರುತ್ತಾರೆ. ಗುನ್ನಾ ಸ್ಥಳದಲ್ಲಿ ಇನ್ನೊಂದು ಪಂಚನಾಮೆಯನ್ನು 10.30 ರಿಂದ 11.30 ಗಂಟೆಗೆ ಮಾಡಿದ್ದು ಇರುತ್ತದೆ. ಸ್ಥಳವನ್ನು ಚಾಸಾ –1 ರವರು ತೋರಿಸಿರುತ್ತಾರೆ. 2 ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ ಹಾಗೂ ಫೋಟೋ ತೆಗೆದಿರುತ್ತಾರೆ. 2 ದನಗಳ ಮೌಲ್ಯ ರೂ. 30,000 ಆಗಿತ್ತು.

2. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ಫೋಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ಮುದ್ದೆ ಮಾಲು –1 ನೋ ಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ದಿಃ 24.02.2022 ರಂದು ನಾನು ಹೊಟೇಲಿನಲ್ಲಿ ಇದ್ದೇನು. ನಮ್ಮ ಹೊಟೇಲು ಬೆಳಿಗ್ಗೆ 5.30 ಗಂಟೆಗೆ ತೆರೆಯುತ್ತೇವೆ. ನಮ್ಮ ಹೊಟೇಲಿನಲ್ಲಿ ನೋಡಿ ಕೊಳ್ಳುವವರು ಬೇರೆಯವರು ಇದ್ದರು ಅವರನ್ನು ಅಲ್ಲಿ ಬಿಟ್ಟು ನಾನು ಗುನ್ನಾ ಸ್ಥಳಕ್ಕೆ ಹೋಗಿರುತ್ತೇನೆ. ನನಗೆ ಚಾಸಾ –1 ರವರು ಠಾಣೆಗೆ ಕರೆದಿರುತ್ತಾರೆ. ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಠಾಣೆಯ ಸಿಬ್ಬಂದಿಯು ಠಾಣೆಯಲ್ಲಿ ಬರೆದಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ವಿಷಯವನ್ನು ನನಗೆ ಓದಿ ಹೇಳಿರುತ್ತಾರೆ. ಗುನ್ನಾ ಸ್ಥಳ ನಮ್ಮ ಹೊಟೇಲಿನಿಂದ ಒಂದು ಕಿಮಿ ದೂರದಲ್ಲಿದೆ. ಗುನ್ನಾ ಸ್ಥಳ ಆರೋಪಿಗೆ ಸಂಬಂಧಿಸಿದ್ದು. ನನಗೆ ಸದರಿ ಘಟನೆ ಬಗ್ಗೆ ಯಾವುದೇ

ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1806/2022**

**ಸಿ.ಡಬ್ಲ್ಯೂ:2 , ಪಿ.ಡಬ್ಲ್ಯೂ: 2**

ಸಾಕ್ಷಿದಾರರ ಹೆಸರು : ಪರಮೇಶ್ವರ
ತಂದೆಯ ಹೆಸರು : ಮಂಗಳಾ ಗೊಂಡ
ವಯಸ್ಸು : 29 ವರ್ಷ
ಉದ್ಯೋಗ : ಚಾಲಕ
ವಾಸ್ತವ್ಯ : ಗುಳ್ಮೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನನಗೆ ಸಹಿ ಮಾಡಲು ಹೇಳಿದ್ದ ಕಾರಣ ನಾನು ಸಹಿ ಮಾಡಿದ್ದು ಇರುತ್ತದೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 27.01.2021 ರಂದು ಚಾಸಾ -15 ರವರು ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ನಿಶಾಂತ್ ಆಸ್ಪತ್ರೆ ಹತ್ತಿರ ಅಪಘಾತಕ್ಕೆ ಸಂಬಂಧಿಸಿದ ಸ್ಥಳದ ಪಂಚನಾಮೆಗೆ ನನಗೆ ಹಾಗೂ ಚಾಸಾ -3 ರವರನ್ನು ಕರೆದಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತವು ಕಾರು ಮತ್ತು ತುಪಾನ್ ವಾಹನಗಳ ನಡುವೆ ಆಗಿತ್ತು ಎಂದರೆ ವಾಹಿತಿ ಇರುವುದಿಲ್ಲ. ಸದರಿ ಪಂಚನಾಮೆಯನ್ನು ಸ್ಥಳದಲ್ಲಿ ಮದ್ಯಾಹ್ನ 2.30 ರಿಂದ 3.30 ಗಂಟೆಗೆ ಮಾಡಿ ಮುಗಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ನಿಪಿ-4 ಮತ್ತು 5 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ -15 ರವರು ಅಪಘಾತಕ್ಕೆ ಸಂಬಂಧಿಸಿ ಜಪ್ತು ಮಾಡಿದ ವಾಹನಗಳ ಪಂಚನಾಮೆಗೆ ಠಾಣೆಗೆ ನನಗೆ ಹಾಗೂ ಚಾಸಾ -3 ರವರನ್ನು ಕರೆಯಿಸಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಅಪಘಾತಕ್ಕೆ ಒಳಗಾದ ಕಾರು ನಂಬರ್ ಕೆಎ -47 ಎಮ್ 9318 ಮತ್ತು ತುಪಾನ್ ವಾಹನ ಕೆಎ 22 ಸಿ- 6644 ನ್ನು ನನ್ನ ಸಮಕ್ಷಮ ಪರಿಶೀಲನೆ ಮಾಡಿ ನೋಡಲು ತುಪಾನ್ ವಾಹನದ ಮುಂದಿನ ಚಕ್ರ ಕಟ್ಟಾದ ಸ್ಥಿತಿಯಲ್ಲಿ

ಇತ್ತು ಹಾಗೂ ಬಂಪರ್ ಬೆಂಡಾಗಿತ್ತು ಎಂದರೆ ಸರಿಯಲ್ಲ. ಕಾರನ್ನು ಪರಿಶೀಲನೆ ಮಾಡಿದಾಗ ಅದು ಎಸ್ ಪ್ರೆಸಿ ಕಂಪನಿಗೆ ಸೇರಿದ ಕಾರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾರಿನ ಶೋಗ್ಲಾಸ್ ಒಡೆತಿತ್ತು ಎಂದರೆ ಸರಿಯಲ್ಲ. ಸದರಿ ಪಂಚನಾಮೆ 4.00 ರಿಂದ 5.00 ಗಂಟೆಯ ಸಮಯಕ್ಕೆ ಠಾಣೆಯ ಆವರಣದಲ್ಲಿ ಬರೆಯಲಾಗಿತ್ತು ಎಂದರೆ ಸರಿಯಲ್ಲ. ವಾಹನ ಜಪ್ತು ಕಾಲಕ್ಕೆ ತೆಗೆದ ಫೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಎಂದು , ಸಾಕ್ಷಿಯ ಸಹಿಯನ್ನು ನಿಪಿ–7 ಎ ಎಂದು ಗುರುತಿಸಲಾಯಿತು. ಸದರಿ ಗುನ್ನಾ ಸ್ಥಳದ ಪಂಚನಾಮೆ ಹಾಗೂ ಜಪ್ತು ಪಂಚನಾಮೆ ಕಾಲಕ್ಕೆ ನಾನು ಹಾಜರಿದ್ದು ಪಂಚನಾಮೆಯಲ್ಲಿ ಬರೆದ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 523/2020**

**ಸಿ.ಡಬ್ಲ್ಯೂಃ 7, ಪಿ.ಡಬ್ಲ್ಯೂಃ 9**

ಸಾಕ್ಷಿದಾರರ ಹೆಸರು : ವಿವೇಕಾನಂದ ಪಟಗಾರ

ತಂದೆಯ ಹೆಸರು : ರಾಮಚಂದ್ರ

ವಯಸ್ಸು : 43 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಕಾರವಾರ ಗ್ರಾಮೀಣ ಪೊಲೀಸ್ ಕಾರವಾರ

ವಾಸ್ತವ್ಯ : ಕಾರವಾರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2013 ರಿಂದ 2019 ರವರಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 11.07.2017 ರಂದು ಸದರಿ ಪ್ರರಕಣದ ತನಿಖಾಧಿಕಾರಿಗಳಾದ ಚಾಸಾ -8 ರವರು ಸದರಿ ಪ್ರಕರಣದ ಗುನ್ನಾ ಸ್ಥಳದ ಪಂಚನಾಮೆ ಕಾಲಕ್ಕೆ ನನಗೆ ಪಂಚನಾಮೆ ಬರೆಯಲು ತಿಳಿಸಿದಂತೆ ನಾನು ಪಂಚನಾಮೆ ಬರೆದಿರುತ್ತೇನೆ ಹಾಗೂ ಅವರ ನಿರ್ದೇಶನದಂತೆ ನನ್ನ ಮೊಬೈಲಿನಿಂದ ಪೊಟೋ ತೆಗೆದು ಅದನ್ನು ಪ್ರಿಂಟ್ ಮಾಡಿ ಸಿಡಿ ಮಾಡಿಸಿ ಕಲಂ 65 ಬಿ ರಂತೆ ಪ್ರಮಾಣಪತ್ರ ನೀಡಿರುತ್ತೇನೆ.

3. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ- 3 ಮತ್ತು 4 ಪೊಟೋ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 9 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಗುನ್ನಾ ಸ್ಥಳದಲ್ಲಿ ಕಂಪೌಂಡ ಇದ್ದ ಬಗ್ಗೆ ನನಗೆ ನೆನಪಿಲ್ಲ. ಒಂದೇ ಗುನ್ನಾ ಸ್ಥಳ ಇದೆ. ಗುನ್ನಾ ಸ್ಥಳದಲ್ಲಿ ಪೊಟೋಗಳನ್ನು ತೆಗೆದಾಗ ಕಟ್ಟಡ ಕಟ್ಟುವ ಸಾಮಗ್ರಿಗಳು ಇದ್ದವು. ಘಟನೆ ನಡೆದ ದಿನವೇ ಪೊಟೋವನ್ನು ತೆಗೆಯಲಾಗಿದೆ. ಪಂಚನಾಮೆ ಕಾಲಕ್ಕೆ ನಾನು ಗುನ್ನಾ ಸ್ಥಳಕ್ಕೆ ಹೋಗಿರುತ್ತೇನೆ.

ಪಂಚನಾಮೆಯನ್ನು ಗುನ್ಹಾ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿದ ಪೋಟೋಗಳು ಗುನ್ಹಾ ಸ್ಥಳದಲ್ಲಿಯದು ಎಂದರೆ ಸರಿಯಲ್ಲ. ಸದರಿ ಘಟನೆಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ಪೋಟೋ ತೆಗೆಯಲು ಆದ ತರಬೇತಿಯ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಠಾಣೆಯ ಡಿಜಿಟಲ್ ಕ್ಯಾಮೇರಾ ಹಾಳಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಮೊಬೈಲ್ ನಿಂದ ಪೋಟೋ ತೆಗೆಯಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಪೋಟೋ ತಗೆದ ನಂತರ ನನ್ನ ಮೊಬೈಲನ್ನು ತನಿಖಾಧಿಕಾರಿಗೆ ನೀಡಿಲ್ಲ. ಚಾಸಾ –1 ರವರಿಗೆ ಸಹಾಯಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುನ್ಹಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ523/2020**

**ಸಾಕ್ಷಿಃ ಸಿಡಬ್ಲ್ಯೂಃ 10 , ಪಿ.ಡಬ್ಲ್ಯೂಃ 8**

ಸಾಕ್ಷಿದಾರರ ಹೆಸರು : ಭರತ್ ಕುಮಾರ್
ತಂದೆಯ ಹೆಸರು : ವೆಂಕಟರಾಯ ಜಿ . ನಾಯಕ್
ವಯಸ್ಸು : 34 ವರ್ಷ
ಉದ್ಯೋಗ : ಪೊಲೀಸ್ ಉಪನಿರೀಕ್ಷಕರು, ಮಂಕಿ ಪೊಲೀಸ ಠಾಣೆ,
ವಾಸ್ತವ್ಯ : ಮಂಕಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಎಪ್ರಿಲ್ 2020 ರಿಂದ ಮಾರ್ಚ 2021 ರವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2 ದಿನಾಂಕಃ 30.04.2020 ರಂದು ಸದರಿ ಪ್ರಕರಣದ ಕಡತವನ್ನು ಸಿಪಿಐ ಆದ ಪ್ರಕಾಶ ಎಮ್ ಎಸ ರವರಿಂದ ಸ್ವೀಕರಿಸಿರುತ್ತೇನೆ. ದಿಃ 31.07.2020 ರಂದು ಆರೋಪಿ ಕೃತ್ಯ ಎಸಗಿದ್ದು ಸಾಬೀತಾದ ಕಾರಣ ದೊಷಾರೋಪಣಾ ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಪ್ರ ವ ವರದಿಯನ್ನು ದಾಖಲಿಸಿದ ನಂತರ ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಬಂದಿದೆ. ಘಟನಾ ಕಾಲಕ್ಕೆ ಗುನ್ನಾ ಸ್ಥಳಕ್ಕೆ ನಮ್ಮ ಸಿಬ್ಬಂದಿಗಳು ಹೋದ ಬಗ್ಗೆ ಉಲ್ಲೇಖ ಇಲ್ಲ. ಸದರಿ ಪ್ರಕರಣದ ಎಲ್ಲಾ ಸಾಕ್ಷಿದಾರರು ಅರಣ್ಯ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿದ್ದು ಇರುವುದಿಲ್ಲ. ಗುನ್ನಾ ಸ್ಥಳದಲ್ಲಿ ಎಷ್ಟು ಮನೆಗಳು ಇವೆ ಎಂದು ಮಾಹಿತಿ ಇಲ್ಲ. ನಾನು ಗುನ್ನಾ ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ಸಾಕ್ಷಿದಾರರ ವಿಚಾರಣೆ ನಾನು ಮಾಡಿಲ್ಲ. ನಮ್ಮ ಹಿಂದಿನ ಅಧಿಕಾರಿಗಳು ದಾಖಲಿಸಿದ ಪ್ರಕರಣಕ್ಕೆ ನಾನು ಯಥಾ ಸ್ಥಿತಿಯಲ್ಲಿ ಅಂತಿಮ ವರದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಜಪ್ತು ಮಾಡಿದ ಸಿಡಿ ಬಗ್ಗೆ ಕಲಂ 65 ಬಿ ರಡಿ ಪ್ರಮಾಣಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ಸಿಡಿಯಲ್ಲಿರುವ ಪೂಟೇಜನ್ನು ಪರಿಶೀಲನೆ ಮಾಡದೇ ಅರೋಪಿ ವಿರುದ್ಧ ಸುಳ್ಳು ಅಂತಿಮ ವರದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಿಡಿಯಲ್ಲಿ ಇರುವ ವಿಡಿಯೋ ದಲ್ಲಿ ಆರೋಾಪಿ ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ಸುಮಾರು 50 ಜನರ ವಿರುದ್ಧ ದೂರನ್ನು ದಾಖಲಿಸಿದ್ದಾರೆ. ನಾನು ಯಾವುದೇ ಶಂಕಿತ ವ್ಯಕ್ತಿಗಳನ್ನು ವಿಚಾರಣೆಗೆ

ಕರೆಯಿಸಿಲ್ಲ. ಇಂತಹ ಯಾವುದೇ ಘಟನೆ ನಡೆಯದೇ ಇದ್ದ ಕಾರಣ ನಮಗೆ ಯಾರೂ ಆರೋಪಿತರು ಸಿಕ್ಕಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಕಾಂಟ್ರೇಕ್ಟರ್ ಆಗಿ ಸದರಿ ಕಟ್ಟಡ ನಿರ್ಮಾಣ ಮಾಡುತ್ತಿದ್ದರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 832/2024**

**ಸಿ.ಡಬ್ಲ್ಯೂಃ 2 , ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಶಾಹಿದ್

ತಂದೆಯ ಹೆಸರು : ಅಬ್ದುಲ್ ಖಾದರ್

ವಯಸ್ಸು : 39 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಆಜಾದ ನಗರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 24.11.2023 ರಂದು ಸಂಜೆ 6.20 ಗಂಟೆಗೆ ನಾವು ಸಿಟಿ ಲೈಟ್ ಹೊಟೇಲಿನ ಹತ್ತಿರ ನಿಂತಾಗ ಕುಂದಾಪುರ ಕಡೆಯಿಂದ ಬಂದ ಬುಲೇರೋ ಗಾಡಿ ಸಂಖ್ಯೆಃ ಕೆಎ 15 – ಎ – 5438 ಹಾಗೂ ಆಟೋ ನಂಬರ್ ಕೆಎ –47 ಎ –5037 ನಡುವೆ ಅಪಘಾತ ಆಗಿತ್ತು. ಆಟೋ ರಸ್ತೆ ದಾಟುವಾಗ ಅಪಘಾತ ಆಗಿತ್ತು. ಅಪಘಾತ ವಾದಾಗ ಆಟೋ ಚಾಲಕ ಕೆಳಗೆ ಬಿದ್ದಿದ್ದರು . ಅವರನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಇರುತ್ತದೆ. ಆಟೋದಲ್ಲಿ ಇದ್ದ ಒಬ್ಬ ಮಹಿಳೆಗೆ ತಲೆಗೆ ಪೆಟ್ಟು ಆಗಿದ್ದು ಅವರನ್ನು ನಾವು ಸರಕಾರಿ ಆಸ್ಪತೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಆಟೋ ಚಾಲಕನು ಸದರಿ ಅಪಘಾತ ದಲ್ಲಿ ಮರಣ ಹೊಂದಿರುವುದಾಗಿ ಮಾಹಿತಿ ಬಂದಿರುತ್ತದೆ . ಮಾರನೇ ದಿನ ನನಗೆ ಪೊಲೀಸರು ಸ್ಥಳಕ್ಕೆ ಕರೆದಿದ್ದರು. ಅಲ್ಲಿ ಪೊಟೋ ತೆಗೆದಿರುತ್ತಾರೆ. ನನ್ನ ಸಹಿಯನ್ನು ಪಡೆದಿರುತ್ತಾರೆ. ಅಪಘಾತ ಬುಲೇರೋ ವಾಹನ ಚಾಲಕನ ತಪ್ಪಿನಿಂದ ಆಗಿದ್ದು ಇರುತ್ತದೆ.

2. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು.ಸಾಕ್ಷಿಯು ಪೊಟೋ ನೋಡಿ ಗುರುತಿಸಿದ್ದು ಇರುತ್ತದೆ. ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ನಾನು ಹಾಗೂ ಮೃತ ವ್ಯಕ್ತಿ ಬೇರೆ ಬೇರೆ ನಿಲ್ದಾಣದಲ್ಲಿ ಆಟೋ ಚಾಲಕರಾಗಿದ್ದೇವೆ. ಲೈಪ್ ಕೇರ್ ಆಸ್ಪತ್ರೆ ಜಾಲಿ ರಸ್ತೆಯಲ್ಲಿ ಇದೆ. ಅಪಘಾತ ರಾಷ್ಟ್ರೀಯ ಹೆದ್ದಾರಿಯ ಮೇಲೆ ಆಗಿದೆ. ಲೈಪ್ ಕೇರ್

ಆಸ್ಪತ್ರೆ ಗೆ ಮತ್ತು ರಾಷ್ಟ್ರೀಯ ಹೆದ್ದಾರಿಯ ಮೇಲೆ ಒಳಗಿನ ಕಚ್ಚಾ ರಸ್ತೆಯಿಂದ ಹೋಗಬಹುದು. ಲೈಫ್ ಕೇರ್ ಆಸ್ಪತ್ರೆಯ ಪಕ್ಕದಲ್ಲಿ ಗಾರ್ಡನ್ ಇದೆ. ಸಿ ಟಿ ಲೈಟ್ ಆಸ್ಪತ್ರೆಯಿಂದ ರಾಷ್ಟ್ರೀಯ ಹೆದ್ದಾರಿಗೆ ಬರುವಾಗ ಗಾರ್ಡನ ಇದ್ದ ಕಾರಣ ಆ ಕಡೆಯಿಂದ ಬರುವ ವಾಹನಗಳು ಕಾಣುವುದಿಲ್ಲ ಎಂದರೆ ಸರಿಯಲ್ಲ. ಆಚೆ ಕಡೆಯಿಂದ ವಾಹನ ಕಾಣದೇ ಇದ್ದ ಕಾರಣ ರಸ್ತೆ ದಾಟಲು ಮೃತ ವ್ಯಕ್ತಿ ರಸ್ತೆಯ ಮೇಲೆ ಬಂದಿದ್ದರು ಎಂದರೆ ಸರಿಯಲ್ಲ. ಅಪಘಾತ ಗಾರ್ಡನ ಎದುರಿಗೆ ಆಗಿದೆ. ಗಾರ್ಡನನ ಮುಂದೆ ಆಟೋ ನಿಲ್ದಾಣ ಇದ್ದು ಅದರ ನಂತರ ಗಾರ್ಡನ ಇದೆ. ಅಪಘಾತ ವು ಭಟ್ಕಳದಿಂದ ಹೊನ್ನಾವರಕ್ಕೆ ಹೋಗುವ ರಸ್ತೆಯ ಮೇಲೆ ಆಗಿದೆ. ಅಪಘಾತ ಪಶ್ಚಿಮ ದಿಕ್ಕಿನಿಂದ 10 ಪೀಟ ಅಂತರದಲ್ಲಿ ಆಗಿದೆ. 40 ಪೀಟ್ ಅಗಲ ರಸ್ತೆ ಇದೆ. ಅಪಘಾತ ದ ರಸ್ತೆಯಲ್ಲಿ ಸಿಂಗಲ್ ರಸ್ತೆ ಇದೆ. ಭಟ್ಕಳದಿಂದ ಹೊನ್ನಾವರ ಕಡೆಗೆ ಹೋಗುವ ವಾಹನಗಳ ರಾಂಗ್ ಸೈಡಿನಲ್ಲಿ ಅಪಘಾತ ಆಗಿದೆ ಎಂದರೆ ಸರಿ. ಭಟ್ಕಳದಿಂದ ಹೊನ್ನಾವರ ಕಡೆಗೆ ಹೋಗುವ ರಸ್ತೆಯ ಮೇಲೆ ಬುಲೇರೋ ವಾಹನ ಸರಿಯಾದ ರಸ್ತೆಯಲ್ಲಿ ಇತ್ತು ಎಂದರೆ ಸರಿ. ಅಪಘಾತದಲ್ಲಿ ಮೃತ ಪಟ್ಟ ವ್ಯಕ್ತಿಯ ಸುಮಾರು 5 ತಿಂಗಳ ಹಿಂದೆ ಅದೇ ಸ್ಥಳದಲ್ಲಿ ಈ ಮೊದಲು ಅಪಘಾತ ಆಗಿತ್ತು. ಸರಕಾರಿ ಆಸ್ಪತ್ರೆಯಲ್ಲ್ಲಿ ಹೋದಾಗ ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಾಗಿ ಪೊಲೀಸರಿಗೆ ಹೇಳಿರುತ್ತೇನೆ. ನಾನು ಅಪಘಾತದ ಸ್ಥಳದಲ್ಲಿ ಇದ್ದೆ ಮತ್ತು ಇಷ್ಟು ದೂರದಿಂದ ಅಪಘಾತ ವನ್ನು ನೋಡಿದ್ದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನಗೆ ಸಂಬಂಧಿಕರು ಅಲ್ಲ. ಆಟೋದಲ್ಲಿ ಇದ್ದ ಮಹಿಳೆಯ ನನಗೆ ಪರಿಚಯ ಇಲ್ಲ. ಅಪಘಾತ ದಲ್ಲಿ ಮೃತ ಪಟ್ಟ ವ್ಯಕ್ತಿ ನನ್ನ ಚಿಕ್ಕಪ್ಪ ಆಗಿದ್ದರು ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಕುಟುಂಬಕ್ಕೆ ಪರಿಹಾರ ಸಿಗಲೀ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯಕ್ಕೆ ಪೂರ್ತಿ ಕತ್ತಲೇ ಆಗಿರಲಿಲ್ಲ. ಅಪಘಾತವು ಸಂಜೆಯ ನಮಾಜಿಗಿಂತ ಮೊದಲು ಆಗಿದೆ. ಪಂಚನಾಮೆಗೆ ನಾನು ಬೇರೆ ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ನನಗೆ ಪೊಲೀಸರು ಕರೆದಿರುತ್ತಾರೆ. ಪೊಲೀಸರಿಗೆ ನಾನು ಅಪಘಾತ ಕಣ್ಣಾರೆ ಕಂಡಿರುವುದಾಗಿ ಹೇಳಿರುತ್ತೇನೆ. ನಾನು ಹೇಳಿದಂತೆ ಪಂಚನಾಮೆಯನ್ನು ಬರೆದಿರುತ್ತಾರೆ. ಪಂಚನಾಮೆಯಲ್ಲಿ ಸ್ಥಳದ ಚೆಕ್ಕು ಬಂದಿ ಯಾವ ರೀತಿ ತೋರಿಸಿದ್ದಾರೆಂದು ನನಗೆ ಗೊತ್ತಿಲ್ಲ. ಚೆಕ್ಕು ಬಂದಿಯನ್ನು ಕಚ್ಚಾ ನಕಾಶೆಯಲ್ಲಿ ತೋರಿಸಿರುವ ಬಗ್ಗೆ ನಾನು ನೋಡಿರುತ್ತೇನೆ. ಮೃತರ ನಿರ್ಲಕ್ಷತನದಿಂದ ಸದರಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಸದರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತದ ರಸ್ತೆಯು ಡಬಲ್ ರಸ್ತೆಯಿಂದ ಸಿಂಗಲ್ ರಸ್ತೆ ಮಾಡಿದ್ದಾರೆ ಮತ್ತು ಆಳವಾಗಿ ಟರ್ನಿಂಗ್ ಅನ್ನು ನೀಡಿದ ಕಾರಣ ಅಪಘಾತ ಆಗಿರುತ್ತದೆ. ಪ್ರತಿದಿನ ಅಪಘಾತದ ಸ್ಥಳದಲ್ಲಿ ಅಪಘಾತ ಅಗುತ್ತದೆ ಎಂದರೆ ಸರಿ. ಗುನ್ನಾ ಸ್ಥಳದಲ್ಲಿ ಸಿಸಿ ಕ್ಯಾಮೇರಾ ಹಾಕಿದ್ದಾರೆ.

ನನಗೆ ಅಪಘಾತದ ಬಗ್ಗೆ ಮಾಹಿತಿ ಇಲ್ಲದಿದ್ದರು ಮೃತರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 744/2024**

**ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಮಲ್ಲಿಕಾರ್ಜುನ
ತಂದೆಯ ಹೆಸರು : ರಾಮಗೌಡ
ವಯಸ್ಸು : 28 ವರ್ಷ
ಉದ್ಯೋಗ : ಪೊಲೀಸ್ ಪೇದೆ, ಭಟ್ಕಳ ಶಹರ ಪೊಲೀಸ್ ಠಾಣೆ
ವಾಸ್ತವ್ಯ : ರಾಘವೇಂದ್ರ ಮಠದ ಹತ್ತಿರ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 10.07.2023 ರಿಂದ ಭಟ್ಕಳ ಶಹರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 26.10.2023 ರಂದು ಚಾಸಾ -4 ಮತ್ತು ನಾನು ಕರ್ತವ್ಯದಲ್ಲಿದ್ದಾಗ ದಿಃ 27.10.2023 ರಂದು ಬೆಳಿಗ್ಗೆ ಸುಮಾರಿಗೆ ಚಾಸಾ -1 ರವರು ನಮಗೆ ಪುರವರ್ಗಕ್ಕೆ ಬರಲು ಹೇಳಿದ್ದು ಸ್ಥಳದಲ್ಲಿ ಅಕ್ರಮವಾಗಿ ದನವನ್ನು ವದೆ ಮಾಡುವ ಉದ್ದೇಶಕ್ಕೆ ತಂದಿರುವುದಾಗ ತಿಳಿಸಿದ್ದು ಇರುತ್ತದೆ. ಚಾಸಾ -1 ರವರು ಚಾಸಾ -4 ರವರ ಮೂಲಕ ಪಂಚರನ್ನು ಬರಮಾಡಿಕೊಂಡಿರುತ್ತಾರೆ. ನಂತರ ಚಾಸಾ -4 ,1 ನಾನು ಮತ್ತು ಪಂಚರು ಸೇರಿ ಜನತಾ ಬ್ಯಾಂಕಿನ ರಸ್ತೆಯ 1 ನೇ ಆರೋಪಿಯವರ ಮನೆಯ ಹತ್ತಿರ ಹೋಗಿರುತ್ತೇವೆ. ಆಗ ಒಬ್ಬ ಆರೋಪಿ ಅಲ್ಲಿಂದ ಓಡಿ ಹೋಗಿದ್ದು ನಾವು ಅವರನ್ನು ಬೆನ್ನು ಹತ್ತಿದರೂ ಅವರು ಸಿಗಲಿಲ್ಲ. ಗುನ್ನಾ ಸ್ಥಳದಲ್ಲಿ ಒಂದು ಕೆಂಪು ಬಣ್ಣದ ಹೋರಿ ಕಟ್ಟಿದ್ದು ಸ್ಥಳದಲ್ಲಿ ಒಂದು ಕತ್ತಿ ಹಾಗೂ ಹಗ್ಗ ಸಿಕ್ಕಿರುತ್ತದೆ. ಚಾಸಾ -1 ರವರು ವಿಚಾರಣೆ ಮಾಡಿದಾಗ ಆರೋಪಿಗಳು ಈ ಕೃತ್ಯ ಮಾಡಿರುವುದಾಗಿ ತಿಳಿಸಿದ್ದು ಪಂಚರು ಹೇಳಿದಂತೆ ಚಾಸಾ -1 ರವರ ಉಕ್ತಲೇಖನದಂತೆ ನಾನು ಪಂಚನಾಮೆ ಬರೆದಿದ್ದು ಇರುತ್ತದೆ. ಚಾಸಾ -1 ರವರು ಒಂದು ಕೆಂಪು ಬಣ್ಣದ ಹೋರಿ , 1 ಕತ್ತಿ ಹಾಗೂ 3 ಹಗ್ಗವನ್ನು ವಶಪಡಿಸಿದ್ದು ಇರುತ್ತದೆ. ಗುನ್ನಾ ಸ್ಥಳ ಮಣ್ಣಿನಿಂದ ಕೂಡಿದ್ದು ದಕ್ಷಿಣಕ್ಕೆ ಬ್ರಹ್ಮಾವರ

ಅಶ್ಫಾಕ ಅವರ ಮನೆಯ ಬಾಡಿಗೆ ಮನೆಯಲ್ಲಿ ಆರೋಪಿಯ ಮನೆ ಇರುತ್ತದೆ. ಪೂರ್ವಕ್ಕೆ ಹಾಗೂ ಉತ್ತರಕ್ಕೆ 6 ಅಡಿ ಅಂತರಕ್ಕೆ ಇನ್ನೊಬ್ಬ ಆರೋಪಿಯ ಮನೆ ಇದೆ. ಪೂರ್ವಕ್ಕೆ ಶಾಂತೇರಿ ಕಾಮಾಕ್ಷಿ ದೇವಾಲಯಕ್ಕೆ ಹೋಗುವ ದಾರಿ ಇದೆ. ಪಶ್ಚಿಮಕ್ಕೆ ಮಾರಿಕಟ್ಟೆ ದೇವಸ್ಥಾನಕ್ಕೆ ಹೋಗುವ ದಾರಿ ಇದೆ. ಗುನ್ಹಾ ಸ್ಥಳದ ಅಕ್ಷಾಂಶ 13.98 ರೇಕಾಂಶ 74.55 ಇರುತ್ತದೆ. ಪಂಚನಾಮೆಯನ್ನು ಬೀದಿ ದೀಪ ಹಾಗೂ ಮೊಬೈಲ್ ಮೂಲಕ ಬರೆದಿದ್ದು ಇರುತ್ತದೆ. ಬೆಳಿಗ್ಗೆ 5.15 ರಿಂದ 6.45 ರವರೆಗೆ ಪಂಚನಾಮೆ ತಯಾರಿಸಿರುತ್ತೇವೆ. ಪಂಚನಾವೆ ಕಾಲಕ್ಕೆ ಪೊಟೋ ತೆಗೆದಿರುತ್ತೇವೆ. ಹೋರಿಯ ಮೌಲ್ಯ ರೂ.20,000, ಹಗ್ಗ- 10 ರೂ ಹಾಗೂ ಕತ್ತಿ ರೂ. 20 ಕಿಮ್ಮತ್ತಿನದು ಆಗಿರುತ್ತದೆ.

3. ಸಾಕ್ಷಿಯು ಕತ್ತಿ ಹಾಗೂ ಹಗ್ಗವನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ಸದರಿ ಪ್ರಕರಣದ ಪಿರ್ಯಾದಿದಾರರು ಚಾಸಾ -1 ಆಗಿರುತ್ತಾರೆ. ಪಂಚನಾಮೆಗೆ ಹಾಜರಾದ ಬಗ್ಗೆ ಠಾಣೆಯ ದಿನಚರಿಯಲ್ಲಿ ನಮೂದು ಆಗಿದೆ. ಸದರಿ ದಿನಚರಿಯನ್ನು ತನಿಖಾಧಿಕಾರಿಗೆ ನೀಡಿದ್ದು ಇರುತ್ತದೆ. ನಾನು ಗುನ್ಹಾ ಸ್ಥಳಕ್ಕೆ ಬೆಳಿಗ್ಗೆ 5.15 ಗಂಟೆಗೆ ಹೋಗಿರುತ್ತೇನೆ. ಗುನ್ಹಾ ಸ್ಥಳದ ಅಕ್ಕಪಕ್ಕ ಮನೆಗಳು ಇವೆ. ಗುನ್ಹಾ ಸ್ಥಳದಲ್ಲಿ 1- ಕತ್ತಿ ,3- ಹಗ್ಗ ಹಾಗೂ ಹೋರಿಯನ್ನು ವಶಪಡಿಸಿಕೊಂಡಿರುತ್ತೇವೆ. ಹೋರಿಯನ್ನು ಕಟ್ಟಿದ್ದ ಜಾಗದ ಬಗ್ಗೆ ಚಾಸಾ -1 ರವರಿಗೆ ಮಾಹಿತಿ ಇದೆ. ಜಾಗಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ ಬಗ್ಗೆ ಚಾಸಾ -1 ರವರಿಗೆ ಗೊತ್ತಿದೆ. ಕೆಂಪು ಬಣ್ಣದ ಹೋರಿಯನ್ನು ವಶಕ್ಕೆ ಪಡೆದಿರುತ್ತೇವೆ. ಹೋರಿ ಕೆಂಪು ಬಣ್ಣದ್ದು ಆಗಿಲ್ಲ ಎಂದರೆ ಸರಿಯಲ್ಲ. ಅಕ್ಕಪಕ್ಕದ ಜನರನ್ನು ಸಾಕ್ಷಿದಾರರಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಪಂಚರನ್ನು ಚಾಸಾ -4 ರವರು ಕರೆದುಕೊಂಡು ಬಂದಿದ್ದರು. ಪಂಚನಾಮೆಯು ನಮ್ಮ ಠಾಣೆಯ ಸೃಷ್ಟಿಯಾಗಿದೆ ಎಂದರೆ ಸರಿಯಲ್ಲ. ಅಂಕೆ ಸಂಕೆ ತೋರಿಸಲು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುನ್ಹಾ ಸ್ಥಳಕ್ಕೆ ಹೋಗಿದ್ದೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1030 /2024**

**ಸಿ.ಡಬ್ಲ್ಯೂಃ 7, ಪಿ.ಡಬ್ಲ್ಯೂಃ6**

| | | |
|---|---|---|
| ಸಾಕ್ಷಿದಾರನ ಹೆಸರು | : | ಸಂಗಮೇಶ್ |
| ತಂದೆಯ ಹೆಸರು | : | ಶಿವಯ್ಯಾ ಧರಿಗೊಂಡ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ |
| ವಾಸ್ತವ್ಯ | : | ಪೊಲೀಸ್ ವಸತಿಗೃಹ, ಸಾಗರ ರಸ್ತೆ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2023 ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 24.03.2024 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ –1 ರವರು ಮುಟ್ಟಳ್ಳಿ ಬೈ ಪಾಸ್ ಹತ್ತಿರ 2 ಜನ ಸರಾಯಿ ಚೀಲ ಹಾಗೂ ಬಾಟಲಿ ಹಿಡಿದು ಮಾರಾಟ ಮಾಡುವ ಬಗ್ಗೆ ಮಾಹಿತಿ ಬಂದಿದ್ದು ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಪಡೆದು ಇಬ್ಬರು ಪಂಚರನ್ನು ಠಾಣೆಗೆ ಕರೆದು ವಿಷಯ ತಿಳಿಸಿ ನಾನು, ಚಾಸಾ – 4, 5 , 6 ಮತ್ತು 8 ರವರನ್ನು ಹಾಗೂ ಪಂಚರನ್ನು ಕರೆದು ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. ಗುನ್ನಾ ಸ್ಥಳಕ್ಕೆ ಹೋದಾಗ ಆರೋಪಿಗಳಲ್ಲಿ ಒಬ್ಬನು ಓಡಿ ಹೋಡಿದ್ದು ಒಬ್ಬನನ್ನು ಹಿಡಿದು ಆತನ ಹೆಸರು ಕೇಳಿದಾಗ ಸುನಿಲ ಕುಪ್ಪಯ್ಯ ಗೌಡ ಎಂದು ಹೇಳಿರುತ್ತಾನೆ. ಇದನ್ನು ಮಾರಾಟ ಮಾಡಲು ಪಾಸ್ ಯಾ ಪರಮೀಟು ಇಲ್ಲವೆಂದು ಹೇಳಿರುತ್ತಾರೆ. ಆಗ ಚಾಸಾ –1 ರವರು ಚೀಲವನ್ನು ಪರಿಶೀಲನೆ ಮಾಡಿದಾಗ ಸರಾಯಿ ಪ್ಯಾಕೇಟಗಳು ಇದುದು ಕಂಡುಬಂದಿರುತ್ತದೆ. 180 ಎಮ್ ಎಲ ಬ್ಯಾಕ್ ಪೈಪರ್ 10 ಪ್ಯಾಕೇಟು , ಹೈ ವರ್ಡ ವಿಸ್ಕಿಯ 16 ಪ್ಯಾಕೇಟ, ಒಟಿ ವಿಸ್ಕಿ 7 ಪ್ಯಾಕೇಟು, ಯು ಬಿ ಬೀಯರ್ ಟೀನ್ –1 , ಮಸ್ಕವಿ ಅರೆಂಜ್ 3 ಬಾಟಲು ಇದ್ದವು. ಇವುಗಳ ಒಟ್ಟು ಮೊತ್ತ ರೂ. 3803 ಆಗಿತ್ತು. ಚಾಸಾ –1 ರವರು ಪಂಚರ ಸಮಕ್ಷಮ ಬಾಟಲಿಗಳನ್ನು ಸೀಲು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿ ಮೊಹರು ಹಾಕಿದ್ದು ಇರುತ್ತದೆ. ನಾನು ದಾಳಿ ಕಾಲಕ್ಕೆ ಚಾಸಾ –1 ರವರಿಗೆ ಸಹಾಯ ಮಾಡಿರುತ್ತೇನೆ.

3 . ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಡಿ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.</u>**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1030 /2024**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ5**

ಸಾಕ್ಷಿದಾರನ ಹೆಸರು : ನಾರಾಯಣ

ತಂದೆಯ ಹೆಸರು : ರಾಯಾ ನಾಯ್ಕು

ವಯಸ್ಸು : 45 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿಗೃಹ, ಸಾಗರ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.07.2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 24.03.2024 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ –1 ರವರು ಮುಟ್ಟಳ್ಳಿ ಬೈ ಪಾಸ್ ಹತ್ತಿರ 2 ಜನ ಸರಾಯಿ ಚೀಲ ಹಾಗೂ ಬಾಟಲಿ ಹಿಡಿದು ಮಾರಾಟ ಮಾಡುವ ಬಗ್ಗೆ ಚಾಸಾ – 7 ರವರು ಮಾಹಿತಿ ನೀಡಿದ್ದು ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಪಡೆದು ಇಬ್ಬರು ಪಂಚರನ್ನು ಠಾಣೆಗೆ ಕರೆದು ವಿಷಯ ತಿಳಿಸಿ ನಾನು, ಚಾಸಾ – 4, 5 , 7 ಮತ್ತು 8 ರವರನ್ನು ಹಾಗೂ ಪಂಚರನ್ನು ಕರೆದು ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. ಗುನ್ನಾ ಸ್ಥಳಕ್ಕೆ ಹೋದಾಗ ಆರೋಪಿಗಳಲ್ಲಿ ಒಬ್ಬನು ಓಡಿ ಹೋಡಿದ್ದು ಒಬ್ಬನನ್ನು ಹಿಡಿದು ಆತನ ಹೆಸರು ಕೇಳಿದಾಗ ಸುನಿಲ ಕುಪ್ಪಯ್ಯ ಗೌಡ ಎಂದು ಹೇಳಿರುತ್ತಾನೆ. ಇದನ್ನು ಮಾರಾಟ ಮಾಡಲು ಪಾಸ್ ಯಾ ಪರಮೀಟು ಇಲ್ಲವೆಂದು ಹೇಳಿರುತ್ತಾರೆ. ಆಗ ಚಾಸಾ –1 ರವರು ಚೀಲವನ್ನು ಪರಿಶೀಲನೆ ಮಾಡಿದಾಗ ಸರಾಯಿ ಪ್ಯಾಕೇಟಗಳು ಇದುದು ಕಂಡುಬಂದಿರುತ್ತದೆ. 180 ಎಮ್ ಎಲಿ ಬ್ಯಾಕ್ ಪೈಪರ್ 10 ಪ್ಯಾಕೇಟು , ಹೈ ವರ್ಡ ವಿಸ್ಕಿಯ 16 ಪ್ಯಾಕೇಟ, ಒಟಿ ವಿಸ್ಕಿ 7 ಪ್ಯಾಕೇಟು, ಯು ಬಿ ಬೀಯರ್ ಟೀನ್ –1 , ಮಸ್ಕವಿ ಅರೆಂಜ್ 3 ಬಾಟಲು ಇದ್ದವು. ಇವುಗಳ ಒಟ್ಟು ಮೊತ್ತ ರೂ. 3803 ಆಗಿತ್ತು. ಚಾಸಾ –1 ರವರು ಪಂಚರ ಸಮಕ್ಷಮ

ಬಾಟಲಿಗಳನ್ನು ಸೀಲು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿ ಮೊಹರು ಹಾಕಿದ್ದು ಇರುತ್ತದೆ. ನಾನು ದಾಳಿ ಕಾಲಕ್ಕೆ ಚಾಸಾ –1 ರವರಿಗೆ ಸಹಾಯ ಮಾಡಿರುತ್ತೇನೆ.

3 . ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಡಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ1242/2024**

**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಮೆಹಬೂಬ
ತಂದೆಯ ಹೆಸರು : ಬಸೀರ ಸಾಬ
ವಯಸ್ಸು : 45 ವರ್ಷ
ಉದ್ಯೋಗ : ಶಾಮಿಯಾನ ಕೆಲಸ
ವಾಸ್ತವ್ಯ : ಜಾಲಿ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಪೊಲೀಸರು ಜಾಲಿ ಪಂಚಾಯತಿ ಹತ್ತಿರ ಕರೆದು ಒಂದು ಸಹಿ ಮಾಡಲು ಹೇಳಿದ್ದರು. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಯು ನಿಪಿ-1ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 26.04.2024ರಂದು ಚಾಸ -1ರವರು ನನಗೆ ಹಾಗೂ ಚಾಸಾ -3ರವರಿಗೆ ಜಾಲಿ ದೇವಿನಗರದ ಹತ್ತಿರ ಆರೋಪಿಯ ಅಕ್ರಮವಾಗಿ ಸಾರ್ವಜನಿಕರಿಗೆ ಸರಾಯಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಇತ್ತು ನನಗೆ ಪಂಚರಾಗಲು ಕರೆದಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿ ಕಡೆಯಿಂದ 90 ಎಮ್ ಎಲ್ ನ ಹೈ ವರ್ಡ ವಿಸ್ಕಿಯ 10 ಪ್ಯಾಕೇಟುಗಳನ್ನು ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅಲ್ಲದೇ ಗುನ್ನಾ ಸ್ಥಳದಲ್ಲಿ 2 ಪ್ಲಾಸ್ಟಿಕ್ ಲೋಟ,90 ಎಮ್ ಎಲ್ ಹೈ ವರ್ಡ ವಿಸ್ಕಿಯ 2 ಖಾಲಿ ಪ್ಯಾಕೇಟುಗಳು , ರೂ. 220 ಹಾಗೂ 1 ಚೀಲವನ್ನು ಪೊಲೀಸರು ಜಪ್ತು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 6.45 ರಿಂದ 7.45

ಗಂಟೆಯವರೆಗೆ ಸ್ಥಳದಲ್ಲಿ ಬರೆದು ಮುಗಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಫೋಟೋ ನೋಡಿ ಗುರುತಿಸಿರುತ್ತಾರೆ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲ ಎಂದ ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2006/2022**

**ಸಿ.ಡಬ್ಲ್ಯೂಃ 8, ಪಿ.ಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು : ಸುಮಾ ಬಿ .

ತಂದೆಯ ಹೆಸರು : ಜಿ ಕೆ ಭಾಸ್ಕರ

ವಯಸ್ಸು : 31 ವರ್ಷ

ಉದ್ಯೋಗ : ಪೊಲೀಸ್ ಉಪ ನಿರೀಕ್ಷಕರು, ಉಡುಪಿ

ವಾಸ್ತವ್ಯ : ಉಡುಪಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 22.02.2022 ರಿಂದ 2023 ರ ಜನೇವರಿ ತಿಂಗಳವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 18.04.2022 ರಂದು ಠಾಣೆಯಲ್ಲಿದ್ದಾಗ ಚಾಸಾ – 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 49/2022 ರಂತೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ನೀಡಿದ್ದು ಇರುತ್ತದೆ ಹಾಗೂ ಪಂಚನಾಮೆ ಮತ್ತು 20 ಕೆಜಿ ಮಾಂಸ ಹಾಗೂ ಒಮಿನಿ ಕಾರು ಮತ್ತು ಆರೋಪಿ ಯನ್ನು ಹಾಜರುಪಡಿಸಿರುತ್ತೇನೆ. ಅದೇ ದಿನ ಜಾನುವಾರಿನ ಮಾಂಸ ಪರಿಶೀಲನೆ ಮಾಡಲು ಪಶುವೈದ್ಯಾಧಿಕಾರಿಗಳಿಗೆ ಕೋರಿಕೆ ಪತ್ರ ನೀಡಿದ್ದು ಇರುತ್ತದೆ. ಅದೇ ದಿನ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ– 3 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಗುನ್ನಾ ಸ್ಥಳದ ಮಹಜರು ಮಾಡಿದ್ದು ಇರುತ್ತದೆ. ಪೊಟೋವನ್ನು ಪಡೆದಿರುತ್ತೇನೆ. ಅದೇ ದಿನ ಜಾನುವಾರುಗಳ ಮಾಂಸವನ್ನು ಪಶುವೈದ್ಯಾಧಿಕಾರಿಗಳು ಪರೀಕ್ಷೆ ಮಾಡಿದ ನಂತರ ವಿಲೇವಾರಿಗೆ ಎಸಿ ನ್ಯಾಯಾಲಯಕ್ಕೆ ನಿವೇದಿಸಿ ಚಾಸಾ –7 ರವರಿಗೆ ಕೋರಿಕೆ ಪತ್ರ ನೀಡಿದ್ದು ಇರುತ್ತದೆ. ಅದೇ ದಿನ ಆರೋಪಿಗೆ ನೊಟೀಸನ್ನು ನೀಡಿದ್ದು ಹಾಗೂ ವಾಹನಕ್ಕೆ ಸೇರಿದ ದಾಖಲಾತಿ ಪಡೆದಿರುತ್ತೇನೆ. ಅದೇ ದಿನ ಚಾಸಾ 4 ಮತ್ತು 5 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ ಹಾಗೂ ಅದೇ ದಿನ ಚಾಸಾ 5 ರವರಿಂದ 65 ಬಿ ಪ್ರಮಾಣಪತ್ರ ಪಡೆದಿರುತ್ತೇನೆ. ದಿಃ 21.04.2022 ರಂದು ಚಾಸಾ –7 ರವರು ನೀಡಿದ ಪ್ರಮಾಣಪತ್ರ

ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿಃ 11.09.2022 ರಂದು ಚಾಸಾ -6 ರವರು ನೀಡಿದ ಪ್ರಮಾಣಪತ್ರವನ್ನು ಕಡತಕ್ಕೆ ಆಳವಡಿಸಿರುತ್ತೇನೆ. ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ನೀಡಿದ್ದು ಇರುತ್ತದೆ.

3. ಸಾಕ್ಷಿಯು ನಿಪಿ-5 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಪೊಟೋ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾಂಸ ವಿಲೇವಾರಿಗೆ ಎಸಿ ಕಚೇರಿಗೆ ನೀಡಿದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪಶು ವೈಧ್ಯಾಧಿಕಾರಿಗೆ ಬರೆದ ಕೋರಿಕೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 12 ಎಂದು , ಸಾಕ್ಷಿಯ ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು.ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ ಎಲ ವಕೀಲರಿಂದ,**

ಘಟನೆ ನಡೆದಾಗ ನಾನು ನಮ್ಮ ಠಾಣೆಯ ವ್ಯಾಪ್ತಿಯಲ್ಲಿ ಇದ್ದೇನು. ಘಟನೆಯ ಬಗ್ಗೆ ಮಾಹಿತಿಯನ್ನು ಚಾಸಾ -1 ರವರು ಮಾಹಿತಿ ನೀಡಿದ್ದಾರೆ. ಠಾಣೆಗೆ ಬಂದು ಚಾಸಾ -1 ರವರು ದೂರು ನೀಡಿದ್ದಾರೆ. ತನಿಖಾ ಕಾಲಕ್ಕೆ ನಾನು ಗುನ್ನಾ ಸ್ಥಳಕ್ಕೆ ಹೋಗಿರುತ್ತೇನೆ. ಗುನ್ನಾ ಸ್ಥಳದಲ್ಲಿ ಇದ್ದ ಸಾರ್ವಜನಿಕರನ್ನು ಸಾಕ್ಷಿದಾರರಾಗಿ ಮಾಡಿಲ್ಲ ಆದರೆ ವಿಚಾರಣೆ ಮಾಡಿರುತ್ತೇನೆ. ಠಾಣೆಯ ಸಿಬ್ಬಂದಿಗಳನ್ನು ಮಾತ್ರ ಸಾಕ್ಷಿದಾರರಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ -5 ರವರು ಪೊಟೊವನ್ನು ಗುನ್ನಾ ಸ್ಥಳದಲ್ಲಿ ತೆಗೆದಿರುತ್ತಾರೆ. ಯಾವ ಮೊಬೈಲಿನಿಂದ ಪೊಟೋ ತೆಗೆದ ಬಗ್ಗೆ ನನಗೆ ನೆನಪು ಇಲ್ಲ. ಗುನ್ನಾ ಸ್ಥಳಕ್ಕೆ ನಾನು ಹೋದಾಗ ಪಂಚರು ಹಾಜರಿದ್ದರು. ಪಂಚರನ್ನು ಸಿಬ್ಬಂದಿ ಮೂಲಕ ಕರೆಯಿಸಿರುತ್ತೇವೆ. ಪೊಟೋಗಳನ್ನು ಇಂದು ನ್ಯಾಯಾಲಯದ ಮುಂದೆ ನೋಡಿರುತ್ತೇನೆ. ಕಲಂ 65 ಬಿ ಪ್ರಮಾಣಪತ್ರವು ಸುಳ್ಳಾಗಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಯಾವುದೇ ಸ್ವತಂತ್ರ ಸಾಕ್ಷಿದಾರರು ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೇ

ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡಲು ಸುಳ್ಳು ದೊಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗುನ್ಹಾ ಸ್ಥಳದ ನಮ್ಮ ಠಾಣೆಯಿಂದ ಅಂದಾಜು ಎರಡುವರೆ ಕಿಮಿ ದೂರದಲ್ಲಿದೆ. ಗುನ್ಹಾ ಸ್ಥಳವು ಶಹರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ. ಪಂಚರು ನಮ್ಮ ಠಾಣೆಯ ಹಲವಾರು ಪ್ರಕರಣದಲ್ಲಿ ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿಯಲ್ಲ. ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ಚಾಸಾ −1 ರವರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ2006 /2022**

**ಸಿ.ಡಬ್ಲ್ಯೂಃ 7, ಪಿ.ಡಬ್ಲ್ಯೂಃ 7**

ಸಾಕ್ಷಿದಾರರ ಹೆಸರು : ಸೌಜಿಯಾ ಸೋಮನ್

ತಂದೆಯ ಹೆಸರು : ವಿ ಎ ಸೋಮನ್

ವಯಸ್ಸು : 42 ವರ್ಷ

ಉದ್ಯೋಗ : ಹಿರಿಯ ಆರೋಗ್ಯ ನಿರೀಕ್ಷಕರು , ಭಟ್ಕಳ ಪುರಸಭೆ

ವಾಸ್ತವ್ಯ : ಬಿ ಟಿ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2006 ರಿಂದ ಇಲ್ಲಿಯವರೆಗೆ ಭಟ್ಕಳ ಪುರಸಭೆಯಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 18.04.2022 ರಂದು ಶಹರ ಪೊಲೀಸ್ ಠಾಣೆಯಿಂದ 80 ಕೇಜಿ ಜಾನುವಾರದ ಮಾಂಸ ಜಪ್ತು ಪಡಿಸಿದ್ದು ಇರುತ್ತದೆ ಎಂದು ಸದರಿ ಮಾಂಸ ದಪನ್ ಮಾಡಲು ಪುರಸಭೆಗೆ ಅರ್ಜಿ ಸಲ್ಲಿಸಿದ್ದು ಅದರಂತೆ ನಾನು ಬಿಲಾಲ ಕಂಡದ ಸಾಗರ ರಸ್ತೆಯಲ್ಲಿ ಇರುವ ಘನ ತ್ಯಾಜ್ಯ ವಸ್ತು ವಿಲೇವಾರಿ ಘಟ್ಟದಲ್ಲಿ ಪೊಲೀಸರ ಸಮಕ್ಷಮ ಧಪನ್ ಮಾಡಿದ ಬಗ್ಗೆ ದಿಃ 21.04.2022 ರಂದು ವರದಿ ನೀಡಿದ್ದು ಇರುತ್ತದೆ.

3. ಸಾಕ್ಷಿಯು ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 6 ಎಂದು ಗುರುತಿಸಲಾಯಿತು. ಸಾಕ್ಷಿಯು ದಪನ್ ಮಾಡಿದ ಬಗ್ಗೆ ನೀಡಿದ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 7 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಆರ್ ಎಲ್ ವಕೀಲರಿಂದ,**

ಭಟ್ಕಳ ಪುರಸಭೆಯಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರಾಗಿರುತ್ತೇನೆ. ಚಾಸಾ -1 ರವರು ನಮಗೆ ಮಾಂಸ ಧಪನ್ ಮಾಡಲು ಮಾಹಿತಿ ನೀಡಿದ್ದರು. ದಪನ್ ಮಾಡಲು ನ್ಯಾಯಾಲಯದಿಂದ ನಾವು ಆದೇಶವನ್ನು ಪಡೆದಿಲ್ಲ. ಮಾಂಸ ಆರೋಪಿಯಿಂದ ಜಪ್ತು ಮಾಡಿದ್ದ ಬಗ್ಗೆ ಪತ್ರದಲ್ಲಿ ಬರೆದಿದ್ದರು. ಅಂದಾಜು 80 ಕೆ ಜಿ ಮಾಂಸವನ್ನು ದಪನ್ ಮಾಡಿದ್ದೇವೆ. ಮಾಂಸ ಧಪನ್ ಮಾಡಲು 4 - 5 ಪೀಟ್

ಆಳ ಹೊಂಡ ತೆಗೆದು ದಪನ ಮಾಡಿರುತ್ತೇವೆ. ನಾವು ಧಪನ್ ಮಾಡಲು ಹೋಗಿದ್ದೇ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆ ಮೇರೆಗೆ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 801/2023**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 5**

| | | |
|---|---|---|
| ಸಾಕ್ಷಿದಾರರ ಹೆಸರು | : | ಹೆಚ್ ಸುಧಾಕರ |
| ತಂದೆಯ ಹೆಸರು | : | ತಬೂರಾ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು, ಮೂಡಬಿದ್ರೆ, ಮಂಗಳೂರು |
| ವಾಸ್ತವ್ಯ | : | ಮಂಗಳೂರು |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 15 /02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಮಾರ್ಚ 2023 ರಿಂದ ಸೆಪ್ಟೇಂಬರ್ 2023 ರವರೆಗೆ ಭಟ್ಕಳ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ದಿಃ 05.06.2023 ರಂದು ಚಾಸಾ –1 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದಿರುತ್ತೇನೆ. ಭಟ್ಕಳ ತಾಲೂಕಿನ ಕೋಣಾರ ತಾಲೂಕಿನ ಮುಗಳ್ಳಿ ಗ್ರಾಮದ ಮನೆಯಲ್ಲಿ ಎಂಟುವರೆ ಲೀಟರ್ ಕಳ್ಳಬಟ್ಟಿ ಸರಾಯಿ ಕಂಡುಬಂದಿದ್ದು ಇರುತ್ತದೆ. ಅದರಲ್ಲಿ ಅರ್ದ ಲೀಟರ್ ನ 2 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ತಹಶೀಲ್ದಾರರಾವರಿಗೆ ದಿಃ 15.07.2023 ರಂದು ಜಾಗದ ಮಾಲೀಕತ್ವದ ಬಗ್ಗೆ ಪತ್ರ ಬರೆದಿದ್ದು ಇರುತ್ತದೆ. ನಂತರ ಮನೆಯ ದಾಖಲಾತಿ ಇಲ್ಲ ಎಂದು ಹೇಳಿದ ನಂತರ ವಲಯ ಅರಣ್ಯ ಅಧಿಕಾರಿಗೆ ಈ ಬಗ್ಗೆ ಪತ್ರ ಬರೆದಿರುತ್ತೇನೆ. ಅವರು ದಿಃ 16.08.2023 ರಂದು ಸದರಿ ಜಾಗ ಸ್ವಂತ ಜಾಗ ಇಲ್ಲವೆಂದು ಅದು ಅತಿಕ್ರಮಣ ಜಾಗವೆಂದು ಅರಣ್ಯ ಇಲಾಖೆಯವರು ಪತ್ರ ಬರೆದಿರುತ್ತಾರೆ. ಕೃತ್ಯ ನಡೆದ ಸ್ಥಳದ ಬಗ್ಗೆ ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆದಿದ್ದು ನಂತರ ಅವರ ಮೂಲಕ ಪತ್ರ ಬಂದಿರುತ್ತದೆ. ಸ್ಥಳಕ್ಕೆ ಚಾಸಾ – 3 ಹಾಗೂ ನಾವೆಲ್ಲರೂ ಹೋಗಿ ಫೋಟೋ ತೆಗೆದಿರುತ್ತೇವೆ ಹಾಗೂ ಸ್ಥಳಪರಿಶೀಲನೆ ಮಾಡಿದ್ದು ಇರುತ್ತದೆ. ಅದರ ಚೆಕ್ಕು ಬಂದಿ, ಪೂರ್ವಕ್ಕೆ ಗೋಮ ಮಾರಾಠಿ ರವರ ಮನೆ. ಪಶ್ಚಿಮಕ್ಕೆ ನಾರಾಯಣ ಇವರ ಮನೆ, ಉತ್ತರಕ್ಕೆ ತೋಟ , ದಕ್ಷಿಣಕ್ಕೆ ಕೊಟ್ಟಿಗೆ ಇರುತ್ತದೆ. ದಾರವಾಡಕ್ಕೆ ಎಪ್ ಎಸ್ ಎಲ್ ಗಾಗಿ ದಿಃ 23.05.2023 ರಂದು ಚಾಸಾ –3 ರವರಿಗೆ ಕಳುಹಿಸಿದ್ದು ದಿಃ 26.05.2023 ಕ್ಕೆ ದಾರವಾಡದಿಂದ ವರದಿ ಬಂದಿರುತ್ತದೆ.

3. ಸಾಕ್ಷಿಯು ಎಪ ಎಸ್ ಎಲ್ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 9 ಎಂದು ಗುರುತಿಸಲಾಯಿತು. ಸಾಕ್ಷಿಯು ತಹಶೀಲ್ದಾರರವರಿಗೆ ಬರೆದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 10 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ವಲಯ ಅರಣ್ಯ ಅಧಿಕಾರಿಯವರಿಗೆ ಬರೆದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ವಲಯ ಅರಣ್ಯ ಅಧಿಕಾರಿಗಳು ನೀಡಿದ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 12 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 12 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸಮಾಜ ಕಲ್ಯಾಣ ಇಲಾಖೆಯವರಿಗೆ ಬರೆದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 13 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 13 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸಮಾಜ ಕಲ್ಯಾಣ ಇಲಾಖೆಯವರು ನೀಡಿದ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 14 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪರಿಶೀಲನಾ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 15 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮುದ್ದೆ ಮಾಲು -1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಚಾಸಾ -2 ಮತ್ತು 5 ರವರನ್ನು ಹೊರತುಪಡಿಸಿ ಉಳಿದ ಎಲ್ಲಾ ಸಾಕ್ಷಿದಾರರು ನಮ್ಮ ಸಿಬ್ಬಂದಿಗಳು ಆಗಿದ್ದಾರೆ. ಸದರಿ ಪ್ರಕರಣದಲ್ಲಿ ಮೊದಲು ಪಂಚನಾಮೆ ಮಾಡಿ ನಂತರ ಪ್ರ ವ ವರದಿಯನ್ನು ಗುನ್ನಾ ಸ್ಥಳದಲ್ಲಿ ದಾಖಲಿಸಿರುತ್ತೇವೆ. ಪ್ರ ವ ವರದಿಯನ್ನು ಚಾಸಾ - 1 ರವರು ದಾಖಲಿಸಿಕೊಂಡಿರುತ್ತಾರೆ. ನಮ್ಮ ಇಲಾಖೆಯ ಹೆಚ್ಚಿನ ಪ್ರಕರಣದಲ್ಲಿ ಚಾಸಾ -3 ಮತ್ತು 4 ರವರೇ ಪಂಚಸಾಕ್ಷಿದಾರರು ಆಗಿರುತ್ತಾರೆ. ಪಂಚನಾಮೆ ಕಾಲಕ್ಕೆ ನಮ್ಮ ಹಾಗೂ ಪಂಚರ ಅಂಗಶೋಧನೆ ಬಗ್ಗೆ ಪ್ರತ್ಯೇಕ ಪಂಚನಾಮೆಯನ್ನು ಮಾಡಿಲ್ಲ. ತನಿಖಾ ಕಾಲದಲ್ಲಿ ನಾನು ಗುನ್ನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ದಾಳಿ ಕಾಲಕ್ಕೆ ನಮ್ಮ ಇಲಾಖೆಗೆ ಸಿಬ್ಬಂದಿಗಳು ಯಾವ ವಾಹನದಲ್ಲಿ ಹೋಗಿದ್ದರು ಎಂದು ನಾನು ಕೇಳುವ ಅಗತ್ಯ ಇಲ್ಲದ ಕಾರಣ ನಾನು ಕೇಳಿರುವುದಿಲ್ಲ. ಯಾರೆಲ್ಲಾ ದಾಳಿಗೆ ಹೋಗಿದ್ದರೆಂದು ಮಹಜರಿನಲ್ಲಿ ಕಂಡುಬರುತ್ತದೆ. ಚಾಸಾ -1 ರವರು ಸೃಷ್ಟಿಸಿದ ದಾಖಲೆಗಳ ಆದಾರದ ಮೇಲೆ ನಾನು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ನಾನು ಸ್ವತಂತ್ರವಾಗಿ ಸದರಿ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಹಾಗೂ ಯಾವುದೇ ತನಿಖೆ ಮಾಡಿಲ್ಲ. ಚಾಸಾ -1 ರವರೇ ಸಾಕ್ಷಿದಾರರ ಹೇಳಿಕೆ ಪಡೆದಿದ್ದಾರೆ ಹಾಗೂ ತನಿಖೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ತೆಗೆದ ಪೊಟೋಗಳು ಕಡತದಲ್ಲಿ ಇವೆ. ಇಂದು ನ್ಯಾಯಾಲಯದ ಮುಂದೆ ಸದರಿ ಪೊಟೋಗಳನ್ನು

ನೋಡಿರುತ್ತೇನೆ. ಗುನ್ಹಾ ಸ್ಥಳದ ಅಕ್ಕಪಕ್ಕ ವಾಸ್ತವ್ಯದ ಮನೆಗಳು ಇವೆ. ನನ್ನ ತನಿಖಾ ಕಾಲದಲ್ಲಿ ಅಕ್ಕಪಕ್ಕದವರನ್ನು ವಿಚಾರಣೆ ಮಾಡಿಲ್ಲ ಕಾರಣ ಅಲ್ಲಿ ಯಾರು ಇರಲಿಲ್ಲ. ನಾನು ಗುನ್ಹಾ ಸ್ಥಳಕ್ಕೆ ಹೋದಾಗ ಚಾಸಾ – 3 ರವರು ನನ್ನ ಜೊತೆ ಬಂದಿದ್ದರು. 2 ಲೀಟರ್ ನ 2 ಪ್ಲಾಸ್ಟಿಕ್ ಬಾಟಲಿಗಳನ್ನು ನಾವು ಜಪ್ತು ಮಾಡಿರುತ್ತೇವೆ. ಜಪ್ತು ಪಡಿಸಿದ 2 ಪ್ಲಾಸ್ಟಿಕ್ ಬಾಟಲಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕೆ ಸಂಕೆ ತೋರಿಸಲು ಯಾವುದೇ ಸಾಕ್ಷಾದಾರಗಳು ಇಲ್ಲದೆ ಇದ್ದರೂ ಸಹ ನಮ್ಮ ಠಾಣೆಯ ಸಿಬ್ಬಂದಿಯನ್ನು ಉಪಯೋಗಿಸಿಕೊಂಡು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1837/2022**

**ಸಿ.ಡಬ್ಲ್ಯೂಃ 10 , ಪಿ.ಡಬ್ಲ್ಯೂಃ 11**

ಸಾಕ್ಷಿದಾರರ ಹೆಸರು : ಮೊಹಮದ್ ರಿಜವಾನ್

ತಂದೆಯ ಹೆಸರು : ಮೊಹಮದ್ ಜುನೇನ್

ವಯಸ್ಸು : 42 ವರ್ಷ

ಉದ್ಯೋಗ : ಅಂಗಡಿ

ವಾಸ್ತವ್ಯ : ಸುಲ್ತಾನಸ್ಟ್ರೀಟ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 14/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ಅಲಾಫ್ರಾ ಮದುವೆ ಹಾಲ್ ನನಗೆ ಸಂಬಂಧಿಸಿದ್ದು ಆಗಿರುತ್ತದೆ. ನನಗೆ ಅಲ್ಲಿ ಯಾವುದೇ ಮದುವೆ ಸಮಾರಂಭ ಇದ್ದರೂ ಸಹ ನನಗೆ ಮಹಿತಿ ಇರುತ್ತದೆ. ಅಲ್ಲಿ 2 ಜನ ಕೆಲಸ ಮಾಡುತ್ತಾರೆ. ದಿಃ 26.01.2022 ರಂದು ಅಲಾಫ್ರಾ ಹಾಲ್ ನಲ್ಲಿ ಒಂದು ಮದುವೆ ಇತ್ತು. ಮದುವೆ ಕಾರ್ಯ ನಡೆಯುತ್ತಿರುವಾಗ ಚಾಸಾ –1 ರವರಿಗೆ ಆರೋಪಿಯು ಅವಾಚ್ಯವಾಗಿ ವ್ಯವಹಾರ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ. ಚಾಸಾ –6 ರವರಿಗೆ ನಾನು ಘಟನೆ ಕುರಿತು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಇದನ್ನು ಹೊರತುಪಡಿಸಿ ಚಾಸಾ –6 ಹಾಗೂ ಆರೋಪಿ ನಡುವೆ ಚಿನ್ನದ ವ್ಯವಹಾರದ ಪಾಲುಗಾರಿಕೆ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಘಟನೆ ಹೊರತುಪಡಿಸಿ ದಿಃ 14.01.2022 ರಂದು ಈ ಆರೋಪಿಯು ಸರಕಾರಿ ಆಸ್ಪತ್ರೆ ಭಟ್ಕಳದಲ್ಲಿ ಚಾಸಾ –1 ರವರ ಜೊತೆ ಅನುಚಿತವಾಗಿ ವರ್ತನೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಿಃ 01.02.2022 ರಂದು ಚಾಸಾ –1 ರವರು ಹಳೆ ಬಸ್ಸು ನಿಲ್ದಾಣದ ಬಗ್ಗೆ ಹೋಗುವಾಗ ಆರೋಪಿ ಅವಾಚ್ಯ ಹಾಗೂ ಅಸಭ್ಯವಾಗಿ ವರ್ತನೆ ಮಾಡಿದ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಸದರಿ ಮದುವೆ ಮಂಟಪದ ನಾನು ಮುಖ್ಯಸ್ಥನಾಗಿದ್ದು ಅಲ್ಲಿ ನಡೆಯುವ ಎಲ್ಲಾ ಕಾರ್ಯಕ್ಕೆ ಸಂಬಂಧಿಸಿದಂತೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಪ ಜಿ ವಕೀಲರಿಂದ,**

ಯಾವ ದಿನಾಂಕಕ್ಕೆ ಯಾರ ಮದುವೆ ಆಗುತ್ತದೆ ಎಂದು ನಮ್ಮ ಬಳಿ ದಾಖಲೆಗಳು ಇರುತ್ತವೆ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1837/2022**

**ಸಿ.ಡಬ್ಲ್ಯೂಃ 6 , ಪಿ.ಡಬ್ಲ್ಯೂಃ 10**

ಸಾಕ್ಷಿದಾರರ ಹೆಸರು : ಮೊಹಮದ್ ಅನ್ಸಾರ್

ತಂದೆಯ ಹೆಸರು : ಮೊಹಮದ್ ಹುಸೇನ್ ಅಹಮದ್

ವಯಸ್ಸು : 47 ವರ್ಷ

ಉದ್ಯೋಗ : ಜ್ಯೂವೇಲರಿ ವ್ಯಾಪಾರ

ವಾಸ್ತವ್ಯ : ಮಾರಿಕಟ್ಟಾ ಮುಖ್ಯ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 14/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 14.01.2022 ರಂದು ನನ್ನ ಹೆಂಡತಿ ಚಾಸಾ –1 ರವರಿಗೆ ಕೈ ನೋವು ಇದ್ದ ಕಾರಣ ನಾನು ಹಾಗೂ ಚಾಸಾ –1 ಸರಕಾರಿ ಆಸ್ಪತ್ರೆಗೆ ರಾತ್ರಿ 10.30 ಗಂಟೆಗೆ ಹೋಗಿದ್ದು ಇರುತ್ತದೆ. ನಾನು ವೈದ್ಯರ ಬಳಿ ಮಾತನಾಡುತ್ತಿದ್ದಾಗ ನನ್ನ ಹೆಂಡತಿ ಬೆಡ್ಡಿನ ಮೇಲೆ ಮಲಗಿದ್ದಳು. ಆಗ ಆರೋಪಿ ಅಲ್ಲಿ ಬಂದು ತನ್ನ ಬಟ್ಟೆ ಎತ್ತಿ ಪ್ರೈವೇಟ್ ಅಂಗವನ್ನು ನನ್ನ ಹೆಂಡತಿಗೆ ತೋರಿಸಿ ಕೆಟ್ಟದಾಗಿ ಮಾತನಾಡಿದ್ದು ಆಗ ನನ್ನ ಹೆಂಡತಿಯು ನನಗೆ ಕರೆದಳು. ಆಗ ನಾನು ಅಲ್ಲಿ ಹೋಗಿ ನೋಡಲಾಗಿ ಆರೊಪಿ ನನಗೆ ನನ್ನ ಹೆಂಡತಿಯನ್ನು ನನ್ನ ಬಳಿ ಕಳುಹಿಸು ಎಂದು ಅವಾಚ್ಯ ಶಬ್ದಗಳಿಂದ ಮಾತನಾಡಿರುತ್ತಾರೆ. ದಿಃ 26.01.2020 ರಂದು ನಾನು ಹಾಗೂ ಚಾಸಾ –1 ಅಲಾಫ್ರಾ ಹಾಲ್ ನಲ್ಲಿ ಮದುವೆಗೆ ಹೋಗಿದ್ದಾಗ ಮದ್ಯಾಹ್ನ 2.30 ಗಂಟೆಗೆ ಹಾಲ್ ನಲ್ಲಿ ನನ್ನ ಹೆಂಡತಿ ಅಲ್ಲಿ ನಿಂತಾಗ ಆರೋಪಿಯು ಅಲ್ಲಿ ಬಂದು ಅವಳಿಗೆ ಅವಾಚ್ಯವಾಗಿ ಮಾತನಾಡಿ ನನಗೆ ನನ್ನ ಹಂಡತಿಯನ್ನು ನನ್ನ ಹತ್ತಿರ ಕಳುಹಿಸು ನಾನು ಹೇಳಿದ್ದೆಲ್ಲಾ ಮಾಡುತ್ತೇನೆ ಎಂದು ಹೇಳಿರುತ್ತಾನೆ. ಆಗ ನನ್ನ ಹೆಂಡತಿ ಅರೋಪಿಗೆ ತನ್ನ ಚಪ್ಪಲಿ ತೋರಿಸಿದಾಗ ಆರೋಪಿ ಅಲ್ಲಿಂದ ಓಡಿರುತ್ತಾನೆ.ದಿಃ 01.02.2022 ರಂದು ನಾನುಹಾಗೂ ಚಾಸಾ –1 ರವರ ಸಂಜೆ 6.30 ಗಂಟೆಗೆ ಬೈಕಿನ ಮೇಲೆ ಭಟ್ಕಳ ಹಳೆ ಬಸ್ಸು ನಿಲ್ದಾಣದ ಹತ್ತಿರ ಹೋಗುತ್ತಿದ್ದಾಗ ಆರೋಪಿಯು ಬುಲೇಟ್ ವಾಹನದ ಮೇಲೆ ಬಂದು ನಮ್ಮ ಬೈಕಿಗೆ ಅಡ್ಡಲಾಗಿ ನಿಂತು ಜೋರಾಗಿ ಕಿರುಚಿದ್ದು ನಂತರ ನನ್ನ ಹೆಂಡತಿಯ ಕಿವಿ ಹತ್ತಿರ ಬಳಿ ಬಂದು ಕಿವಿಯಲ್ಲಿ ನನ್ನ ಜೊತೆಗೆ ಮಲಗಲು ಬಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಮಾತನಾಡಿರುತ್ತಾನೆ. ಆಗ ನಾನು ಮತ್ತು ನನ್ನ ಹೆಂಡತಿ ಮನಗೆ ವಾಪಸ್ಸು ಬಂದು ನಂತರ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇವೆ. ನಾನು ಪೊಲೀಸರ ಮುಂದೆ ಹಾಗೂ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು ಆಲಿಸಿ ನೀಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2023**

**ಸಾಕ್ಷಿಃ ಸಿಡಬ್ಲ್ಯೂಃ 6, ಪಿ.ಡಬ್ಲ್ಯೂಃ 5**

| | |
|---|---|
| ಸಾಕ್ಷಿದಾರರ ಹೆಸರು | : ಚಂದ್ರ ಮೊಗವೀರ |
| ತಂದೆಯ ಹೆಸರು | : ದಿವಂಗತ ನಾರಾಯಣ ಮೊಗವೀರ |
| ವಯಸ್ಸು | : 57 ವರ್ಷ |
| ಉದ್ಯೋಗ | : ಅಬಕಾರಿ ಉಪ ನಿರೀಕ್ಷಕರು, ಪ್ರಸ್ತುತ ಉಡುಪಿ ವಲಯ |
| ವಾಸ್ತವ್ಯ | : ಉಡುಪಿ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 14/09/2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 27.02.2021 ರಿಂದ 25.09.2023 ರವರೆಗೆ ಅಬಕಾರಿ ಉಪ ನಿರೀಕ್ಷಕನಾಗಿ ಭಟ್ಕಳ ವಲಯದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ಸದರಿ ಪ್ರಕರಣದಲ್ಲಿ ಹೆಚ್ಚಿ ನ ತನಿಖೆಯನ್ನು ಚಾಸಾ –1 ರವರು ನಡೆಸಿರುತ್ತಾರೆ. ಮುಂದಿನ ತನಿಖೆಗಾಗಿ ದಿಃ 21.06.2023 ರಂದು ಕಡತವನ್ನು ನನಗೆ ಹಸ್ತಾಂತರಿಸಿದ್ದು ನಾನು ಬಾಗಶಃ ತನಿಖೆ ನಡೆಸಿರುತ್ತೇನೆ. ಪ್ರರಕಣದ ದಾಖಲಾತಿ ಪರಿಶೀಲನೆ ಮಾಡಿದ್ದು ಇರುತ್ತದೆ. ದಿಃ 12.07.2023 ರಂದು ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಪರಿಶೀಲನೆ ಮಾಡಿರುತ್ತೇನೆ. ಅರೋಪಿಯನ್ನು ಗುರುತಿಸಿರುತ್ತೇನೆ. ಸ್ಥಳ ಪರಿಶೀಲನೆ ನಕ್ಷೆ ತಯಾರಿಸಿರುತ್ತೇನೆ. ಪೊಟೋವನ್ನು ತೆಗೆದಿರುತ್ತೇನೆ. ಎಲ್ಲಾ ದಾಖಲಾತಿಗಳು ಆರೋಪಿತರು ಆರೋಪ ಮಾಡಿದ ಬಗ್ಗೆ ಸಾಬಿತಾದ ಕಾರಣ ದಿಃ 30.07.2023 ರಂದು ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

3. ಸಾಕ್ಷಿಯು ಮುದ್ದೆಮಾಲು –1 ನ್ನು ನೋಡಿ ಗುರುತಿಸಿದ್ದು ಇರುತ್ತದೆ. ಆರೊಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ. ಸಾಕ್ಷಿಯು ನಕ್ಷೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 13 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 13 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಚಾಸಾ – 5 ರವರನ್ನು ಹೊರತುಪಡಿಸಿ ಉಳಿದೆಲ್ಲಾ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ನಾನು ಹಾಗೂ ಚಾಸಾ – 1 ರವರು ದಾಖಲಿಸಿದ ಎಲ್ಲಾ ಪ್ರಕರಣದಲ್ಲಿ ಚಾಸಾ 2 ಮತ್ತು 3 ರವರೇ ಪಂಚರಾಗಿರುತ್ತಾರೆ. ಸದರಿ ಪ್ರಕರಣದಲ್ಲಿ ಮೊದಲು ಪಂಚನಾಮೆ ಮಾಡಿ ನಂತರ ದೂರನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಚಾಸಾ –1 ರಿಂದ 4 ರವರು ತಮ್ಮ ಅಂಗಶೋಧನೆ ಮಾಡಿಕೊಂಡ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಅಂಗಶೋಧನಾ ಪಂಚನಾಮೆಯನ್ನು ಪ್ರತ್ಯೇಕವಾಗಿ ಕಡತಕ್ಕೆ ಆಳವಡಿಸಿಕೊಂಡಿಲ್ಲ. ಸದರಿ ಪ್ರರಕಣದಲ್ಲಿ ಪಂಚನಾಮೆ ಕಾಲಕ್ಕೆ ಪೊಟೋ ತೆಗೆದ ಬಗ್ಗೆ ತಿಳಿದುಕೊಂಡಿರುತ್ತೇನೆ. ಪೊಟೋ ತೆಗೆದ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖ ಮಾಡಿರುತ್ತೇವೆ. ಅಂತ ಪೊಟೋ ಹಾಗೂ ಸಿಡಿಯನ್ನು ತನಿಖೆಯಲ್ಲಿ ಆಳವಡಿಸಿಕೊಂಡಿರುತ್ತೇನೆ. ಅಂತಹ ಪೊಟೋ ಹಾಗೂ ಸಿಡಿಯನ್ನು ಇಂದು ನ್ಯಾಯಾಲಯದಲ್ಲಿ ನಾನು ನೋಡಿಲ್ಲ. ಗುನ್ನಾ ಸ್ಥಳ ಜನನಿಬೀಡ ಇರುವ ಸ್ಥಳ ಆಗಿದೆ ಎಂದರೆ ಸರಿ. ಕಡತ ನನಗೆ ಹಸ್ತಾಂತರಿಸುವ ಕಾಲಕ್ಕೆ ವಶಪಡಿಸಿಕೊಂಡ ಮಾಧರಿ ತೆಗೆದ ಬ್ಯಾಕ್ ಪೈಪರ್ ವಿಸ್ಕಿಯ 6 ಪ್ಯಾಕೇಟುಗಳು ಹಾಗೂ ಒಲ್ಡ ಟ್ರಾವರ್ ವಿಸ್ಕಿಯ 7 ಪ್ಯಾಕೇಟುಗಳನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ಜಪ್ತು ಮಾಡಿದ ಎಲ್ಲಾ ಮುದ್ದೆಮಾಲುಗಳನ್ನು ನನಗೆ ತೋರಿಸಿ ಕಚೇರಿಯಲ್ಲಿ ಇಟ್ಟಿದ್ದರು.ದೋಷಾರೋಪಣಾ ಪಟ್ಟಿ ಸಲ್ಲಿಸುವ ಕಾಲಕ್ಕೆ ಜಪ್ತು ಮಾಡಿದ ಎಲ್ಲಾ ಪ್ಯಾಕೇಟುಗಳ ಬಗ್ಗೆ ಉಲ್ಲೇಖ ಮಾಡಿಲ್ಲ. ಮುದ್ದೆ ಮಾಲನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಠಾಣೆಯ ಅಂಕೆ ಸಂಕೆಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾೆಮಯನ್ನು ನಮ್ಮ ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ

ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2023**

**ಸಾಕ್ಷಿಃ ಸಿಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

| | |
|---|---|
| ಸಾಕ್ಷಿದಾರನ ಹೆಸರು | : ಮಂಜುನಾಥ ಕೆ. ನಾಯ್ಕ |
| ತಂದೆಯ/ಗಂಡನ ಹೆಸರು | :ಕಾಮೇಶ್ವರ ನಾಯ್ಕ |
| ವಯಸ್ಸು | : 51 ವರ್ಷ |
| ಉದ್ಯೋಗ | : ಅಬಕಾರಿ ಮುಖ್ಯ ಪೇದೆ , ಕುಮಟಾ ವಲಯ |
| ವಾಸ್ತವ್ಯ | : ಕುಮಟಾ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 14/02/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು 2005 ರಿಂದ ಪೆಬ್ರುವರಿ 2024 ರಿಂದ ಪೇದೆ ಆಗಿ ಭಟ್ಕಳ ವಲಯ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ21.04.2023 ರಂದು ಅಬಕಾರಿ ನಿರೀಕ್ಷಕರ ಜೊತೆ ಭಟ್ಕಳ ವಲಯದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ –2 ರವರು ಗಜಾನನ ಅವರು ತಾನು ಗಸ್ತು ಕರ್ತವ್ಯದಲ್ಲಿದ್ದಾಗ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ವಿಸ್ಕಿ ಚೀಲ ತಾಗಿಸಿ ಚೌತಣಿ ರಸ್ತೆಯಲ್ಲಿ ಹೋಗುವಾಗ ಆತನನ್ನು ತಡೆದು ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಮದ್ಯದ ಟೆಟ್ರಾ ಪ್ಯಾಕೇಟು ಇದೆ ಎಂದು ಅವರು ಹೇಳಿದ್ದನ್ನು ನಾನು ಅಬಕಾರಿ ನೀರಿಕ್ಷಕರಿಗೆ ಮಾಹಿತಿ ನೀಡಿದ್ದು ಇರುತ್ತದೆ. ನಾವು ಸದರಿ ಸ್ಥಳಕ್ಕೆ ಬಂದು ಆರೋಪಿಯ ಹೆಸರು ಕೇಳಿದಾಗ ಆತನು ಮೋಹನ ಮಾಸ್ತಪ್ಪ ನಾಯ್ಕ ಎಂದು ಹೇಳಿರುತ್ತಾರೆ. ಮದ್ಯದ ಪ್ಯಾಕೇಟು ಹೊಂದಲು ಯಾವುದೇ ಪಾಸ್ ಯಾ ಪರಮೀಟು ಇಲ್ಲವೆಂದು ಹೇಳಿರುತ್ತಾನೆ. ನಂತರ ಶೋಧನಾ ಸಮುಚ್ಚಿತ ವರದಿಯನ್ನು ಅಬಕಾರಿ ನೀರಿಕ್ಷಕರು ತಯಾರಿಸಿದ್ದು ಇರುತ್ತದೆ. ಪಂಚರಾಗಲು ಪಾರ್ವತಿ ಎಂಬುವವರನ್ನು ಕೇಳಿದಾಗ ಅವರು  ಒಪ್ಪಿರುವುದಿಲ್ಲ. ನಂತರ ನನಗೆ ಹಾಗೂ ಚಾಸಾ –2 ರವನ್ನು ಪಂಚರಾಗಿಸಿಕೊಂಡರು. ಆರೋಪಿಯ ಚೀಲಶೋಧಿಸಿದಾಗ ಬ್ಯಾಕ್ ಪೈಪರ್ ವಿಸ್ಕಿ ಹಾಗೂ ಒಲ್ಡ ಟ್ರಾವೇರ್ ವಿಸ್ಕಿ ಪ್ಯಾಕೇಟು ಇದ್ದು ಅದರಲ್ಲಿ 20  ಬ್ಯಾಕ್ ಪೈಪರ್ ವಿಸ್ಕಿಯ ಪ್ಯಾಕೇಟು ಇದ್ದುದು ಕಂಡುಬರುತ್ತದೆ. ಹಾಗೂ 180 ಎಮ್ ಎಲ್ ನ ಒಲ್ಡ ಟ್ರಾವೇರ್ ವಿಸ್ಕಿಯ 30 ಪ್ಯಾಕೇಟು ಇದ್ದವು. ವಾಹನ ಪರಿಶೀಲನೆ ಮಾಡಿದಾಗ ಅದು ಕಪ್ಪು ಬಣ್ಣದ ಹಿರೋ ಸ್ಪೆಂಡರ್ ವಾಹನ ನಂಬರ್ ಕೆಎ –47 – ಯು –4243 ಅಗಿದ್ದು ಕಂಡುಬಂದಿರುತ್ತದೆ. ನಂತರ ಅಧಿಕಾರಿಗಳು ಮುದ್ದೆಮಾಲಿನ ಬ್ಯಾಕ್ ಪೈಪರ್ ನ 6 ಟೆಟ್ರಾ ಪ್ಯಾಕೇಟು ಹಾಗೂ ಒಲ್ಡ ಟ್ರಾವೇರಿನ 7 ಟೆಟ್ರಾ ಪ್ಯಾಕೇಟನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ದಾರ ಕಟ್ಟಿ ರಾಸಾಯನಿಕ ಪರೀಕ್ಷೆಗೆ ತೆಗೆದು ಇಟ್ಟರು. ಮಾಧರಿ ಮೊಹರನ್ನು ತಯಾರಿಸಿದ್ದರು. ಶೋಧನೆಯನ್ನು 1.30 - 1.40 ರವರಗೆ ತಯಾರಿಸಿಲಾಗಿತು. ಸದರಿ ಆರೇಪಿಗೆ ನೊಟೀಸು ನೀಡಿ ತನಿಖೆಗೆ ಹಾಜರಾಗಲು ಸೂಚಿಸಿರುತ್ತಾರೆ.  ಪಂಚಾಮೆಯನ್ನು 1.40 ರಿಂದ 2.10 ರವರೆಗೆ ತಯಾರಿಸಲಾಯಿತು.

3. ಸಾಕ್ಷಿಯು ನಿಪಿ–3 ರಲ್ಲಿರುವ  ತಮ್ಮ ಸಹಿ  ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಸಿ ಎಂದು ಗುರುತಿಸಲಾಯಿತು.  ಸಾಕ್ಷಿಯು ನಿಪಿ–5 ರಲ್ಲಿರುವ  ತಮ್ಮ ಸಹಿ  ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–7 ರಲ್ಲಿರುವ  ತಮ್ಮ ಸಹಿ ನೋಡಿ  ಗುರುತಿಸಿದ್ದು ಅದನ್ನು ನಿಪಿ–7 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆಮಾಲು  1 ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ  ಎಮ್ ಜೆ ಎನ್   ವಕೀಲರಿಂದ,**

ನಾನು 5 ವರ್ಷದಿಂದ ಭಟ್ಕಳದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನು. ಸದರಿ ಪ್ರಕರಣದಲ್ಲಿ ಚಾಸಾ – 4 ರವರನ್ನು ಹೊರತುಪಡಿಸಿ ಉಳಿದೆಲ್ಲರೂ ನಮ್ಮ ಇಲಾಖೆಯವರು ಅಗಿದ್ದಾರೆ. ಚಾಸಾ –1 ಹಾಗೂ 6 ರವರು ದಾಖಲಿಸಿದ ಎಲ್ಲಾ ಪ್ರಕರಣದಲ್ಲಿ ನಾನು , ಚಾಸಾ –2 ಮತ್ತು 3 ರವರೇ ಪಂಚಸಾಕ್ಷಿಗಳು ಆಗಿದ್ದೇವೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಚಾಸಾ – 2 ರವರು ಪಿರ್ಯಾದಿದಾರರು ಅಗಿದ್ದಾರೆ. ಸದರಿ ಪ್ರಕರಣದ ಮಾಹಿತಿ ಬಂದಾಗ ನಾನು ಹಾಗೂ ಚಾಸಾ –1 ರವರು ಭಟ್ಕಳ ವಲಯ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೇವು. ಚಾಸಾ –3 ರವರು ಆ ಸಮಯದಲ್ಲಿ ಕಚೇರಿಯಲ್ಲಿ ಇದ್ದರು. ಮಾಹಿತಿ ಬಂದ ಅರ್ದ ಗಂಟೆಯಲ್ಲಿ ನಾವು ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ –3 ರವರು ದಾಳಿಗೆ ನಮ್ಮ ಜೊತೆಗೆ ಬಂದಿರಲಿಲ್ಲ ಚಾಸಾ –3 ರವರು ಪ್ರತ್ಯೇಕವಾಗಿ ಅವರ ಬೈಕಿನಲ್ಲಿ ಬಂದಿದ್ದರು. ನಾವು ಸರಕಾರಿ ವಾಹನದಲ್ಲಿ ಹೋಗಿರುತ್ತೇವೆ. ವಾಹನದ ಚಾಲಕ ನಾಗೇಶ ಗೊಂಡ ಆಗಿದ್ದಾರೆ. ನಾಗೇಶ ಗೊಂಡ ಇವರು ನಮ್ಮ ಜೊತೆಗೆ ದಾಳಿ ಕಾಲಕ್ಕೆ ಇದ್ದರು. ಗುನ್ನಾ ಸ್ಥಳದಲ್ಲಿ ಸಾಕಷ್ಟು ವಾಸ್ತವ್ಯದ ಮನೆ , ಅಂಗಡಿ , ಮೀನು ಮಾರುಕಟ್ಟೆ ಇದೆ . ದಾಳಿಯನ್ನು ಅಲ್ಲಿ ಇದ್ದ ಜನರು ನೋಡಿರುತ್ತಾರೆ. ಪಂಚನಾಮೆಯನ್ನು ಚಾಸಾ –1 ರವರು ನಾವು ಹೇಳಿದಂತೆ ಬರೆದಿರುತ್ತಾರೆ. ಪಂಚನಾಮೆಯಲ್ಲಿ ಮಾಹಿತಿಯನ್ನು ಹೇಳುವಾಗ ವಾಹನದ ಬಣ್ಣ ಹೇಳಿರುತ್ತೇನೆ. ಕಪ್ಪು ಬಣ್ಣದ ಬೈಕಿನ ನಂಬರ್ ಕೆಎ –47 ಯು – 4243 ಅಗಿತ್ತು. ದಾಳಿ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ. ಪೊಟೋ ದಲ್ಲಿ ಆರೋಪಿ ಹಾಗೂ ಮುದ್ದೆಮಾಲಿನ ಜೊತೆಗೆ ಪೊಟೋತೆಗದ ಬಗ್ಗೆ ಹಾಗೂ ಪೊಟೋವನ್ನು ಯಾರು ತೆಗೆದರು ಎಂದು ನನಗೆ ನೆನಪಿಲ್ಲ. ಈ ದಿನ ನಾನು ಪೊಟೋವನ್ನು ನೋಡಿಲ್ಲ. ಶ್ಯಾಂಪಿಲಿಗೆ ತೆಗೆದ ಮುದ್ದೆಮಾಲುಗಳ ಮೇಲೆ ನಮ್ಮ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ . 1 ಬಾಕ್ಸ ನಲ್ಲಿ ಮುದ್ದೆಮಾಲನ್ನು ಹಾಕಿ ಸಹಿ ಮಾಡಿರುತ್ತೇವೆ. ಜಪ್ತು ಮಾಡಿದಾಗ ಎಲ್ಲಾ ತುಂಬಿದ ಟೆಟ್ರಾ ಪ್ಯಾಕೇಟನ್ನು ಜಪ್ತು ಮಾಡಿರುತ್ತೇವೆ. ಇಂದು ನ್ಯಾಯಾಲಯದ ಮಂದೆ ಖಾಲಿ ಪ್ಯಾಕೇಟುಗಳು ಇವೆ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು ಎಲ್ಲಾ ಅಂಗಡಿಗಳ ಮುಂದೆ ಬಿದ್ದಿರುತ್ತವೆ ಎಂದರೆ ಸರಿ. ನಾವು ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಹಾರಿಕೆ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಬಿದ್ದಿರುವ ಖಾಲಿ ಪ್ಯಾಕೇಟನ್ನು ಉಪಯೋಗಿಸಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕಾಗಿ ಮುದ್ದೆ ಮಾಲನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಮುದ್ದೆ ಮಾಲನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 731/2023**

**ಸಿ.ಡಬ್ಲ್ಯೂಃ4 , ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ಈರಣ್ಣ

ತಂದೆಯ ಹೆಸರು : ಶಿವಲಿಂಗಯ್ಯ ಪೂಜಾರಿ

ವಯಸ್ಸು : 34 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ಗ್ರಾಮೀಣ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 13/02 /2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2016 ರಿಂದ 2023 ರ ಜೂನ್ ತಿಂಗಳವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 01.04.2023 ರಂದು ಬಾತ್ಮಿದಾರರು ನೀಡಿದ ಮಾಹಿತಿಯಂತೆ ಉಮರ್ ಸ್ಟ್ರೀಟ್ ಮೊದಲನೇ ಕ್ರಾಸ ಹತ್ತಿರ ಜಾನುವಾರುಗಳನ್ನು ಕಟಾವು ಮಾಡಿ ಮಾರಾಟ ಮಾಡಿದ ಬಗ್ಗೆ ಮಾಹಿತಿ ನನಗೆ ಬಂದಿದ್ದು ನಾನು ಸದರಿ ವಿಷಯ ಚಾಸಾ – 1 ರವರಿಗೆ ತಿಳಿಸಿ ನಂತರ ಸಂಸುದ್ದೀನ್ ಸರ್ಕಲ ಹತ್ತಿರ ಚಾಸಾ – 5 ಹಾಗೂ ನನಗೆ ಬರಲು ಹೇಳಿರುತ್ತಾರೆ. ನಂತರ ಮೇಲಾಧಿಕಾರಿಗೆ ವಿಷಯ ತಿಳಿಸಿ ಚಾಸಾ –5 ರವರು 2 ಜನ ಪಂಚರನ್ನು ಬರಮಾಡಿ ನಂತರ ಸಂಸುದ್ದೀನ ಸರ್ಕಲನಿಂದ ಮಾಹಿತಿ ಬಂದ ಸ್ಥಳಕ್ಕೆ ಹೋ ಗಿ ನೋಡಿ ಅಲ್ಲಿ ದಾಳಿ ಮಾಡಿದಾಗ ಇಬ್ಬರು ಜನರು ಅಲ್ಲಿ ಇದ್ದರು ಅವರ ಹೆಸರು ಚಾಸಾ –1 ರವರು ಕೇಳಿದಾಗ ಒಬ್ಬನ್ನು ಜಹೀರ್ ಎಂದು ಇನ್ನೊಬ್ಬ ದಾದಾ ಪಿರ್ ಎಂಬಾತ ಎಂದು ಹೇಳಿದ್ದು ಇರುತ್ತದೆ. ಆಗ ಚಾಸಾ –1 ರವರು ಪರಮೀಟ್ ಯಾ ಪರವಾನಿಗೆ ಕೇಳಿದ್ದು ಅವರು ಇಲ್ಲವೆಂದು ನುಡಿದಿರುತ್ತಾರೆ. ರೂ. 20,000 ಮೌಲ್ಯದ ಜಾನುವಾರು ಮಾಂಸ ಹಾಗೂ ಕಟಾವು ಮಾಡಲು ಬಳಸಿದ ಸಲಕರಣೆಯನ್ನುಪಂಚರ ಸಮಕ್ಷಮ ಜಪ್ತು ಮಾಡಿದ್ದು ಇರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,</u>**

ಮಾಂಸ ಕಟಾವು ಮಾಡುತ್ತಿರುವ ಬಗ್ಗೆ ನನಗೆ ಪ್ರಥಮವಾಗಿ ಮಾಹಿತಿ ಬಂದಿತ್ತು. ಮಾಹಿತಿ ಬಂದಾಗ ನಾನು ಸಾಗರ ರಸ್ತೆಯಲ್ಲಿ ಇರುವ ಮನೆಯಲ್ಲಿ ಇದ್ದೇನು. ಗುನ್ನಾ ಸ್ಥಳ ನಮ್ಮ ಮನೆಯಿಂದ ಸುಮಾರು ಒಂದುವರೆ ಕಿಮೀ ದೂರದಲ್ಲಿ ಇದೆ. ಮಾಹಿತಿ ಬಂದಾಗ ನಾನು ಚಾಸಾ –1 ಇವರಿಗೆ ತಿಳಿಸಿರುತ್ತೇನೆ. ಠಾಣೆಯಲ್ಲಿರುವ ಎಸ ಹೆಚ್ ಒ ರವರಿಗೆ ಮಾಹಿತಿಯನ್ನು ರವಾನಿಸಿರುವುದಿಲ್ಲ . ಪಂಚರನ್ನು ಚಾಸಾ –5 ರವರು ಕರೆಯಿಸಿರುತ್ತಾರೆ. ಪಂಚರು ಆ ಸಮಯಕ್ಕೆ ಎಲ್ಲಿ ಇದ್ದರು ಎಂದು ನನಗೆ ಮಾಹಿತಿ ಇಲ್ಲ. ಗುನ್ನಾ ಸ್ಥಳ ಜಾಲಿ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ದಾಳಿಗೆ ಹೋಗುವ ಮೊದಲು ಜಾಲಿ ಪಂಚಾಯತಿ ಅಧಿಕಾರಿಯನ್ನು ನಾವು ಕರೆಯಿಸಿಲ್ಲ. ಆರೋಪಿಗೆ ಮಾಂಸ ಕಟಾವು ಮಾಡಲು ಅನುಮತಿ ಇದೆ ಅಥವಾ ಇಲ್ಲ ಎಂದು ನಾವು ಜಾಲಿ ಪಟ್ಟಣ ಪಂಚಾಯತಿಯವರಿಗೆ ವಿಚಾರಣೆ ಮಾಡಿಲ್ಲ. ಗುನ್ನಾ ಸ್ಥ ಳ ಜನನಿಬೀಡ ಪ್ರದೇಶ ಆಗಿದೆ. ಗುನ್ನಾ ಸ್ಥಳದ ಜನರನ್ನು ವಿಚಾರಣೆ ಮಾಡಿ ಸದರಿ ಪ್ರಕರಣದಲ್ಲಿ ಸಾಕ್ಷಿಗಾರರಾಗಿ ಕರೆದಿಲ್ಲ. ಗುನ್ನಾ ಸ್ಥಳದಲ್ಲಿರುವ ಮನೆ ಯಾರಿಗೆ ಸಂಬಂಧಿಸಿದ್ದು ಎಂದು ನಾವು ವಿಚಾರಣೆ ಮಾಡಿಲ್ಲ. ನಿಪಿ–1 ರಲ್ಲಿ ಅಂಗಡಿ ಮತ್ತು ಅಂಗಡಿಯ ಶೆಟರ್ ಇದೆ. ಗುನ್ನಾ ಸ್ಥಳದಲ್ಲಿ ಮನೆ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ

–1 ಇವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಯಾವ ಜಾನುವಾರಿನ ಮಾಂಸ ಸಿಕ್ಕಿದೆ ಎಂದು ನನಗೆ ಗೊತ್ತಿಲ್ಲ. ಗುನ್ನಾ ಸ್ಥಳದಿಂದ ಕತ್ತಿಯನ್ನು ಜಪ್ತು ಮಾಡಿರುತ್ತೇವೆ. ಇಂದು ನ್ಯಾಯಾಲಯದ ಮುಂದಿರುವ ಕತ್ತಿಯನ್ನು ಜಾನುವಾರು ಕಟಾವು ಮಾಡಲು ಉಪಯೋಗಿಸುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಕತ್ತಿಯನ್ನು ಗದ್ದೆಯ ಚಟುವಟಿಗೆಗೆ ಉಪಯೊಿಾಗಿಸುತ್ತಾರೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಮಾಂಸವನ್ನು ಹೊರತುಪಡಿಸಿ ಬೇರೆಯಾವುದೇ ಪ್ರಾಣಿಯಅಂಗ ಇರಲಿಲ್ಲ. ಗುನ್ನಾ ಸ್ಥಳ ಯಾವ ಪಂಚಾಯತಿ ಅಥವಾ ಪುರಸಭೆಯ ವ್ಯಾಪ್ತಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಮಾಂಸಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಪ್ರಥಮ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾಳಿಗೆ ಒಟ್ಟು ನಾವು 3 ಜನ ಪೊಲೀಸರು ಹೋಗಿರುತ್ತೇವೆ. ಆರೋಪಿಯ ಹೆಸರು ನನಗೆ ಗೊತ್ತಿದೆ. ಮಾಂಸವು ಯಾವ ಜಾನುವಾರಕ್ಕೆ ಸಂಬಂಧಿಸಿದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಸಿಸಿ ನಂಬರಃ 731/2023**

**ಸಿ.ಡಬ್ಲ್ಯೂಃ4 , ಪಿ.ಡಬ್ಲ್ಯೂಃ 4**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ522/2020**

**ಸಾಕ್ಷಿಃ ಸಿಡಬ್ಲ್ಯೂಃ 9 , ಪಿ.ಡಬ್ಲ್ಯೂಃ 8**

| | |
|---|---|
| ಸಾಕ್ಷಿದಾರನ ಹೆಸರು | : ಹೆಚ್ ಬಿ ಕುಡಗುಂಟಿ |
| ತಂದೆಯ ಹೆಸರು | : ಬಸಪ್ಪ ಕುಡಗುಂಟಿ |
| ವಯಸ್ಸು | : 57 ವರ್ಷ |
| ಉದ್ಯೋಗ | : ಪಿಎಸ್ಐ , ಮುಂಡಗೋಡ ಪೋಲಿಸ ಠಾಣೆ |
| ವಾಸ್ತವ್ಯ | : ಬೃಂದಾವನ ಲೇ ಔಟ್ , ಮುಂಡಗೋಡ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11 /02 /2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 08.09.2019 ರಿಂದ ದಿನಾಂಕಃ 31.01.2023 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 04.05.2021 ರಂದು ಚಾಸಾ –8 ರವರು ವರ್ಗಾವಣೆಯಾದ ಕಾರಣ ನಾನು ಸದರಿ ಪ್ರಕರಣದ ಕಡತವನ್ನು ವಹಿಸಿಕೊಂಡಿರುತ್ತೇನೆ. ದಿಃ 08.09.2021 ರಂದು ಉಪ ಅಧಿಕ್ಷಕರು, ಪುರಾತತ್ವ ಇಲಾಖೆ ,ದಾರವಾಡದಿಂದ ಮಾಹಿತಿ ಪಡೆದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ಸದರಿ ಪ್ರಕರಣದ ಸಂಪೂರ್ಣ ತನಿಖೆ ಮುಗಿದ ಕಾರಣ ಆರೋಪ ಸಾಬಿತಾದ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿಯು ವಿಸಿ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಚಾಸಾ –1 ರಿಂದ 5 ಇವರು ಭಾರತೀಯ ಪುರಾತತ್ವ ಇಲಾಖೆಗೆ ಸೇರಿದ ಸಿಬ್ಬಂದಿಗಳು ಆಗಿರುತ್ತಾರೆ ಎಂದರೆ ಸರಿ. ಕಡತವನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ್ದೇನೆ. ದಿಃ 07.06.2019 ರಂದು ಸದರಿ ಪ್ರಕರಣದ ಕೃತ್ಯ ನಡೆದಿದೆ. ಆ ಬಗ್ಗೆ ಪ್ರ ವ ವರದಿ ದಿಃ 22.07.2019 ರಂದು ದಾಖಲಾಗಿದೆ. ಪ್ರ ವ ವರದಿ ದಾಖಲಾಗಲು ವಿಳಂಬಕ್ಕೆ ಕಾರಣವನ್ನು ನಾನು ಪಿರ್ಯಾದಿದಾರರಿಂದ ಹೇಳಿಕೆ ಪಡೆದಿಲ್ಲ ಆದರೆ ವಿಚಾರಣೆ ಮಾಡಿರುತ್ತೇನೆ. ಸಂರಕ್ಷಿತ ಸ್ಮಾರಕವು ರಘುನಾಥ ದೇವಸ್ಥಾನ ಆಗಿದೆ ಎಂದರೆ ಸರಿ. ಸದರಿ ದೇವಸ್ಥಾನದಲ್ಲಿ ಆಡಳಿತ ಮಂಡಳಿ ಇದೆ . ರಘುನಾಥ ದೇವಸ್ಥಾನ ದ ಆಡಳಿತ ಮಂಡಳಿಯವರನ್ನು ನಾನು ಸದರಿ ಪ್ರಕಣದ ಬಗ್ಗೆ ವಿಚಾರಣೆ ಮಾಡಿಲ್ಲ. ಸದರಿ ಪ್ರಕರಣದಲ್ಲಿ ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆ ಮಾಡಿಲ್ಲ. ಸದರಿ ಪ್ರಕರಣದ ಕಟ್ಟಡವು ನಿಷೇದಿತ ಪ್ರದೇಶದಲ್ಲಿ ಬರುತ್ತದೆ ಎಂದು ಮೋಜಣಿ ಇಲಾಖೆಯವರಿಂದ ಯಾವುದೇ ಸರ್ವೆಯನ್ನು ಮಾಡಿಸಿಲ್ಲ. ಸದರಿ ಪ್ರಕರಣದ ಗುನ್ನಾ ಸ್ಥಳವು ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಹಾಗೂ ಯಾರಿಗೆ ಸಂಬಂಧಿಸಿದು ಎಂದು ನಾನುಗೇಣಿ ಹಾಗೂ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿಲ್ಲ ಹಾಗೂ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಪ್ರಕರಣದಲ್ಲಿ ನಾವು ಸಾಧಿಸುವ ಕಟ್ಟಡ ಹಾಗೂ ಆರೋಪಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪುರಾತತ್ವ ಇಲಾಖೆಯವರು ಅಂಕಿಸಂಕೆಗಾಗಿ ಸುಳ್ಳಾಗಿ ಸೃಷ್ಟಿಸಿದ ದಾಖಲೆಗೆ ಸುಳ್ಳು ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1870/2022**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಆಸಿಪ್

ತಂದೆಯ ಹೆಸರು : ಅಬ್ಬಾದ್ ಶೇಖ್

ವಯಸ್ಸು : 30 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಹೆಬ್ಳೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 06.11.2015 ರಂದು ಚಾಸಾ –7 ರವರು ನನಗೆ ಹಾಗೂ ಚಾಸಾ –2 ರವರನ್ನು ಆಜಾದ ನಗರದ ಚಿಕನ್ ಸೆಂಟರಿನ ಹತ್ತಿರ ಪಂಚನಾಮೆಗೆ ಪಂಚರಾಗಲು ಕರೆದಿದ್ದರು ಎಂದರೆ ಸರಿಯಲ್ಲ. ಪಂಚನಾಮೆಗೆ ಸ್ಥಳವನ್ನು ಚಾಸಾ –1 ರವರು ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಹೊಡೆದಾಟದ ಹಿನ್ನೆಲೆಯ ಪ್ರಕರಣದ ಪಂಚನಾಮೆ ಆಗಿದೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.00 - 11.00 ಗಂಟೆಯ ಅವಧಿಯಲ್ಲಿ ಸ್ಥಳದಲ್ಲಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಒಂದು ಕಟ್ಟಿಗೆ ತುಂಡು , 1 ಕಬ್ಬಿಣದ ಪೈಪು ನಮ್ಮ ಸಮಕ್ಷಮ ಜಪ್ತು ಮಾಡಲಾಗಿತ್ತು ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ2 , ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಹನಿಶ್

ತಂದೆಯ ಹೆಸರು : ಪೈಯಾದ ಅಹಮದ್ ಶೇಖ್

ವಯಸ್ಸು : 33 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಜಾಲಿ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ಪೊಲೀಸರು ನನಗೆ ವೆಂಕಟಾಪುರ ಶಾಲೆಯ ಹತ್ತಿರ ಸಹಿ ಮಾಡಲು ಹಾಗೂ ಪೊಟೋ ತೆಗೆಯಲು ಕರೆದಿದ್ದರು. ನಾನು ಹಾಗೂ ಚಾಸಾ –3 ರವರು ಸ್ಥಳಕ್ಕೆ ಹೋಗಿರುತ್ತೇವೆ. ಯಾವ ವಿಷಯಕ್ಕೆ ನನ್ನ ಸಹಿ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಮದ್ಯಾಹ್ನದ ಸಮಯಕ್ಕೆ ನನಗೆ ಸಹಿ ಮಾಡಲು ಕರೆದಿದ್ದರು. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು.ಸಾಕ್ಷಿಯು ನಿಪಿ–5 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನಾನು ಪಂಚನಾಗಿ ಭಟ್ಕಳ ನ್ಯಾಯಾಲಯದಲ್ಲಿ ಸುಮಾರು ಪ್ರಕರಣದಲ್ಲಿ ಸಾಕ್ಷಿ ನುಡಿದಿರುತ್ತೇನೆ. ಪೊಲೀಸರು ನನಗೆ ಪಂಚನಾಮೆಗೆ ಕರೆಯುತ್ತಾರೆ. ವೆಂಕಟಾಪುರ ಶಾಲೆಯಲ್ಲಿ ನಾನು ಪಂಚನಾಮೆಗೆ ಸಹಿ ಹಾಕಿರಬಹುದು. ಪಂಚನಾೆಮಯನ್ನು ನಾನು ಓದಿಲ್ಲ ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಕಾರಣ ನಾನು ಪಂಚನಾಮೆಗೆ ಅವರ ಮುಲಾಜಿಗೆ ಒಳಗಾಗಿ ಸಹಿ ಹಾಕಿರುತ್ತೇನೆ. ಪಂಚನಾಮೆಯಲ್ಲಿ ಸತ್ಯ ಬರೆದಿದ್ದಾರೋ ಅಥವಾ ಸುಳ್ಳು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ಗುನ್ನಾ ಸ್ಥಳವನ್ನು ಚಾಸಾ – 1 ರವರು ತೋರಿಸಿದ್ದರು ಎಂದರೆ ಸರಿಯಲ್ಲ. ಸಹಿಯನ್ನು ದಿಃ 07.001.2022 ರಂದು ಮದ್ಯಾಹ್ನ ಸ್ಥಳದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಯಾವ ವಿಷಯಕ್ಕೆ ನಾನು ಪಂಚನಾಮೆ ಮೇಲೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ508/2018**

**ಸಾಕ್ಷಿಃ ಸಿಡಬ್ಲ್ಯೂಃ12 , ಪಿ.ಡಬ್ಲ್ಯೂಃ 11**

ಸಾಕ್ಷಿದಾರನ ಹೆಸರು : ಬಸವರಾಜ ಹೇರೂರ್

ತಂದೆಯ ಹೆಸರು : ಶಾಂತಪ್ಪ ಹೇರೂರ್

ವಯಸ್ಸು : 38 ವರ್ಷ

ಉದ್ಯೋಗ : ಪಿ ಎಸ್ ಐ , ಕಲಬುರ್ಗಿ ಜಿಲ್ಲೆ.

ವಾಸ್ತವ್ಯ : ಕಲಬುರ್ಗಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 10/02/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ**.)

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 2017 ರಿಂದ 2018 ರವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ –1 ರ ಪಿಎಸ್ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿ. 11.10.20217 ರಂದು ರಂದು ಈ ಪ್ರಕರಣದ ಕಡತವನ್ನು ಚಾಸಾ 11 ರವರಿಂದ ಪಡೆದುಕೊಂಡಿರುತ್ತೇನೆ. ದಿಃ 01.08.2018 ರಂದು ಚಾಸಾ–8 ರವರು ನೀಡಿದ ವರದಿ ಯನ್ನು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ . ಅದೇ ದಿನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

3. ಸಾಕ್ಷಿಯು ನಿಪಿ–20 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–20 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ವಿಸಿ ಮೂಲಕ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಹೆಚ್ ಎನ್ ವಕೀಲರಿಂದ,**

ಸದರಿ ಪ್ರಕರಣಕ್ಕೆ ಸಂಬಂಧಿಸಿ ನಾನು ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ. ರಾಸಾಯನಿಕ ಪರೀಕ್ಷಾ ವರದಿಯನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಪಿರ್ಯಾದಿ ಹಾಗೂ ಆರೋಪಿತರ ಮಧ್ಯೆ ಹಣದ ವ್ಯವಹಾರ ಇದ್ದ ಕಾರಣ ಗಲಾಟೆ ಆಗಿತ್ತು ಅದನ್ನು ಸೃಷ್ಟಿ ಮಾಡಿ ಆರೋಪಿಗಳ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸಧ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ508/2018**

**ಸಾಕ್ಷಿಃ ಸಿಡಬ್ಲ್ಯೂಃ 10, ಪಿ.ಡಬ್ಲ್ಯೂಃ 10**

ಸಾಕ್ಷಿದಾರನ ಹೆಸರು : ಡಾ. ವಾಣಿ ಎನ್

ಗಂಡನ ಹೆಸರು : ಎ ಮುರಳಿ

ವಯಸ್ಸು : 47 ವರ್ಷ

ಉದ್ಯೋಗ : ಸಹಾಯಕ ನಿರ್ದೇಶಕರು , ಎಫ್ ಎಸ್ ಎಲ್ ವಿಭಾಗ ,ಬೆಂಗಳೂರು

ವಾಸ್ತವ್ಯ : ಬೆಂಗಳೂರು

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 10/02/2025**

**(ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.)**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಕಳೆದ 20 ವರ್ಷಗಳಿಂದ ಎಪ್ ಎಸ ಎಲ್ ಬೆಂಗಳೂರು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ.

2. ದಿಃ 25.09.2017 ರಂದು 4 ಸೀಲಾದ ವಸ್ತುಗಳನ್ನು ಭಟ್ಕಳ ನಗರ ಪೊಲೀಸ್ ಕ್ರೈಂ ನಂಬರ್ 197 / 2017 ರಡಿ ಚಾಸಾ 8 ರವರು ಎಪ್ ಎಸ್ ಎಲ್ ಗಾಗಿ ತಂದಿದ್ದು ಇರುತ್ತದೆ. ಸದರಿ ವಸ್ತುಗಳು ಸಿವಿಲ್ ಮಾಜಿಸ್ಟ್ರೇಟ್ ಭಟ್ಕಳ ಎಂಬ ಹೆಸರಲ್ಲಿ ಸೀಲಾಗಿದ್ದು ಸೀಲು ಸುಸ್ಥಿತಿಯಲ್ಲಿ ಇದ್ದು ಕಡತದೊಂದಿಗೆ ಕಳುಹಿಸಿದ್ದ ಮಾಧರಿ ಸೀಲಿಗೆ ತಾಳೆ ಆಗುತ್ತಿತ್ತು. ಸದರಿ ವಸ್ತುಗಳನ್ನು ಪರಿಶೀಲನೆ ಮಾಡಿದಾಗ ಹಸಿರು ಮಿಶ್ರಿತ ಕಂದು ಬಣ್ಣದ ಒಣಗಿದ ಕಡ್ಡಿಗಳು ಹೂ ಕಾಯಿ ಎಲೆ ಹಾಗೂ ಬೀಜಗಳನ್ನು ಒಳಗೊಂಡಿದ್ದು ಇತ್ತು. ಸದರಿ ವಸ್ತುಗಳನ್ನು ಪ್ರತ್ಯೇಕವಾಗಿ ತೂಕ ಮಾಡಿ 5 ವಿಧವಾದ ರಾಸಾಯನಿಕ ಪರೀಕ್ಷೆಗಳನ್ನು ಮಾಡಿದ್ದು ಇರುತ್ತದೆ. ಸದರಿ ಪರೀಕ್ಷೆಗಳಿಂದ ಗಾಂಜಾ ಎಂದು ಕಂಡುಬಂದಿರುತ್ತದೆ. ಅದರಂತೆ ಗಾಂಜಾ ಎಂದು ಮತ್ತು ಅದರಲ್ಲಿ ಸೈಕೋ ಎಕ್ಟಿವ್ ಅಂಶ ಇದೆ ಎಂದು ನಾನು ವರದಿ ನೀಡಿದ್ದು ಇರುತ್ತದೆ. ಪರೀಕ್ಷೆ ನಂತರ 4 ವಸುತಗಳನ್ನು ಪುನಃ ತೂಕ ಮಾಡಿ ಪ್ಯಾಕ್ ಮಾಡಿ ಕಚೇರಿ ಮೊಹರು ಹಾಕಿ ಸಂಬಂಧಿಸಿದ ಪೊಲೀಸರಿಗೆ ಹಿಂದಿರುಗಿಸಿರುತ್ತೇನೆ.

3. ಸಾಕ್ಷಿಯು ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 20 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 20 ಎ ಎಂದು ಗುರುತಿಸಲಾಯಿತು.3. ಸಾಕ್ಷಿಯು ಮಾಧರಿ ಸೀಲು ನೋಡಿ ಗುರುತಿಸಿದ್ದು ಅದನ್ನು ನಿಪಿ–21 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 21 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು ನೋಡಿ ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಹೆಚ್ ಎನ್ ವಕೀಲರಿಂದ,**

ದಿಃ 25.09.2017 ರಂದು ಮುದ್ದೆಮಾಲನ್ನು ಚಾಸಾ –8 ರವರು ನಮ್ಮ ಕಚೇರಿಗೆ ತಂದಿದ್ದು ಇರುತ್ತದೆ. ಪಂಚರ ಸಮಕ್ಷಮ ನಾನು ಮುದ್ದೆಮಾಲನ್ನು ಪಡೆದಿರುವುದಿಲ್ಲ. ವರದಿಯನ್ನು ದಿಃ 03.04.2018 ರಂದು ನೀಡಿರುತ್ತೇನೆ. ಯಾವ ದಿನಾಂಕಕ್ಕೆ ವರದಿ ಪೊಲೀಸರು ಪಡೆದಿರುತ್ತಾರೆಂದು ವರದಿಯಲ್ಲಿ ನಮೂದು ಇದೆ. ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪರೀಕ್ಷೆ ಮಾಡಿದ್ದೇ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಒತ್ತಾಯಕ್ಕೆ ನಾನು ಸುಳ್ಳು ವರದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.

– – ಸಿಸಿ ನಂಬರಃ 1291/2019

ಸಾಕ್ಷಿಃ ಪಿ.ಡಬ್ಲ್ಯೂಃ 2

(ಇಂದು ತಾಃ07/02/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ ಕೆ ಎನ್ ವಕೀಲರಿಂದ,

ಈ ನ್ಯಾಯಾಲಯದಲ್ಲಿ ನನ್ನ ವಿರುದ್ದ ಈ ಹಿಂದೆ ಚೆಕ್ಕಿನ 3 ಪ್ರಕರಣಗಳು ದಾಖಲಾಗಿದೆ. ಈಗಲೂ ಸಹ ನನ್ನ ವಿರುದ್ದ ಪಿ ಎಲ ಡಿ ಬ್ಯಾಂಕಿನ ದಾವೆಗಳು ಚಾಲ್ತಿಯಲ್ಲಿ ಇವೆ ಎಂದರೆ ಸರಿಯಲ್ಲ.

ಪಿರ್ಯಾದಿದಾರರು ನನಗೆ ಸುಮಾರು 25  ವರ್ಷಗಳಿಂದ ಪರಿಚಯ . ಪಿರ್ಯಾದಿದಾರರ ಎಳ್ಳು ನೀರಿನ  ಅಂಗಡಿ ಇದೆ. ಅದನ್ನು ಹೊರತುಪಡಿಸಿ ಬೇರೆ ಯಾವ ಕೆಲಸ ಮಾಡುವುದಿಲ್ಲ. ಅಂಗಡಿಯಿಂದ ಬರುವ ಆದಾಯ ಹೊರತುಪಡಿಸಿ ಪಿರ್ಯಾದಿದಾರರಿಗೆ ಬೇರೆ ಯಾವ ಆದಾಯ ಇಲ್ಲ. ಪಿರ್ಯಾದಿಗೆ ತಿಂಗಳಿಗೆ ಇಷ್ಟು ಆದಾಯ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 20.01.2019 ರಂದು ಕರಾರು ಆಗಿತ್ತು. ಕರಾರು ಪತ್ರ ಆಗುವ ಕಾಲಕ್ಕೆ ನಾನು, ಪಿರ್ಯಾದಿದಾರರು , ಆರೋಪಿ ಮತ್ತು ವಕೀಲರಾದ ಶ್ರೀ ವಿ ಎಪ್ ಜಿ ರವರು ಇದ್ದೇವು. ಕರಾರು ಪತ್ರವು ವಿ ಎಪ್ ಜಿ ವಕೀಲರ ಕಚೇರಿಯಲ್ಲಿ ಆಗಿದೆ. ಕರಾರು ಪತ್ರವನ್ನು ವಕೀಲರೇ ಇಂಗ್ಲೀಷ ನಲ್ಲಿ ಬರೆದಿರುತ್ತಾರೆ . ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಎಷ್ಟು ಗಂಟೆಗೆ ಕರಾರಪತ್ರ ಅಗಿದೆ ಎಂದು ನನಗೆ ಗೊತ್ತಿಲ್ಲ. ಕರಾರು ಪತ್ರದ ಬಾಂಡ ಅನ್ನು ಯಾರು ಹಾಗೂ ಕರಾರು ಆದ ದಿನ  ತಂದಿದ್ದರು ಅಥವಾ ಹಿಂದಿನ ದಿನ ತಂದದ್ದರು ಎಂದು ಗೊತ್ತಿಲ್ಲ. ಕರಾರಿನಲ್ಲಿ ಎನೆಲ್ಲಾ ಬರೆಯಲಾಗಿದೆ ಎಂದು ನಾನು ಓದಿರುತ್ತೇನೆ. ಎಷ್ಟು ಸಮಯದಲ್ಲಿ ಸಾಲ ವಾಪಸ್ತು ಮಾಡುತ್ತೇನೆಂದು ಹೇಳಿದ್ದರೆಂದು ನನಗೆ ಗೊತ್ತಿಲ್ಲ. ಪ್ರಥಮವಾಗಿ ನಾನೇ ಕರಾರುಪತ್ರಕ್ಕೆ ಸಹಿ ಮಾಡಿರುತ್ತೇನೆ. ನಂತರ ಕಿರಣ ಎಂಬುವವರು ಸಹಿ ಮಾಡಿದ್ದಾರೆ. ಕಿರಣ ಎಂಬುವವರು ಮುಂಡಳ್ಳಿಯವರು ಅಗಿದ್ದಾರೆ. ಕಿರಣ ಹಾಗೂ ನಾನು ಆ ಸಮಯಕ್ಕೆ ಒಟ್ಟಿಗೆ ಇದ್ದೇವು.  ಆರೋಪಿಗೆ ಹಣವನ್ನು ವಕೀಲರ ಕಚೇರಿಯಲ್ಲಿ ನೀಡಿದ್ದಾರೆ. ರೂ. 3,00,000 ಮೊತ್ತದ ಮುಖ ಬೆಲೆ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ.  ರೂ. 3,00,000 ಮೊತ್ತವನ್ನು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ ಹಾಗೂ ಆ ಬಗ್ಗೆ ನಾನು ಕೇಳಿ ತಿಳಿದುಕೊಂಡಿಲ್ಲ.  ಕರಾರುಪತ್ರಕ್ಕೆ ನಾನು ಹಾಗೂ ಕಿರಣ ಸಹಿ ಮಾಡಿದ್ದು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.  ನಾವು ಹೇಳುವಂತಹ ಯಾವುದೇ  ಕರಾರು ವಕೀಲರ ಕಚೇರಿಯಲ್ಲ ಆಗಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳುವಂತೆ ಆರೋಪಿಯೊಂದಿಗೆ ಯಾವುದೇ ಕರಾರುಪತ್ರ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 701/2021**

**ಸಾಕ್ಷಿಃ ಸಿಡಬ್ಲ್ಯೂಃ 12, ಪಿ.ಡಬ್ಲ್ಯೂಃ 9**

ಸಾಕ್ಷಿದಾರರ ಹೆಸರು : ಭರತ್ ಕುಮಾರ್

ತಂದೆಯ ಹೆಸರು : ವೆಂಕಟರಾಯ ಜಿ . ನಾಯಕ್

ವಯಸ್ಸು : 34 ವರ್ಷ

ಉದ್ಯೋಗ : ಪೊಲೀಸ್ ಉಪನಿರೀಕ್ಷಕರು, ಮಂಕಿ ಪೊಲೀಸ ಠಾಣೆ,

ವಾಸ್ತವ್ಯ : ಮಂಕಿ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 07/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಎಪ್ರಿಲ್ 2020 ರಿಂದ ಮಾರ್ಚ 2021 ರವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2 ದಿನಾಂಕಃ 05.02.2021 ರಂದು ಬೆಳಿಗ್ಗೆ 10.30 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರು ಸ್ವಿಕರಿಸಿ ಠಾಣಾ ಗುನ್ನಾ ಸಂಖ್ಯೆ: 17/2021 ರಂತೆ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಸದರಿ ಪ್ರಕರಣದ ಕಡತವನ್ನು ಚಾಸಾ –13 ರವರಿಗೆ ಹಸ್ತಾಂತರಿಸಿರುತ್ತೇನೆ.

3. ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ–11 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಸ್ ಜಿ ವಕೀಲರಿಂದ,**

ಸದರಿ ಪ್ರಕರಣದ ಪಿರ್ಯಾದಿದಾರರು ನಮ್ಮ ಠಾಣೆಯ ಕಾನ್ಸಟೇಬಲ್ ಆಗಿದ್ದಾರೆ. ಗಣಕೀಕೃತ ದೂರನ್ನು ಪಿರ್ಯಾದಿದಾರರು ತಂದಿದ್ದರು. ದೂರಿನ ಪ್ರಕಾರ ಘಟನೆಯು ದಿಃ05.02.2021 ರಂದು ರಾತ್ರಿ 3.00 ಗಂಟೆಗೆ ಆಗಿದೆ ಎಂದರೆ ಸರಿ. ಆದರೆ ದೂರು ದಿಃ 05.02.2021 ರಂದು ಬೆಳಿಗ್ಗೆ 10.30 ಗಂಟೆಗೆ ದಾಖಲಾಗಿದೆ ಎಂದರೆ ಸರಿ.ರಾತ್ರಿ 3.00 ಗಂಟೆ ಹಾಗೂ 10.30 ರ ಮಧ್ಯದಲ್ಲಿ ನಮ್ಮ ಠಾಣೆಗೆ ಸದರಿ ಘಟನೆ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ –5 ರವರು ನಮಗೆ ರಾತ್ರಿ ಸದರಿ ಘಟನೆ ಬಗ್ಗೆ ಮಾಹಿತಿ ನೀಡಿದ್ದಾರೆ . ಚಾಸಾ –5 ರವರು ನೀಡಿದ ಮಾಹಿತಿಯನ್ನು ಪಡೆದು ದೂರು ದಾಖಲಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಚಾಸಾ –1 ರವರು ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋದಾಗ ನಮಗೆ ಸದರಿ ಘಟನೆ ಬಗ್ಗೆ ಮಾಹಿತಿ ನೀಡಿದ್ದಾರೆ. ಚಾಸಾ 1 ರವರು ದೂರನ್ನು ನೀಡುವ ಮೊದಲು ಚಿಕಿತ್ಸೆಯನ್ನು ಪಡೆದಿದ್ದಾರೆ . ವೈದ್ಯರು ನೀಡಿದ ಮಾಹಿತಿಯನ್ನು ಡೈರಿಯಲ್ಲಿ ನಮೂದು ಮಾಡಿದ್ದೇವೆ. ಸದರಿ ಮಾಹಿತಿ ಮೇರೆಗೆ ಪ್ರ ವ ವರದಿ ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ. ಸದರಿ ಪ್ರಕರಣ ರಾತ್ರಿ ಗಸ್ತು ಇರುವ ಪೊಲೀಸರ ಮೇರೆ ಹಲ್ಲೆ ಆಗಿದೆ ಎಂದು ಇದೆ. ಸದರಿ ಪ್ರಕರಣ ಆದ ತಕ್ಷಣವೇ ಚಾಸಾ –4 , 5 , 6 ಮತ್ತು 7 ರವರು ಗುನ್ನಾ ಸ್ಥಳಕ್ಕೆ ಹೋಗಿರುತ್ತಾರೆ. ಸದರಿ ಚಾಸಾ 4 ರಿಂದ 7 ಯಾರೂ ಸದರಿ ಘಟನೆ ಬಗ್ಗೆ ದೂರು ನೀಡಿಲ್ಲ. ಘಟನೆಯ ಬಗ್ಗೆ ತಿಳುವಳಿಕೆ ಬಂದಾಗ ಪೊಲೀಸರು ಠಾಣೆಗೆ ಹೋಗಿ ದೂರನ್ನು ದಾಖಲಿಸಬೇಕಾಗುತ್ತದೆ ಎಂದರೆ ಸರಿ.

ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಮತ್ತು ನಾವು ಹೇಳುವಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ742 /2023**

**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ವಿವೇಕಾನಂದ

ತಂದೆಯ ಹೆಸರು : ದುರ್ಗಪ್ಪ ನಾಯ್ಕ

ವಯಸ್ಸು : 35 ವರ್ಷ
ಉದ್ಯೋಗ : ಪಿಗ್ಮಿ ಕಲೆಕ್ಷನ್
ವಾಸ್ತವ್ಯ : ಭಟ್ಕಳ

**<u>ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/02/2025</u>**

**<u>ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,</u>**

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನಗೆ ಸಹಿ ಮಾಡಲು ಹೇಳಿದ್ದರಿಂದ ನಾನು ಮತ್ತು ಚಾಸಾ –3 ರವರು ದಾಖಲೆಗೆ ಸಹಿ ಹಾಕಿದ್ದು ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–5 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು : ಎಪಿಪಿಯವರಿಂದ,</u>**

ದಿಃ 04.03.2023 ರಂದು ಪೊಲೀಸರು ಮತ್ತು ಚಾಸಾ –3 ರವರನ್ನು ಮಾರಿಕಟ್ಟೆಯ ಹತ್ತಿರ ಇರುವ ಶೂ ಮಾರ್ಟ ಎದುರಿಗೆ ಈ ಪ್ರಕರಣದಲ್ಲಿ ನಡೆದ ಘಟನೆಗೆ ಸಂಬಂಧಿಸಿ ಮಾಡುವ ಪಂಚನಾಮೆಗೆ ಪಂಚರಾಗಲು ಕರೆದಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಹಾಜರಿದ್ದ ಚಾಸಾ –1 ರವರು ಇದೇ ಸ್ಥಳದಲ್ಲಿ ದಿಃ 03.03.2023 ರಂದು ಸಂಜೆ 6.30 ಗಂಟೆಗೆ ಆಟೋ ರಿಕ್ಷಾ ನಂಬರ್ ಕೆಎ 47 ಎ 2710 ಪಿರ್ಯಾದಿ ಈ ಸ್ಥಳದಲ್ಲಿ ನಿಲ್ಲಿಸಬೇಡಾ ಎಂದು ಹೇಳಿದ ಸ್ಥಳ ಇದೇ ಆಗಿದೆ ಎಂದು ಪಿರ್ಯಾದಿಯು ಜಾಗ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9.00 – 10..00 ಗಂಟೆಯವರೆಗೆ ಸ್ಥಳದಲ್ಲಿ ಬರೆದಿದ್ದರು ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಕಚ್ಚಾ ಹಾತ್ ನಕಾಶೆಯನ್ನು ತಯಾರಿಸಿದ್ದು ಅದಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 04.03.2023 ರಂದು ನನಗೆ ಹಾಗೂ ಚಾಸಾ –3 ರವರನ್ನು ಪೊಲೀಸರು ನೋಟೀಸನ್ನು ನೀಡಿ ಠಾಣೆಯ ಆವರಣದಲ್ಲಿ ಈ ಪ್ರಕರಣದಲ್ಲಿ ಜಪ್ತು ಮಾಡಿದ ಆಟೋ ರಿಕ್ಷಾ ನಂಬರ್ ಕೆಎ 47 ಎ 2710 ಅನ್ನು ಪರಿಶೀಲನೆ ಮಾಡಿ ಪಂಚನಾಮೆಗೆ ಪಂಚರಾಗಲು ನಮಗೆ ಲಿಖಿತವಾಗಿ

ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಠಾಣೆಗೆಯ ಆವರಣದಲ್ಲಿ ಬರೆದಿದ್ದರು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ಹೇಳಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 978/2024**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು : ನಾಯಾಬ್

ತಂದೆಯ ಹೆಸರು : ಅಬ್ದುಲ್ ಜಲೀಲ್ ಶೇಖ್

ವಯಸ್ಸು : 21 ವರ್ಷ

ಉದ್ಯೋಗ : ವಿದ್ಯಾರ್ಥಿ

ವಾಸ್ತವ್ಯ : ಅಂಜುನಮನ್ ಹಾಸ್ಟೇಲ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 31.12.2023 ರಂದು ರಾತ್ರಿ 11.55 ಗಂಟೆ ಸುಮಾರಿಗೆ ನಾನು ನನ್ನ ಗೆಳೆಯನಿಗೆ ಆರಾಮ ಇಲ್ಲವೆಂದು ಮೆಡಿಕಲ್ ಅಂಗಡಿಗೆ ಹೋದಾಗ ಅಂಗಡಿ ಬಂದು ಇತ್ತು. ಆಗ ನನ್ನ ಜೊತೆಗೆ ಚಾಸಾ 4 ಮತ್ತು 5 ಇದ್ದರು. ನಂತರ ಮರಳಿ ಬರುವ ಸಮಯದಲ್ಲಿ ಸುದಿಂದ್ರ ಕಾಲೇಜನ ಹತ್ತಿರ 3 ಜನ ಕುಳಿತಿದ್ದರು ಅವರು ಮಧ್ಯಪಾನ ಸೇವಿಸಿದ್ದರು. ನಂತರ ಅವರು ನಮಗೆ ಸಿಗರೇಟು ಸೇದಲು ಹೇಳಿದರು. ನಾವು ಅವರನ್ನು ದೂಡಿ ಹೊಸ್ಟೇಲಿನ ಒಳಗೆ ಹೋದಾಗ ಅವರು ಹೊಸ್ಟೇಲಿನ ಒಳಗೆ ಬಂದು ಅಲ್ಲಿದ್ದ ಬ್ಯಾಟನ್ನು ಹಿಡಿದು ಕದವನ್ನು ಒಡೆದು ಚಾಸಾ –7 ರವರ ತಲೆಗೆ ಹೊಡೆದಿರುತ್ತಾರೆ. ಅವರಿಗೆ ರಕ್ತ ಬಂದಿರುತ್ತದೆ. ಅವರಿಗೆ 7 ಸ್ಟೀಚ್ ಅನ್ನು ಆಸ್ಪತ್ರೆಯಲ್ಲಿ ಹಾಕಲಾಗಿತ್ತು. ನಾವು ಪೊಲೀಸರಿಗೆ ಕರೆ ಮಾಡಿರುತ್ತೇವೆ . ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ಲ್ಯಾಬ್ ಅನ್ನು ಡ್ಯಾಮೇಜು ಮಾಡಿದ್ದರು. 2 ನೇ ಪಿಯು ಸಿ ತರಗತಿಯ ವಿದ್ಯಾರ್ಥಿಗಳಿಗೂ ಸಹ ಹೊಡೆದಿರುತ್ತಾರೆ. ಬ್ಯಾಟು , ಸ್ಟಂಪ್ಗಳಿಂದ ಹೊಡೆದಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ಹೇಳಿರುತ್ತಾರೆ.

**ಪಾಟೀ ಸವಾಲು : 1 ಮತ್ತು 3 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನನಗೆ ಕನ್ನಡ ಓದಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯಿನ್ನು ಘಟನೆಯ ದಿನದಂದೇ ತೆಗೆದುಕೊಂಡಿರುತ್ತಾರೆ. ಪೊಲೀಸರು ರಾತ್ರಿ 12.05 ಗಂಟೆಗೆ ಗುನ್ಹಾ ಸ್ಥಳಕ್ಕೆ ಬಂದಿರುತ್ತಾರೆ. ಘಟನೆ ಆದಾಗ ಮತ್ತು ದೂರನ್ನು ನೀಡುವ ಕಾಲಕ್ಕೆ ನನಗೆ ಆರೊಪಿತರ ಹೆಸರು ಗೊತ್ತಿರಲಿಲ್ಲ. ಇವತ್ತೀನವರೆಗೆ ಆರೋಪಿತರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಆರೋಪಿತರನ್ನು ನಮಗೆ ಯಾವತ್ತೂ ಗುರುತಿಸಲು ತೋರಿಸಿಲ್ಲ. ಇವತ್ತಿನವರೆಗೂ ಸಹ ಆರೋಪಿಗಳ ಹೆಸರು ನನಗೆ ಗೊತ್ತಿಲ್ಲ. ಘಟನೆಯ ದಿನ ನಮ್ಮ ಹಾಸ್ಟೇಲಿನಲ್ಲಿ ಸುಮಾರು 45 ಹುಡುಗರು ಇದ್ದರು. ರಾತ್ರಿ 7.30 ಗಂಟೆಗೆ ಹಾಸ್ಟೇಲಿನ ಗೇಟನ್ನು ಹಾಕುತ್ತಾರೆ. ರಾತ್ರಿ ಹಾಸ್ಟೇಲಿನಿಂದ ಹೊರಗೆ ಹೋಗುವಾಗ ಅನುಮತಿಯನ್ನು ನಾವು ಪಡೆಯಬೇಕಾಗುತ್ತದೆ ಹಾಗೂ ದಾಖಲೆಗೆ ಸಹಿ ಮಾಡಿ ಹೋಗಬೇಕಾಗುತ್ತದೆ. ಘಟನೆಯ ದಿನ ವಾಚ್ ಮನ್ ಮಲಗಿದ್ದರು ಆದ್ದರಿಂದ ನಾವು ಅತನನ್ನುಃ ಎಬ್ಬಿಸದೇ ಗೇಟಿನಿಂದ ಹೊರಗೆ ಹೋಗಿರುತ್ತೇವೆ. ಘಟನೆಯ ದಿನ ವಾರ್ಡನ ಹಾಸ್ಟೇಲಿನಲ್ಲಿ ಇರಬೇಕಾಗಿತ್ತು. ವಾರ್ಡನ್ ರಾತ್ರಿ ವೇಳೆಯಲ್ಲಿ ಹಾಸ್ಟೇಲಿನಲ್ಲಿ ಇರಬೇಕು ಆದರೆ ಇರಲಿಲ್ಲ. ಘಟನೆಯಾದ 10 –15 ನಿಮಿಷ ಗಳ ನಂತರ ವಾರ್ಡನ ಬಂದಿರುತ್ತಾರೆ. ಪೊಲೀಸರು ಬಂದ ನಂತರ ವಾರ್ಡನ ಬಂದಿರುತ್ತಾರೆ. ಚಾಸಾ –5 ರವರಿಗೆ ತಲೆನೋವು ಇದ್ದ ಕಾರಣ ಯುನಿವರ್ಸಲ್ ಮೆಡಿಕಲ್

ಸ್ಟೋರ್ ಹತ್ತಿರ ನಾವು ಔಷದಿಯನ್ನು ತರಲು ಹೋಗಿರುತ್ತೇವೆ. ನ್ಯಾಯಾಲಯದ ಮುಂದಿರುವ ಮದ್ದೆ ಮಾಲುಗಳು ನಮ್ಮ ಹಾಸ್ಟೇಲಿನ ವಸ್ತುಗಳು ಆಗಿವೆ. ಹೊಸ ವರ್ಷದ ಕಾರಣದಿಂದ ನಾವು ಮೋಜು ಮಸ್ತಿ ಮಾಡಲು ಹಾಸ್ಟೇಲಿನಿಂದ ಹೊರಗೆ ಹೋಗಿ ಹೊಸ್ಟೇಲಿಗೆ ಬಂದು ಗಲಾಟೆ ಮಾಡಿ ಅದರ ಬಾಗಿಲನ್ನು ಡ್ಯಾಮೇಜು ನಾವೇ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಾಸ್ಟೇಲಿನ ವಾರ್ಡನ ಅವರ ತಪ್ಪು ಗೊತ್ತಾಗುತ್ತದೆ ಎಂದು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾರ್ಡನ ಇದ್ದರೆ ಈ ರೀತಿ ಗಲಾಟೆ ಆಗುತ್ತಿರಲಿಲ್ಲವೆಂದರೆ ಸರಿಯಲ್ಲ. ಇದ್ದ ವಿಷಯ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂತಹ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ವಸ್ತು ಡ್ಯಾಮೇಜು ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ಮತ್ತು 4 ನೇ ಆರೋಪಿ ಪರ ವಕೀಲರು 1 ಮತ್ತು 3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 978/2024**

**ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 5**

| | | |
|---|---|---|
| ಸಾಕ್ಷಿದಾರರ ಹೆಸರು | : | ಪನಾಜ್ |
| ತಂದೆಯ ಹೆಸರು | : | ಅಬ್ದುಲ್ ಹಮಿ ದಾರವಾಡಕರ |
| ವಯಸ್ಸು | : | 22 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ್ತವ್ಯ | : | ಅಂಜುನಮನ್ ಹಾಸ್ಟೇಲ್ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 31.12.2023 ರಂದು ರಾತ್ರಿ 11.55 ಗಂಟೆ ಸುಮಾರಿಗೆ ನಾನು , ಚಾಸಾ – ಮೆಡಿಕಲ್ ಅಂಗಡಿಗೆ ಹೋದಾಗ ಅಂಗಡಿ ಬಂದು ಇತ್ತು ನಂತರ ಮರಳಿ ಬರುವ ಸಮಯದಲ್ಲಿ ಸುದಿಂದ್ರ ಕಾಲೇಜನ ಹತ್ತಿರ 3 ಜನ ಕುಳಿತಿದ್ದರು ಅವರು ಮದ್ಯಪಾನ ಸೇವಿಸಿದ್ದರು. ನಂತರ ಅವರು ನಮಗೆ ಸಿಗರೇಟು ಸೇದಲು ಹೇಳಿದರು. ನಾವು ಅವರನ್ನು ದೂಡಿ ಹೊಸ್ಟೇಲಿನ ಒಳಗೆ ಹೋದಾಗ ಅವರು ಹೊಸ್ಟೇಲಿನ ಒಳಗೆ ಬಂದು ಅಲ್ಲಿದ್ದ ಬ್ಯಾಟನ್ನು ಹಿಡಿದು ಕದವನ್ನು ಒಡೆದು ಚಾಸಾ –7 ರವರ ತಲೆಗೆ ಹೊಡೆದಿರುತ್ತಾರೆ. ಅವರಿಗೆ ರಕ್ತ ಬಂದಿರುತ್ತದೆ. ಅವರಿಗೆ 7 ಸ್ಟೀಚ್ ಅನ್ನು ಆಸ್ಪತ್ರೆಯಲ್ಲಿ ಹಾಕಲಾಗಿತ್ತು. ನಾವು ಪೊಲೀಸರಿಗೆ ಕರೆ ಮಾಡಿರುತ್ತೇವೆ . ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ಲ್ಯಾಬ್ ಅನ್ನು ಡ್ಯಾಮೇಜು ಮಾಡಿದ್ದರು. 2 ನೇ ಪಿಯು ಸಿ ತರಗತಿಯ ವಿದ್ಯಾರ್ಥಿಗಳಿಗೂ ಸಹ ಹೊಡೆದಿರುತ್ತಾರೆ. ಬ್ಯಾಟು , ಸ್ಟಂಪ್ಗಳಿಂದ ಹೊಡೆದಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ಹೇಳಿರುತ್ತಾರೆ.

**ಪಾಟೀ ಸವಾಲು : 1 ಮತ್ತು 3 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನನಗೆ ಕನ್ನಡ ಓದಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯಿನ್ನು ಘಟನೆಯ ದಿನದಂದೇ ತೆಗೆದುಕೊಂಡಿರುತ್ತಾರೆ. ಪೊಲೀಸರು ರಾತ್ರಿ 12.05 ಗಂಟೆಗೆ ಗುನ್ನಾ ಸ್ಥಳಕ್ಕೆ ಬಂದಿರುತ್ತಾರೆ. ಘಟನೆ ಆದಾಗ ಮತ್ತು ದೂರನ್ನು ನೀಡುವ ಕಾಲಕ್ಕೆ ನನಗೆ ಆರೋಪಿತರ ಹೆಸರು ಗೊತ್ತಿರಲಿಲ್ಲ. ಇವತ್ತೀನವರೆಗೆ ಆರೋಪಿತರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಆರೋಪಿತರನ್ನು ನಮಗೆ ಯಾವತ್ತೂ ಗುರುತಿಸಲು ತೋರಿಸಿಲ್ಲ. ಇವತ್ತಿನವರೆಗೂ ಸಹ ಆರೋಪಿಗಳ ಹೆಸರು ನನಗೆ ಗೊತ್ತಿಲ್ಲ. ಘಟನೆಯ ದಿನ ನಮ್ಮ ಹಾಸ್ಟೇಲಿನಲ್ಲಿ ಸುಮಾರು 45 ಹುಡುಗರು ಇದ್ದರು. ರಾತ್ರಿ 7.30 ಗಂಟೆಗೆ ಹಾಸ್ಟೇಲಿನ ಗೇಟನ್ನು ಹಾಕುತ್ತಾರೆ. ರಾತ್ರಿ ಹಾಸ್ಟೇಲಿನಿಂದ ಹೊರಗೆ ಹೋಗುವಾಗ ಅನುಮತಿಯನ್ನು ನಾವು ಪಡೆಯಬೇಕಾಗುತ್ತದೆ ಹಾಗೂ ದಾಖಲೆಗೆ ಸಹಿ ಮಾಡಿ ಹೋಗಬೇಕಾಗುತ್ತದೆ. ಘಟನೆಯ ದಿನ ವಾಚ್ ಮನ್ ಮಲಗಿದ್ದರು ಆದ್ದರಿಂದ ನಾವು ಅತನನ್ನುಃ ಎಬ್ಬಿಸದೇ ಗೇಟಿನಿಂದ ಹೊರಗೆ ಹೋಗಿರುತ್ತೇವೆ. ಘಟನೆಯ ದಿನ ವಾರ್ಡನ ಹಾಸ್ಟೇಲಿನಲ್ಲಿ ಇರಬೇಕಾಗಿತ್ತು. ವಾರ್ಡನ್ ರಾತ್ರಿ ವೇಳೆಯಲ್ಲಿ ಹಾಸ್ಟೇಲಿನಲ್ಲಿ ಇರಬೇಕು ಆದರೆ ಇರಲಿಲ್ಲ. ಘಟನೆಯಾದ 10 –15 ನಿಮಿಷ ಗಳ ನಂತರ ವಾರ್ಡನ ಬಂದಿರುತ್ತಾರೆ. ಪೊಲೀಸರು ಬಂದ ನಂತರ ವಾರ್ಡನ ಬಂದಿರುತ್ತಾರೆ. ಚಾಸಾ –5 ರವರಿಗೆ ತಲೆನೋವು ಇದ್ದ ಕಾರಣ ಯುನಿವರ್ಸಲ್ ಮೆಡಿಕಲ್ ಸ್ಟೋರ್ ಹತ್ತಿರ ನಾವು ಔಷದಿಯನ್ನು ತರಲು ಹೋಗಿರುತ್ತೇವೆ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳು ನಮ್ಮ ಹಾಸ್ಟೇಲಿನ ವಸ್ತುಗಳು ಆಗಿವೆ. ಹೊಸ ವರ್ಷದ ಕಾರಣದಿಂದ ನಾವು ಮೋಜು

ಮಸ್ತಿ ಮಾಡಲು ಹಾಸ್ಟೇಲಿನಿಂದ ಹೊರಗೆ ಹೋಗಿ ಹೊಸ್ಟೇಲಿಗೆ ಬಂದು ಗಲಾಟೆ ಮಾಡಿ ಅದರ ಬಾಗಿಲನ್ನು ಡ್ಯಾಮೇಜು ನಾವೇ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಾಸ್ಟೇಲಿನ ವಾರ್ಡನ ಅವರ ತಪ್ಪು ಗೊತ್ತಾಗುತ್ತದೆ ಎಂದು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾರ್ಡನ ಇದ್ದರೆ ಈ ರೀತಿ ಗಲಾಟೆ ಆಗುತ್ತಿರಲಿಲ್ಲವೆಂದರೆ ಸರಿಯಲ್ಲ. ಇದ್ದ ವಿಷಯ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಕೈ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂತಹ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ವಸ್ತು ಡ್ಯಾಮೇಜು ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ಮತ್ತು 4 ನೇ ಆರೋಪಿ ಪರ ವಕೀಲರು 1 ಮತ್ತು 3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 978/2024**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

| | | |
|---|---|---|
| ಸಾಕ್ಷಿದಾರರ ಹೆಸರು | : | ಮೊಹಮದ್ ಫೈಸ್ |
| ತಂದೆಯ ಹೆಸರು | : | ಅಬ್ದುಲ್ ಕಾದರ್ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ್ತವ್ಯ | : | ಗೋಕರ್ಣ , ತದಡಿ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ06 /02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 31.12.2024 ರಂದು ರಾತ್ರಿ 11.30 ಗಂಟೆ ಸುಮಾರಿಗೆ ನನಗೆ ತಲೆ ನೋವು ಬಂದ ಕಾರಣ ಚಾಸಾ –5 ಮತ್ತು 6 ರವರ ಜೊತೆಗೆ ಮೆಡಿಕಲ್ ಅಂಗಡಿಗೆ ಹೋದಾಗ ಅಂಗಡಿ ಬಂದು ಇತ್ತು ನಂತರ ಮರಳಿ ಬರುವ ಸಮಯದಲ್ಲಿ ಸುದಿಂದ್ರ ಕಾಲೇಜನ ಹತ್ತಿರ 3 ಜನ ಕುಳಿತಿದ್ದರು ಅವರನ್ನು ನಾವು ನೋಡಿ ಅವರ ಪಕ್ಕಕ್ಕೆ ಹೋದಾಗ ನಮಗೆ ಸಿಗರೇಟು ಸೇದಲು ಹೇಳಿದರು. ನಾವು ಅವರನ್ನು ದೂಡಿ ಹೊಸ್ಟೇಲಿನ ಒಳಗೆ ಹೋದಾಗ ಅವರು ಹೊಸ್ಟೇಲಿನ ಒಳಗೆ ಬಂದು ಅಲ್ಲಿದ್ದ ಬ್ಯಾಟನ್ನು ಹಿಡಿದು ಕದವನ್ನು ಒಡೆದು ಚಾಸಾ –7 ರವರ ತಲೆಗೆ ಹೊಡೆದಿರುತ್ತಾರೆ. ಅವರಿಗೆ ರಕ್ತ ಬಂದಿರುತ್ತದೆ. ನಂತರ ನಾವು ಪೊಲೀಸರಿಗೆ ಕರೆ ಮಾಡಿರುತ್ತೇವೆ . ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ಬ್ಯಾಟು , ಸ್ಟಂಪ್ಗಳಿಂದ ಹೊಡೆದಿರುತ್ತಾರೆ. ಹೊಡೆದಾಗ ನನಗೆ ಮೂಗಿನ ಮೇಲೆ ಪೆಟ್ಟು ಆಗಿತ್ತು. ಸದರಿ ವಿಷಯವನ್ನು ಚಾಸಾ –1 ರವರಿಗೆ ಹೇಳಿರುತ್ತೇವೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ಹೇಳಿರುತ್ತಾರೆ. ಒಟ್ಟು 4 ಜನ ಆರೋಪಿಗಳು ಇದ್ದರು. ಸಾಕ್ಷಿಯು ಎಮ್ ಒ –1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 1 ಮತ್ತು 3 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನನಗೆ ಕನ್ನಡ ಓದಲು ಬರುತ್ತದೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಗಲಾಟೆಯಾದ ನಂತರ ನಾವು ಫೋನ್ ಕರೆ ಮಾಡಿದಾಗ ಪೊ್ಲೀಸರು ಬಂದಿರುತ್ತಾರೆ. ಘಟನೆಯು ರಾತ್ರಿ 11.55 ಗಂಟೆಗೆ ಆಗಿರುತ್ತದೆ. ಪೊಲೀಸರಿಗೆ ದೂರನ್ನು ನೀಡುವ ಕಾಲಕ್ಕೆ ಆರೊಪಿತರ ಹೆಸರು ಗೊತ್ತಿರಲಿಲ್ಲ. ಸದರಿ ಗಲಾಟೆ ಮಾಡುವ ಮೊದಲು ಆರೋಪಿಗಳನ್ನು ನೋಡಿದ್ದು ಇರುವುದಿಲ್ಲ. ಪೊಲೀಸರು ಆರೋಪಿತರನ್ನು ನಮಗೆ ಯಾವತ್ತೂ ಗುರುತಿಸಲು ತೋರಿಸಿಲ್ಲ. ಇವತ್ತಿನವರೆಗೂ ಸಹ ಆರೋಪಿಗಳ ಹೆಸರು ನನಗೆ ಗೊತ್ತಿಲ್ಲ. ನಮ್ಮ ಹೊಸ್ಟೇಲಿನ ಅಕ್ಕಪಕ್ಕ ಚರ್ಚ ಮತ್ತು ಕ್ವಾರ್ಟರ್ಸ್ ಗಳು ಇವೆ. ಗಲಾಟೆಯು ಎಲ್ಲರಿಗೂ ಕೇಳುವ ಹಾಗೆ ಜೋರಾಗಿ ನಡೆಯುತ್ತಿತ್ತು. ಘಟನೆಯ ದಿನ ನಮ್ಮ ಹಾಸ್ಟೇಲಿನಲ್ಲಿ ಎಷ್ಟು ಜನ ಹುಡುಗರು ಇದ್ದರೆಂದು ನನಗೆ ಗೊತ್ತಿಲ್ಲ. ರಾತ್ರಿ 7.30 ಗಂಟೆಗೆ ಹಾಸ್ಟೇಲಿನ ಗೇಟನ್ನು ಹಾಕುತ್ತಾರೆ. ರಾತ್ರಿ ಯ ಹೊತ್ತಿನಲ್ಲಿ ಆಪ್ತಾಬ ಎಂಬ ವಾಚಮನ್ ಹಾಸ್ಟೇಲಿನಲ್ಲಿ ಇರುತ್ತಾರೆ. ರಾತ್ರಿ ಹಾಸ್ಟೇಲಿನಿಂದ ಹೊರಗೆ ಹೋಗುವಾಗ ಅನುಮತಿಯನ್ನು ನಾವು ಪಡೆದಿಲ್ಲ ಆದರೆ ಪಡೆಯಬೇಕಾಗಿತ್ತು. ಅನುಮತಿ ಪಡೆಯದೇನಾವು ಹೊರಗೆ ಹೋಗಿದ್ದಕ್ಕೆ ನಮ್ಮ ವಿರುದ್ಧ ಕ್ರಮ ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಲ್ಲ ಆದರೆ ಹಾಸ್ಟೇಲಿನಲ್ಲಿ ದಾಖಲೆಗಳು ಇವೆ. ಇಂದು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳು ನಮ್ಮ ಹಾಸ್ಟೆಲಿನ ವಸ್ತುಗಳು ಆಗಿವೆ. ಸದರಿ ಪ್ರಕರಣದ ಪಿರ್ಯಾದಿದಾರರು ನನಗೆ ಪರಿಚಯ ಇದೆ. ವಾರ್ಡನ್ ರಾತ್ರಿ ವೇಳೆಯಲ್ಲಿ ಹಾಸ್ಟೇಲಿನಲ್ಲಿ ಇರಬೇಕು ಆದರೆ ಇರಲಿಲ್ಲ. ಘಟನೆಯಾದ 10 –15 ನಿಮಿಷ ಗಳ ನಂತರ ವಾರ್ಡನ

